ಸಂಪುಟ : 9, ಸಂಚಿಕೆ : 6

VOLUME: 09, ISSUE: 06

30 DEC 2025

PEER - REVIEWED JOURNAL

ISSN: 2320-9941

ವರ್ತಮಾನದ ಸಂಸ್ಕೃತಿ

PRATHISPANDA

An Exchange of Creative Impulse

ಪ್ರತಿಸ್ಪಂದ

ಕೊಡು ಕೊಳ್ಳುವಿಕೆಯ ಸಂಕರ

ಜೀವನ ಪ್ರೀತಿ

ಗೌರವ ಸಂಪಾದಕರು

ಕೆ. ಆರ್. ಬಸವರಾಜು

ಸಂಪಾದಕರು

ಡಾ. ಸರಸ್ವತಿ ಕೆ. ಬಿ.

ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ತಜ್ಞಪರಿಶೀಲನ ಪತ್ರಿಕೆ
literature, culture - Research Quarterly Peer - Reviewed journal
ISSN: **2320–9941**

ಪ್ರತಿಸ್ಪಂದ

ಕೊಡು–ಕೊಳ್ಳುವಿಕೆಯ ಸಂಕರ

PRATHISPANDA

An Exchange of creative Impulse

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025

VOLUME: 09, ISSUE: 06, DECEMBER 2025

ವಿಶೇಷ ಸಂಚಿಕೆ

ಗೌರವ ಸಂಪಾದಕರು

ಕೆ. ಆರ್. ಬಸವರಾಜು

ಸಂಪಾದಕರು

ಡಾ. ಸರಸ್ವತಿ ಕೆ. ಬಿ.

ಪ್ರಕಟಣೆ :

ಪ್ರತಿಸ್ಪಂದ ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ಪತ್ರಿಕೆ
ತೋಟದ ಮನೆ ನಂ 107(25)
ಕಂಚಾಘಟ್ಟ ಹೊಸ ಬಡಾವಣೆ
ತಿಪಟೂರು 572201
e-mail: prathispanda@gmail.com
website : https://prathispandha.wordpress.com/

ತಜ್ಞ ಪರಿಶೀಲನ ಸಮಿತಿ
PEER REVIEW COMMITTEE

ಡಾ. ಸರಸ್ವತಿ ಕೆ. ಬಿ.
ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು
ತುಮಕೂರು ಜಿಲ್ಲೆ, ಕರ್ನಾಟಕ

Dr. Saraswati K. B
Associate Professor, English Department
Govt. First Grade College, Tipatur
Tumkur District, Karnataka

ಡಾ. ಎಂ. ರಂಗಸ್ವಾಮಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ, ತಮಿಳುನಾಡು

Dr. M. Rangaswamy
Assistant Professor,
Kannada Department
University Of Madras,
Chenni, Tamil Nadu

ಡಾ. ಜ್ಯೋತಿ ಕೆ. ಬಿ.
ಸಹ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ
ತುಮಕೂರು ಜಿಲ್ಲೆ, ಕರ್ನಾಟಕ

Dr. Jyoti K. B.
Associate Professor, English Department
Govt. First Grade College, Koratagere,
Tumkur District, Karnataka

ಡಾ. ಗೋವಿಂದರಾಯ ಎಂ.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ
ತುಮಕೂರು ಜಿಲ್ಲೆ, ಕರ್ನಾಟಕ

Dr. Govindaraya M.
Associate Professor
Kannada Department
Govt. First Grade College, Madhugiri
Tumkur District, Karnataka

ಅನಿತ ಕೆ. ವಿ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮೌಂಟ್ ಕಾರ್ಮಲ್ ಕಾಲೇಜು ಸ್ವಾಯತ್ತ, ವಸಂತನಗರ
ಬೆಂಗಳೂರು, ಕರ್ನಾಟಕ

Anitha K. V.
Assistant Professor, Kannada Department
Mount Carmel College Autonomous, Vasanthnagar
Bengaluru, Karnataka

ಡಾ. ರವಿಶಂಕರ್ ಎ. ಕೆ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ, ಕೆ. ನಾರಾಯಣಪುರ
ಬೆಂಗಳೂರು, ಕರ್ನಾಟಕ

Dr. Ravishankar A. K.
Assistant Professor, Kannada Department
Kristu Jayanti College Autonomous, K. Narayanapura
Bengaluru, Karnataka

ಸಿದ್ಧರಾಮಯ್ಯ ಡಿ. ಎಂ
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಬಾಡೇನಹಳ್ಳಿ, ಗುಬ್ಬಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Siddaramaiah D. M
Graduate Primary Teacher
Government Higher Primary School
Baadenahalli, Gubbi Taluk,
Tumkur District, Karnataka

ಪ್ರೊ. ರಾಮು ಟಿ. ಡಿ.
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಕಾತ್ರಿಕೆಹಾಲ್, ಚಿಕ್ಕನಾಯಕನಹಳ್ಳಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Ramu T. D
Graduate Primary Teacher
Government Higher Primary School
Kathrikehal, C N Halli Taluk
Tumkur District, Karnataka

ಕಾನೂನು ಸಲಹೆಗಾರರು
ಪೃಥ್ವಿ ಸೂರಿ
ಲೇಖಕರು ಹಾಗೂ ವಕೀಲರು

ಸಂಪಾದಕೀಯ...

ಸಂಸ್ಕೃತಿಯು ನಮ್ಮ ಬದುಕಿನ ಭಾಗವಾಗಿದೆ. ನಮ್ಮ ಪ್ರತಿ ಲಕ್ಷಣಗಳೆಲ್ಲವೂ ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ. ಸಂಸ್ಕೃತಿಯು ಎಂದಿಗು ಬದಲಾಗುವುದಿಲ್ಲ, ವಿಭಿನ್ನ ಲಕ್ಷಣಗಳ ಮೂಲಕ ಆಯಾ ಪರಿಸರ, ಪ್ರದೇಶ ಮೊದಲಾದಂತೆ ಗೋಚರಿಸುತ್ತವೆ. ಅಲ್ಲಿನ ಸ್ಥಳೀಯ ಪ್ರಜ್ಞೆಗಳು ರಾಯಭಾರಿಗಳಂತೆ ಸಂಸ್ಕೃತಿಯನ್ನು ದರ್ಶನಮಾಡುತ್ತಾರೆ.

ಸಂಸ್ಕೃತಿಯನ್ನು ಆಚರಣೆ, ಸಂಪ್ರದಾಯ, ಲಕ್ಷಣ, ಸೌಂದರ್ಯ, ಇತಿಹಾಸ, ಐತಿಹ್ಯಗಳ ಮೂಲಕ ಉಳಿಸಿಕೊಂಡು ಬಂದಿದ್ದಾರೆ. ನೋಡಿ ಕಲಿಯುವ, ಉದ್ದೇಶಿತವಾಗಿ ಕಲಿಸುವ ಈ ಸ್ವರೂಪಗಳು ಸಂಸ್ಕೃತಿಗಳ ಬೆಳವಣಿಗೆಯ ಪೂರ್ವಪೀಠಿಕೆಗಳಾಗಿವೆ. ಇಲ್ಲಿಂದ ಹೆಜ್ಜೆ ಹೆಜ್ಜೆಯಂತೆ ಬೆಳೆಯುವ ಯಾವುದೇ ಸಂಸ್ಕೃತಿಯು ಅಂದಂದಿನ ಪ್ರಭಾವ, ಪ್ರೇರಣೆಗಳ ಅನುಸಾರವಾಗಿ ಬದಲಾವಣೆಗಳನ್ನು ಪಡೆಯುತ್ತವೆ. ಆಧುನಿಕ ಎಂಬುದೇ ಎಲ್ಲಾ ಸಂಸ್ಕೃತಿಗಳ ಮೇಲೆ ಪ್ರಭಾವಿಸಿ 'ಶುದ್ಧ ಸಂಸ್ಕೃತಿ'ಯೆಂಬುದಿಲ್ಲ ಎಂಬಾಂತಾಗಿದೆ. ಈ ಹಿನ್ನಲೆಯಲ್ಲಿ ವರ್ತಮಾನದ ಸಂಸ್ಕೃತಿಯನ್ನು ಇಂದಿನ ತಲೆಮಾರು ಹೇಗೆ ನೋಡುತ್ತಿದೆ. ಸಂಸ್ಕೃತಿಗಳ ಅಧ್ಯಯನದಿಂದ ಭವಿಷ್ಯದ ದಾಖಲೀಕರಣವನ್ನು ಗಮನಿಸುವ ಬಗೆಗಳನ್ನು ಈ ಜೀವನ ಪ್ರೀತಿ ಮಾಲಿಕೆಯು ನಿರ್ವಹಿಸಿದೆ ಎಂದು ಭಾವಿಸಿದ್ದೇವೆ.

ಈ ಸಂಚಿಕೆಯಲ್ಲಿ ಜನಪದ ನಂಬಿಕೆಯೊಂದಿಗೆ ಆಷಾಡ (ಆಟಿ) ತಿಂಗಳ ಆಚರಣೆ, ಸಸ್ಯ ದೈವಿಕ ಮೂಲಗಳು, ಸಸ್ಯ ಆಚರಣೆ ಮತ್ತು ನಂಬಿಕೆ, ಕರ್ನಾಟಕ ಸಂಸ್ಕೃತಿ: ವಿವಿಧ ಆಯಾಮಗಳು, ಪದ್ಮಪಾಣಿ: ಅಜಂತಾದ ಸೌಂದರ್ಯ, ರಹಸ್ಯ ಮತ್ತು ದುರಂತ ಕಥಾನಕ, ಸಾಂಸ್ಕೃತಿಕ ತಲ್ಲಣಗಳು, ಕರ್ನಾಟಕದ ಜನಪದ ನೃತ್ಯಕಲೆಗಳು ಮತ್ತು ಕೊಡಗಿನ ಎರವರ ಕುಣಿತ, ವರ್ತಮಾನದಲ್ಲಿ ಚಿತ್ರದುರ್ಗದ ಪ್ರದರ್ಶನಾತ್ಮಕ ಕಲೆಗಳ ಸಾಂಸ್ಕೃತಿಕ ಪಲ್ಲಟ,

ಪ್ರೌಢದೇವರಾಯನ ಶಾಸನಗಳು: ಸಂಸ್ಕೃತಿ, ತಿಪ್ಪೆ ಕುರಿತು ಸಾಂಸ್ಕೃತಿಕ ಅಧ್ಯಯನ, ಪ್ರಕೃತಿ ಮತ್ತು ಸಂಸ್ಕೃತಿ ಮಾನವನ ಅರಿವಿನ ಕಣ್ಣ ದೀಪದಲ್ಲಿ, ಕನ್ನಡಿಗರು ಯಶಸ್ವಿ ಉದ್ಯಮಿಗಳಾಗುವಲ್ಲಿ ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳು, ಕನ್ನಡದ ಕೃಷಿ ಸಾಹಿತ್ಯದಲ್ಲಿ ತಂತ್ರಜ್ಞಾನ ಮತ್ತು ಸಂಸ್ಕೃತಿಯ ನೆಲೆಗಳು ಈ ವಿಭಿನ್ನ ವಿಷಯಗಳು ಹೊಸ ಚಿಂತನೆಗಳನ್ನು ದಾಖಲಿಸಿವೆ. ಈ ಅಧ್ಯಯನಗಳಿಗೆ ಓದುಗರು ತಮ್ಮ ಅಭಿಪ್ರಾಯ ಹಾಗೂ ಚಿಂತನೆಗಳನ್ನು ದಾಖಲಿಸಿದರೆ ಈ ಎಲ್ಲಾ ಕಾರ್ಯವು ಸಾರ್ಥಕವಾಗುತ್ತದೆ.

ಡಾ. ರವಿಶಂಕರ್ ಎ.ಕೆ.

(ಜೀವನ ಪ್ರೀತಿ ಮಾಲಿಕೆಯ ಪರವಾಗಿ)

(ಈ ಪತ್ರಿಕೆಯಲ್ಲಿ ಪ್ರಕಟವಾದ ಎಲ್ಲಾ ಅಭಿಪ್ರಾಯಗಳು, ಆಯಾ ಲೇಖಕರ ಸಂಶೋಧನೆ, ಅಧ್ಯಯನಗಳಾಗಿರುತ್ತವೆ. ಆದ್ದರಿಂದ ಲೇಖನದ ಹಕ್ಕನ್ನು ಆಯಾ ಲೇಖಕರು ಹೊಂದಿರುತ್ತಾರೆ. ಪ್ರಕಟಣೆಯ ಹಕ್ಕನ್ನು ಪತ್ರಿಕೆಗೆ ನೀಡಿರುತ್ತಾರೆ.)

ISSN : 2320-9941

Linking ISSN (ISSN-L): 2320-9941

Key-title: Prathispandha

Title proper: Prathispandha.

Country: India

Medium: Print

Last modification date: 01/09/2014

Type of record: Confirmed

ISSN Center responsible of the record: ISSN National Centre for India

For all potential issues concerning this bibliographic record (missing or wrong data etc.), please contact the ISSN National Centre mentioned above by clicking on the link.

ಪರಿವಿಡಿ INDEX

1. ಜನಪದ ನಂಬಿಕೆಯೊಂದಿಗೆ ಆಷಾಡ (ಆಟಿ) ತಿಂಗಳ ಆಚರಣೆ

– ಡಾ. ಗೀತಾ ಎ.ಸಿ **1–9**

2. ಸಸ್ಯ ದೈವಿಕ ಮೂಲಗಳು

– ಕವನ ಕೆ. **10–23**

3. ಸಸ್ಯ ಆಚರಣೆ ಮತ್ತು ನಂಬಿಕೆ

– ಅಭಿಜಿತ್ ಬಿ. **24–35**

4. ಕರ್ನಾಟಕ ಸಂಸ್ಕೃತಿ: ವಿವಿಧ ಆಯಾಮಗಳು

– ಡಾ. ಪ್ರಸನ್ನಕುಮಾರ್ ಕೆ. **36–47**

5. ಪದ್ಮಪಾಣಿ: ಅಜಂತಾದ ಸೌಂದರ್ಯ, ರಹಸ್ಯ ಮತ್ತು ದುರಂತ ಕಥಾನಕ

– ಮನೋಜ್.ಎಂ **48–57**

6. ಸಾಂಸ್ಕೃತಿಕ ತಲ್ಲಣಗಳು

– ಡಾ. ಕುಸುಮಾಂಜಲಿ ಎಲ್.ಸಿ. ಜಗದೀಶ್ **58–75**

7. ಕರ್ನಾಟಕದ ಜನಪದ ನೃತ್ಯಕಲೆಗಳು ಮತ್ತು ಕೊಡಗಿನ ಎರವರ ಕುಣಿತ

– ಪ್ರಸನ್ನ **76–85**

8. ವರ್ತಮಾನದಲ್ಲಿ ಚಿತ್ರದುರ್ಗದ ಪ್ರದರ್ಶನಾತ್ಮಕ ಕಲೆಗಳ ಸಾಂಸ್ಕೃತಿಕ ಪಲ್ಲಟ

– ಡಾ. ರುಜುವಾನ್ **86–99**

9. ಪ್ರೌಢದೇವರಾಯನ ಶಾಸನಗಳು: ಸಂಸ್ಕೃತಿ

– ಡಾ. ಮೇಘನ ಜಿ. **100–108**

10. ತಿಪ್ಪೆ ಕುರಿತು ಸಾಂಸ್ಕೃತಿಕ ಅಧ್ಯಯನ

– ಡಾ. ರವಿಶಂಕರ್ ಎ.ಕೆ. **109–116**

11. ಪ್ರಕೃತಿ ಮತ್ತು ಸಂಸ್ಕೃತಿ ಮಾನವನ ಅರಿವಿನ ಕಣ್ಣ ದೀಪದಲ್ಲಿ

– ಡಾ. ರಾಜಕುಮಾರ ಬಡಿಗೇರ್ **117–142**

11. ಕನ್ನಡಿಗರು ಯಶಸ್ವಿ ಉದ್ಯಮಿಗಳಾಗುವಲ್ಲಿ ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳು

– ಡಾ. ಡಿ. ವೀರೇಶ **143–152**

12. ಕನ್ನಡದ ಕೃಷಿ ಸಾಹಿತ್ಯದಲ್ಲಿ ತಂತ್ರಜ್ಞಾನ ಮತ್ತು ಸಂಸ್ಕೃತಿಯ ನೆಲೆಗಳು

– ಡಾ. ಮಲ್ಲಿಕಾರ್ಜುನ ಎಂ.ಸಿ. **153–165**

ಜನಪದ ನಂಬಿಕೆಯೊಂದಿಗೆ ಆಷಾಡ (ಆಟಿ) ತಿಂಗಳ ಆಚರಣೆ

ಒಂದು ಸಮುದಾಯದ ಅಥವಾ ಒಂದು ಪ್ರದೇಶದ ಜೀವನವಿಧಾನ, ಅನುಭವ, ಸಂಸ್ಕೃತಿ, ಸಂಪ್ರದಾಯ, ಆಚರಣೆಗಳ ಮೂಲಕ ತಲೆಮಾರುಗಳಿಂದ ಬಂದಿರುವ ನಂಬಿಕೆಗಳೇ ಜನಪದ ನಂಬಿಕೆಗಳು. ಈ ನಂಬಿಕೆಗಳು ಒಂದು ಗುಂಪು, ಜಾತಿ, ಧರ್ಮ, ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಜನಪದ ಆಚರಣೆ ಜೀವನಕ್ಕೆ ಸುಗಮವಾದ ದಾರಿಯನ್ನು ತೋರಿಸಿಕೊಡುತ್ತದೆ ಎಂದರೆ ತಪ್ಪಾಗಲಾರದು.

ಆಷಾಡ ತಿಂಗಳಿನ ಆಚರಣೆಗಳು, ವಿಧಿನಿಯಮಗಳು ಜನ ಜೀವನಕ್ಕೆ ಉಪಯೋಗಕರವಾಗಿದೆ. ಆಷಾಡ (ಆಟಿ) ಎಂದರೆ; ಜುಲೈ–ಆಗಸ್ಟ್ ತಿಂಗಳು. ಎಡೆ ಬಿಡದೆ ಮಳೆ ಸುರಿಯುವ ಕಾಲ. ಆದರೆ ಈಗ ಹವಾಮಾನದಲ್ಲಿ ಬದಲಾವಣೆಗಳಾಗಿ ಮಳೆ ಅಷ್ಟಾಗಿ ಬರುವುದಿಲ್ಲ. ಹಿಂದಿನ ಕಾಲದಂತೆ ಕೃಷಿಯನ್ನು ಮಾಡುವವರಿಲ್ಲದಿದ್ದರೂ ಆಚಾರಗಳನ್ನು ಅನುಸರಿಸಿಕೊಂಡು ಬರುತ್ತಿರುವುದು ಸಂತಸದ ವಿಚಾರ.

ಜನಪದ ನಂಬಿಕೆಗಳು ಹೇಗೆ ಹಾಸುಹೊಕ್ಕಾಗಿದೆ ಎಂಬುವುದಕ್ಕೆ ನಾನು ಇಲ್ಲಿ ತೆಗೆದುಕೊಳ್ಳುತ್ತಿರುವ ಪ್ರದೇಶ ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಒಂದು ಪದ್ಧತಿ ಮತ್ತು ನಂಬಿಕೆಗಳು. ಹಿಂದಿನ ಕಾಲದಲ್ಲಿ ಕೃಷಿ ಮಾಡುವಂತಹ ಸಂದರ್ಭದಲ್ಲಿ ಜೋರಾಗಿ ಮಳೆ, ಗಾಳಿ, ಗುಡುಗು, ಸಿಡಿಲುಗಳು ಬರುತ್ತಿದ್ದು;

ಗದ್ದೆಯಲ್ಲಿ ದುಡಿಯಲೇ ಬೇಕಾದ ಅನಿವಾರ್ಯವಿತ್ತು. ಆ ಸಮಯದಲ್ಲಿ ವಿಪರೀತವಾದ ಮಳೆಯಾಗುತ್ತಿದ್ದುದರಿಂದ; ತಲೆ ಕೂದಲನ್ನು ಕತ್ತರಿಸುತ್ತಿರಲಿಲ್ಲ. ತಲೆಯಲ್ಲಿ ಕೂದಲು ಕಮ್ಮಿಯಾದರೆ, ಶೀತ ಬೇಗನೆ ಉಂಟಾಗುತ್ತದೆಂಬ ನಂಬಿಕೆ. ಅಲ್ಲದೆ ಗದ್ದೆ ಕೆಲಸದ ಸಮಯದಲ್ಲಿ ಎಲ್ಲಿಗೂ ಹೋಗಲು ಸಮಯವಿರುತ್ತಿರಲಿಲ್ಲ. ಹಾಗಾಗಿ ಈ ಸಮಯದಲ್ಲಿ ತಲೆಕೂದಲು ಕತ್ತರಿಸುವುದಾಗಲಿ, ಶುಭ ಸಮಾರಂಭಗಳನ್ನು ಏರ್ಪಡಿಸುವುದಾಗಲಿ ಮಾಡುತ್ತಿರಲಿಲ್ಲ. ಹಿಂದಿನ ಕಾಲದಲ್ಲಿ ಮಳೆಗಾಲವೆಂದರೆ; ಎಡೆಬಿಡದೆ ಒಂದೇ ಸಮನೆ ಮಳೆ ಸುರಿಯುತ್ತಿತ್ತು.

ಈ ತಿಂಗಳಿನಲ್ಲಿ ಗದ್ದೆಯ ಕೆಲಸ ನಡೆಯುತ್ತಿದ್ದುದರಿಂದ ತಿಂಗಳಿಡಿ ಕೆಲಸವಿರುತ್ತಿತ್ತು. 'ಮುಯ್ಯಾಳ್' ಎಂಬ ಪದ್ಧತಿ ಇತ್ತು. ಅಂದರೆ ಪರಸ್ಪರ ಕೂಡಿಕೊಂಡು ಕೆಲಸ ಮಾಡುವುದು. ಇದರಿಂದ ಕೆಲಸದ ಬಗೆಗಿನ ಬೇಸರದ ವಾತಾವರಣ ಇಲ್ಲವಾಗುತಿತ್ತು. ಒಬ್ಬರಿಂದಲೇ ಗದ್ದೆಯನ್ನು ಉಳಲು ಆಗುತ್ತಿರಲಿಲ್ಲ ಆದ್ದರಿಂದ ಅಕ್ಕಪಕ್ಕದ ಮನೆಯವರ 'ಮುಯ್ಯಾಳ್' ಸಹಾಯದಿಂದ ಗದ್ದೆಯನ್ನು ಉತ್ತು 'ತಯಾಮರ' ಹೊಡೆಯುವುದರ ಮೂಲಕ ಗದ್ದೆಯನ್ನು ಸಮಮಾಡಿ ನಾಟಿ ನೆಡುವ ಕಾರ್ಯವನ್ನು ಮಾಡಲಾಗುತಿತ್ತು. ಗದ್ದೆಯ ಯಜಮಾನನ ಮನೆಯಲ್ಲೇ ಬೆಳಗ್ಗಿನ ತಿಂಡಿ ಮತ್ತು ಮಧ್ಯಾಹ್ನದ ಊಟ. ಎಲ್ಲರೂ ಸೇರಿ ಊಟ ಮಾಡುವುದು ಒಂದು ರೀತಿಯ ಸಂತೋಷವನ್ನು ಕೊಡುತ್ತಿತ್ತು. ದೊಡ್ಡ ಗದ್ದೆ ನಾಟಿಯಾದರೆ, ನಾಟಿ ನೆಟ್ಟ ಗದ್ದೆಯಲ್ಲೇ ಓಟದ ಸ್ಪರ್ಧೆ ಇರುತಿತ್ತು. ಗಣೋದಿ ಸೇರಿಸುವುದು ಎಂಬ ಪದ್ಧತಿಯು ಇರುತಿತ್ತು. (ಹಲಸಿನ ಬೀಜ ಹುರಿದದ್ದು, ಪುರಿ) ನಂತರ ಇದಾದ ಮೇಲೆ ಕೈಕಾಲು ಮುಖ ತೊಳೆದುಕೊಂಡು, ಎಲ್ಲರೂ ಮನೆಗೆ ಬಂದು ಜೊತೆ ಸೇರಿ ಊಟ ಮಾಡುತ್ತಿದ್ದರು. ಇವರಲ್ಲಿ ಯಾವುದೇ ಮನಸ್ತಾಪವಾಗಲಿ, ಹೊಟ್ಟೆಕಿಚ್ಚು ಆಗಲಿ ಕಂಡು ಬರುತ್ತಿರಲಿಲ್ಲ. ಕೂಡಿ ಬಾಳುವುದರಲ್ಲೇ ಸಂತೃಪ್ತಿಯ ಜೀವನವಿತ್ತು.

ಆಷಾಢ ಮಾಸವನ್ನು ಪೂರ್ತಿಯಾಗಿ ಕೃಷಿ ಕಾರ್ಯಕ್ಕಾಗಿಯೇ ಮೀಸಲಾಗಿಟ್ಟು, ಕೆಲವೊಂದು ನಿಯಮಗಳನ್ನು ರೂಪಿಸಿದ್ದರು. ಇದೇ ಮುಂದಕ್ಕೆ ನಂಬಿಕೆಯ ಸ್ವರೂಪವಾಗಿ ಬೆಳೆಯಿತು. ಈಗ ಗದ್ದೆ ಕೆಲಸವನ್ನು ಮಾಡುವವರು

ಕೇವಲ ಕೈಬೆರಳೆಣಿಕೆಯಷ್ಟೇ ಜನರು. ಆದರೂ ಆ ಕಾಲದ ನಂಬಿಕೆಯನ್ನು ಸಂಪ್ರದಾಯವಾಗಿ ಚಾಚುತಪ್ಪದೇ ಆಚರಿಸಿಕೊಂಡು ಬರುತ್ತಿದ್ದಾರೆ. ಈ ತಿಂಗಳಿನಲ್ಲಿ ಶುಭ ಕಾರ್ಯಗಳನ್ನು ಮಾಡುವುದಿಲ್ಲ. ಕೆಲವು ಆಹಾರ ಪದಾರ್ಥಗಳನ್ನು ಸೇವಿಸ ಬೇಕೆಂಬ ನಿಯಮಗಳು ಇದ್ದವು ಅವುಗಳೆಂದರೆ; ಮದ್ದುಕೂಳ್ ಪಾಯಸ, ಪತ್ರೊಡೆ, ಕಣಿಲೆ, ಹಲಸಿನಬೀಜದ ಪದಾರ್ಥ, ಕೋಳಿಮಾಂಸ, ಕೆಸ. ಇವುಗಳನ್ನು ಸೇವಿಸುವುದು ಈಗಲೂ ಕಂಡು ಬರುತ್ತದೆ. ಇದು ಆರೋಗ್ಯವನ್ನು ಕಾಪಾಡುವಲ್ಲಿ ಸಹಕಾರಿಯಾಗುತ್ತದೆ. ಈಗ ನಾವು ಏನೇ ವೈಜ್ಞಾನಿಕ ಕಾರಣವನ್ನು ಹೇಳಿದರೂ; ನಮ್ಮ ಹಿರಿಯರ ಜಾಣತನವನ್ನು ಮೆಚ್ಚಲೇಬೇಕು.

ಮದ್ದುಕೂಳ್ ಆಟಿ ಸೊಪ್ಪು (Justicia wynaadensis) :

ಕೃಷಿಕಾರ್ಯದಲ್ಲಿ ತೊಡಗಿರುವವರಿಗೆ ಕಾಯಿಲೆಗಳಿಂದ ತಮ್ಮನ್ನು ಕಾಪಾಡಿಕೊಳ್ಳಲೆಂಬಂತೇ ಅನೇಕ ಬಗೆಯ ಆಹಾರ ಪದಾರ್ಥವನ್ನು ಪ್ರಕೃತಿಯೇ ಒದಗಿಸಿ ಕೊಟ್ಟಿರುವುದು ಆಶ್ಚರ್ಯಕರವಾದ ಸಂಗತಿ. ಈ ಹಿನ್ನೆಲೆಯಲ್ಲೇ ಆಚರಣೆಯಲ್ಲಿರುವ ಒಂದು ಜನಪದ ನಂಬಿಕೆಯಂತೇ ಆಷಾಢ ತಿಂಗಳ 18ರಂದು 'ಮದ್ದುಕೂಳ್' ಪಾಯಸವನ್ನು ಮಾಡಿ ತಿನ್ನುವುದು. ಇದು ವೈಜ್ಞಾನಿಕ ಅಚ್ಚರಿಯಾಗಿಯೂ ಕಂಡುಬರುತ್ತದೆ. ಆಷಾಡದ 18ನೇ ದಿನದಂದು ಮದ್ದುಸೊಪ್ಪು ತುಂಬಾ ಸುವಾಸನೆಯಿಂದ ಕೂಡಿರುತ್ತದೆ. ಕಾಡಿನಲ್ಲಿಯೋ ಅಥವಾ ತೋಟದಲ್ಲಿಯೋ ಈ ಗಿಡ ಇದ್ದರೆ, ಇದು ಇರುವುದರ ಸೂಚನೆ ದೊರೆಯುತ್ತದೆ. ಈ ದಿನದಂದು 18 ರೀತಿಯ ಮದ್ದುಗಳು ಸೇರಿರುತ್ತವೆಂದು ಹಿರಿಯರು ಹೇಳುತ್ತಾರೆ. ಈ ಸೊಪ್ಪಿನ ಗಿಡವನ್ನು ನಗರದಲ್ಲಿ ಇರುವವರು ಸಹ ನೆಟ್ಟು ಕೊಂಡಿರುತ್ತಾರೆ. ಈ ಗಿಡದಲ್ಲಿ ಹಲವು ಔಷದೀಯ ಗುಣಗಳಿರುವುದು ವೈಜ್ಞಾನಿಕವಾಗಿ ಸಾಬೀತಾಗಿದೆ. ಆದ್ದರಿಂದ ಈ ದಿನದಂದು ತಪ್ಪದೇ ಗಿಡವನ್ನು ಮುರಿದುಕೊಂಡು ಬಂದು, ಅದರ ಎಲೆಗಳನ್ನೆಲ್ಲಾ ಸೂಕ್ಷ್ಮವಾಗಿ ನೋಡಿ ಯಾವುದೇ ಕ್ರಿಮಿಕೀಟಗಳಿಲ್ಲ ಎಂದು ಸ್ಪಷ್ಟಪಡಿಸಿಕೊಂಡ ಮೇಲೆ ನೀರು ಹಾಕಿ ಬೇಯಿಸಿಕೊಳ್ಳುತ್ತಾರೆ. ಆನಂತರ ನೀರನ್ನು ಬಸಿದು ತಮಗೆ ಬೇಕಾದ ಆಹಾರ ಪದಾರ್ಥಗಳನ್ನು ತಯಾರಿಸಿಕೊಳ್ಳುತ್ತಾರೆ. ಹೆಚ್ಚಾಗಿ ಪಾಯಸವನ್ನೇ ಮಾಡುತ್ತಾರೆ. ರಾತ್ರಿಹೊತ್ತು

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025 | VOLUME: 09, ISSUE: 06, DECEMBER 2025

ಪಾಯಸ ಮಾಡಿ ನಾಯಿ ಅಥವಾ ಬೆಕ್ಕಿಗೆ ಹಾಕಿ, ಅವುಗಳು ಬದುಕಿವೆ ಎಂದು ಖಚಿತವಾದ ಮೇಲೆ ಮರುದಿನ ಬೆಳಗ್ಗೆ 4 ಗಂಟೆಗೆ ಎದ್ದು ಪಾಯಸವನ್ನು ಮನೆಯವರೆಲ್ಲರೂ ತಿನ್ನುತ್ತಿದ್ದರು. ಪಾಯಸಕ್ಕೆ ಬೆಲ್ಲ, ತೆಂಗಿನತುರಿ, ತುಪ್ಪ, ಜೇನು ಹಾಕಿ ತಿನ್ನುತ್ತಿದ್ದರು. ಈಗಲೂ ಸಹ ಈ ಪದ್ಧತಿಯನ್ನು ಮುಂದುವರಿಸಿ ಕೊಂಡು ಬರುತ್ತಿದ್ದಾರೆ. ಇದು ದೇಹವನ್ನು ಉಷ್ಣತೆಯಲ್ಲಿಡುತ್ತದೆ. ಹೀಗೆ ಹವಾಮಾನಕ್ಕೆ ತಕ್ಕ ಹಾಗೆ ಆಹಾರ ಪದಾರ್ಥಗಳನ್ನು ಕಂಡುಕೊಂಡಿದ್ದರು. ನಮ್ಮ ಹಿರಿಯರ ಜ್ಞಾನವೇ ಇಂದು ವಿಜ್ಞಾನವಾಗಿದೆ ಎಂದರೆ ತಪ್ಪಾಗಲಾರದು.

ಕಣಿಲೆ:

ಕಣಿಲೆ ಸಾರು ಸಹ ದೇಹದ ತಾಪವನ್ನು ನಿಯಂತ್ರಿಸಲು ಇರುವ ಒಂದು ಉತ್ತಮವಾದ ಆಹಾರ. ರುಚಿಕರವಾದ ತಿನಿಸು. ಮಳೆಗಾಲದಲ್ಲಿ ಬಿದಿರಿನ ಬುಡದಲ್ಲಿ ಹೊಸದಾದ ಬಿದಿರು ಹುಟ್ಟಿಕೊಳ್ಳುತ್ತದೆ. ಆ ಭಾಗವನ್ನು ಕುಯ್ದು ತಂದು ತುಂಬಾ ತೆಳ್ಳಗೆ ಕತ್ತರಿಸಿ ನೀರಿನಲ್ಲಿ ನೆನೆ ಹಾಕಿ ಮರುದಿನ ಚೆನ್ನಾಗಿ ತೊಳೆದು ನೀರನ್ನು ಹಿಂಡಿ, ಹೊಸ ನೀರಿನಲ್ಲಿ ನೆನೆ ಹಾಕಬೇಕು. ಹೀಗೆ ಇದನ್ನು ಮೂರನೇ ದಿನವೇ ಸಾರು ಮಾಡಿ ತಿನ್ನಲು ಸಾಧ್ಯವಾಗುವುದು. ಇದರಿಂದ ಸಾರು, ಪಲ್ಯ, ಗೊಜ್ಜು, ಉಪ್ಪಿನಕಾಯಿ ಇವೆ ಮೊದಲಾದವುಗಳನ್ನು ತಯಾರಿಸಬಹುದು. ಹೀಗೆ ನಮ್ಮ ಹಿರಿಯರು ಹವಾಮಾನಕ್ಕನುಸಾರವಾಗಿ ಆಹಾರ ಪದಾರ್ಥಗಳನ್ನು ಕಂಡುಕೊಂಡಿದ್ದರು. ಇದೇ ಆಹಾರ ಪದಾರ್ಥಗಳ ಜೊತೆಗೆ ಕೆಲವು ಆಧುನಿಕ ಆಹಾರಕ್ಕೂ ಮಾರು ಹೋಗಿದ್ದಾರೆ.

ಆಷಾಢ ಕೋಳಿ:

ಮಳೆಗಾಲದಲ್ಲಿ ಕೋಳಿ ಪದಾರ್ಥವನ್ನು ಒಂದು ದಿನ ಸೇವಿಸುತ್ತಿದ್ದರು. ಹಿಂದೆ ಎಡೆಬಿಡದೆ ಗದ್ದೆಯ ಕೆಲಸದಲ್ಲಿ ಮುಳುಗಿರುತ್ತಿದ್ದುದರಿಂದ ಕೋಳಿಯನ್ನು ಸಾರು ಮಾಡಿ ತಿನ್ನಲು ಬಿಡುವು ಇರುತ್ತಿರಲಿಲ್ಲ. ಒಂದು ಕೋಳಿಯನ್ನು ಆಷಾಢಕ್ಕೆಂದೇ ಮೀಸಲಿಟ್ಟು, ಅದನ್ನು ಕುಯ್ದು ಸಾರು ಮಾಡಿ ಮನೆಯವರೆಲ್ಲರೂ ಸೇರಿ ಹಬ್ಬದೂಟ ಮಾಡುತ್ತಿದ್ದರು. ಇದು ಸಹ ದೇಹವನ್ನು ಉಷ್ಣತೆಯಲ್ಲಿಡಲು ಸಹಕಾರಿಯಾದುದಾಗಿತ್ತು.

ಕೆಸ:

ಇದು ಕೊಡಗಿನ ಜನರು ಆಹಾರ ಪದಾರ್ಥವಾಗಿ ಬಳಸುವ ಒಂದು ತರಕಾರಿ. ಕೆಸುವಿನ ಎಲೆ, ಗೆಡ್ಡೆ, ಬೇರು, ಅದರ ಕಾಂಡ ಎಲ್ಲವನ್ನು ಉಪಯೋಗಿಸುತ್ತಾರೆ. ಕೆಸುವಿನಲ್ಲೂ ಅನೇಕ ಪ್ರಭೇದಗಳಿವೆ. ಮಲೆಯಾಳಕೆಸ, ಹೊಳೆಕೆಸ, ತೋಡುಕೆಸ, ಮರಕೆಸ, ತೋಂಡಿಕೆಸ, ಕರಿಕೆಸ. ಇದು ತುಂಬಾ ಉಷ್ಣಾಂಶವನ್ನು ಹೊಂದಿರುವಂತದ್ದು. ಮಳೆಗಾಲದ ಆಷಾಢ ತಿಂಗಳಿನಲ್ಲಿ ಮರಕೆಸವನ್ನು ಮಾತ್ರ ಉಪಯೋಗಿಸುತ್ತಾರೆ. ಇದರಿಂದ ಪತ್ರೊಡೆ ಮಾಡಿ ತಿನ್ನುವುದು ಪದ್ಧತಿ. "ಬೇರೆ ಕೆಸವನ್ನು ಏಕೆ ತಿನ್ನಬಾರದೆಂದರೆ; ಅದರಲ್ಲಿ ದೆವ್ವಗಳು ತಮ್ಮ ಮರಿಗಳನ್ನು ಹಾಕಿರುತ್ತವೆ" ಎಂಬ ಕಾರಣಗಳನ್ನು ಹೇಳುತ್ತಾರೆ. ಆದರೆ ವೈಜ್ಞಾನಿಕ ಕಾರಣವಿದೆ. ಮಳೆಗಾಲದಲ್ಲಿ ಉಳಿದ ಕೆಸಗಳ ಸಾರು ಆರೋಗ್ಯಕ್ಕೆ ಒಳ್ಳೆಯದಲ್ಲ. ಇದನ್ನೇ ವಂಶಪಾರಂಪರ್ಯವಾಗಿ ಪಾಲಿಸಿ ಕೊಂಡು ಬರುತ್ತಿದ್ದಾರೆ.

ಅಣಬೆ:

ಅಣಬೆ ಸಹ ಮಳೆಗಾಲದಲ್ಲಿ ಸಿಗುವ ಆಹಾರ ಪದಾರ್ಥ. ಅಣಬೆಗಳಲ್ಲಿ ಅನೇಕ ವಿಧಗಳಿವೆ. ನೆಲದಮೇಲೆ ಬರುವಂಥವು ಮತ್ತು ಒಣಗಿ ಬಿದ್ದಿರುವ ಮರದ ಮೇಲೆ ಬರುವಂಥವು. ಅಣಬೆಗಳು ಪ್ರಕೃತಿಯೇ ನೀಡುವ ಆಹಾರ ಪದಾರ್ಥವಾಗಿ ಪರಿಗಣಿಸಿದೆ. ಇದು ಸಹ ದೇಹವನ್ನು ಸಮತೋಲದಲ್ಲಿ ಇಟ್ಟು ಕೊಳ್ಳಲು ಸಹಕಾರಿಯಾಗಿರುವಂಥದ್ದು. ನುಚ್ಚಿ ಅಣಬೆ, ಮರ ಅಣಬೆ, ಹರಳು, ನಾಯಿಮರಿ, ಸುಳ್ಳೀರ್, ಬೆಳ್ಚಾರ್, ಎಣ್ಣೆ ಅಣಬೆ, ಮೊಟ್ಟೆಅಣಬೆ, ಬೇರು ಅಣಬೆ– ಹೀಗೆ ಆಹಾರಕ್ಕೆ ಬಳಸುವ ಅನೇಕ ವಿಧವಾದ ಅಣಬೆಗಳಿವೆ. ಇನ್ನಿತರ ಅಣಬೆಗಳನ್ನು 'ಹುಚ್ಚು ಅಣಬೆ' ಎಂದು ಕರೆಯುವರು.

ನಾಟಿ ಕಾರ್ಯ:

ನಾಟಿ ಕಾರ್ಯಕ್ಕೂ ಜಾನಪದದ ಹಿನ್ನೆಲೆ ಇದೆ ಎನ್ನಬಹುದು. ಇವರಿಗೆ ಇದು ಕಷ್ಟದ ಕೆಲಸವೆಂದು ಅನಿಸಲೇ ಇಲ್ಲ ತಮ್ಮ ಜೀವನದ ಒಂದು ಅವಿಭಾಜ್ಯ ಅಂಗವೆಂದೇ ಭಾವಿಸಿ ಸಂತೋಷದಿಂದ ಕೃಷಿ ಕಾರ್ಯದಲ್ಲಿ ತೊಡಗಿಸಿ ಕೊಂಡರೆನಿಸುತ್ತದೆ. ಕೊಡಗಿನವರು ಕೃಷಿಕಾರ್ಯದ ಮೂಲಕ ಬದುಕನ್ನು

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025 | VOLUME: 09, ISSUE: 06, DECEMBER 2025

ನಡೆಸುತ್ತಿದ್ದರು. ತಮಗೆ ಬೇಕಾದ ಆಹಾರ ಪದಾರ್ಥಗಳನ್ನು ತಾವೇ ಬೆಳೆದುಕೊಂಡು ನೆಮ್ಮದಿಯ ಜೀವನವನ್ನು ನಡೆಸುತ್ತಿದ್ದರು ಎಂದರೆ ತಪ್ಪಾಗಲಿಕ್ಕಿಲ್ಲ. ಇವರು ಸುರಿಯುವ ಮಳೆಯನ್ನಾಗಲಿ, ಬೀಸುವ ಗಾಳಿಯನ್ನಾಗಲಿ ಲೆಕ್ಕಿಸದೆ ಗದ್ದೆಯನ್ನು ಊಳುವ, ಬೀಜ ಬಿತ್ತುವ, ನಾಟಿ ನೆಡುವ, ಹೆಂಗಸರು ಸಹ ಅಗೆ (ಪೈರು) ತೆಗೆಯುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದರು. ಇದಕ್ಕೂ ಜಾನಪದ ಹಿನ್ನೆಲೆ ಇರುವುದನ್ನು ಕಾಣಬಹುದಾಗಿದೆ. ಕೊಡವರ ನಂಬಿಕೆಯ ಪ್ರಕಾರ ನೂತನ ವರ್ಷ ಆರಂಭವಾಗುವ ?ಎಡಮ್ಯಾರ್' ಒಂದರಂದು ಕೃಷಿ ಕಾರ್ಯಕ್ಕೆ ಆರಂಭಕ್ಕೆ ಶುಭ ದಿನ.

ಬಿಸುದಿನದಂದು (ಏಪ್ರಿಲ್ 14ರಂದು) ದೇವರ ಕೋಣೆಯಲ್ಲಿ ಕುಟುಂಬದ ಹಿರಿಯರು ಸೇರಿ, ತಮ್ಮ ಗುರುಕಾರೋಣರನ್ನು ಪ್ರಾರ್ಥಿಸುತ್ತಾರೆ. ನಾವು ಗದ್ದೆ ಕೆಲಸವನ್ನು ಆರಂಭಿಸುತ್ತೇವೆ. ಅದು ಮುಗಿಯುವವರೆಗೆ ಜನರಿಗಾಗಲಿ, ಎತ್ತುಗಳಿಗಾಗಲಿ ತೊಂದರೆಯಾಗದಂತೆ ಕಾಪಾಡಿ ಕೊಂಡು ಬರಬೇಕೆಂದು ಬೇಡಿ ಕೊಂಡು ಹಿರಿಯರ ಒಪ್ಪಿಗೆ ಪಡೆದು ಕೊಟ್ಟಿಗೆಯಿಂದ ಎತ್ತುಗಳನ್ನು ಹೊಡೆದು ತಂದು; ಮೂರು ಸುತ್ತು ಗದ್ದೆಯನ್ನು ಉಳುವ ಕಾರ್ಯವನ್ನು ಮಾಡಿ ಗದ್ದೆಯ ಮಣ್ಣಿನ ಬೊಟ್ಟನ್ನು ಎತ್ತುಗಳಿಗೆ ಇಡುತ್ತಾರೆ.

"ಚೋಮ ಇರುವ ಕೊಟ್ಟಿಗೆಯಲ್ಲಿ
ಮೂವತ್ತಾರು ಎತ್ತುಗಳ
ಈ ಎತ್ತುಗಳಿಗೆ ಹಗ್ಗ ಕಟ್ಟಿ
ಬೆನ್ನು ಚಪ್ಪರಿಸಿ ನಡೆಸಿ
ಬೆಳ್ಳಿಹಲಗೆಯಂತಹ ಅಂಗಳದಲ್ಲಿ"

ಎಂಬ ಜನಪದ ಗೀತೆಯೊಂದಿಗೆ, ಉಳುಮೆ ಕಾರ್ಯವನ್ನು ಆರಂಭಿಸುತ್ತಾರೆ. ಉಳುಮೆಗೆ ಬೇಕಾದ ನೇಗಿಲು, ನೊಗವನ್ನು, ಅವರೇ ಸಿದ್ಧ ಮಾಡಿಕೊಳ್ಳುತ್ತಿದ್ದರು. ಈಗಿನಂತೆ ಟ್ರ್ಯಾಕ್ಟರ್, ಟಿಲ್ಲರ್ ಮತ್ತಿತರ ಯಂತ್ರೋಪಕರಣಗಳು ಇರಲಿಲ್ಲ. ತಮ್ಮ ಒಂದು ಅನುಭವದ ಜ್ಞಾನದಿಂದ ನೇಗಿಲು ನೊಗವನ್ನು ಸಿದ್ಧಪಡಿಸುತ್ತಿದ್ದರು.

ನೊಗಮರದ ನೊಗವನ್ನು ಕಡಿದು

ಈಚಲು ಮರದ ಹಲಗೆ ಕಡಿದು

ನೊಗ ಕೆಲಸ ಮುಗಿಸಿ

ಸಂಪಿಗೆ ಮರದ ನೇಗಿಲು ಕಡಿದು

ಹೀಗೆ ಬಾಳೋಪಾಟ್ನಲ್ಲಿ ಅಂದಿನ ಕೃಷಿ ಕಾರ್ಯಕ್ಕೆ ಬೇಕಾದ ವಸ್ತು ಮತ್ತು ತಯಾರಿಸುತ್ತಿದ್ದ ರೀತಿಯನ್ನು ವಿವರಿಸಲಾಗಿದೆ. ಜಮೀನಿನಲ್ಲಿ ಏಕಾಕಿಯಾಗಿ ಉಳುಮೆ ಕಾರ್ಯಮಾಡದೆ ಅಲ್ಲಿ ಕೂಡ ಒಂದು ಪದ್ಧತಿಯನ್ನು, ಒಂದು ನಂಬಿಕೆಯನ್ನು, ಒಂದು ಆಚರಣೆಯನ್ನು ಪಾಲಿಸುವುದರೊಂದಿಗೆ ಶುಭಕಾರ್ಯಕ್ಕೆ ನಾಂದಿ ಹಾಡುತ್ತಿದ್ದರು.

ಹೀಗೆ ಗದ್ದೆಯಲ್ಲಿ ಉಳುಮೆ ಕಾರ್ಯ ಆರಂಭವಾಗುತ್ತದೆ. ನಂತರ ಜಮೀನಿನಲ್ಲಿ ಮೊಳಕೆ ಬಿತ್ತನೆ ಕಾರ್ಯವನ್ನು ಕೂಡ ಬೇಕಾಬಿಟ್ಟಿಯಾಗಿ ಮಾಡದೆ, ಅದನ್ನು ಕೂಡ ತಮ್ಮ ನಂಬಿಗೆಯ, ಪದ್ಧತಿಯ ಚೌಕಟ್ಟಿನೊಳಗೆ ತಂದಿದ್ದರು.

ನಾಟಿ ವಿಧಗಳು:

ನಾಟಿ ನೆಡುವುದರಲ್ಲಿ ಕೂಡ ಹಲವು ವಿಧಗಳಿವೆ. ಇಲ್ಲಿ ಕೂಡ ನಾಟಿ ಕಾರ್ಯ ಏಕತಾನತೆಯಿಂದ ಕೂಡಿ ಬೇಸರ ತರದಂತೆ ಅದರಲ್ಲಿ ಕೂಡ ಬೇರೆ ಬೇರೆ ಬಗೆಯನ್ನು ಕಂಡುಕೊಂಡರು. ಮುಖ್ಯವಾಗಿ 'ಕೊಡಿನಾಟಿ', 'ನೆರೆ ನಾಟಿ'(ನೇರವಾಗಿ ನೆಡುವುದು) ಹಾಗೂ 'ಕರೆನಾಟಿ' (ಬದುವಿನ ಪಕ್ಕ ನೆಡುವ ನಾಟಿ) ಎಂದು ಮೂರು ವಿಧವನ್ನು ಗುರುತಿಸಬಹುದು. ಗದ್ದೆಯ ಮಧ್ಯಭಾಗದಲ್ಲಿ ಹಗ್ಗದಿಂದ ಗೆರೆ ಎಳೆದಂತೆ ಇಲ್ಲವೇ ಯಂತ್ರದಿಂದ ಮೊದಲೇ ತಯಾರಿಸಿ ತರಿಸಿಟ್ಟಂತೆ ಕಾಣುವ 'ಕೊಡಿನಾಟಿ'ಯನ್ನು ನೆಡುವುದು ಸಾಮಾನ್ಯವಲ್ಲ. ಇದನ್ನು ನೋಡುವುದೇ ಒಂದು ಅಂದ. ಇದರ ಪಕ್ಕದಲ್ಲಿ ನೆಡುವ ನಾಟಿಯನ್ನು ನೆರೆ ನಾಟಿ ಎಂದೂ, ಕೊನೆಯಲ್ಲಿ ನೆಡುವ ನಾಟಿಯನ್ನು ಕರೆನಾಟಿ ಎಂದೂ ಕರೆಯುತ್ತಾರೆ. ಕೆಲವರು ಈ ನಾಟಿಗಳ ಪೈಕಿ ಯಾವುದಾದರೊಂದರಲ್ಲಿ ಪರಿಣಿತಿ ಪಡೆದಿರುತ್ತಾರೆ.

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025 | VOLUME: 09, ISSUE: 06, DECEMBER 2025

ಗಣೋದಿ:

ನಾಟಿ ಕಾರ್ಯ ಅಥವಾ ಗದ್ದೆ ಕೆಲಸವನ್ನು ಆರಂಭಿಸುವಾಗ ಯಾವ ರೀತಿ ದೇವರನ್ನು ನೆನೆದು ಆರಂಭಿಸುತ್ತಾರೊ, ಅದನ್ನು ಮುಗಿಸುವಾಗ ಕೂಡ ಅದೇ ರೀತಿಯ ಸಂಪ್ರದಾಯ ಕಾಣಬಹುದು. ಇದನ್ನು 'ಗಣೋದಿ' ಎನ್ನುತ್ತಾರೆ. ದೇವರನ್ನು ನೆನೆದು ನೆಟ್ಟ ನಾಟಿಯನ್ನು ಕಾಪಾಡುವಂತೆ, ದನಕರುಗಳನ್ನು ಮತ್ತು ನಾಟಿ ನೆಟ್ಟವರನ್ನು ರಕ್ಷಿಸುವಂತೆ ಬೇಡಿಕೊಳ್ಳುತ್ತಾರೆ. ಇದರಿಂದ ಆಕರ್ಷಿತನಾದ ಜಾನಪದ ಕವಿ ಗೀತೆಯಲ್ಲಿ ಸಗಣಿ ಹಾಗೂ ಮಣ್ಣು ಸಾರಿಸಿದ ಮಹಿಳೆಯರನ್ನು ಹರಿಸಿದ್ದಾನೆ.

ಜನಪದ ವೈದ್ಯ

ಜನಪದ ವೈದ್ಯ ಪದ್ಧತಿಯು ಇವರಿಗೆ ತಿಳಿದಿತ್ತು. ಕಾಡಿನಲ್ಲಿ ಬೇಕಾದ ಸಸ್ಯ, ಬೇರು, ತೊಗಟೆ, ಸೊಪ್ಪು ಎಲ್ಲವೂ ಸಿಗುತ್ತಿತ್ತು. ಔಷಧಿ ಮಾಡುವವರು ಇತರರಿಗೆ ಅದರ ಬಗ್ಗೆ ತಿಳಿಸುತ್ತಿರಲಿಲ್ಲ. ಹೇಳಿದರೆ ಔಷಧದ ಫಲಹೋಗಿ ಬಿಡುತ್ತದೆ ಎಂಬ ನಂಬಿಕೆ ಇತ್ತು. ಬಾಣಂತಿಗೆ ಎದೆಹಾಲು ಇಲ್ಲದಿದ್ದರೆ, ಬೆಳ್ಳುಳಿ, ಮೆಂತೆ, ಅರಶಿಣ, ಒಳ್ಳೆಮೆಣಸು, ತೆಂಗಿನಕಾಯಿ, ತುಪ್ಪ, ಚೋರೆಸೊಪ್ಪನ್ನು (ತೋರಳಿ) ಬೆರಸಿ 12 ದಿನಗಳವರೆಗೆ ಕುಡಿಸುತ್ತಾರೆ. ಇದರಿಂದ ಹಾಲು ಉತ್ಪತ್ತಿಯಾಗುತ್ತದೆಂಬ ನಂಬಿಕೆ ಇದೆ. ಹೀಗೆ ನಾಟಿ ಔಷಧಿಯನ್ನು ಸೇವನೆ ಮಾಡುವುದರಿಂದ ಹೆಣ್ಣು ಮಕ್ಕಳು ತುಂಬಾ ದೃಢಕಾಯರಾಗಿರುವರು.

ಜನಪದ ಆಚಾರ, ನಂಬಿಕೆ, ಸಂಪ್ರದಾಯಗಳು ನಮ್ಮ ಬದುಕಿನ ಓರೆಕೋರೆಗಳನ್ನು ತಿದ್ದಿ ಉತ್ತಮ ರೀತಿಯ ಜೀವನ ಮಾರ್ಗವನ್ನು ಕಂಡು ಕೊಳ್ಳುವುದರೊಂದಿಗೆ ಭಯ–ಭಕ್ತಿಯ ವಾತಾವರಣದೊಂದಿಗೆ ಭವ್ಯ ಸಮಾಜಕ್ಕೆ ನಾಂದಿ ಹಾಡಬಹುದು. ಕಾಲಾಯಃ ತಸ್ಮೈ ನಮಃ ಎಂಬಂತೆ ಕೆಲವೊಂದು ಮಾರ್ಪಾಟು ಆಗುವುದು ಇಂದಿನ ಪರಿಸ್ಥಿತಿಯಲ್ಲಿ ತಪ್ಪೇನಲ್ಲ ಎನ್ನ ಬಹುದು.

ಪರಾಮರ್ಶನ ಗ್ರಂಥ :

1. ದೇ. ಜವರೇಗೌಡ, ಜಾನಪದ ಅಧ್ಯಯನ, ಚೇತನಾ ಬುಕ್ ಹೌಸ್, ಮೈಸೂರು, 1991
2. ನಡಿಕೇರಿಯಂಡ ಚಿಣ್ಣಪ್ಪ, ಪಟ್ಟೋಲೆ ಪಳಮೆ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ. 2012
3. ಐತಿಚಂಡ ರಮೇಶ್ ಉತ್ತಪ್ಪ – ಕೊಡವ ಸಾಂಸ್ಕೃತಿಕ ಅಧ್ಯಯನ.
4. ಎ.ಸಿ.ಶೈಲಜಾ., ಕೊಡವರು ಮತ್ತು ಕೊಡಗಿನ ಅರೆಭಾಷೆ ಗೌಡರ ಸಂಸ್ಕೃತಿ– ತೌಲನಿಕ ಅಧ್ಯಯನ.

ಲೇಖಕರು : ಡಾ. ಗೀತಾ ಎ.ಸಿ

ಕನ್ನಡ ಸಹ ಪ್ರಾಧ್ಯಾಪಕರು

ಡಾ.ಎನ್‌ಎಸ್‌ಎಂ ಪ್ರಥಮ ದರ್ಜೆ, ಕಾಲೇಜು

ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯ.

ಬೆಂಗಳೂರು – 89

geetha.a.chengappa@gmail.com

***

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025 | VOLUME: 09, ISSUE: 06, DECEMBER 2025

ಸಸ್ಯ ದೈವಿಕ ಮೂಲಗಳು

ಜೀವ ಜಗತ್ತಿನ ವಿಕಾಸದಲ್ಲಿ ಸಸ್ಯಗಳಿಗೆ ಮಹತ್ವದ ಸ್ಥಾನವಿದೆ. ಪ್ರಾಣಿ ಹಾಗೂ ಮನುಷ್ಯನಿಗಿಂತ ಮೊದಲೇ ಸಸ್ಯಗಳು ಉದ್ಭವಿಸಿದ್ದು ಅವು ಭೂಮಂಡಲವನ್ನು ಸಮತೋಲನದಲ್ಲಿಟ್ಟು ಕಾಪಾಡಿಕೊಂಡು ಬರುತ್ತಿವೆ. ಪರಿಸರವು ಗಾಳಿ ನೀರಿಗೆ ಸೀಮಿತವಾಗಿರದೆ ಮನುಷ್ಯ ಹಾಗೂ ಪ್ರಾಣಿಗಳಿಗೂ ಆಹಾರದ ಮೂಲವಾಗಿದೆ. ಬದುಕಿಗೆ ಮೂಲಭೂತವಾಗಿ ಅಗತ್ಯವಿರುವ ಉಪಯೋಗಿ ಪದಾರ್ಥಗಳನ್ನು ಸಸ್ಯಗಳು ನೀಡುತ್ತವೆ. ಹಾಗೆಯೇ ಕಾಡುಗಳಲ್ಲಿ ಭಯಂಕರ ಪ್ರಾಣಿಗಳು, ಕ್ರಿಮಿ ಕೀಟಗಳು ಉದ್ಭವವಾದರೂ ಅವುಗಳ ಸಂತಾನವು ಮಿತಿಮೀರದಂತೆ ಹಲವು ವಿಷಜಾತಿಯ ಸಸ್ಯಗಳು ನಿಯಂತ್ರಿಸುತ್ತವೆ. ಅನ್ಯರ ಸಹಾಯ ಪಡೆದ ಸಸ್ಯಗಳು ತಮ್ಮ ಬೆಳವಣಿಗೆಗೆ ತಾವೇ ಗೊಬ್ಬರವಾಗುತ್ತವೆ. ಹಸಿವಿಗೆ ಆಹಾರ, ವಾಸಕ್ಕೆ ಮನೆ, ಅಗತ್ಯತೆಗಳಿಗೆ ಪೀಠೋಪಕರಣ, ಕಾಯಿಲೆಗಳಿಗೆ ಔಷಧಿಯನ್ನು ಒದಗಿಸುವ ಮೂಲಕ ಸಸ್ಯಗಳು ಸಂಜೀವಿನಿ ಎಂದು ಕರೆಸಿಕೊಂಡಿದ್ದು ಸಸ್ಯಗಳು ಮಾನವ ಬದುಕಿಗೆ ಕೊನೆಯಿಲ್ಲದ ಸಂಪನ್ಮೂಲವಾಗಿ ಕಾಣಿಸಿಕೊಳ್ಳುತ್ತವೆ. ಪ್ರಕೃತಿಯ ಮಡಿಲಲ್ಲಿ ಬೆಳೆದ ಮಾನವ ಸಹಜವಾಗಿ ಸಸ್ಯಗಳೊಂದಿಗೆ ಒಡನಾಟವನ್ನಿಟ್ಟುಕೊಳ್ಳುತ್ತಾನೆ.

ಸಸ್ಯಗಳು ಚೈತನ್ಯವಾಗಿದ್ದು ಅವು ದಿನದಿಂದ ದಿನಕ್ಕೆ ಬೆಳೆಯುತ್ತಾ ಹೂವು, ಕಾಯಿ, ಹಣ್ಣುಗಳನ್ನು ಬಿಡುತ್ತಾ ಮಾನವನ ಹಸಿವು, ಬಯಕೆಗಳನ್ನು

ಈಡೇರಿಸುವುದರೊಂದಿಗೆ ತನ್ನ ಎಷ್ಟೋ ಕಾಯಿಲೆಗಳಿಗೆ ಔಷಧ ಮೂಲವಾಗಿ ಕಾಣಿಸಿಕೊಂಡಿದ್ದರಿಂದ ಅವುಗಳಿಗೂ ಆತ್ಮ ಇದೆ ಎಂದು ನಂಬಿ ಅವುಗಳನ್ನು ರಕ್ಷಿಸಿಕೊಂಡು ಬರಲು ಹೆಣಗಾಡಿದರು. ಇಲ್ಲಿ ನಾವು ಸೂಕ್ಷ್ಮವಾಗಿ ಗಮನಿಸಬೇಕಾದ ವಿಷಯವೆಂದರೆ ಸಸ್ಯಗಳಿಗೆ ನೈವೇದ್ಯವನ್ನು ಒಂದೆಡೆ ಸಮರ್ಪಿಸಿದರೆ ಮುಂದುವರೆದು ಸಸ್ಯಾಹಾರವನ್ನೇ ತನ್ನ ಆಚರಣೆಯ ದೈವಗಳಿಗೆ ನೀಡುವುದನ್ನು ನೋಡಬಹುದು. ಮಾನವ ತನ್ನ ಗುರುತಿಗಾಗಿ ಮಾಡಿಕೊಂಡ ಸಂಕೇತಗಳ ಸಸ್ಯಗಳು ಮತಧರ್ಮದ ರಕ್ಷಣಾ ಚಿಹ್ನೆಗಳಾಗಿ ಕಾಣಿಸಿಕೊಂಡವು. ಜೀವ ಜಗತ್ತಿನ ವಿಕಾಸದಲ್ಲಿ ಸಸ್ಯಗಳಿಗೆ ಮಹತ್ವದ ಸ್ಥಾನವಿದೆ. ಪ್ರಾಣಿ ಹಾಗೂ ಮನುಷ್ಯನಿಗಿಂತ ಮೊದಲೇ ಸಸ್ಯಗಳು ಉದ್ಭವಿಸಿದ್ದು ಅವು ಭೂಮಂಡಲವನ್ನು ಸಮತೋಲನದಲ್ಲಿಟ್ಟು ಕಾಪಾಡಿಕೊಂಡು ಬರುತ್ತಿವೆ.

ಗಿಡಮರಗಳು ಮನುಷ್ಯ ಪ್ರಾಣಿಗಳಂತೆ ಜೀವ ಭಾವ ಚಲನೆಯನ್ನು ಹೊಂದಿವೆ ಎಂದು ಗುರುತಿಸಲಾಗಿದ್ದು ಅವುಗಳ ಬೆಳವಣಿಗೆ, ಆಭಾವಕ್ಕೆ ಸ್ಪಂದಿಸುತ್ತವೆ ಜೊತೆಗೆ ಬಳ್ಳಿಗಳು ಒಂದೆಡೆಯಿಂದ ಮತ್ತೊಂದೆಡೆಗೆ ಚಲಿಸಿ ಚಿಗುರುತ್ತವೆ. ಈ ಸಸ್ಯಗಳ ಚಲನೆ ಹಾಗೂ ಭಾವನಾತ್ಮಕ ಸ್ಪಂದನವನ್ನು ಭಾರತೀಯ ಋಷಿಗಳು ಬಹುಹಿಂದೆಯೇ ಕಂಡುಕೊಂಡಿರುವುದು ನಮಗೆ ತಿಳಿದುಬರುತ್ತದೆ. ಋಷಿಗಳಿಗೆ ಜ್ಞಾನದ ಕೇಂದ್ರಗಳಾಗಿದ್ದ ಆಶ್ರಮಗಳೆಲ್ಲಾ ಪ್ರೀತಿ, ಪ್ರೇಮವನ್ನು ಹಂಚಿಕೊಳ್ಳುವ ಹಣ್ಣು, ಹಂಪಲುಗಳ ಮೂಲಕ ಆಹಾರ ಒದಗಿಸುವ, ರೋಗಗಳನ್ನು ನಿವಾರಿಸುವ ಸಸ್ಯಗಳಿಂದ ತುಂಬಿದ್ದವು. ಬಹುಶಃ ಸಿದ್ಧಾರ್ಥ ಬೋಧಿವೃಕ್ಷದ ಕೆಳಗೆ ಜ್ಞಾನೋದಯವಾಗಿ ಬುದ್ಧನಾದುದನ್ನು ನಾವು ಇಲ್ಲಿ ನೆನೆಯಬಹುದು.

ಪ್ರಾಚೀನ ಭಾರತದಲ್ಲಿ ವೃಕ್ಷಪೂಜೆಗೆ ಆಚರಣೆಗೆ ಸಂಬಂಧಿಸಿದ ಅಂಶಗಳೇ ಹೆಚ್ಚಾಗಿ ಕಂಡುಬರುತ್ತವೆ. ಗಿಡಮರಗಳ ಹುಟ್ಟಿಗೆ ಕಾರಣವಾದ ಭೂಮಿಯನ್ನು ಭೂದೇವಿಯೆಂದು ಕರೆದರು. ವೇದಗಳ ಕಾಲದಲ್ಲಿ ಗಿಡಮರಗಳಿಗೆ ದೈವತ್ವವನ್ನು ಸ್ಪಷ್ಟವಾಗಿ ರೂಪಿಸಲಾಗಿದ್ದು ಋಗ್ವೇದವು ಗಿಡಮರಗಳಲ್ಲಿ ವಾಸಿಸುವ ದೇವತೆಗಳನ್ನು ಕ್ಷೇತ್ರಪತಿ ಎಂದು ಕರೆದಿದ್ದಾರೆ. ಹಾಗೆಯೇ "ಉಪನಿಷತ್ತುಗಳಲ್ಲಿ ಗಿಡಮರಗಳನ್ನು

ದೇವರ ವಾಸಸ್ಥಾನವನ್ನಾಗಿ ಮಾಡಿದ್ದಾರೆ. ವಿಶ್ವವ್ಯಾಪಿಯಾಗಿರುವ ದೇವರು ನೀರಿನಲ್ಲಿ ಹಾಗೂ ಬೆಂಕಿಯಲ್ಲಿಯೂ ಅಸ್ತಿತ್ವವನ್ನು ಹೊಂದಿರುವಂತೆ ದೀರ್ಘಾಯುಷ್ಯವನ್ನುಳ್ಳ ಬೃಹತ್ ಪ್ರಮಾಣದ ಮರ ಹಾಗೂ ಬೇರುಗಳಲ್ಲಿಯೂ ಇದ್ದಾನೆ ಎನ್ನುತ್ತಾರೆ. ಭಗವದ್ಗೀತೆಯಲ್ಲಿ ಕೃಷ್ಣನು ತನ್ನನ್ನು ತಾನು ಬೋಧಿವೃಕ್ಷವೆಂದು ಜೊತೆಗೆ ಮಿಲನಮಾಡಿಕೊಂಡಿದ್ದಾನೆ ಎನ್ನಲಾಗಿದೆ. ಹಿಂದೂ ಧರ್ಮದ ಪ್ರಕಾರ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರ ಆವಾಸಸ್ಥಾನ ಬೋಧಿವೃಕ್ಷವಾಗಿದ್ದು ಕೆಲವು ಮಾಹಿತಿಗಳ ಪ್ರಕಾರ ಅದು ಲಕ್ಷ್ಮಿ ಮತ್ತಿತರ ದೇವತೆಗಳು ವಾಸಿಸುವ ವೃಕ್ಷವಾಗಿದೆ" (ಎಂ.ಜಿ. ಈಶ್ವರಪ್ಪ. (1994). ಜಾನಪದ ಇಬ್ಬನಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪುಟ 204).

ಅರಳೀಮರ ಅಥವಾ ಅಶ್ವತ್ಥ ವೃಕ್ಷ

ಕರ್ನಾಟಕದಲ್ಲಿ ಅಶ್ವತ್ಥ ಮರದ ಜನಪ್ರಿಯ ಹೆಸರು ಅರಳಿಮರ. ಸಾಮಾನ್ಯವಾಗಿ ಭಾರತದ ಪ್ರತಿಯೊಂದು ಹಳ್ಳಿಗಳಲ್ಲಿಯೂ ಪವಿತ್ರವಾದ ಅರಳಿ ಮರಗಳಿರುತ್ತವೆ. ವಿಷ್ಣು ಈ ಮರದ ಎಲೆಗಳ ಮೇಲೆ ಕುಳಿತಿರುವಂತೆ ಚಿತ್ರಿಸಲಾಗಿದೆ. "ಅರಳಿ ಮರವನ್ನು ಕಡಿಯಬಾರದು ಕಡಿದವರ ವಂಶ ನಾಶವಾಗುತ್ತದೆ, ಮದುವೆಯಾಗದೆ ಸತ್ತ ಬ್ರಾಹ್ಮಣರ ಹುಡುಗರ ಆತ್ಮಗಳು ಇದರಲ್ಲಿ ವಾಸಿಸುತ್ತವೆ. ಬಹುಶಃ ಈ ದೃಷ್ಟಿಯಿಂದ ಇದು ಬಂಜೆ ಹೆಂಗಸರಿಗೆ ಮಕ್ಕಳನ್ನು ಕೊಡುವ ಶಕ್ತಿ ಪಡೆದಿದೆ ಎಂದು ಹೇಳಲಾಗುತ್ತದೆ. ಕನ್ಯೆಯರನ್ನು ಈ ಮರಕ್ಕೆ ಮದುವೆ ಮಾಡಿಕೊಡುತ್ತಾರೆ. ಫಲವಂತಿಕೆಯನ್ನು ಪಡೆಯಲು ಬಂಜೆ ಹೆಂಗಸರು ನಗ್ನರಾಗಿ ಈ ಮರಕ್ಕೆ ನಿರ್ದಿಷ್ಟ ಸಂಖ್ಯೆಯಲ್ಲಿ ಪ್ರದಕ್ಷಿಣೆ ಹಾಕುತ್ತಾರೆ. ಅರಳೀಮರ ಗಂಡಸಿನ ಸೃಷ್ಟಿ ಶಕ್ತಿಯನ್ನು ಹೊಂದಿದೆ ಎನ್ನುತ್ತಾರೆ" (ಎಂ.ಜಿ. ಈಶ್ವರಪ್ಪ. (1994). ಜಾನಪದ ಇಬ್ಬನಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪುಟ 217–218).

ಯೋಗ್ಯ ಆತ್ಮಗಳು ಭೂಮಿಯಿಂದ ಸ್ವರ್ಗಕ್ಕೆ ಹಾಯ್ದು ಹೋಗುವ ಸೇತುವೆ ಈ ಅರಳೀಮರ ಎಂದು ನಂಬಿದ್ದರು. ಜನರ ಜೊತೆಯಲ್ಲಿ ಬೆಳೆದ ಆಲ ಹಾಗೂ ಅರಳೀಮರಗಳಿಗೆ ಸೂಕ್ತ ಸಮಯದಲ್ಲಿ ಮದುವೆ ಮಾಡುವುದು ಒರಿಸ್ಸಾ

ಪ್ರಾಂತ್ಯದ ಪದ್ಧತಿಯಾದರೆ ಅರಳಿ ಹಾಗೂ ಬೇವಿನ ಮರಗಳನ್ನು ಒಂದೇ ಕಡೆ ಬೆಳೆಸಿ ಅವುಗಳಿಗೆ ಮದುವೆ ಮಾಡುವ ಪದ್ಧತಿ ಕರ್ನಾಟಕದಲ್ಲಿದೆ. ಹೀಗೆ ಅರಳೀಮರದ ಬಗೆಗೆ ನಂಬಿಕೆಯಿಟ್ಟ ಜನರು ಅದರ ಸೊಪ್ಪನ್ನು ಮನೆಯೊಳಗೆ ತರಲು ಅಂಜುತ್ತಾರೆ. ದೈವೀಕ ಸ್ವರೂಪವಾದ ಅರಳೀಮರ ಮಕ್ಕಳ ಭಾಗ್ಯ ಕರುಣಿಸುವ ವಿವಾಹ ಭಾಗ್ಯವನ್ನು ದೊರಕಿಸಿಕೊಡುವ, ಸಂಸಾರವನ್ನು ಕಾಪಾಡುವ ಶಕ್ತಿಯನ್ನು ನೀಡುವ ದೇವರೆಂದು ಇಂದಿಗೂ ಆರಾಧಿಸುತ್ತಾ ಬರುತ್ತಿದ್ದಾರೆ. ಅರಳಿಯ ಎಲೆ, ಮೊಗ್ಗು, ಫಲ, ಬೇರು, ಕಾಂಡ, ತೊಗಟೆ ಈ ಭಾಗಗಳಲ್ಲಿ ಔಷಧಿಯಾಗಿ ಬಳಸಿ ಅನೇಕ ರೋಗಗಳನ್ನು ಗುಣಪಡಿಸುತ್ತಾರೆ.

ಆಲದ ಮರ

ತ್ರಿಮೂರ್ತಿಗಳ ಜೊತೆಗೆ ಲಕ್ಷ್ಮಿ ಕುಬೇರ, ಯಕ್ಷಿಣಿ ಮುಂತಾದ ದೈವಗಳು ವಾಸ ಮಾಡುವ ಮರವೇ ಆಲದ ಮರ. ಕರ್ನಾಟಕದ ಜನಪದರು ಪೂಜಿಸುವ ಏಳು ಜನ ಅಮ್ಮಂದಿರಲ್ಲಿ ಆಲದ ಮರದಮ್ಮ ಮೊದಲನೆಯವಳು. ಜಲಪ್ರಳಯ ಸಂದರ್ಭದಲ್ಲಿ ಭೂಮಂಡಲವೆಲ್ಲಾ ನೀರಿನಲ್ಲಿ ಮುಳುಗಿ ಹೋಗಿದ್ದಾಗ ಆಲದ ಮರವೊಂದು ಭದ್ರವಾಗಿ ನಿಂತಿತ್ತಂತೆ. ಮಗುವಾಗಿದ್ದಾಗ ಕೃಷ್ಣನು ಅದರ ಮೇಲೆ ಮಲಗಿದ್ದಾನೆ ಎಂದು ಬ್ರಹ್ಮಪುರಾಣದಿಂದ ತಿಳಿದುಬರುತ್ತದೆ. ಆದ್ದರಿಂದ ಆತನಿಗೆ 'ವಟಪತ್ರಶಾಹಿ' ಎಂದು ಕರೆಯಲಾಗುತ್ತದೆ. ಸೋಮರಸ ಪಾನವನ್ನು ಬಿಟ್ಟು ಆಲದಮರದ ಹಾಲನ್ನು ಕುಡಿಯುವಂತೆ ದೊರೆಯೊಬ್ಬನಿಗೆ ಋಷಿಗಳು ಉಪದೇಶ ನೀಡುತ್ತಾರೆಂದು ಐತರೇಯ ಬ್ರಾಹ್ಮಣದಲ್ಲಿ ಉಲ್ಲೇಖವಿದೆ.

"ಆಲವು ಒಂದು ಸಂಸ್ಕೃತಿಯ ಮೂಲವಾಗಿ ಕಾಣಿಸಿಕೊಳ್ಳುವುದು ಮಾತ್ರವಲ್ಲದೇ ಹಲವು ಮಂದಿಯ ಕೆಲಸ ಕಾರ್ಯ, ವಾಸ, ಪಂಚಾಯಿತಿ, ಜಾತ್ರೆಗಳು, ಹಬ್ಬಗಳು ಈ ಮರದ ಕೆಳಗೆ ನಡೆಯುತ್ತಿದ್ದವು. ಇದರ ಕಾಂಡ ಹಾಗೂ ಬಿಳಲುಗಳೂ ಸಹ ದೈತ್ಯಾಕರಾವಾಗಿ ಬೆಳೆಯುವ ಆಲ ಅಮರತ್ವದ ಭಾವನೆ ಇರುವುದರಿಂದ ಅಕ್ಷಯವಟ ಎಂದು ಹೆಸರು ಪಡೆದಿದೆ. ಪವಿತ್ರ ಮರವೆಂದು ಪರಿಗಣಿಸಲಾಗುವ ಇದು ಪ್ರೀತಿ ಮತ್ತು ರಕ್ಷಣೆಯ ಸಂಕೇತವಾಗಿಯೂ ಇದೆ. ದೈತ್ಯಾಕಾರವಾಗಿ ಬೆಳೆಯುವುದರಿಂದ ಬ್ರಹ್ಮ ರಾಕ್ಷಸರು ವಾಸಿಸುತ್ತಾರೆಂಬ

ನಂಬಿಕೆ ಇದೆ. ರಾಮಾಯಣ, ಉತ್ತರ ರಾಮಚರಿತೆ ಮುಂತಾದ ಕೃತಿಗಳಲ್ಲಿ ಇದರ ಪ್ರಶಂಸೆ ಇದೆ. ಬಂಗಾಳದಲ್ಲಿ ಇದನ್ನು ಬ್ರಹ್ಮನ ಸ್ವರೂಪ ಎಂದು ಭಾವಿಸಲಾಗುತ್ತದೆ. ಮುಸ್ಲಿಂ ಸಂತಾನದ ಮಕದುಂ ಪೀರರು ಆಲದ ಮರದಲ್ಲಿ ವಾಸ ಮಾಡುತ್ತಾರೆಂದು ಭಾವಿಸಿ ಮಕದುಂ ವೃಕ್ಷ ಎಂದೂ ಕರೆಯುತ್ತಾರೆ. ಆಧುನಿಕ ಕಾಲದಲ್ಲಿಯೂ ಇಂತಹ ನಂಬಿಕೆಗಳು ಹಾಗೂ ಆಚರಣೆಗಳು ಮುಂದುವರೆದಿವೆ" (ಎಂ.ಜಿ. ಈಶ್ವರಪ್ಪ. 1994. ಜಾನಪದ ಇಬ್ಬನಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪುಟ 220). ನಮ್ಮ ಮಲೆನಾಡಿನಲ್ಲಿ ಹಲವು ಬಗೆಯ ನಂಬಿಕೆಗಳನ್ನು ಆಲದ ಮರದ ಮೇಲೆ ಇಟ್ಟಿದ್ದು ದೇವತೆಗಳ ಆವಾಸಸ್ಥಾನವಾಗಿದೆ ಎಂದು ನಂಬಿದ್ದಾರೆ, ಸಮಸ್ತ ಕಷ್ಟಗಳನ್ನು ಪರಿಹರಿಸುವ ಮರವೆಂದು, ಅಮಾವಾಸ್ಯೆಯಂದು ಕೋಳಿಯನ್ನು ಬಲಿಕೊಟ್ಟು ಅದರ ತಲೆಯನ್ನು ಬಿಳಲುಗಳಿಗೆ ನೇತು ಹಾಕುತ್ತಾರೆ, ಮಕ್ಕಳಾಗದವರು ನಿರ್ದಿಷ್ಟ ದಿವಸಗಳವರೆಗೆ ಪೂಜಿಸಿ ಪ್ರದಕ್ಷಿಣೆಯನ್ನು ಹಾಕುತ್ತಾರೆ. ಅಶೋಕನು ಕಳಿಂಗ ಯುದ್ಧದ ಪ್ರಾಯಶ್ಚಿತ್ತಕ್ಕಾಗಿ ನೆಡಿಸಿದ ಸಾಲುಮರಗಳಲ್ಲಿ ಆಲವೂ ಒಂದು. ಕಿರಿದಾದ ಬೀಜದಿಂದ ಹುಟ್ಟಿದ ಆಲವು ಕಾಲಾನುಕ್ರಮದಲ್ಲಿ ಪೆರ್ಮರವಾದಂತೆ ಬಡವನು ಬಲ್ಲಿದನಾಗುವನೆಂಬ ಮಾತಿದೆ. ಬೇರೇನೂ ಇಲ್ಲದ ಸೃಷ್ಟಿಯ ಹಾದಿಯಲ್ಲಿ ಆಲದೆಲೆ ಮಾತ್ರ ಇತ್ತು ಎಂಬ ಕಲ್ಪನೆ ಇದ್ದು ಆಲಕ್ಕೆ ಮಹಾಕಾವ್ಯಗಳಲ್ಲಿ ವಟ, ವ್ಯಗ್ರೋಧ, ಬಹುಪಾದ, ರಕ್ತಫಲ, ಕ್ಷೀರಿ, ವೈಶ್ರವಣವಾಸ, ವನಸ್ಪತ್ತಿ ಎಂಬೆಲ್ಲಾ ಹೆಸರುಗಳಿಂದ ಕರೆಯಲಾಗುತ್ತಿತ್ತು. ಆಲಕ್ಕೆ ಹೂ ಹಣ್ಣು ಒಂದೇ ಆಗಿದೆ. ಆಲಗಂಬ (ಹಾಲಗಂಬ) ತರುವುದೊಂದು ಮದುವೆಯಲ್ಲಿ ವಿಶೇಷ ಆಚರಣೆ. ಮದುವೆಯ ಮೊದಲು ಊರಿನ ದೇವಾಲಯದ ಮುಂದಿದ್ದ ಆಲ ಮತ್ತು ಬೇವಿನ ಮರಕ್ಕೆ ದಂಪತಿಗಳಿಬ್ಬರು ಮುತ್ತೈದೆಯರ ಜೊತೆ ವಾದ್ಯಗಳೊಂದಿಗೆ ಹೋಗಿ ಆ ಮರಗಳನ್ನು ತರುತ್ತಾರೆ. ಅದನ್ನು ಮದುವೆಯ ಹಂದರದಲ್ಲಿ ಒಂದು ಕಂಬಕ್ಕೆ ಪ್ರತಿಷ್ಠಾಪಿಸಿ ಪೂಜಿಸುತ್ತಾರೆ. ಅನಂತರವೇ ವಧುವರರ ಅಕ್ಷತೆ, ಆಲದ ವಂಶದಂತೆ ಈ ಮಧುಮಕ್ಕಳ ವಂಶವೂ ಹಾಲ್ದುಂಬಿ ಸದಾ ಬಿಳಲು ಬಿಡುತ್ತಾ ಬೆಳೆಯಲಿ ಎನ್ನುವ ಆಕಾಂಕ್ಷೆ. ಇದನ್ನು ಕೆಲವೇ ಧರ್ಮಗಳ ಜನರು ಆಚರಿಸುತ್ತಾರೆ.

ಬಿಲ್ವಪತ್ರೆ ವೃಕ್ಷ

ಬಿಲ್ವದ ಮಹಿಮೆಯನ್ನು ಸಾರುವ ಪುರಾಣ ಸಾಹಿತ್ಯ ಸಂಸ್ಕಾರದಲ್ಲಿ ಉಪಲಬ್ಧವಿದೆ. ಶಿವಭಕ್ತರಿಗೆ ಇದು ಅತ್ಯಂತ ಪವಿತ್ರ ವೃಕ್ಷ. ಬಿಲ್ವಪತ್ರೆ ಶಿವನ ಪೂಜೆಗೆ ಶ್ರೇಷ್ಠ ಸಾಮಾಗ್ರಿಯಾಗಿದೆ. ಬಿಲ್ವಪತ್ರೆಯು ತ್ರಿದಳ, ಪಂಚದಳಗಳೆಂಬ ವಿವಿಧ ಸಂಖ್ಯೆಯಲ್ಲಿ ಬಿಡುತ್ತದೆ. ತ್ರಿದಳ ಪತ್ರೆಯಲ್ಲಿ ಬ್ರಹ್ಮ, ವಿಷ್ಣು ಹಾಗೂ ರುದ್ರರು ನೆಲೆಸಿರುತ್ತಾರೆಂಬ ನಂಬಿಕೆ ಹೊಂದಿದ್ದು ದೈವತ್ವಕ್ಕೆ ಏರಿಸಿದ್ದಾರೆ. ಈ ಮರವನ್ನು ಶಿವರಾತ್ರಿಯಂದು ಪೂಜಿಸಿ ಪತ್ರೆಯನ್ನು ತಂದು ಶಿವನಿಗೆ ಅರ್ಪಿಸಿ ಪೂಜೆ ಮಾಡುತ್ತಾರೆ. ಇದರ ಎಲೆಯನ್ನು ಜಾನಪದದಲ್ಲಿ 'ಪತ್ರಿ' ಎಂದೇ ಕರೆಯುವರು. ಈ ಮರವನ್ನು ಮಸಣದಲ್ಲಿ ಮತ್ತು ಮಠಗಳಲ್ಲಿ ಮಾತ್ರ ಹೆಚ್ಚಾಗಿ ಬೆಳಸುತ್ತಾರೆ. ಅಲ್ಲಲ್ಲಿ ದೇವಸ್ಥಾನಗಳಲ್ಲಿಯೂ ಹೆಚ್ಚಾಗಿ ಕಂಡುಬರುತ್ತವೆ. ಇದರ ಎಲೆ, ಕಾಯಿಗಳನ್ನು ಆಯುರ್ವೇದದ ಔಷಧಿಗಳಲ್ಲಿ ಪರಮ ಪ್ರಯೋಜನಕಾರಿ ಆದರೆ ಈ ಮರ ಮನೆಗೆ ದೂರ. ಇದರ ಕಟ್ಟಿಗೆಯನ್ನು ಶೈವರು ಬಳಸುವುದಿಲ್ಲ. ಇದರ ವಾಸನೆಗೆ ಹಾವುಗಳು ದೂರವಿರುತ್ತವೆಂಬ ಪ್ರತೀತಿ ಇದೆ.

ಕೆಲವು ಜನಾಂಗಗಳ ಶವಸಂಸ್ಕಾರದ ಪದ್ಧತಿಯಲ್ಲಿ ಬಿಲ್ವಪತ್ರೆಯ ಉಪಯೋಗವಿದೆ. ಶವಕ್ಕೆ ಬಿಲ್ವಪತ್ರೆಯನ್ನು ಹಾಕುತ್ತಾರೆ. ಆ ಪತ್ರೆ ನಿಧನರಾದವರನ್ನು ಕೈಲಾಸಕ್ಕೆ ಕೊಂಡೊಯ್ಯುತ್ತದೆ ಎಂದು ನಂಬಲಾಗಿದ್ದು ಇಂದಿಗೂ ಇದು ಆಚರಣೆಯಲ್ಲಿರುವುದನ್ನು ಕಾಣಬಹುದು. ತ್ರಿದಳ ಪತ್ರೆಯನ್ನು ಶಿವನ ಮೂರು ಕಣ್ಣುಗಳಿಗೆ ಹೋಲಿಕೆಯಾಗಿ ಕೊಡುವುದುಂಟು. "ಆಯುರ್ವೇದದಲ್ಲಿ ಎಲೆಗಳು ಮತ್ತು ಕಾಯಿಗಳನ್ನು ಬಹುವಾಗಿ ಮೆಚ್ಚಿಕೊಳ್ಳಲಾಗಿದೆ. ತ್ರಿದಳವಿರುವ ಈ ಎಲೆಯು ಸೃಷ್ಟಿ, ಸ್ಥಿತಿ ಮತ್ತು ಲಯಗಳ ಸಂಕೇತವೂ, ಶಿವನ ಮುಕ್ಕಣ್ಣಿನ ಸಂಕೇತವೂ ಆಗಿದೆ. ಬನ್ನಿ ಪುರಾಣದ ಪ್ರಕಾರ ಬಿಲ್ವವು ಲಕ್ಕಿಯ ಸಂಕೇತವಷ್ಟೇ ಅಲ್ಲದೇ ಇತರೆ ದೇವತೆಗಳ ವಾಸಸ್ಥಾನವೂ ಹೌದು. ಬಿಲ್ವದಿಂದ ನಿರ್ಮಿಸಿದ ಯಂತ್ರ, ತಾಯತಗಳು ಅದನ್ನು ಕಟ್ಟಿಕೊಂಡ ಗರ್ಭಿಣಿ ಸ್ತ್ರೀಯರ ಹೆರಿಗೆ ಸಂಬಂಧದ ತೊಂದರೆಗಳನ್ನು ನಿವಾರಿಸುತ್ತವೆ. ಯಂತ್ರ ಕಟ್ಟಿಕೊಂಡವರು ಅಸುರರಿಗಾಗಲಿ, ಪಿಶಾಚಿಗಳಿಗಾಗಲಿ ಹೆದರುವ ಅಗತ್ಯವಿಲ್ಲ. ಅವರಿಗೆ ಆಯುರಾರೋಗ್ಯ ಭಾಗ್ಯಗಳು

ಸದಾ ಲಭಿಸುತ್ತವೆ" (ಎಂ.ಜಿ. ಈಶ್ವರಪ್ಪ. 1994. ಜಾನಪದ ಇಬ್ಬನಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು) ಎಂಬ ನಂಬಿಕೆಯನ್ನು ಹೊಂದಿದ್ದರು.

ಬನ್ನಿಮರ / ಶಮಿಮರ

ಬನ್ನಿಯನ್ನು ಮಹಾಕಾಳಿಯ ಅವತಾರವೆಂದು ಪರಿಗಣಿಸಲಾಗುತ್ತದೆ. ಇದು ಶೈವರಿಗೆ ಪವಿತ್ರವಾದ ಮರ. ಸಣ್ಣ ಎಲೆಗಳು, ಸಣ್ಣ ಮುಳ್ಳುಗಳಿರುವ ಮರ. ಪುರಾಣಗಳ ಪ್ರಕಾರ ಪಾಂಡವರು 'ಬನ್ನಿ ಎಲೆಯ ಪತ್ರೋಳಿ' ಮಾಡಿ ಉಂಡು ವನವಾಸಕ್ಕೆ ಹೋಗುವಾಗ ತಮ್ಮ ಆಯುಧಗಳನ್ನು ಈ ಶಮೀ ತಾಯಿಯ ಬಸಿರಲ್ಲಿ ಬಚ್ಚಿಟ್ಟು ಹೋದರಂತೆ. ಮರಳಿ ಬಂದು ತಮ್ಮ ವಿಜಯೋತ್ಸವವನ್ನು ಈ ಮರದ ಪೂಜೆ ಆಚರಿಸಿದರಂತೆ. ಅದರ ಸಂಕೇತವಾಗಿ ವಿಜಯದಶಮಿಯಂದು ಈ ಬನ್ನಿ ಮರಕ್ಕೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ಆ ಊರಿನ ದೇವರು ಒಂದು ಮರದ ಬುಡದಲ್ಲಿ ತಂಗಿ, ಬನ್ನಿ ಪತ್ರೆಯಿಂದ ಪೂಜೆ ಪಡೆಯುತ್ತದೆ. ಜನರೆಲ್ಲ ಪತ್ರೆಯನ್ನು ಪರಸ್ಪರ ವಿನಿಮಯ ಮಾಡಿಕೊಂಡು ಬಂಗಾರ ಹಂಚಿಕೊಂಡೆವೆಂದು ಭಾವಿಸ್ಮತ್ತಾರೆ. ಈ ಕಾರಣಕ್ಕಾಗಿಯೇ 'ಬನ್ನಿ ಬಂಗಾರವಾಗಲಿ' ಎಂಬ ಮಾತು ಪ್ರತೀತಿಯಲ್ಲಿದೆ.

ಪ್ರತಿ ರೈತರು ತಮ್ಮ ಹೊಲಗಳಲ್ಲಿ ಇದನ್ನು ಲಕ್ಷ್ಮಿ ಗಿಡವೆಂದು ಪೂಜಿಸುತ್ತಾರೆ. ಅದರ ಹತ್ತಿರವೇ ಒಕ್ಕಲು ಕಣ ಮಾಡುತ್ತಾರೆ. ಅದರ ತುಂಡನ್ನು ಕಣಕ್ಕೆ ಮೇಟಿಯಾಗಿ ನೆಡುತ್ತಾರೆ. ಮಕ್ಕಳ ಫಲ ನೀಡುವ ಶಕ್ತಿ ಮಹಾಕಾಳಿಗಿದೆ. ಫಲ ಬೇಡುವ ಹೆಣ್ಣು ಮಕ್ಕಳು ಇದಕ್ಕೆ ಅನೇಕ ವಾರಗಳವರೆಗೆ ನಡೆದುಕೊಳ್ಳುತ್ತಾರೆ. ಕೆಲವು ಭಕ್ತರು ತಾವು ಉಡಲು ತಂದ ಹೊಸ ಬಟ್ಟೆಯನ್ನು ಈ ದೇವತಾ ಮರಕ್ಕೆ ಮುಟ್ಟಿಸಿ ಪೂಜಿಸಿ ತದನಂತರ ಉಡಲು ಮುಂದಾಗುತ್ತಾರೆ. ಈ ಮರದ ಕಟ್ಟಿಗೆಯಿಂದ ಮಾತ್ರವೇ ವೀರಭದ್ರ ದೇವರ ಉಬ್ಬು ಶಿಲ್ಪದಂತಹ ಕೆತ್ತನೆಯ ಹಲಗೆಗಳನ್ನು ಮಾಡಿಸುತ್ತಾರೆ.

ಮಾವಿನ ಮರ

"ಲಕ್ಷ್ಮಿ, ವಿಷ್ಣು, ಕಾರ್ತಿಕ ಮುಂತಾದವರು ವಾಸಿಸುವ ಪವಿತ್ರ ಮರ. ಫಾಲ್ಗುಣ ಮಾಸದಲ್ಲಿ ಇದಕ್ಕೆ ವಿಶೇಷವಾದ ಪೂಜೆ, ಬುಡಕ್ಕೆ ಸೀರೆ ಕುಪ್ಪಸ

ತೊಡಿಸಿ ಬಳೆ ಮುಂತಾದ ಆಭರಣ ಇಟ್ಟು ಅರಿಶಿಣ, ಕುಂಕುಮ ಹಚ್ಚಿ ಜನ–ದನಗಳ ಸಂತತಿ ಹೆಚ್ಚಲೆಂದು, ಮಳೆ–ಬೆಳೆ ಸಮೃದ್ಧವಾಗಲೆಂದು ಬೇಡಿಕೊಳ್ಳುತ್ತಾರೆ. ಸದಾಶಯಕ್ಕಾಗಿ ಏಕಾದಶಿ ವ್ರತ ಕೈಗೊಳ್ಳುತ್ತಾರೆ. ಕಾರ್ತಿಕ ಮಾಸದಲ್ಲಿ ಬ್ರಾಹ್ಮಣರಿಗೆ ಮರದಡಿಯಲ್ಲಿ ಅನ್ನ ಸಂತರ್ಪಣೆ ಮಾಡುತ್ತಾರೆ. ಮರದ ಸೊಪ್ಪು, ತಳಿರು ತೋರಣಗಳಿಗೆ ಕಲಶ, ಆರತಿ ಮುಂತಾದ ಶುಭ ಸಂದರ್ಭಗಳಲ್ಲಿ ಬಳಕೆಯಾಗುತ್ತದೆ. ಮಾವಿನ ಫಲ ಸಂತಾನೋತ್ಪತ್ತಿಯ ಅಂಶವಾಗಿ ಪುರಾಣಗಳಲ್ಲಿ ಉಕ್ತವಾಗಿದೆ. ಜನಪದ ಕಥೆಗಳಲ್ಲಿಯೂ ಮಾವು ಫಲವಂತಿಕೆಯ ಸಂಕೇತವಾಗಿ ಬಳಕೆಯಾಗಿದೆ. ಮಾವಿನ ಮರವನ್ನು ವೃಕ್ಷಗಳ ರಾಜ ಎಂದೇ ಕರೆಯಲಾಗಿದೆ. ಮಾವಿನ ಚಿಗುರು, ಅದರ ಹಣ್ಣಿನ ಸವಿ ಇತ್ಯಾದಿಗಳನ್ನು ವಿವರಿಸದ ಶಿಷ್ಟ ಕವಿಯೇ ಇಲ್ಲ. ಕೋಗಿಲೆಗೂ ಮಾವಿನ ಮರಕ್ಕೂ, ಮಲ್ಲಿಗೆಗೂ ಮಾವಿನ ಮರಕ್ಕೂ ನಂಟನ್ನು ಕಲ್ಪಿಸಿರುವುದು ಶಿಷ್ಟಕಾವ್ಯದಲ್ಲಿ ಕಂಡುಬರುವ ಸಂಪ್ರದಾಯ. ಬಲ ಮತ್ತು ವೀರ್ಯ ವೃದ್ಧಿಗಾಗಿ ಹಾಲಿನೊಂದಿಗೆ ಮಾವಿನ ಹಣ್ಣಿನ ರಸವನ್ನು ಬೆರೆಸಿ ಕುಡಿಯುವುದುಂಟು. ಮಾವಿನ ಎಲೆ, ಹೂವು, ಕಾಯಿ, ಹಣ್ಣು, ಬೀಜ, ತೊಗಟೆ, ಬೇರು ಇವುಗಳಿಂದ ನಾನಾ ರೋಗಗಳಿಗೆ ಮದ್ದು ತಯಾರಿಸುವುದುಂಟು" (ಎಂ.ಜಿ. ಈಶ್ವರಪ್ಪ. 1994. ಜಾನಪದ ಇಬ್ಬನಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪುಟ 222–223). ಮಾವು ಶುದ್ಧತೆಯ ಪ್ರತೀಕವಾಗಿದ್ದು ದೀಪಾವಳಿ ಹಬ್ಬವಾಗಿರಬಹುದು. ಇನ್ನೂ ಹತ್ತು ಹಲವು ಹಬ್ಬಗಳಲ್ಲಿ ಮಾವನ್ನು ಬಳಸದೆ ಪೂಜಿಸಬಲ್ಲರು, ಸತ್ತಾಗ ಮಾವಿನ ಸೌದೆಯಲ್ಲಿ ಸುಡುತ್ತಾರೆ. ಮಾವಿನ ಎಲೆಯಿಂದ ಬಾಯಿಗೆ ನೀರು ಬಿಡುತ್ತಾರೆ. ಆದರೆ ಮಾವನ್ನು ಮನೆಯ ಉಪಕರಣಗಳಿಗೆ ಬಳಸುವುದಿಲ್ಲ. ಹೀಗೆ ಮಾವು ಹತ್ತು ಹಲವು ಬಗೆಯಲ್ಲಿ ಕಾಣಿಸಿಕೊಳ್ಳುತ್ತದೆ.

ಬೇವಿನ ಮರ

ಬೇವು ಶಕ್ತಿ ದೇವತೆಯ ಸಂಕೇತ. ಆಲ, ಅರಳಿ ಜೊತೆಗೆ ಅಶ್ವತ್ಥ ಕಟ್ಟೆಯ ಮೇಲೆ ಬೇವೂ ಸಹ ಪೂಜೆಗೊಳ್ಳುವುದನ್ನು ಕಾಣಬಹುದು. ಬೇವು ಶಕ್ತಿಯ ಅವತಾರ ಎಂದು ಜನಪದರಲ್ಲಿ ಪರಿಗಣಿಸಲ್ಪಟ್ಟಿದೆ. ಎಲ್ಲಮ್ಮ ಹಾಗೂ ಅಂಬಾಬಾಯಿಯ ಭಕ್ತರಿಗೆ ಇದು ಪವಿತ್ರ ಮರ. ಲಂಬಾಣಿಗಳಲ್ಲಂತೂ ಇದನ್ನು

ದೇವಿ ಎಂದು ಪೂಜಿಸುತ್ತಾರೆ. ಬೇವಿನ ಸೊಪ್ಪನ್ನು ಹಿಡಿದು ಪ್ರಮಾಣ ಮಾಡಲು ಅವರು ಹೆದರುತ್ತಾರೆ. ಆಲ ಗಂಡಾದರೆ ಬೇವು ಹೆಣ್ಣು ಎಂದು ಪರಿಗಣಿಸಲ್ಪಡುತ್ತದೆ. ಎಲ್ಲಮ್ಮನ ಆರಾಧನೆಯಲ್ಲಂತೂ ಬೇವು ಅವಶ್ಯಕವಾಗಿ ಬೇಕೇ ಬೇಕು. ಗ್ರಾಮೀಣರ ಬಾಯಿಯಲ್ಲಿ ಇದು 'ಬೇವಿನ ಮರದಮ್ಮ', ಮಕ್ಕಳಿಗೆ 'ಅಮ್ಮ, ದಡಾರ' ಆದರೆ ಬೇವಿನ ಮರದಮ್ಮನಿಗೆ ಹರಕೆ ಸಲ್ಲಿಸುತ್ತಾರೆ.

ಅರಳಿ ಮತ್ತು ಬೇವಿನ ಮರಗಳನ್ನು ಒಂದೆಡೆ ನೆಟ್ಟು ಮದುವೆ ಮಾಡುವ ಸಂಪ್ರದಾಯವಿದೆ. ಒಂದು ಕಥೆಯ ಪ್ರಕಾರ "ಹತ್ತಿರದ ನದಿಗೆ ಸ್ನಾನಕ್ಕೆಂದು ಹೋಗುತ್ತಿದ್ದ ಏಳು ಜನ ಸುಂದರಿಯರನ್ನು ನಿಲ್ಲಿಸಿ ತನ್ನನ್ನು ಮದುವೆಯಾಗುವಂತೆ ಕೃಷ್ಣನು ಒತ್ತಾಯಿಸಿದನು. ಅದಕ್ಕೆ ಅವರು ನಿರಾಕರಿಸಿದರು. ಆಗ ಕೃಷ್ಣನು ಅವರನ್ನು ಹಿಡಿಯಲು ಹೋದಾಗ ಆ ಸುಂದರಿಯರು ಅರಳಿ ಮರವಾಗಿ ರೂಪಾಂತರಗೊಂಡರು. ಅವರನ್ನು ತಬ್ಬಿಕೊಂಡ ಕೃಷ್ಣನು ಬೇವಿನ ಮರವಾಗಿ ಪರಿವರ್ತನೆಯಾದನು. ಅಂದಿನಿಂದ ಈ ಎರಡೂ ಮರಗಳಿಗೆ ಮದುವೆ ಮಾಡುವ ಪದ್ಧತಿ ಬೆಳೆದು ಬಂದಿತು" (ಚಂದ್ರಶೇಖರ ಕಂಬಾರ. 1985. ಕನ್ನಡ ಜಾನಪದ ವಿಶ್ವಕೋಶ, ಸಂಪುಟ 2, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪುಟ 1452),

ಯುಗಾದಿ ಹಬ್ಬದಂದು ಬೆಲ್ಲದೊಂದಿಗೆ ಬೇವಿನ ಹೂವನ್ನು ಬೆರೆಸಿ ಕಷ್ಟ–ಸುಖದ ಸಂಕೇತವಾಗಿ ಬೇವು ಬೆಲ್ಲವನ್ನು ತಿನ್ನುತ್ತಾರೆ. ಅದೇ ದಿನ ಮನೆಯ ತೊಲೆ ಜಂತೆಗಳಿಗೆ ಬೇವಿನ ಸೊಪ್ಪು ಸಿಕ್ಕಿಸುತ್ತಾರೆ. ಮಕ್ಕಳಿಗೆ ಖಾಯಿಲೆ ಬಂದಾಗ ಬೇವಿನ ಕಡ್ಡಿಯಿಂದ ಮಗುವಿನ ಶರೀರವನ್ನು ನಿರ್ದಿಷ್ಟ ಜಾಗಗಳಿಗೆ ಚುಟಿಕೆ ಹಾಕಿಸುತ್ತಾರೆ. ದೇವರಿಗೆ ಸಲ್ಲಿಸುವ ಬೆತ್ತಲೆ ಸೇವೆ ಸಂದರ್ಭಗಳಲ್ಲಿ ಬೇವಿನ ಸೊಪ್ಪನ್ನು ಸಿಕ್ಕಿಸಿಕೊಂಡು ಕುಣಿಯುವ ಪದ್ಧತಿಯಿದೆ. ದೆವ್ವ ಹಿಡಿದವರನ್ನು ಬೇವಿನ ಸೊಪ್ಪಿನಿಂದ ಹೊಡೆದು ದೆವ್ವವನ್ನು ಬಿಡಿಸುವುದುಂಟು.

ಜಾನಪದ ಕವಯಿತ್ರಿಯೇ ಹಾಡುವಂತೆ 'ಬ್ಯಾಸಗಿ ದಿವಸಾಕ ಬೇವೀನ ಮರತಂಪು' ಎಂದು ಹೇಳುವುದನ್ನು ಕಾಣಬಹುದಾಗಿದೆ. ರೋಗ ನಿರೋಧಕ ಶಕ್ತಿಯನ್ನು ಈ ಬೇವಿನ ಮರ ಹೊಂದಿದ್ದು ಹೆಚ್ಚು ಮರಗಳನ್ನು ಬೆಳೆಸುವುದರಿಂದ

ಮಲೇರಿಯಾ, ಜ್ವರಗಳಂತಹ ಸಾಂಕ್ರಾಮಿಕ ಕಾಯಿಲೆಗಳನ್ನು ತಡೆಯಬಹುದಾಗಿದೆ. ಸೊಪ್ಪನ್ನು ನೀರಿನಲ್ಲಿ ಹಾಕಿ ಸ್ನಾನ ಮಾಡುವುದರಿಂದ ಮಾಡುವುದರಿಂದ ಚರ್ಮರೋಗಗಳು ವಾಸಿಯಾಗುತ್ತವೆ. ಕಾಂಡದಿಂದ ತೆಗೆದ ಕಶಾಯವು ಉಬ್ಬಸ ರೋಗಗಳನ್ನು ತಡೆಗಟ್ಟುತ್ತದೆ. ಇಂದಿಗೂ ಸಹ ಬೇವು ಪೂಜನೀಯವಾಗಿ ಉಳಿದುಕೊಂಡಿದೆ. ಬೇವಿನ ಕಡ್ಡಿಯಿಂದ ಹಲ್ಲುಗಳನ್ನು ಉಜ್ಜುವುದರಿಂದ ಬಾಯಿಯ ದುರ್ವಾಸನೆಯನ್ನು ದೂರಮಾಡಬಹುದು.

ಎಕ್ಕೆ ಗಿಡ

ಗಣೇಶನ ಸಂಕೇತವೆಂದು ಎಕ್ಕೆ ಗಿಡವನ್ನು ಪೂಜಿಸಲಾಗುವುದು. ಇದರಲ್ಲಿ ಎರಡು ವಿಧಗಳಿವೆ. ಬಿಳಿಯ ಎಕ್ಕೆ ಮತ್ತು ಕೆಂಪು ಎಕ್ಕೆ. ಮನೆಯ ಮುಂದೆ ಬಿಳಿಯ ಎಕ್ಕೆ ಬೆಳೆದರೆ ಶ್ರೇಷ್ಠ, ವಿಘ್ನವಿನಾಶಕ ಎಂದು ಪ್ರತಿ ದಿವಸ ಬೆಳಿಗ್ಗೆ ಸ್ತ್ರೀಯರು ದೀಪ ಮುಡಿಸಿ ಕುಂಕುಮ ಹಚ್ಚಿ ಪೂಜಿಸುತ್ತಾರೆ. ವ್ಯವಸಾಯ ಸಂಬಂಧವಾಗಿ ಸುಗ್ಗಿಯ ಕಾಲದಲ್ಲಿ ಎಕ್ಕೆ ಗಿಡವನ್ನು ಪೂಜಿಸುತ್ತಾರೆ. ಕಣವನ್ನು ಎಕ್ಕೆ ಗಿಡ ಇರುವ ಹತ್ತಿರದಲ್ಲಿಯೇ ಮಾಡುತ್ತಾರೆ. ರಾಶಿ ತೂರುವಾಗ ಗಾಳಿಯು ಸಮರ್ಪಕವಾಗಿ ಬೀಸದಿದ್ದರೆ ಎಕ್ಕೆ ಗಿಡವನ್ನು ಪೂಜಿಸಿ ಗಾಳಿ ಬೀಸುವಂತೆ ಬೇಡಿಕೊಳ್ಳುತ್ತಾರೆ. ಎಕ್ಕೆ ಗಿಡಗಳಿರುವ ಕಡೆ ಅಂತರ್ಜಲವಿದೆ ಎಂದು ಭಾವನೆ ಇದೆ. ಇದರ ಹಾಲು ಅಪಾಯಕಾರಿ. ಗುಳ್ಳೆ, ಕುರ, ಉಗುರುಸುತ್ತು ಮುಂತಾದವುಗಳನ್ನು ಒಡೆದು ಕೀವು ತೆಗೆಯಲು ಈ ಹಾಲು ಬಳಕೆಯಾಗುತ್ತದೆ. ಹೊಸದಾಗಿ ಮಾಡಿದ ಬಾರುಕೋಲನ್ನು ಎಕ್ಕೆ ಗಿಡಕ್ಕೆ ಹೊಡೆಯುವ ಮೂಲಕ ಮೃದು ಮಾಡಲಾಗುತ್ತದೆ. ಅಮಲಿಗಾಗಿ ಇದರ ಎಲೆಯ ಬತ್ತಿ ಕಟ್ಟಿ ಸೇದುತ್ತಾರೆ. ಎಕ್ಕೆಯನ್ನು ಅರ್ಕ ಎಂದೂ ಕರೆದು ಈ ಗಿಡದಲ್ಲಿ ಸೂರ್ಯನು ವಾಸಿಸುತ್ತಾನೆ ಎಂದೂ ನಂಬಿದ್ದಾರೆ. ಇದರಲ್ಲಿ ಕೆಂಪು ಬಿಳಿ ಎಂದು ಎರಡು ಪ್ರಕಾರಗಳಿವೆ. ಶಿವರಾತ್ರಿಯಂದು ಶಿವ ಎಕ್ಕೆಯ ಗಿಡದ ಕೆಳಗೆ ವಾಸ ಮಾಡುತ್ತಾನೆಂದು ಮಲೆನಾಡಿನ ಜನಪದರ ನಂಬಿಕೆಯಾಗಿದೆ.

ತುಳಸಿ

"ಹಿಂದೂಗಳಿಗೆ ಪವಿತ್ರವಾದ ಮತ್ತು ಉಪಯುಕ್ತವಾದ ಗಿಡ ತುಳಸಿ.

ಶಿಷ್ಟ ವೈಷ್ಣವರು ಇದನ್ನು ತಮ್ಮ ಮನೆಗಳ ಮುಂದೆ ವಿಶಿಷ್ಟ ವಿನ್ಯಾಸದ ಕಟ್ಟೆ ಕಟ್ಟಿ ಪ್ರತಿದಿನ ಪೂಜಿಸುತ್ತಾರೆ. ಹೆಣ್ಣು ಮಕ್ಕಳು ಮನೆಯ ಮುಂದೆ ರಂಗೋಲಿ ಹಾಕಿದ ನಂತರ ನೀರು ಹಾಕಿ ಪೂಜೆ ಮಾಡುವ ಗಿಡವೇ ತುಳಸಿ ಗಿಡ. ಇದರಲ್ಲಿ ಎರಡು ವಿಧಗಳಿವೆ. ಬಿಳಿ ತುಳಸಿ ಮತ್ತು ಕಪ್ಪು ತುಳಸಿ. ಇದನ್ನೇ ರಾಮ ತುಳಸಿ ಮತ್ತು ಕೃಷ್ಣ ತುಳಸಿ ಎಂದು ಕರೆಯುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ನಾಯಿ ಕೆಮ್ಮನ್ನು ವಾಸಿ ಮಾಡುವ ತುಳಸಿ ಗಿಡವನ್ನು ನಾಯಿ ತುಳಸಿ ಎಂದು ಕರೆಯುತ್ತಾರೆ. ತುಳಸಿ ಗಿಡವು ವಿಷ್ಣುವಿಗೆ ಅಥವಾ ಕೃಷ್ಣನಿಗೆ ಸಂಬಂಧಿಸಿದ್ದು. ತುಳಸಿಯು ಯುವತಿಯೊಬ್ಬಳಿಗೆ ಸಂಬಂಧಿಸಿದಂತೆ ಪುರಾಣಗಳಲ್ಲಿ ಉಲ್ಲೇಖವಾಗಿದೆ" (ಎಂ.ಜಿ. ಈಶ್ವರಪ್ಪ. (1994). ಜಾನಪದ ಇಬ್ಬನಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪುಟ 227).

ಸ್ಕಂದ ಪುರಾಣದ ಪ್ರಕಾರ "ದುರ್ವಾಸರ ಶಾಪದಿಂದ ಪದಭ್ರಷ್ಟನಾದ ಇಂದ್ರನು ಪಾಲ್ಗಡಲನ್ನು ಕಡೆದಾಗ ಐರಾವತ ಮೊದಲಾದ ಹದಿನಾಲ್ಕು ರತ್ನಗಳು ಹೊರಹೊಮ್ಮಿದ ಬಳಿಕ ಅಮೃತ ಕಲಶ ಹೊರಬಂದಿತು. ವಿಷ್ಣು ಅದನ್ನು ಕೈಗೆ ತೆಗೆದುಕೊಂಡಾಗ ಆತನ ಕಣ್ಣುಗಳಿಂದ ಮಿಡಿದ ಆನಂದ ಬಾಷ್ಪಗಳು ಈ ಕಲಶದಲ್ಲಿ ಬಿದ್ದು ಒಂದು ಸಣ್ಣಗಿಡ ಹುಟ್ಟಿತು. ಇದಕ್ಕೆ ತುಲನೆ ಇಲ್ಲವಾಗಿ ತುಲಸಿ ಎಂದು ಹೆಸರಿಟ್ಟು ಲಕ್ಷ್ಮಿಯೊಂದಿಗೆ ತುಲಸಿಯನ್ನು ವಿಷ್ಣು ವಿವಾಹವಾದನು. ದೇವಿ ಭಾಗವತದ ಪ್ರಕಾರ ಪತಿಯಾಗಬೇಕೆಂದು ಬ್ರಹ್ಮನನ್ನು ಕುರಿತು ತಪಸ್ಸು ಮಾಡಿದಳು. ವಿಷ್ಣು ಶಂಖಚೂಡನೆಂಬ ರೂಪದಲ್ಲಿ ಬಂದು ನಂತರ ಹತನಾದದ್ದರಿಂದ ಆ ಸುದ್ದಿ ಕೇಳಿ ಗಿಡವಾದಳು" (ಬೆನಗಲ್ ರಾಮರಾವ್. 1977. ಪುರಾಣನಾಮ ಚೂಡಾಮಣಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪುಟ 250–251) ಎಂಬ ಕಥಾನಂಬಿಕೆ ಇದೆ.

ಪದ್ಮ ಪುರಾಣದ ಪ್ರಕಾರ "ತುಳಸಿಯ ಸಸ್ಯ, ಎಲೆ, ಹೂವು, ಹಣ್ಣು, ಬೇರು, ರೆಂಬೆ, ಅವುಗಳ ತೊಗಟೆ, ಅಷ್ಟೇ ಏಕೆ ಈ ಗಿಡದ ಸುತ್ತಮುತ ಇರುವ ಮಣ್ಣು ಸಹ ಅತ್ಯಂತ ಪವಿತ್ರವಾದುದು. ಸತ್ತವರ ದೇಹಗಳನ್ನು ಸುಡುವಾಗ ಚಿತೆಗೆ ತುಳಸಿಯ ರೆಂಬೆಗಳನ್ನು ಸೇರಿಸಿದರೆ ಅಂತಹವರ ಆತ್ಮಗಳು

ವಿಷ್ಣುಲೋಕವನ್ನು ಸೇರುತ್ತವೆ. ಒಬ್ಬ ವ್ಯಕ್ತಿಯು ಸಾಯುವಾಗ ದೇವರನ್ನು ಧ್ಯಾನಿಸುತ್ತಾ ಸತ್ತು ಅಂತಹವರ ದೇಹವನ್ನು ತುಳಸಿಯ ಕೊಂಬೆಗಳಿಂದ ಸುಟ್ಟಲ್ಲಿ ಅವರಿಗೆ ಮರುಜನ್ಮವಿಲ್ಲ, ಕೋಟಿ ಪಾಪಗಳನ್ನು ಮಾಡಿದ್ದರೂ ಅವನು ಮೋಕ್ಷವನ್ನು ಪಡೆಯುತ್ತಾನೆ. ತುಳಸಿ ಕಟ್ಟೆಯಿಂದ ಒಂದು ದೀಪ ಹತ್ತಿಸಿದರೆ ಅದು ವಿಷ್ಣುವಿಗೆ ಹತ್ತಿಸಿದ ಲಕ್ಷದೀಪಗಳಿಗೆ ಸಮನಾಗುತ್ತದೆ" (ಎಂ.ಜಿ. ಈಶ್ವರಪ್ಪ. 1994. ಜಾನಪದ ಇಬ್ಬನಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪುಟ 228).

ಶಿವನಿಗೆ ಬಿಲ್ವಪತ್ರೆ ಹೇಗೆ ಹಾಗೆಯೇ ಕೃಷ್ಣನಿಗೆ ತುಳಸಿ. ಪೂಜೆಗೆ ಹಬ್ಬಗಳಲ್ಲಿ ಈ ತುಳಸಿಯನ್ನು ಬಳಸುತ್ತಾರೆ. ರೋಗ ನಿರೋಧಕ ಶಕ್ತಿಯನ್ನು ಹೊಂದಿರುವ ಈ ಸಸ್ಯವು ನೋಡಲು ಪುಟ್ಟದಾಗಿದ್ದರೂ ಸಹ ಇದರ ಉಪಯೋಗಗಳು ಮಾತ್ರ ಹಿರಿದಾಗಿವೆ. ಜನಪದ ವೈದ್ಯ ಮತ್ತು ಆಯುರ್ವೇದದಲ್ಲಿ ತುಳಸಿಗೆ ಮಹತ್ವದ ಸ್ಥಾನವಿದೆ.

ಉತ್ತರಾಣಿ

ಶಿವರಾತ್ರಿಯಂದು ಶಿವಪೂಜೆಗೆ ಉತ್ತರಾಣಿಯ ಕಡ್ಡಿಯಿಂದಲೇ ದೀಪ ಬೆಳಗುತ್ತಾರೆ. ಅದು ಶಿವಪೂಜೆಗೆ ಅವಶ್ಯಕವಾಗಿ ಬೇಕು. ಅದರಂತೆ ಕೆಲವು ಕಡೆಗಳಲ್ಲಿ ಬಲಿಪಾಢ್ಯಮಿಯಂದು ಉತ್ತರಾಣಿಯನ್ನು ಪೂಜಿಸುತ್ತಾರಂತೆ. ಬಲಿ ತಾನು ಸಾಯುವ ಪೂರ್ವದಲ್ಲಿ ವರ್ಷಕ್ಕೊಂದು ದಿನ ತನ್ನ ಪೂಜೆ ಸಲ್ಲುವಂತೆ ಕೇಳಿಕೊಂಡನಂತೆ. ಅದಕ್ಕಾಗಿ ಉತ್ತರಾಣಿಯ ರೂಪದಲ್ಲಿ ಒಂದು ದಿನ ಅವನ ಪೂಜೆ ಸಲ್ಲುತ್ತದೆ. ಉತ್ತರಾಣಿಯ ಕಡ್ಡಿಯಿಂದಲೇ ಮಾಡಿದ 'ಸಡ್ಡ' ಕಣದಲ್ಲಿ ಬಳಸಲ್ಪಡುತ್ತದೆ. ಅದನ್ನು ಪೂಜ್ಯವೆಂದು ಗೌರವದಿಂದ ಕಾಣುತ್ತಾರೆ. ಕಣ ಮಾಡುವಾಗಲೇ ಈ ಸಸ್ಯವನ್ನು ಬಳಸುತ್ತಾರೆ. ಮಲೆನಾಡಿನಲ್ಲಂತೂ ದೀಪಾವಳಿ ಹಬ್ಬದಲ್ಲಿ ಪಡುವಳಿಕೆ ಎಂಬ ಸೊಪ್ಪಿನ ಗೊಂಚಲು ಕಟ್ಟುವಾಗ ಹಾಗೂ ಗೋವುಗಳಿಗೆ ಗೋಮಾಲೆ ಮಾಡುವಾಗ ಉತ್ತರಾಣಿ ಇರಲೇಬೇಕು.

ತುಂಬೆ

ಸಸ್ಯ ಜಾತಿಗಳಲ್ಲಿ ಶ್ರೇಷ್ಠವಾದ ಸಸ್ಯ ತುಂಬೆಯೂ ಒಂದು. ಇದು ನೋಡಲು ಚಿಕ್ಕ ಗಿಡವಿರಬಹುದು, ಇದರ ಔಷಧೀಯ ಗುಣ ಯಾವ ಬೃಹತ್ ಮರಕ್ಕೂ ಸಹ ಕಮ್ಮಿ ಇಲ್ಲ. ಗಿಡ ಹಸಿರು ಹೂವು ಬಿಳಿಯಾಗಿದ್ದು ರುಚಿಯಲ್ಲಿ

ಕಹಿಯಾಗಿರುತ್ತದೆ. ತುಂಬೆ ಶಿವನಿಗೆ ಶ್ರೇಷ್ಠವಾದ ಹೂವು ಎಂದು ನಂಬಿದ್ದಾರೆ. ಶಿವಪೂಜೆ ಹಾಗೂ ಗಣಪತಿ ಪೂಜೆ ತುಂಬೆ ಹೂವಿನಿಂದಲೇ ಆರಂಭ ಎನ್ನುತ್ತಾರೆ. ಕೆಲವು ಜನಾಂಗಗಳಲ್ಲಿ ತುಂಬೆಯ ಹಾರವನ್ನು ಮಾಡಿ ಮದುವೆ ಸಂದರ್ಭಗಳಲ್ಲಿ ವಧುವರರಿಗೆ ವಿನಿಮಯ ಮಾಡಿಸುತ್ತಾರೆ. ರೋಗ ಮುಕ್ತವಾಗಿ ಸ್ವತಂತ್ರವಾಗಿ ಬೆಳೆಯುವ ಗಿಡ ಇದಾಗಿರುವುದರಿಂದ ವಧುವರರು ಸಹ ಯಾವುದೇ ಕಷ್ಟ ನಷ್ಟಗಳಿಗೆ ಒಳಗಾಗದೇ ಸಮೃದ್ಧವಾಗಿ ಬೆಳೆಯಲಿ ಎಂಬ ನಂಬಿಕೆ ಜನಪದದಲ್ಲಿತ್ತು ಎನ್ನಬಹುದು.

ಭಾರತ ದೇಶವು ವ್ಯವಸಾಯ ಪ್ರಧಾನ ದೇಶವಾಗಿರುವುದರಿಂದ ಸಸ್ಯ, ಗಿಡ, ಮರಗಳಲ್ಲಿ ಮತ್ತು ಅವುಗಳ ಉತ್ಪನ್ನಗಳೆಲ್ಲ ದೈವ ಸ್ವರೂಪಗಳೇ ಆಗಿದೆ. ಬಿಳಿ ಕಣಗಿಲೆ, ಶಿವನಿಗೆ ಶ್ರೇಷ್ಠವಾದದ್ದು, ನಿಂಬೆ ಮಾಟ, ಮಂತ್ರಕ್ಕೆ ಪ್ರಸಿದ್ಧ, ಲಕ್ಕಿ ಬುಡಕಟ್ಟು ಜನರ ದೈವಿಕ ಗಿಡ, ಗರಿಕೆ, ಬ್ರಹ್ಮಕಮಲ, ಸೀತಾಳಿ, ಕಾಸರ್ಕಮರ, ದರ್ಬೆ, ತೆಂಗು ಹುಣಸೆ, ನೇರಳೆ, ಮುಂತಾದ ಸಹಸ್ರಾರು ಸಸ್ಯಗಳು ನಮ್ಮ ಜೊತೆಯಲ್ಲೇ ಇದ್ದು ಜನಪದದಿಂದ ಹಿಡಿದು ಆಧುನಿಕತೆಯವರೆಗೂ ತಮ್ಮದೇ ಆದ ಸ್ಥಾನ, ನಂಬಿಕೆ, ಭಯ, ಭಕ್ತಿಯನ್ನು ಉಳಿಸಿಕೊಂಡು ಬಂದಿವೆ. ಪ್ರಕೃತಿಯೊಡನೆ ಬದುಕಿನ ಮನುಷ್ಯ ಸಸ್ಯ ಜಾತಿಗಳನ್ನೆಲ್ಲಾ ದೈವವೆಂದೇ ಭಾವಿಸಿದ್ದಾನೆ. ಪ್ರಕೃತಿಯ ಸಮತೋಲನವನ್ನು ಕಾಪಾಡಿಕೊಂಡು ಬದುಕನ್ನು ಸುಂದರಮಯವಾಗಿಸಿಕೊಂಡಿದ್ದಾನೆ.

ಫಲಿತಗಳು

1. ಆಧುನಿಕ ವೈದ್ಯ ಪದ್ಧತಿ ಎಷ್ಟೇ ಮುಂದುವರಿದರೂ ಆಯುರ್ವೇದಕ್ಕೆ ತನ್ನದೇ ಆದ ವೈಶಿಷ್ಟ್ಯವಿರುವುದು ತಿಳಿದುಬಂದಿದೆ.
2. ಪ್ರತಿಯೊಂದು ದೈವ ಮೂಲಗಳಾದ ವೃಕ್ಷಗಳಿಗೆ ತನ್ನದೇ ಆದ ವೈಜ್ಞಾನಿಕ ಮತ್ತು ಔಷಧೀಯ ಗುಣಗಳನ್ನು ಹೊಂದಿರುವುದನ್ನು ಕಾಣಬಹುದು.
3. ವೃಕ್ಷಗಳ ಆರಾಧನೆಯಿಂದ ಪರಿಸರ ಸಮತೋಲನದ ಜೊತೆಗೆ ಜನರ ಆರೋಗ್ಯ ವೃದ್ಧಿಯಾಗುವುದು ಸಂಶೋಧನೆಯಿಂದ ಕಂಡುಕೊಳ್ಳಲಾಗಿದೆ.

ಪರಾಮರ್ಶನ ಗ್ರಂಥಗಳು

1. ಈಶ್ವರಪ್ಪ, ಎಂ.ಜಿ. (1994). ಜಾನಪದ ಇಬ್ಬನಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
2. ಚಂದ್ರಶೇಖರ ಕಂಬಾರ. (1985). ಕನ್ನಡ ಜಾನಪದ ವಿಶ್ವಕೋಶ, ಸಂಪುಟ 1, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
3. ಚಂದ್ರಶೇಖರ ಕಂಬಾರ. (1985). ಕನ್ನಡ ಜಾನಪದ ವಿಶ್ವಕೋಶ, ಸಂಪುಟ 2, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು,
4. ಬೆನಗಲ್ ರಾಮರಾವ್. (1977). ಪುರಾಣನಾಮ ಚೂಡಾಮಣಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
5. ಬೆನಗಲ್ ರಾಮರಾವ್ ಮತ್ತು ಪ್ಯಾನಂ ಸುಂದರಶಾಸ್ತ್ರಿ. (1977). ಪುರಾಣ ಚೂಡಾಮಣಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
6. ಲಕ್ಕಪ್ಪಗೌಡ, ಎಚ್.ಜೆ. (1984). ವಿಶಿಷ್ಟ ಜಾನಪದ, ಶಿವಮೊಗ್ಗ ಪ್ರಕಾಶನ, ಶಿವಮೊಗ್ಗ.

ಲೇಖಕರು : ಕವನ ಕೆ.

ಸಂಶೋಧನಾರ್ಥಿ, ಕನ್ನಡ ಭಾರತಿ

ಕುವೆಂಪು ವಿಶ್ವವಿದ್ಯಾನಿಲಯ

ಶಂಕರಘಟ್ಟ –577451

kavanak9353@gmail.com

***

ಸಸ್ಯ ಆಚರಣೆ ಮತ್ತು ನಂಬಿಕೆ

ಜಾನಪದ ಜಗತ್ತು ವಿಶಾಲವಾದುದು ಹಾಗೂ ವೈವಿಧ್ಯತೆಯಿಂದ ಕೂಡಿರುವಂತಹದ್ದು. ಜನಪದರ ಜೀವನದಲ್ಲಿ ಹೊಂದಿರುವ ಆದರ್ಶಗಳನ್ನೆಲ್ಲಾ ಸಹಜವಾಗಿ ಜಾನಪದದ ಮೂಲಕ ವ್ಯಕ್ತಗೊಂಡಿದೆ. ಆದಿಕಾಲದಿಂದಲೂ ಮನುಕುಲವು ನಿಧಾನಗತಿಯಲ್ಲಿ ಸಾಗಿಬಂದಿದೆ. ಅದರೊಂದಿಗೆ ಜಾನಪದವೂ ಗುಪ್ತಗಾಮಿನಿಯಂತೆ ಮುಂದುವರೆದಿದೆ. ಇಂದಿನ ಆಧುನಿಕ, ವೈಜ್ಞಾನಿಕ ಯುಗದಲ್ಲಿ ನಾವೆಲ್ಲಾ ಅನಾಗರಿಕರೆಂದು ಕರೆಸಿಕೊಳ್ಳುತ್ತಿದ್ದೇವೆ. ಆದರೆ ಜನಪದವನ್ನು ಮೂಢನಂಬಿಕೆ, ಅನಾಗರಿಕತೆ ಎಂದು ಹಣೆಪಟ್ಟಿ ಕೊಡುವ ಮುನ್ನ ಆಲೋಚಿಸಬೇಕಾದ ಅವಶ್ಯಕತೆ ಇದೆ. ಏಕೆಂದರೆ ಈಗ ಯಾವುದು ನಮ್ಮಿಂದ ವಿಜ್ಞಾನ ಎಂದು ಕರೆಯಲ್ಪಟ್ಟಿದೆಯೋ ಅದರ ತಾಯಿಬೇರು ಜಾನಪದವೇ ಆಗಿದೆ. ಜಾನಪದದ ಒಡಲಿನಲ್ಲಿ ಎಲ್ಲವೂ ಅಡಗಿವೆ. ನಡೆದಷ್ಟೂ ದಾರಿಗಳು ಸೃಷ್ಟಿಯಾಗುತ್ತ ಹೋಗುತ್ತವೆ. ಆದ್ದರಿಂದ ಜಾನಪದದಲ್ಲಿ ಸಾಹಿತ್ಯ, ಕಲೆ, ಸಂಸ್ಕೃತಿ, ನಡಾವಳಿ, ಸಂಪ್ರದಾಯ, ಆಚರಣೆ, ವೈದ್ಯ, ಕೃಷಿ, ಆರಾಧನೆ ಹಾಗೂ ನಂಬಿಕೆಗಳನ್ನು ಒಳಗೊಂಡಿದೆ. ಇಲ್ಲಿ ಮಾನವಕುಲದ ಬೆಳವಣಿಗೆಗೆ ಬೇಕಾದ ಸೂಕ್ಷ್ಮಾಂಶಗಳು ಅಡಕವಾಗಿವೆ ಮಾತ್ರವಲ್ಲದೆ ಜನಪದರು ಜಾನಪದೀಯ ಅಂಶಗಳನ್ನು ಬಳಸಿಕೊಂಡು ಬರುತ್ತಿರುವುದರಿಂದ ಜಾನಪದವು ಇಂದಿಗೂ ಜೀವಂತವಾಗಿ ಸಾಗುತ್ತಾ ನಡೆದು ಬಂದಿದೆ. ಸಂಪ್ರದಾಯ, ಸಂಸ್ಕೃತಿಯ ಮೊತ್ತವೇ

ಸಮಾಜವಾಗಿದ್ದು ಅವುಗಳ ಆಚರಣೆಯೇ ಜೀವನವಾಗಿದೆ. ಮಾನವ ಜೀವನವು ಜನನದಿಂದ ಮರಣದವರೆಗೂ ಒಂದಿಲ್ಲೊಂದು ರೀತಿಯ ಆಚರಣೆಗಳ ಮೂಲಕ ಸಾಗಿಬರುತ್ತಲೇ ಇದೆ. ಇದಕ್ಕೆ ಯಾವುದೇ ರೀತಿಯ ಲಿಖಿತ ಶಾಸನಗಳಾಗಲಿ, ಕಾನೂನುಗಳಾಗಲಿ ಇಲ್ಲ. ಆದರೂ ನಿರಂತರವಾಗಿ ಸಾಗುತ್ತಾ ಬರುತ್ತಿದೆ. ಜನಪದಕ್ಕೆ ಎಂದಿಗೂ ಸಾವಿಲ್ಲ. ಅದು ಈಗಲೂ ನಮ್ಮ ಜೊತೆಗೆ ಜೀವಂತವಾಗಿಯೇ ಇದೆ ಎಂದು ಹೇಳಬಹುದು.

ಜಾನಪದದ ವ್ಯಾಪ್ತಿಯು ವಿಶಾಲವಾಗಿದ್ದು ಇದರ ಎಲ್ಲೆಯನ್ನು ಗುರುತಿಸಲು ಸಾಧ್ಯವಿಲ್ಲ. ಇದು ಅಗೆದಷ್ಟೂ ಸಿಗುವ, ನಡೆದಷ್ಟೂ ಸಾಗುವ ಸಂಪತ್ತಾಗಿದ್ದು ಈ ಜೀವಜಗತ್ತಿನಲ್ಲಿ ಸಸ್ಯವೂ ಒಂದಾಗಿದೆ. ಇಂತಹ ಸಸ್ಯಜಾನಪದವು ಮಾನವನ ಅವಿಭಾಜ್ಯ ಅಂಗವಾಗಿದೆ. ಜನಪದದ ಒಂದು ತುಂಡು ಸಸ್ಯ ಜಾನಪದವಾಗಿದ್ದರೂ ಕೂಡ ಇದರ ವ್ಯಾಪ್ತಿಯು ವಿಶಾಲವಾಗಿದೆ. ಮಾನವ ಪರಸ್ಪರ ಸಸ್ಯಗಳ ಒಡನಾಡಿಯಾಗಿದ್ದು ಅವುಗಳ ಬಗ್ಗೆ ದೈವಿಕ ನಂಬಿಕೆ, ಆಚರಣೆ ಇಟ್ಟುಕೊಳ್ಳುವುದರ ಜೊತೆಗೆ ತನ್ನ ಹಸಿವಿಗಾಗಿ ಆಶ್ರಯಕ್ಕಾಗಿ, ಸಾಂಸ್ಕೃತಿಕ ಆಚರಣೆಗಾಗಿ, ವೈದ್ಯಕೀಯವಾಗಿ ಬಳಕೆ ಮಾಡಿಕೊಂಡನು. ಹೀಗೆ 'ಮಾನವನು ತನ್ನ ಸರ್ವತೋಮುಖ ಬೆಳವಣಿಗೆಗೆ ಸಸ್ಯ ಯಾವ ರೀತಿ ಉಪಯೋಗವಾಗಿದೆ. ಆದರೆ ಬದಲಾದ ಜೀವನ ಕ್ರಮಗಳಿಂದ ಆಧುನಿಕ ತಂತ್ರಜ್ಞಾನ, ವಿಜ್ಞಾನಗಳಿಂದ ಸಸ್ಯ ಜಾನಪದವು ರೂಪಾಂತರಗೊಳ್ಳುತ್ತಿದೆ. ಪ್ರಪಂಚದ ಮೂಲಾಧಾರವಾದ ಸಸ್ಯ ಜಾನಪದದ ವಿಶ್ಲೇಷಣೆ, ವಿವರಣೆ, ವಿವೇಚನೆ, ಸಂಶೋಧನಾ ದೃಷ್ಟಿಯಿಂದ ಇವುಗಳನ್ನು ಪರಿಶೀಲಿಸಬೇಕಾದ ಅನಿವಾರ್ಯತೆ ಇದೆ. ಕಾರಣ ಇವುಗಳ ಅಧ್ಯಯನ ಮತ್ತು ಕ್ಷೇತ್ರಕಾರ್ಯ ಮಾಡಿದಾಗ ಮಾತ್ರ ಅವುಗಳಲ್ಲಿ ಅಡಗಿದ ಮೌಲ್ಯಗಳನ್ನು ಕಾಣಲು ಸಾಧ್ಯ. ಆದಿಯಿಂದ ಅಂತ್ಯದವರೆಗೂ ಸಸ್ಯಗಳ ಬಳಕೆ ಹೊರತಾದ ಜೀವನ ನಡೆಸಲು ಸಾಧ್ಯವಿಲ್ಲ. ಅವು ಮಾನವನಿಗೆ ಜೀವಪೋಷಕ ಅಂಶಗಳಾಗಿ, ತಂತ್ರಗಾರಿಕೆಯಾಗಿ, ತತ್ವಸಿದ್ಧಾಂತಗಳಾಗಿ, ಜಾನಪದದ ಮೌಖಿಕ ಶಾಸನಗಳಾಗಿ, ರಕ್ಷಕವಾಗಿ, ಉಸಿರಾಗಿ ತನ್ನ ತೆಕ್ಕೆಯಲ್ಲಿ ಪೋಷಿಸುತ್ತಿರುವ ಪ್ರಕೃತಿಯು ಮಾನವನನ್ನು ತನ್ನ ಮಡಿಲಿನಲ್ಲಿ ಸರ್ವಸ್ವವನ್ನೂ ಧಾರೆಯೆರೆದು ಬೆಳೆಸುತ್ತಿದೆ.

ಮರಕ್ಕೆ ಹಬ್ಬಿದ ಬಳ್ಳಿಯು ತನಗೆ ಜನ್ಮ ನೀಡಿದ ಭೂತಾಯಿಯನ್ನು ಸ್ಮರಿಸುವಂತೆ ನಮ್ಮ ಸಸ್ಯ ಜಾನಪದದ ಮೂಲವನ್ನು ನಾವು ಕೆದಕಿ ನೋಡಬೇಕಾಗಿದೆ ಮತ್ತು ಗೌರವಿಸಿ ಸ್ಮರಿಸಬೇಕಾಗಿದೆ. ಮನುಷ್ಯನಿಗೆ ಮೂಢನಂಬಿಕೆ ಇರಬಾರದು ಸರಿ ಆದರೆ ನಂಬಿಕೆ ಜೀವನದಲ್ಲಿ ಇರಲೇಬೇಕು. ಜನಪದರು ಸಸ್ಯಗಳೊಡನೆ ಯಾವೆಲ್ಲಾ ನಂಬಿಕೆ, ಆಚರಣೆ, ಸಂಸ್ಕೃತಿ, ಕೃಷಿ, ದೈವ, ವೈದ್ಯ ಮೂಲವನ್ನು ಹೊಂದಿದ್ದರು ಎಂಬುದನ್ನು ತಿಳಿಯುವ ಪ್ರಯತ್ನವೇ ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ. ಸಸ್ಯಗಳ ಬಗ್ಗೆ ದೈವೀಕ ಮನೋಭಾವ ಹೊಂದಿದ್ದ ಇವರು ಕೆಲವೊಂದು ಭಕ್ತಿ ಗೌರವಾರ್ಥ ಸೇವೆ ಮಾಡತೊಡಗಿದರು.

ಜನಪದರು ಗಿಡ, ಮರ, ಬಳ್ಳಿಗಳ ಜೊತೆಗೆ ಬದುಕು ಕಟ್ಟಿಕೊಂಡು ಬರುವುದರೊಂದಿಗೆ ಅವುಗಳ ಜೊತೆ ಭಾವನಾತ್ಮಕ ಸಂಬಂಧದೊಂದಿಗೆ ಬೆಳೆಯುತ್ತಿದ್ದ. ಹೀಗೆ ಸೇವಾರ್ಥ ಪ್ರಯುಕ್ತ ಸಸ್ಯಗಳಿಗೆ ಗೌರವ ಸ್ಥಾನದೊಂದಿಗೆ ತನ್ನಲ್ಲಿ ಸಸ್ಯಗಳ ಬಗೆಗೆ ಪೂಜನೀಯ ಭಾವ ಬೆಳೆಸಿಕೊಳ್ಳುತ್ತಾನೆ. ಸಸ್ಯಗಳಿಗೆ ಪೂರ್ಣ ಲಾಭವನ್ನು ಪಡೆದ ಮಾನವ ಅವುಗಳ ಬಗೆಗೆ ತನಗೆ ಅರಿವಿಲ್ಲದೆ ಮಹತ್ವದ ಸ್ಥಾನ ನೀಡುತ್ತಾನೆ. ಕಾರಣ ಸಸ್ಯಗಳ ಹೊರತಾಗಿ ಭೂಮಂಡಲ ಸಮತೋಲನದಲ್ಲಿ ಇರಲು ಸಾಧ್ಯವಿಲ್ಲ. ಪರಿಸರ ಎಲ್ಲಾ ರೀತಿಯಿಂದಲೂ ಸಮತೋಲನವಾಗಿ ಇರುತ್ತದೆ. ಅಲ್ಲಿ ಜೀವನ ಸುಂದರಮಯವಾಗಿರುತ್ತದೆ. ಆದ್ದರಿಂದ ಯಾವುದು ನಿರೀಕ್ಷಿತವಲ್ಲ. ಕವಿ ಕುವೆಂಪು ಅವರು ಹೇಳಿದಂತೆ 'ಇಲ್ಲಿ ಯಾವುದೂ ಮುಖ್ಯವಲ್ಲ, ಯಾವುದೂ ಅಮುಖ್ಯವಲ್ಲ' ಸಮಾನತೆ ಇದ್ದರೆ ಮಾತ್ರ ಕಾಲಚಕ್ರ ಸರಿಯಾಗಿ ತಿರುಗುತ್ತದೆ.

ಪ್ರಪಂಚದ ಜ್ಞಾನವನ್ನು ಅರಿತ ಜನಪದರು ಯಾವ ಆಧುನಿಕ ಜ್ಞಾನಕ್ಕೂ ಕಡಿಮೆ ಇಲ್ಲದಂತೆ ಇದ್ದರು. ಅವರು ಹಂತ ಹಂತವಾಗಿ ಬೆಳೆದು ಜೀವನ ಕಟ್ಟಿಕೊಂಡರು. ಮಾನವನ ಹಸಿವನ್ನು ಈಡೇರಿಸುವ ಸಸ್ಯಜಾತಿಯ ಮೇಲೆ ಸಹಜವಾಗಿ ದೈವತ್ವದ ಭಕ್ತಿಯಿಂದ ನೃತ್ಯ ಮಾಡುತ್ತಿದ್ದಾನೆ. ಶ್ರಮ ವಹಿಸಿ ಜೀವನ ನಡೆಸಿದ ಮಾನವ ತನ್ನ ಆಯಾಸವನ್ನು ಕಳೆಯುವ ಸಲುವಾಗಿ ಮನಸ್ಸಿಗೆ ಮಂದಹಾಸ ನೀಡುವ ಮನರಂಜನಾ ಕಾರ್ಯದಲ್ಲಿ ತೊಡಗಿದನು. ಇಲ್ಲಿ

ಬೇರೆ ಬೇರೆ ಜನಾಂಗಗಳು ಬೇರೆ ಬೇರೆ ರೀತಿಯಾಗಿ ಸಂಸ್ಕೃತಿಯನ್ನು ಹೊಂದಿದ್ದು, ಅವುಗಳ ಆಚರಣೆಯಲ್ಲಿ ಭಿನ್ನತೆಗಳು ಕಂಡುಬರುತ್ತಿದ್ದವು. ಹೀಗೆ ಸಸ್ಯಗಳು ಮಾನವನಿಂದ ಪೂಜೆಗೆ ಮಾತ್ರ ಪಾತ್ರವಾಗದೆ ರಕ್ಷಣೆಗೂ ಒಳಪಟ್ಟಿತ್ತು. ಮಾನವನು ತನ್ನ ಬೇಸರ ಕಳೆಯುತ್ತಿದ್ದ ಕಲೆಗಳಲ್ಲಿ, ನೃತ್ಯಗಳಲ್ಲಿ, ಹರಿಕೆಗಳಲ್ಲಿ ಸಸ್ಯಗಳ ಬಳಕೆ ಮಾಡಿದನು. ಅವನು ತನ್ನ ಮನಸ್ಸಿಗೆ ನೆಮ್ಮದಿ ಪಡೆಯುವ ಸಲುವಾಗಿ ವಾದ್ಯಗಳನ್ನು ತಯಾರಿಸಿದನು. ಹೀಗೆ ಕಲೆ ಸಾಹಿತ್ಯದಲ್ಲಿ ಸಸ್ಯಗಳ ಬಳಕೆಯನ್ನು ಮಾಡಿದನು.

ಸಸ್ಯಕಲೆ

ಗಿಡ, ಮರ, ಬಳ್ಳಿಗಳ ಮೇಲೆ ಭಯ, ಭಕ್ತಿ, ನಂಬಿಕೆ ಹೊಂದಿದ ಮಾನವನು ಸಸ್ಯಗಳಿಗೆ ಬದ್ಧನಾಗಿದ್ದನು. ಅವುಗಳ ಒಡನಾಟ ಮಾಡುತ್ತಿದ್ದ ಮಾನವ ಸಹಜವಾಗಿ ಅವುಗಳಿಗೆ ತನ್ನ ಹೃದಯದಲ್ಲಿ ಸ್ಥಾನ ನೀಡಿದನು. ಶ್ರೇಷ್ಠವಾದುದು ಎಂದರೆ ಅದು ಸಸ್ಯ ಸಂಪತ್ತು ಎಂದು ಭಾವಿಸಿ ಮಾನವ ತನ್ನ ದಿನಚರಿಯಲ್ಲಿ ಅವುಗಳ ಚಿತ್ರಗಳನ್ನು ಬಳಸುವುದರ ಮೂಲಕ ಗೌರವ ನೀಡಿದನು. ತಾನು ಮಾಡುತ್ತಿದ್ದ ಆಚರಣೆಗಳಲ್ಲಿ, ವಿಧಿ–ವಿಧಾನಗಳಲ್ಲಿ ಗಿಡ, ಮರ, ಬಳ್ಳಿಗಳನ್ನು ಕಲೆಯಾಗಿ ಬಳಸಿದನು.

ಮನೆಯ ಸೌಂದರ್ಯ ಹೆಚ್ಚಿಸುವ ಸಲುವಾಗಿ ಗೋಡೆಗಳಿಗೆ ಸುಣ್ಣದ ಗೆರೆಗಳ ಮೂಲಕ ಬಳ್ಳಿ ಚಿತ್ರ, ಮರದ ಚಿತ್ರ ಬಿಡಿಸುತ್ತಿದ್ದರು. ಈ ಚಿತ್ರಗಳು ಮನೆಯ ಸೌಂದರ್ಯವನ್ನು ಹೆಚ್ಚಿಸುವವು ಮಾತ್ರವಲ್ಲದೆ, ಮನೆಯ ಮನುಷ್ಯರ ಮೇಲೆ ದೃಷ್ಟಿ ಬೀಳದಂತೆ ಮಾಡುತ್ತದೆ ಎಂಬ ನಂಬಿಕೆ ಹೊಂದಿದ್ದರು. ಈ ಬಗೆಯಲ್ಲಿ ಅರಳಿದ ಸಸ್ಯ ಚಿತ್ರಗಳು ಜನಪದರಲ್ಲಿ ಯಾವ ಬಗೆಯ ನಂಬಿಕೆ ಇತ್ತು ಎಂಬುದನ್ನು ತಿಳಿಸುತ್ತದೆ. ಚೈತನ್ಯದ ಶಕ್ತಿಯನ್ನು ಹೊಂದಿರುವ ಸಸ್ಯಗಳು ಮಾನವನಿಗೆ ಸ್ಫೂರ್ತಿದಾಯಕವಾಗಿದ್ದು, ಅವು ಗೋಡೆಗಳ ಮೇಲೆ ಚಿತ್ರಿಸಲ್ಪಟ್ಟಿರುತ್ತಿದ್ದವು. ಜನಪದ ಹೆಣ್ಣು ಮಗಳಿಂದ ಹಿಡಿದು ಇಲ್ಲಿಯವರೆಗೆ ಮುಂಜಾನೆಯಲ್ಲಿ ಮನೆಯ ಬಾಗಿಲ ಹೊಸ್ತಿಲನ್ನು ತೊಳೆದು ಬಳ್ಳಿ ಚಿತ್ರ ಬಿಡಿಸುತ್ತಾರೆ. ಹಾಗೆಯೇ ತಮಗೆ ಆಹಾರ ಬೇಯಿಸುವ ಒಲೆಯನ್ನು ದೇವರಿಗೆ ಸಮನೆಂದು ಭಾವಿಸಿ ಒಲೆ ಸಾರಿಸಿ ಬಳ್ಳಿ ಚಿತ್ರ ಬಿಡಿಸಿ ನಮಸ್ಕರಿಸಿ ಅಗ್ನಿ

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025 | VOLUME: 09, ISSUE: 06, DECEMBER 2025

ಹಚ್ಚುತ್ತಾರೆ. ಜೊತೆಗೆ ರಂಗೋಲಿ ಬಿಡಿಸುತ್ತಾರೆ. ಬಳ್ಳಿಯ ಚಿತ್ರಗಳು ಹಲವು ದೇವತೆ, ರಥ ಮುಂತಾದ ರೂಪಗಳಲ್ಲಿ ಮೂಡಿಬರುತ್ತವೆ. ವಿವಾಹದ ಸಂದರ್ಭದಲ್ಲಿ ಹಸೆ ಬಿಡಿಸುವ ಸಂಪ್ರದಾಯವಿದೆ. ಮದುವೆ ಹಿಂದಿನ ದಿನ ಗೋಡೆಯ ಮೇಲೆ ಚಿತ್ರ ಬಿಡಿಸುತ್ತಾರೆ. ಅಲ್ಲಿಯೂ ಸಹ ಮರ, ಗಿಡ, ಬಳ್ಳಿಗಳನ್ನು ಕಾಣಬಹುದು. ಹೀಗೆ ಹಸೆ ಬಿಡಿಸುವ ಮೂಲಕ ಕೆಲವು ಶಾಸ್ತ್ರಗಳನ್ನು ಮಾಡುತ್ತಾರೆ. ಜೊತೆಗೆ ಅಕ್ಕಿಯಲ್ಲಿಯೂ ಸಹ ಬಳ್ಳಿಯ ಚಿತ್ರ ಬಿಡಿಸಿ, ಅದರ ಮೇಲೆ ಚಾಪೆಯನ್ನು ಹಾಸಿ ಅದರ ಮೇಲೆ ಮಧುಮಕ್ಕಳನ್ನು ಕೂಡಿಸುತ್ತಾರೆ. ಈ ಮೂಲಕ ಅವರ ಜೀವನ ಹಸನಾಗಿರಲೆಂದು ನಂಬಿಕೆ ಇಟ್ಟಿದ್ದಾರೆ. ಈ ಪದ್ಧತಿ ಹಲವು ಜನರಲ್ಲಿ ಇಂದಿಗೂ ಆಚರಣೆಯಲ್ಲಿದೆ.

ಜನಪದರ ಕೈಗೆ ಹಚ್ಚೆ ಹಾಕಿಸಿಕೊಳ್ಳುವ ಸಂದರ್ಭದಲ್ಲಿ ಅವರು ತಮ್ಮ ಪ್ರೀತಿಪಾತ್ರ ವಸ್ತು ಚಿತ್ರವನ್ನು ಹಾಕಿಸಿಕೊಳ್ಳುತ್ತಿದ್ದರು. ಬೇರೆ ಬೇರೆ ಸಂಸ್ಕೃತಿಯ ಜನರು ಬೇರೆ ಬೇರೆ ಬಗೆಯಲ್ಲಿ ಹಚ್ಚೆ ಹಾಕಿಸಿಕೊಳ್ಳುವುದನ್ನು ನೋಡಬಹುದು. ಇಲ್ಲಿಯೂ ಸಹ ಮರ, ಗಿಡ, ಬಳ್ಳಿಯ ಚಿತ್ರ ಹಾಕಿಸಿಕೊಳ್ಳುತ್ತಿದ್ದು, ಬಳ್ಳಿಯನ್ನು ಪ್ರಧಾನವಾಗಿ ಬಳಸಿ ಬರೆಯುತ್ತಿದ್ದರು. ಈ ಮೂಲಕ ತಮ್ಮ ಭಕ್ತಿ ಗೌರವವನ್ನು ತಮ್ಮ ದೇಹದ ಮೇಲೆ ಹಚ್ಚೆ ಬಿಡಿಸಿಕೊಳ್ಳುವ ಮೂಲಕ ತೋರಿಸುತ್ತಿದ್ದರು. ಚಿತ್ರಕಲೆ ಬಿಡಿಸುವ ಸಂದರ್ಭದಲ್ಲಿ ವ್ಯಕ್ತಿಯ ಬಗೆಗಿನ ಗೌರವವನ್ನು ಸೂಚಿಸಲು ಒಂದು ಮರದ ಚಿತ್ರ ಬಿಡಿಸುವ ಮೂಲಕ ಅದನ್ನು ಸೂಕ್ಷ್ಮವಾಗಿ ಗಮನಿಸಿದರೆ, ಆ ಮರದ ಆಕಾರದಲ್ಲಿ ಕೆಲವು ಶ್ರೇಷ್ಠ ವ್ಯಕ್ತಿಗಳ ಭಾವಚಿತ್ರ ಕಾಣಿಸುವಂತೆ ಮಾಡಿದ್ದಾರೆ. ಕಲ್ಲಿನಲ್ಲಿಯೂ ಸಹ ಮರ, ಗಿಡ, ಬಳ್ಳಿಯ ಕೆತ್ತನೆ ಕಾಣಬಹುದು. ಪ್ರತಿ ದೇವಸ್ಥಾನಗಳಲ್ಲಿಯೂ ಸಹ ಮುಂದಿರುವ ಕಂಬಗಳಲ್ಲಿ ಸೂಕ್ಷ್ಮವಾಗಿ ಬಳ್ಳಿ ಚಿತ್ರಗಳನ್ನು ಕೆತ್ತಿರುವುದನ್ನು ಕಾಣಬಹುದು. ಇದು ಸಹ ಕಲೆಯ ಮೂಲ ನೆಲೆಯಾಗಿದೆ. ಇಲ್ಲಿ ನಮಗೆ ಸೂಕ್ಷ್ಮವಾಗಿ ತಿಳಿದುಬರುವ ಅಂಶವೆಂದರೆ ಸಸ್ಯಕ್ಕೂ ಸಹ ದೈವಿಕ ಭಾವ ನೀಡಿರುವುದನ್ನು ಕಾಣಬಹುದು. ಇನ್ನು ಕೆಲವೊಂದು ಮರಗಳನ್ನು ಚಿಹ್ನೆ ಅಥವಾ ಲಾಂಛನವಾಗಿ ಕೆತ್ತಿರುವುದನ್ನು ಗುರುತಿಸಬಹುದು.

ಆಹಾರ ಪದಾರ್ಥಗಳು ಕೆಲವು ಶೇಖರಿಸಲ್ಪಡುತ್ತವೆ. ಅಂತಹ

ಪದಾರ್ಥಗಳು ಕೆಡದಂತೆ ಸುಣ್ಣದಿಂದ ಚಿತ್ರ ಬಿಡಿಸುತ್ತಾರೆ. ಇದು ಸೌಂದರ್ಯಯುತವಾಗಿಯೂ ಕಾಣಿಸುವುದು ಮಾತ್ರವಲ್ಲದೆ ಆಹಾರ ಪದಾರ್ಥವನ್ನು ಕಾಪಾಡುತ್ತದೆ. ಹೀಗೆ ಜನಪದರು ಸುಣ್ಣದಲ್ಲಿ ಚಿತ್ರ ಬಿಡಿಸಿ, ಸೌತೆಕಾಯಿ, ಕುಂಬಳಕಾಯಿಯಂತಹ ಪದಾರ್ಥಗಳನ್ನು ಶೇಖರಿಸಿಡುತ್ತಿದ್ದರು. ಈ ರೀತಿಯ ಕಲೆಯೊಂದಿಗೆ ರಕ್ಷಣೆಯ ಜಾಣತನ ಜನಪದರಲ್ಲಿತ್ತು. ಮನೆ ಹಾಗೂ ದೇವಸ್ಥಾನದ ದ್ವಾರಗಳು ಮೇಲೆ ಬಳ್ಳಿಯ ಚಿತ್ರ ಆಕರ್ಷಣೀಯವಾಗಿ ಕೆತ್ತಿಸುತ್ತಿದ್ದರು. ದ್ವಾರವು ತಾವು ಶ್ರೇಷ್ಠ ಎಂದುಕೊಂಡು ಮರದಿಂದಲೇ ನಿರ್ಮಿತವಾಗಿದ್ದು, ಆ ಮರದ ಮೇಲೆ ವಿವಿಧ ಬಗೆಯ ಬಳ್ಳಿ, ಹೂಗಳನ್ನು ಕೆತ್ತಲಾಗುತ್ತದೆ. ಅಲ್ಲದೆ ಆ ದ್ವಾರಬಾಗಿಲನ್ನು ಪೂಜಿಸುವ ಪರಿ ಇಂದಿಗೂ ಮುಂದುವರಿದುಕೊಂಡು ಬಂದಿದೆ.

ಮಲೆನಾಡಿನ ಭೂಮಿ ಹುಣ್ಣಿಮೆಯಲ್ಲಿ ಕುಕ್ಕೆಗೆ ಚಿತ್ರವನ್ನು ಬಿಡಿಸಿ ಚೆಂಡು ಹೂ ಗಿಡದ ರಸ ತೆಗೆದು ಬಿಡಿಸುತ್ತಾರೆ. ಹೆಣ್ಣು ಮಕ್ಕಳು ಅಲಂಕಾರಿಕ ವಸ್ತುಗಳನ್ನು ಸಹ ಗಿಡ, ಮರ, ಬಳ್ಳಿ ಆಕಾರದಲ್ಲಿ ತಯಾರಿಸುವ ಕಲೆ ಕಾಣಬಹುದು. ಅವರ ಓಲೆ, ಬಳೆ, ಹಣೆಬೊಟ್ಟು, ಬಳ್ಳಿ, ಸಸಿ ಆಕಾರದಲ್ಲಿ ತಯಾರು ಮಾಡುತ್ತಾರೆ. ಮದುವೆ ಸಂದರ್ಭದಲ್ಲಿ ಕೈಕಾಲುಗಳಿಗೆ ಮದರಂಗಿಯನ್ನು ಹಚ್ಚುತ್ತಾರೆ. ಮದರಂಗಿಯ ಸೊಪ್ಪು ತಂದು ಅರೆದು, ಗಿಡ, ಬಳ್ಳಿಯ ಚಿತ್ರವನ್ನು ತಮ್ಮ ಅಂಗಗಳ ಮೇಲೆ ಬಿಡಿಸಿಕೊಳ್ಳುತ್ತಾರೆ. ಈ ಮೂಲಕ ಮದುಮಗಳ ಕಳೆ ಸೌಂದರ್ಯ ಹೆಚ್ಚಿಸುವ ಪ್ರಯತ್ನ ಮಾಡುತ್ತಾರೆ. ಈ ಮದರಂಗಿ ಸೊಪ್ಪು ದೇಹದ ಉಷ್ಣತೆ ಕಡಿಮೆ ಮಾಡುವುದರೊಂದಿಗೆ ಸೌಂದರ್ಯವನ್ನು ಹೆಚ್ಚಿಸುವ ಕೆಲಸ ಮಾಡುತ್ತದೆ. ಇನ್ನು ತರಕಾರಿಯಿಂದ ಇತ್ತೀಚಿನ ದಿನಗಳಲ್ಲಿ ಡಿಸೈನ್ ಮಾಡುವುದು ಒಂದು ಕಲೆಯಾಗಿದೆ. ಕಾರ್ಯಕ್ರಮಗಳಲ್ಲಿ ತರಕಾರಿಯಿಂದ ವಿವಿಧ ಬಗೆಯ ಅಲಂಕಾರಗಳನ್ನು ಮಾಡುವುದರ ಮೂಲಕ ಆಕರ್ಷಿತವಾಗಿ ಕಾಣುವಂತೆ ಮಾಡುತ್ತಾರೆ. ಹೀಗೆ ಶಾಸ್ತ್ರಕ್ಕೆ ಬಳಸುವ ಕೊಬ್ಬರಿ, ಎಲೆ, ದವಸ-ಧಾನ್ಯಗಳು ವಿವಿಧ ಬಗೆಯಲ್ಲಿ ಆಕಾರ ಪಡೆದುಕೊಳ್ಳುತ್ತವೆ. ಹೀಗೆ ಇವು ಜನಪದರಲ್ಲಿ ಸಸ್ಯವನ್ನು ಯಾವ ಯಾವ ರೂಪದಲ್ಲಿ ಕಲೆಯಾಗಿ ಬಳಸುತ್ತಿದ್ದರು ಎಂಬುದನ್ನು

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025 | VOLUME: 09, ISSUE: 06, DECEMBER 2025

ತಿಳಿಯಬಹುದು. ಪ್ರಸ್ತುತವಾಗಿ ಅಲಂಕಾರಿಕಾಗಿ ಹಾಗೂ ಸಂಸ್ಕೃತಿಯನ್ನು ಮುಂದುವರೆಸಲು ಕೆಲವು ಭಾಗಗಳಲ್ಲಿ ಇಂದಿಗೂ ಈ ರೀತಿಯ ಕಲೆ ಜೀವಂತವಾಗಿದೆ.

ಸಸ್ಯ ಹರಕೆ

ಪ್ರಕೃತಿಯೊಡನೆ ಬದುಕುವ ಮನುಷ್ಯ ಸಸ್ಯ ಜಾತಿಗಳನ್ನೆಲ್ಲಾ ದೈವವೆಂದು ಭಾವಿಸಿದ್ದಾನೆ. ಯಾವ ಭೇದ–ಭಾವ ತೋರದೇ ಅವುಗಳ ಮುಂದೆ ಭಕ್ತಿಯನ್ನು ಪ್ರದರ್ಶಿಸುತ್ತಾನೆ. ಆ ಶಕ್ತಿಯ ಗಿಡಮರಗಳ ಸಮೃದ್ಧಿಗೂ ಕಾರಣವಾಗುವುದು ಮಾತ್ರವಲ್ಲದೆ, ತನ್ನ ಬದುಕಿಗೂ ಒಳಿತಾದುದು ಎಂದು ನಂಬಿದ್ದ. ಹೇಳದೇ ಫಲ ಬಿಡುವ ಮರಗಳನ್ನು ಚೈತನ್ಯ ದೇವರೆಂದು ನಂಬಿದ್ದ. ಈ ಕಾರಣಕ್ಕಾಗಿ ತನ್ನ ನೋವನ್ನು ಮರಗಳ ಎದುರು ನಿಂತು ಹಂಚಿಕೊಂಡು ತನ್ನಲ್ಲಿರುವ ಕೊರತೆಗಳಿಗಾಗಿ ಸಸ್ಯದ ಮೊರೆ ಹೋದ. ಎಲ್ಲಾ ಬಗೆಯ ಮನುಷ್ಯನ ಅಗತ್ಯತೆಗಳನ್ನು ಈಡೇರಿಸಿಕೊಳ್ಳಲು ದೈವ ರೂಪವಾದ ಸಸ್ಯಗಳಿಗೆ ಸೇವೆ ಸಲ್ಲಿಸಿದ ನಂತರ ಸಮಸ್ಯೆಗಳ ಪರಿಹಾರಕ್ಕಾಗಿ ಹರಕೆ ಹೊತ್ತುಕೊಂಡನು. ಹೀಗೆ ಹರಕೆ ಎಂಬುದು ರೂಪ ತಾಳಿ ತನ್ನ ಬೇಡಿಕೆ ಈಡೇರಿಸಿದರೆ, ತಾನು ಸೇವೆ ಸಲ್ಲಿಸುತ್ತೇನೆ ಎಂಬ ಹರಕೆಯನ್ನು ಹೊತ್ತುಕೊಂಡನು. ಅಂತಹ ಕೆಲವು ಹರಕೆಗಳನ್ನು ನೋಡಬಹುದು. ಇಂದಿಗೂ ಹಳ್ಳಿಗಳಲ್ಲಿ ರೋಗ–ರುಜಿನಗಳಾದಾಗ ಹರಕೆ ಹೊರುತ್ತಾರೆ. ಎಲ್ಲಮ್ಮ, ಮಾರಿಕಾಂಬ ಮಾರಮ್ಮ, ಅಂತರಘಟ್ಟಮ್ಮ ಮೊದಲಾದ ಹೆಣ್ಣು ದೇವತೆಗಳಿಗೆ ಹರಕೆ ಕೈಗೂಡಿದಾಗ ಬೇವಿನ ಉಡುಗೆ ಉಡುವ ಸಂಪ್ರದಾಯವೊಂದಿದೆ. ಸ್ನಾನ ಮಾಡಿ ಮೈಗೆ ಹೊಸ ಬಟ್ಟೆ ಸುತ್ತಿಕೊಂಡು, ಬೇವಿನ ಉಡುಗೆಯನ್ನು ಉಡಿಸಿ ತಮ್ಮ ಹರಕೆಯನ್ನು ತಿರಿಸಿ ದೇವರ ದರ್ಶನ ಪಡೆಯುತ್ತಾರೆ.

ಗಿಡಮರಗಳು ಮಾನವನಿಗೆ ಸಂತಾನ ಶಕ್ತಿ ನೀಡುವ ಫಲಶಕ್ತಿವುಳ್ಳವುಗಳೆಂದು ನಂಬಿದ್ದಾರೆ. ಮಕ್ಕಳಾಗದೆ ಫಲ ಬೇಡುವ ಹೆಣ್ಣು ಮಕ್ಕಳು ಅಶ್ವತ್ತ ಮರ, ಬನ್ನಿ ಮರ, ಮಾವಿನ ಮರ ಹೀಗೆ ಆಯಾ ಜನಾಂಗಗಳ ನಂಬಿಕೆಯ ಪ್ರಕಾರ ತಮ್ಮ ಇಷ್ಟಾರಾಧನೆಯ ಸಸ್ಯಗಳಲ್ಲಿ ಬೇಡಿಕೊಳ್ಳುತ್ತಾರೆ.

ಫಲ ನೀಡಲೆಂದು ಅನೇಕ ವಾರಗಳವರೆಗೆ ನಡೆದುಕೊಳ್ಳುತ್ತಾರೆ. ಕಟ್ಟೆಗಳನ್ನು ಲೆಕ್ಕದಲ್ಲಿ ಸುತ್ತುತ್ತಾರೆ. ಋತುಮತಿಯಾಗದ ಹೆಣ್ಣು ಮಕ್ಕಳಿಗೆ ಹೆಣ್ತನ ಬರಲಿ ಎಂದು ಕೆಲವು ಸಸ್ಯಗಳಿಗೆ ಹರಕೆ ಹೊತ್ತು ಆರಾಧಿಸುತ್ತಾರೆ. ಋತುಮತಿಯಾದ ನಂತರ ಹಾಲು ಬರುವ ಐದು ಜಾತಿಯ ಸಸ್ಯಗಳಿಗೆ ಪೂಜೆಯನ್ನು ಮಾಡುತ್ತಾರೆ.

ಜನರು ತಮ್ಮ ಶ್ರೇಯಸ್ಸಿಗಾಗಿ ದೇವರಿಗೆ ಬೆಳ್ಳಿಯ ಬಿಲ್ವಪತ್ರೆ ಸರವನ್ನು ಮಾಡಿಸುವುದಾಗಿ ಹರಕೆ ಹೊರುತ್ತಾರೆ. ಮೈಯಲ್ಲಿ ಸಣ್ಣಪುಟ್ಟ ಗುಳ್ಳೆಗಳಾದರೆ ನಾಗರಿಗೆ 'ತನು' ಹಾಕಿಸುತ್ತೇನೆ ಎಂಬ ಹರಕೆ ಹೊರುತ್ತಾರೆ. 'ತನು' ಹಾಕಿಸುವುದೆಂದರೆ ಪೂರ್ತಿ ಇರುವ ಬಾಳೆಗೊನೆಯನ್ನು ತಂದು ಸಂಪೂರ್ಣ ಹಣ್ಣಾಗಿಸಿ ಊನವಾಗದಂತೆ ನೋಡಿಕೊಂಡು ದೇವರಿಗೆ ಅರ್ಚನೆ ಮಾಡಿಸುವುದು, ತಾವು ಅಂದುಕೊಂಡ ಕೆಲಸವಾದರೆ ಅಡಿಕೆ ಅಥವಾ ಅಕ್ಕಿಯ ತುಲಾಬಾರ ಮಾಡಿಸುವುದಾಗಿ ಹರಕೆ ಹೊರುತ್ತಾರೆ. ಜನಪದ ಕಥೆ ಹೇಳುವಂತೆ ಹಿರಿಯರ ಆತ್ಮಕ್ಕೆ ಶಾಂತಿ ದೊರೆಯಬೇಕಾದರೆ ಬಂಗಾರದ ಮಾವಿನ ಹಣ್ಣನ್ನು ಮಾಡಿಸಬೇಕೆಂಬ ನಂಬಿಕೆ ಇತ್ತು. ಜನಪದದಿಂದ ಹಿಡಿದು ಇಂದಿಗೂ ಈ ರೀತಿಯ ಹರಕೆಗಳು ಆಚರಣೆಯಲ್ಲಿವೆ. ಮನುಷ್ಯನ ಅಗತ್ಯತೆ, ಕುಂದತೆ, ಶೂನ್ಯತೆಯನ್ನು ಈಡೇರಿಸಿಕೊಳ್ಳುವ ಸಲುವಾಗಿ ದೇವತೆಗಳ ಮೊರೆ ಹೋಗುತ್ತಾರೆ. ಅದರಲ್ಲಿಯೂ ಸಸ್ಯ ದೇವತೆಗಳನ್ನು ಹೆಣ್ಣು ಮಕ್ಕಳು ಹೆಚ್ಚಾಗಿ ನಂಬಿದ್ದು ತಮ್ಮ ಕುಟುಂಬದವರು ಚೆನ್ನಾಗಿರಲು, ಕುಟುಂಬ ವೃದ್ಧಿಸಲು, ವಂಶ ಬೆಳೆಯಲು, ತನ್ನ ಪತಿ ತನ್ನ ಹಿಡಿತದಲ್ಲಿರಲು ಹರಕೆ ಹೊರುತ್ತಾರೆ. ಹಾಗೆಯೇ ತನ್ನ ಸೇವೆಗಳನ್ನು ಹಗಲು ರಾತ್ರಿಗಳೆನ್ನದೇ ಸಲ್ಲಿಸುತ್ತಾಳೆ. ಈಗಂತೂ ಮಡೆಸ್ನಾನವೆಂಬ ದರಿದ್ರ ಹರಕೆಯೂ ಬಂದಿದೆ. ಉಂಡಿಟ್ಟ ಬಾಳೆ ಎಲೆ ಮೇಲೆ ಉರುಳು ಸೇವೆ ಮಾಡಿದರೆ ಒಳಿತಾಗುವುದೆಂಬ ನಂಬಿಕೆಯನ್ನು ಹುಟ್ಟಿಸಿದ್ದಾರೆ. ಹೀಗೆ ಕೆಲವೊಂದು ವೈಜ್ಞಾನಿಕವಾಗಿ ಸತ್ಯವಾಗಿದ್ದರೂ ಇನ್ನೂ ಕೆಲವು ಅವೈಜ್ಞಾನಿಕ ಅನಾಚಾರಗಳಾಗಿವೆ. ಒಟ್ಟಿನಲ್ಲಿ ಜಾನಪದರ ಈ ಬಗೆಯ ಹರಕೆಗಳು ಇಂದಿಗೂ ಮುಂದುವರೆದಿವೆ.

ಸಸ್ಯ ದೇವಾಲಯಗಳು

ಜನಪದರು ಮೊದಲು ಸಸ್ಯಗಳನ್ನೇ ದೇವರು ಎಂದು ಪೂಜಿಸುತ್ತಿದ್ದರು.

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025 | VOLUME: 09, ISSUE: 06, DECEMBER 2025

ನಂತರ ಮೂರ್ತಿ ಪೂಜೆ ಬಂದಿತು ಸಸ್ಯವನ್ನೇ ದೈವವೆಂದು ಭಾವಿಸಿದ ಮಾನವನಿಗೆ ಬೇರಾವ ಜೀವವೂ ದೇವರಾಗಿ ತಕ್ಷಣಕ್ಕೆ ಕಾಣಲಿಲ್ಲ. ಮೊದಲು ಮರವನ್ನು ಆಶ್ರಯಿಸಿ ಬದುಕಿದ ಅವನು ತನಗೆ ಆಶ್ರಯ ನೀಡಿದ ಮರವನ್ನು ದೇವರೆಂದು ಭಾವಿಸಿದ. ತದನಂತರ ಕೃಷಿ ಮಾಡತೊಡಗಿದ. ಇವರು ತಮ್ಮ ಜಮೀನುಗಳಲ್ಲಿ ಒಂದು ಮರವನ್ನು ಬೆಳೆಸಿದನು. ಆ ಮರಕ್ಕೆ ತನ್ನ ಆಶ್ರಯಕ್ಕೆ ಮಾತ್ರವಲ್ಲದೆ ಜಮೀನನ್ನು ರಕ್ಷಿಸುವ ರಕ್ಷಕನೆಂದು ನಂಬಿ ಅದನ್ನು ಪೂಜಿಸಿದನು. ಕೆಲವು ಕಡೆ ಆಲದ ಮರಗಳನ್ನು ಊರ ದೇವಾಲಯಗಳೆಂದು ಪೂಜಿಸುತ್ತಾರೆ. ಮಕ್ಕಳಿಗೆ ಯಾವುದೇ ಧರ್ಮ, ಜಾತಿಗಳಿಲ್ಲ, ಅಶ್ವತ್ಥಕಟ್ಟೆ, ಬನ್ನಿಕಟ್ಟೆ ಹೀಗೆ ಹಲವು ಬಗೆಯ ಮರಗಳನ್ನು ಪೂಜನೀಯ ಭಾವದಿಂದ ಬೇರೆ ಬೇರೆ ಧರ್ಮದವರಿಂದ ಆರಾಧಿಸಲ್ಪಡುತ್ತವೆ. ಇವುಗಳನ್ನು ಹಳ್ಳಿಯ ದೇವಾಲಯುಗಳನ್ನಾಗಿ ಮಾಡಿಕೊಂಡಿದ್ದಾರೆ ಮಾತ್ರವಲ್ಲದೇ ಇಂದಿಗೂ ಈ ಬಗೆಯ ಹಲವಾರು ನಂಬಿಕೆಯುಳ್ಳ ಕಟ್ಟೆಗಳನ್ನು ಕಾಣಬಹುದು. ಯಾವ ಮೂರ್ತಿ ದೇವಾಲಯಗಳಿಗೂ ಈ ಮರ ಕಮ್ಮಿ ಇಲ್ಲ ಎಂದೇ ಹೇಳಬಹುದು.

ಸಸ್ಯ ವಾದ್ಯಗಳು

ಜನಪದರು ತಮ್ಮ ಮನರಂಜನೆಗಾಗಿ ಹಾಡು ನೃತ್ಯಗಳನ್ನು ಮಾಡುತ್ತಿದ್ದರು. ಈ ವೇಳೆಗೆ ವಾದ್ಯ, ನಗಾರಿ, ತಮಟೆ, ಡೊಳ್ಳುಗಳ ಮೂಲಕ ತಮ್ಮ ನೃತ್ಯಕ್ಕೆ ಸ್ಫೂರ್ತಿಯನ್ನು ತಂದುಕೊಳ್ಳುತ್ತಿದ್ದರು. ಅಲ್ಲದೇ ವಾದ್ಯಗಳಿಂದ ಉಂಟಾಗುವ ಶಬ್ದ ಎಂತಹವರನ್ನೂ ನವಿರೇಳಿಸುತ್ತಿತ್ತು. ಈ ವಾದ್ಯಗಳನ್ನು ಮಾಡಲು ಮರಗಳನ್ನು ಬಳಸುತ್ತಿದ್ದರು. ತಮ್ಮ ನಂಬಿಕೆಗೆ ಹತ್ತಿರವಾಗುವ ಹಾಗೂ ಅದ್ಭುತವಾದ ಧ್ವನಿ ಹೊರಡುವ ಮರಗಳನ್ನು ತಂದು ವಾದ್ಯಗಳನ್ನು ಮಾಡುತ್ತಿದ್ದರು. ಮರಗಳ ಮೇಲೆ ನಂಬಿಕೆಯಿಟ್ಟ ಜನರು ವಾದ್ಯಗಳನ್ನು ಬೇವು, ಬನ್ನಿ, ಬಿದಿರು, ತೇಗದ ಮರಗಳಿಂದ ಸಿದ್ಧತೆ ಮಾಡುತ್ತಿದ್ದರು. ವೀರಭದ್ರ ದೇವರಿಗೆ ಬನ್ನಿ ಮರದ ಹಲಗೆ ಶ್ರೇಷ್ಠ ಎಂಬ ನಂಬಿಕೆ ಇದೆ. ಬಿದಿರಿನಲ್ಲಿ ಕೊಳಲು ಮಾಡಿ ನುಡಿಸುತ್ತಿದ್ದರು. ಹೀಗೆ ವಾದ್ಯಗಳು ಸಹ ಸಸ್ಯಗಳ ನಂಬಿಕೆಯಿಂದ ರಚಿತವಾಗಿರುತ್ತವೆ. ಕೆಲವು ಜನಾಂಗಗಳು ಕೆಲವು ವೃತ್ತಿಗಳನ್ನು ಮಾಡುತ್ತಿದ್ದು ಮರದ ಕೆಲಸ ಮಾಡುವವರನ್ನು

ಆಚಾರಿ ಎಂದು ಕರೆಯುತ್ತಾರೆ ಅಥವಾ ಬಡಗಿ ಎಂದೂ ಕರೆಯುವುದುಂಟು. ಹೀಗೆ ಸಾಂಸ್ಕೃತಿಕ ಮೂಲವಾಗಿ ಸಸ್ಯಗಳನ್ನು ನೋಡಬಹುದಾಗಿದೆ. ಇನ್ನೂ ಹಲವು ಬಗೆಯಲ್ಲಿ ಸಸ್ಯಗಳ ಒಳಗೆ ಕಾಣಬಹುದಾಗಿದೆ.

ಫಲವಂತಿಕೆ ರೂಪಕವಾಗಿ ಸಸ್ಯಗಳು

ಫಲವಂತಿಕೆಯನ್ನು ಧ್ವನಿಸುವ ಶಕ್ತಿಯನ್ನು ಹಿಂಗಾರದಲ್ಲಿ ಕಂಡುಕೊಂಡರೂ ಹಿಂಗಾರದ ಒಳಗಡೆ ಇರುವ ಸಾವಿರಾರು ಅಡಿಕೆ ಹೂವುಗಳು ಮತ್ತು ಅಡಿಕೆಯ ಚಿಕ್ಕ ಚಿಕ್ಕ ಕಾಯಿಗಳು ಸಂತಾನದ ಸಮೃದ್ಧತೆಯನ್ನು ಸಂಕೇತಿಸುತ್ತವೆ. ಹಿಂಗಾರದಿಂದ ಬಾಸಿಂಗವನ್ನು ಕಟ್ಟುತ್ತಾರೆ. ಪ್ರತ್ಯೇಕಿಸಲಾದ ಸ್ಥಳ, ಕಾಲಗಳಲ್ಲಿರುವ ಗಂಡು–ಹೆಣ್ಣುಗಳ ಮುಂದಿನ ದಾಂಪತ್ಯಕ್ಕೆ ಪೂರ್ವಭಾವಿಯಾಗಿ ಧಾರೆಯೆರೆಯುವ ವಿಧಿಗಳು ನಡೆಯುತ್ತವೆ. ಮದುವೆಯಲ್ಲಿ ಬಳಕೆಯಾಗುವ ಹಿಂಗಾರ, ಅಕ್ಕಿ, ಅರಿಶಿಣ, ವೀಳ್ಯ, ಅಡಿಕೆ, ತೆಂಗಿನಕಾಯಿ ಮುಂತಾದ ಫಲಕ ವಸ್ತುಗಳು ಫಲವಂತಿಕೆಯನ್ನು ಸೂಚಿಸುವ ವಸ್ತುಗಳಾಗಿವೆ.

ಸಸ್ಯ ಸಂಬಂಧಿ ಮಾಟ, ಮಂತ್ರ

ಮಾಟ ಹಾಗೂ ಮಂತ್ರಗಳು ಜನಪದ ಬದುಕಿನ ಒಂದು ಅಂಗವಾಗಿವೆ. ಹೆಂಡತಿ ಗಂಡನನ್ನು ತನ್ನ ವಶದಲ್ಲಿಟ್ಟುಕೊಳ್ಳಲು, ತಾಯಿ ತನ್ನ ಮಗನನ್ನು ತನ್ನ ಅಂಕೆಯಲ್ಲಿಟ್ಟುಕೊಳ್ಳಲು ಮಾಟ ಮಂತ್ರಗಳನ್ನು ಬಳಸುವುದನ್ನು ಕಾಣಬಹುದು. ಸಾಮಾನ್ಯವಾಗಿ ಇದನ್ನು ಮಾಡಿಸುವುದು ಎಂದು ಹೇಳುತ್ತಾರೆ. ಇಂತಹದ್ದಕ್ಕೆಲ್ಲಾ ಸಸ್ಯಗಳ ಸಹಾಯವನ್ನು ಪಡೆಯುತ್ತಾರೆ. ಕೇರು, ನಿಂಬೆ ಹಣ್ಣುಗಳನ್ನು ಈ ಮಂತ್ರಗಳಲ್ಲಿ ಬಳಸುತ್ತಾರೆ.

"ಮಾಟ ಮತ್ತು ಮಂತ್ರಗಳಿಗೆ ಬಳಸುವ ಸಸ್ಯಗಳ ಹೆಸರುಗಳನ್ನು ಯಾರೂ ಬಾಯಿ ಬಿಟ್ಟು ಹೇಳುವುದಿಲ್ಲ. ಅಂತಹ ಸಸ್ಯದ ಹೆಸರು ಗೊತ್ತಿದ್ದರೂ ಸಹ ಅದರ ಬಳಕೆ ಮತ್ತು ವಿಧಾನ ಸಾರ್ವತ್ರಿಕವಾಗಿ ಗೊತ್ತಾಗುವ ಸಂಭವವೇ ಇಲ್ಲ. ಹೊರಮುಚ್ಚುಕ, ಒಳಮುಚ್ಚುಕ ಹಾಗೂ ಬೇವುಗಳನ್ನು ಮಾಟ ಮಂತ್ರಗಳಲ್ಲಿ ಬಳಸುತ್ತಾರೆ ಎಂಬುದು ಒಂದು ವದಂತಿ ಮಾತ್ರ. ಬಿಳಿ ಎಕ್ಕೆ ಗಿಡ, ಬಿಳಿಯ ಗುಲಗಂಜಿ ಗಿಡ ಈ ಕ್ರಿಯೆಗಳಿಗೆ ಪ್ರತಿರೋಧವನ್ನು ಒಡ್ಡುವ ಸಸ್ಯಗಳಂತೆ. ಇವು

ಇದ್ದಲ್ಲಿ ಮಾಟ ಮಂತ್ರಗಳು ನಡೆಯುವುದೇ ಇಲ್ಲವಂತೆ. ಅಲ್ಲದೆ ಎಡಕ್ಕೆ ಸುತ್ತಿದ ದಾಂಗಡಿಯ ಬಳ್ಳಿಯು ಮಾಟ ಮಂತ್ರಗಳ ಗುಟ್ಟನ್ನು ತಿಳಿಯಲು ಬಳಸಲಾಗುವ ಸಸ್ಯ ಎಂಬ ಹೇಳಿಕೆ ಇದೆ. ಆದರೆ ಇದರಲ್ಲಿ ಸಾಮಾನ್ಯರಿಗೆ ಬರೀ ಅಂತೆ ಕಂತೆಗಳಷ್ಟೇ ಗೊತ್ತು. ನಿಜವಾದ ಸಸ್ಯಗಳನ್ನು ಅರಿಯುವುದು ಕಷ್ಟದ ಕೆಲಸ" (ಎಚ್.ಜೆ. ಲಕ್ಕಪ್ಪಗೌಡ, 1984. ವಿಶಿಷ್ಟ ಜಾನಪದ, ಶಿವಮೊಗ್ಗ ಪ್ರಕಾಶನ, ಶಿವಮೊಗ್ಗ, ಪುಟ 192).

ಫಲಿತಗಳು

1. ಜಾಗತೀಕರಣದ ಪ್ರಭಾವದಿಂದಾಗಿ ಕೆಲವು ಆಚರಣೆಗಳು ಕಡಿಮೆಯಾಗುತ್ತಿರುವುದು ಕಂಡುಬಂದಿದೆ.
2. ಆಧುನಿಕತೆಯಿಂದಾಗಿ ನಾಟಿ ವೈದ್ಯ ಪದ್ಧತಿಯು ಕ್ಷೀಣಿಸುತ್ತಿರುವುದು ಕಂಡುಬಂದಿದೆ.

ಉಪ ಸಂಹಾರ

ಜಾನಪದವು ಸರ್ವಸಂಪತ್ತಿನ ಮೂಲವಾಗಿದ್ದು ಕಲೆ, ಸಾಹಿತ್ಯ, ಆರೋಗ್ಯ, ಆಚಾರ–ವಿಚಾರ, ರೂಢಿ ಸಂಪ್ರದಾಯ, ಸಂಸ್ಕೃತಿ, ನಂಬಿಕೆ, ಜೀವನಾದರ್ಶನಗಳು ಇಲ್ಲಿ ಕಂಡುಬರುತ್ತವೆ. ಮಾನವ ಬುದ್ಧಿವಂತ ಜೀವಿಯಾಗಿದ್ದು ಪ್ರಾಣಿ ಹಾಗೂ ಸಸ್ಯಗಳನ್ನು ಪಳಗಿಸಿ ಉಪಯೋಗಿಸಿಕೊಂಡನು. ಹೀಗಾಗಿ ಸಸ್ಯವು ಮಾನವನ ಹಸಿವನ್ನು ನೀಗಿಸುವ ಆಹಾರದ ಮೂಲವಾಗಿ ಕಾಣಿಸಿಕೊಂಡು ಮಾನವನ ಅವಿಭಾಜ್ಯ ಅಂಗವಾಯಿತು. ಮಲೆನಾಡಿನ ಜಾನಪದರು ಸಸ್ಯವನ್ನು ಬಳಸುತ್ತಾ ಅವುಗಳಿಂದ ಪಡೆಯುವ ಲಾಭ ಹಾಗೂ ಸಸ್ಯಗಳು ಹೊಂದಿರುವ ವಿಶಿಷ್ಟವಾದ ಗುಣ ಮತ್ತು ಶಕ್ತಿಗಳನ್ನು ಗಮನಿಸಿ ಮಲೆನಾಡಿನ ಜನಪದರು ಸಸ್ಯವನ್ನು ದೈವರೂಪದಲ್ಲಿ ಕಂಡರು. ಈ ದೈವಿಕ ಮನೋಭಾವ ತನ್ನ ಹಾಗೂ ಸಸ್ಯಗಳ ರಕ್ಷಣೆಯ ಹೊಣೆ ಹೊತ್ತಿದೆ. ಏನೇ ಇರಲಿ ಸಸ್ಯಗಳು ಮಾನವನ ಅವಶ್ಯಕತೆಗಳನ್ನು ಈಡೇರಿಸುವಲ್ಲಿ ಅಂದಿನಿಂದ ಇಂದಿನವರೆಗೂ ಪ್ರಮುಖ ಪಾತ್ರ ವಹಿಸಿವೆ. ಜನಪದರು ಯಾವುದೇ ಒಂದು ವಿಷಯವನ್ನು ಅಲಕ್ಷಿಸಿದ ಸಸ್ಯ ತನಗೆ ಯಾವೆಲ್ಲಾ ಬಗೆಯಲ್ಲಿ ಉಪಯೋಗಕರವಾಗಿದೆ ಎಂಬುದನ್ನು ಅರಿತು ಅವುಗಳನ್ನು

ಉಪಯೋಗಿಸಿಕೊಂಡರು. ಸಸ್ಯ ತನ್ನ ಒಡಲು ತುಂಬಿಸುವ, ರೋಗ ವಾಸಿಮಾಡುವ ಪವಿತ್ರ ಜೀವವಾಗಿ ಮಲೆನಾಡಿನ ಜನಪದರಿಗೆ ಕಾಣಿಸಿಕೊಂಡಿತು. ಪ್ರಕೃತಿಯಲ್ಲಿ ದೈವತ್ವವನ್ನು ಕಂಡುಕೊಂಡ ಮಾನವ ಅವುಗಳೊಂದಿಗೆ ಕೆಲವೊಂದು ಆಚರಣಾ ವಿಧಾನಗಳನ್ನು ಮಾಡಿಕೊಂಡನು. ಈ ಮೂಲಕ ಸಾಮೂಹಿಕ ನೃತ್ಯ, ಕಲೆ, ಪ್ರದರ್ಶಗಳನ್ನು ಮಾಡುತ್ತಾ ಕೆಲವೊಂದು ವಿಧಿವಿಧಾನಗಳ ಮೂಲಕ ಮನೋರಂಜನೆಯನ್ನು ಪಡೆಯುತ್ತಾ ಬಂದಿದ್ದಾನೆ. ಈ ಆಚರಣೆಗಳು ಕೃಷಿಗಾಗಿ, ರೋಗ ನಿವಾರಣೆಗಾಗಿ ಹತ್ತು ಹಲವು ಹಬ್ಬ, ಹರಿದಿನಗಳಾಗಿ ರೂಪ ಪಡೆದಿವೆ.

ಗ್ರಂಥ ಋಣ

1. ಈಶ್ವರಪ್ಪ, ಎಂ.ಜಿ. (1994). ಜಾನಪದ ಇಬ್ಬನಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
2. ಲಕ್ಕಪ್ಪಗೌಡ, ಎಚ್.ಜೆ. (1983). ಮಲೆನಾಡು ಜಾನಪದ, ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
3. ಲಕ್ಕಪ್ಪಗೌಡ ಎಚ್.ಜೆ. (1984). ವಿಶಿಷ್ಟ ಜಾನಪದ, ಪ್ರಸಾರಾಂಗ, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.

ಲೇಖಕರು : ಅಭಿಜಿತ್ ಬಿ.
ಸಂಶೋಧನಾರ್ಥಿ, ಕನ್ನಡ ಭಾರತಿ.
ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
abhijithb736@gmail.com

***

ಕರ್ನಾಟಕ ಸಂಸ್ಕೃತಿ: ವಿವಿಧ ಆಯಾಮಗಳು

ಸಂಸ್ಕೃತಿ ಎಂಬ ಹೆಸರನ್ನು ಕೇಳಿದ ಕೂಡಲೇ ನಮಗೆ ನೆನಪಾಗುವುದು; ನಮ್ಮ ಜೀವನ ಶೈಲಿ, ಆಚರಿಸುತ್ತಿರುವ ಹಬ್ಬಗಳಾಗಿರಬಹುದು ಅಥವಾ ನಮ್ಮ ಉಡುಗೆ ತೊಡುಗೆಯಾಗಿರಬಹುದು ಇವೆಲ್ಲಾ ಸಂಸ್ಕೃತಿಯ ಪರಿಧಿಯಲ್ಲೇ ಬರುತ್ತವೆ. ಸಂಸ್ಕೃತಿ ಎನ್ನುವುದು ನಮ್ಮ ಪೂರ್ವಜರಿಂದಲೇ ಬಂದಿರುವ ಆಚಾರ–ವಿಚಾರ, ನಡೆ–ನುಡಿ, ಸಂಪ್ರದಾಯಗಳಾಗಿವೆ. ಭಾರತ ದೇಶವು ಜ್ಯಾತ್ಯಾತೀತ ರಾಷ್ಟ್ರವಾಗಿದೆ. ಇಲ್ಲಿ ಹಲವು ಧರ್ಮಗಳು ತಮ್ಮ ತಮ್ಮ ಆಚಾರ ವಿಚಾರಗಳನ್ನು ಒಳಗೊಂಡಿದ್ದರೂ, ಸಂಸ್ಕೃತಿ ಎಂಬ ವಿಷಯ ಬಂದಾಗ ನಾವು ಭಾರತೀಯ ಸಂಸ್ಕೃತಿ ಅಥವಾ ಕರ್ನಾಟಕ ಸಂಸ್ಕೃತಿ ಎಂದು ಹೇಳುತ್ತೇವೆ.

ಸಂಸ್ಕೃತಿ ಎಂಬುದು ಬಹು ವ್ಯಾಪಕವಾದ ಅರ್ಥವನ್ನು ಹೊಂದಿದ ಅಧ್ಯಾಯವಾಗಿದೆ. ಸಂಸ್ಕೃತಿ ಜನಜೀವನದ ಅಂತರಂಗದ ಅನುಭವವನ್ನು ತೆರೆದಿಡುತ್ತದೆ. ಆ ಮೂಲಕ ಸಂಸ್ಕೃತಿ ಬಿಂಬಿತವಾಗುತ್ತದೆ. ಕಾಲ, ದೇಶ, ಪ್ರದೇಶ, ಆಹಾರ ಪದ್ಧತಿ, ಉಡುಗೆ–ತೊಡುಗೆ, ಒಳಿತು–ಕೆಡಕು, ಆಚಾರ–ವಿಚಾರ, ನಡೆದುಕೊಳ್ಳುವ ರೀತಿ, ನಾವಾಡುವ ಭಾಷೆ, ನೈತಿಕತೆ, ಪ್ರಾಮಾಣಿಕತೆ, ಪೂಜೆ–ಪುನಸ್ಕಾರ ಹೀಗೆ ಹಲವು ವಿಚಾರಗಳಲ್ಲಿ ಸಂಸ್ಕೃತಿ ಎದ್ದು ಕಾಣುತ್ತದೆ. ಹೀಗಾಗಿ ಸಂಸ್ಕೃತಿ ಎಂಬುದು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಉದಾಹರಣೆಗೆ: ಕೊಡಗಿನ ಮಹಿಳೆಯರು ಸೀರೆಯ ಸೆರಗನ್ನು ಬಲಗಡೆಗೆ ಧರಿಸುತ್ತಾರೆ. ಆದರೆ ಬಯಲು ಸೀಮೆಯ ಜನ ಅಥವಾ ಭಾಗಶಃ

ದಕ್ಷಿಣ ಭಾರತದ ಜನ ಸೆರಗನ್ನು ಎಡಗಡೆಗೆ ಧರಿಸುವುದು ಸರ್ವೇ ಸಾಮಾನ್ಯ. ಇದೇ ರೀತಿಯಲ್ಲಿ ಮಂಗಳೂರು ಅಥವಾ ಕರಾವಳಿ ಭಾಗದ ಜನ ಪ್ರತಿ ದಿನ ಮೀನಿನ ಆಹಾರ ಸೇವನೆ ಮಾಡುತ್ತಾರೆ. ಇದು ಆ ಭಾಗದ ಆಹಾರ ಪದ್ದತಿ. ಅದೇ ರೀತಿಯಲ್ಲಿ ಬಯಲು ಸೀಮೆಯ ಪ್ರದೇಶಗಳಲ್ಲಿ ರಾಗಿ ಮುದ್ದೆ, ಅನ್ನ ಸಾಂಬಾರ್ ಇತ್ಯಾದಿ ಆಹಾರವನ್ನು ಸೇವಿಸುತ್ತಾರೆ. ಹೀಗೆ ಆಯಾ ಪ್ರದೇಶದ ಭೌಗೋಳಿಕ ವಾತಾವರಣಕ್ಕೆ ಅನುಗುಣವಾಗಿ ಸಂಸ್ಕೃತಿ ಬದಲಾಗುತ್ತಿರುತ್ತದೆ. ಒಟ್ಟಿನಲ್ಲಿ ಸಂಸ್ಕೃತಿ ಎಂದರೆ ಜನರ ಜೀವನ ವಿಧಾನವಾಗಿದೆ ಇದನ್ನೇ ನಾವು ಸಂಸ್ಕೃತಿ ಎಂದು ಕರೆಯಬಹುದು. ಅದು ಕರ್ನಾಟಕದ ಅಥವಾ ದೇಶದ ಯಾವುದೇ ಮೂಲೆಯಲ್ಲಿರಬಹುದು ಅದು ಅವರವರ ಸಂಸ್ಕೃತಿ ಎಂದೆನಿಸಿಕೊಳ್ಳುತ್ತದೆ.

'ಸಂಸ್ಕೃತಿ ಎಂಬ ಶಬ್ದವನ್ನು ಇಂಗ್ಲೀಷಿನ ಅಣಟಣಡಿಜ ಎಂಬುದಕ್ಕೆ ಸಂವಾದಿಯಾಗಿ ಉಪಯೋಗಿಸಲಾಗುತ್ತಿದೆ'1. ಅಣಟಣ ಅಂದರೆ ಗೌರವಿಸುವುದು, ಆರಾಧಿಸುವುದು ಎಂದರ್ಥ. ನಮ್ಮ ಹಿಂದಿನ ಸಂಪ್ರದಾಯಗಳನ್ನು ಗೌರವಿಸುವುದು, ಭೂದೇವಿಯನ್ನು ಆರಾಧಿಸಿ, ನಂತರ ಭೂಮಿಯ ಮೂಲಕ ಕೃಷಿಯನ್ನು ಮಾಡಿ ಬೆಳೆ ತೆಗೆಯುವುದನ್ನು ಂರಡಿಥಿಣಟಣಡಿಜ ಎಂದು ಕರೆದರು. ಅದು ವ್ಯವಸಾಯ ಸಂಸ್ಕೃತಿ ಎನಿಸಿಕೊಂಡಿತು. ಹೀಗೆ ನಾವು ಮಾಡುವ ಕೆಲಸದ ಹಿನ್ನೆಲೆ, ನಡೆದುಕೊಳ್ಳುವ ರೀತಿ ನೀತಿ, ಒಳಿತು-ಕೆಡಕುಗಳ ನೆಲೆಯಲ್ಲಿ ಸಂಸ್ಕೃತಿಯನ್ನು ಗುರ್ತಿಸಬಹುದಾಗಿದೆ.

ಸಂಸ್ಕೃತಿಯನ್ನು ನಾವು ಪ್ರಧಾನವಾಗಿ ಎರಡು ನೆಲೆಗಳಲ್ಲಿ ಅರ್ಥೈಸಬಹುದು.

• ದೇಶದ ಹಿನ್ನೆಲೆಯಲ್ಲಿ ಸಂಸ್ಕೃತಿ: ಒಂದು ದೇಶ ಶಿಸ್ತು ಬದ್ದವಾಗಿ ತನ್ನದೇ ಕಾರ್ಯ ವೈಖರಿಯನ್ನು ಹೊಂದಿದ್ದು, ವೈಶಿಷ್ಟ್ಯತೆಯಿಂದ ಕೂಡಿದ್ದರೆ ಆ ದೇಶಕ್ಕೆ ಮನ್ನಣೆ ಗೌರವಾದಾರಗಳು ಹೆಚ್ಚು ಉದಾಹರಣೆಗೆ: ಜಗತ್ತನ್ನೇ ಅಲ್ಲಾಡಿಸಿದ ಕರೋನ ವೈರಾಣು. ಈ ಸಂದರ್ಭದಲ್ಲಿ ಕರೋನ ಎನ್ನುವುದು ಎಲ್ಲೆಂದರಲ್ಲಿ ಹರಡಿ ಜನರ ಪ್ರಾಣಹಾನಿಯನ್ನುಂಟು ಮಾಡುತ್ತಿತ್ತು. ಈ ಸಮಯದಲ್ಲಿ ಯಾರೂ ಸಹ ಕೈ ಕೈ ಕುಲುಕಿ ಹಸ್ತಲಾಘವ ನೀಡುತ್ತಿರಲಿಲ್ಲ. ಕಾರಣ; ಕೈ ಕುಲುಕಿದರೆ

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025 | VOLUME: 09, ISSUE: 06, DECEMBER 2025

ವೈರಾಣು ಎಲ್ಲಿ ಹರಡುವುದೋ ಎಂಬ ಭಯ. ಇಂತಹ ವೇಳೆಯಲ್ಲಿ ಇಡೀ ಜಗತ್ತು ಭಾರತ ದೇಶವನ್ನು ಕೊಂಡಾಡ ಹತ್ತಿತು. ಯಾಕೆಂದರೆ ನಮ್ಮ ದೇಶ 'ವಿಶ್ವಗುರು'. ತನ್ನದೇ ವೈಶಿಷ್ಟ್ಯಪೂರ್ಣವಾದ ಸಂಸ್ಕೃತಿಯನ್ನು ಹೊಂದಿದೆ. ಈ ದೇಶದಲ್ಲಿ ಯಾರಿಗಾದರೂ ಗೌರವ ಸೂಚಿಸಬೇಕಾದರೆ ಎರಡೂ ಕೈಗಳನ್ನು ಜೋಡಿಸಿ, ನಮಸ್ಕರಿಸಿ ತಿಳಿಸುತ್ತೇವೆ. ಇದು ನಮ್ಮ ದೇಶದ ಸಂಸ್ಕೃತಿ. ಹೀಗಾಗಿ ಕರೋನ ಸಂದರ್ಭದಲ್ಲಿ ಪ್ರಪಂಚವೇ ನಮ್ಮ ದೇಶದ ಕಡೆ ಮುಖ ಮಾಡಿತ್ತು. ಹೀಗೆ ಸಂಸ್ಕೃತಿಯೆಂಬುದನ್ನು ದೇಶದ ಹಿನ್ನೆಲೆಯಲ್ಲಿ ಗುರುತಿಸಬಹುದು.

• ವ್ಯಕ್ತಿ ಹಿನ್ನೆಲೆಯಲ್ಲಿ ಸಂಸ್ಕೃತಿ: ಒಬ್ಬ ವ್ಯಕ್ತಿಯ ನಡುವಳಿಕೆ, ವ್ಯಕ್ತಿತ್ವ ಚೆನ್ನಾಗಿದ್ದು, ಯಾರಿಗೂ ಕೇಡನ್ನು ಬಯಸದೇ, ಕೇಡನ್ನುಂಟು ಮಾಡದೇ ಮಾದರಿಯಾಗಿರುತ್ತಾನೋ ಅಂತಹವನ ಸಂಸ್ಕೃತಿ ಉನ್ನತವಾದುದು. ಒಳ್ಳೆಯ ಸಂಸ್ಕೃತಿ, ಸುಸಂಸ್ಕೃತ. ಆಡು ಭಾಷೆಯಲ್ಲಿ ಹೇಳುವುದಾದರೆ 'ಎಂತಹಾ! ಒಳ್ಳೆಯ ಸಂಸ್ಕೃತಿನಪ್ಪಾ! ಅವನದು' ಎಂದು ಉದ್ಗರಿಸುತ್ತಾರೆ. ಅದೇ ಒಬ್ಬ ವ್ಯಕ್ತಿ ಯಾರಿಗೂ ಉಪಯೋಗವಾಗದೇ, ಬೇರೊಬ್ಬರಿಗೆ ಕಿರುಕುಳ, ಸದಾ ತೊಂದರೆಯನ್ನುಂಟು ಮಾಡುತ್ತಿದ್ದರೆ; ಅಂತಹವನ ಸಂಸ್ಕೃತಿಯನ್ನು 'ಎಂತಹಾ ಕೆಟ್ಟ ಸಂಸ್ಕೃತಿ! ಅವನದು' ಎಂದು ಅವನ ನಡತೆ ನಡುವಳಿಕೆ ನೋಡಿಯೇ ಗುಣ ಸ್ವಭಾವಗಳನ್ನು ಸುಲಭವಾಗಿ ಅರಿಯಬಹುದು. ಮೇಲೆ ತಿಳಿಸಿದ ಹಾಗೆ ನಾವು ಹೇಗೆ ದೇಶದ ಹಿನ್ನೆಲೆಯಲ್ಲಿ ಸಂಸ್ಕೃತಿಯ ಛಾಯೆಯನ್ನು ನೋಡಿದೆವೋ! ಅದೇ ರೀತಿ ವ್ಯಕ್ತಿಯ ಹಿನ್ನೆಲೆಯಲ್ಲಿ ಹೀಗೆ ಸಂಸ್ಕೃತಿಯನ್ನು ಗುರುತಿಸಬಹುದು.

ಕರ್ನಾಟಕದ ವಿಷಯಕ್ಕೆ ಬಂದಾಗ ಕನ್ನಡ ನೆಲ, ಜಲ, ಭಾಷೆ, ಸಂಸ್ಕೃತಿ ಧರ್ಮಗಳ ಸಮನ್ವಯ ಭೂಮಿ ಮತ್ತು ಮತ ಸಹಿಷ್ಣುತೆಯು ಕನ್ನಡಿಗರ ಉದಾತ್ತ ಗುಣವಾಗಿದೆ. ಅಲ್ಲದೆ ಕಾವ್ಯಗಳನ್ನು ಬಾಯಿ ಪಾಠದ ಮೂಲಕ ಸರಾಗವಾಗಿ ಹೇಳುವ ಮತ್ತು ರಚಿಸುವ ಚಾಕಚಕ್ಯತೆಯುಳ್ಳವರು. ಇದಲ್ಲದೆ ತಾವು ಬದುಕಿ ಇತರರನ್ನು ಬದುಕುವಂತೆ ಬಿಡುವ ಮನೋಭಾವನೆಯುಳ್ಳಂತವರು. ಕಷ್ಟದಲ್ಲಿರುವವರಿಗೆ ಸಹಾಯ ಹಸ್ತ ನೀಡಿ ಅವರನ್ನು ಕಾಪಾಡಿ ಮಾನವೀಯತೆಯನ್ನು ಮೆರೆಯುವ ಶ್ರೇಷ್ಠ ಸಂಸ್ಕೃತಿ ನಮ್ಮದು. ಕರ್ನಾಟಕವನ್ನು

ಕದಂಬ, ಪಲ್ಲವ, ಗಂಗ, ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳರು ಹಾಗೂ ವಿಜಯನಗರದ ಅರಸರು ಆಳ್ವಿಕೆ ಮಾಡಿದ್ದರು. ತಮ್ಮ ತಮ್ಮ ಆಳ್ವಿಕೆಯ ಕಾಲದಲ್ಲಿ ತಮ್ಮದೇ ಆದ ವೈಶಿಷ್ಟ್ಯತೆಯನ್ನು ಮೆರೆಯಲಾಗಿತ್ತು, ನಾಡಿಗೆ ಕಲೆ ಸಾಹಿತ್ಯ, ವಾಸ್ತು ಶಿಲ್ಪ ಕಲೆ, ನೃತ್ಯ, ಸಂಗೀತ ಮುಂತಾದ ಕ್ಷೇತ್ರಗಳಿಗೆ ಕೊಡುಗೆಯನ್ನು ನೀಡಿದ್ದಾರೆ. ಆ ಮೂಲಕ ನಾಡಿನ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ್ದಾರೆ.

ಕರ್ನಾಟಕದ ಸಂಸ್ಕೃತಿಯನ್ನು ಪ್ರತಿನಿಧಿಸುವ ವಿವಿಧ ಆಯಾಮಗಳು:

ಕರ್ನಾಟಕ ಸಂಸ್ಕೃತಿ: ಸಮದೃಷ್ಟಿಕೋನ

ಕನ್ನಡ ನಾಡು ಎಂಬುದು ಕರುಣೆಯನ್ನು ಬಿಂಬಿಸುವ ನಾಡು ಬಹುಶಃ ಅದಕ್ಕೇನೇ ಈ ನಾಡಿಗೆ ಕರುನಾಡರ್, ಕರುನಾಡು, ಕರ್ನಾಟಕ ಎಂಬುದಾಗಿ ಕರೆಯುವುದು ವಾಡಿಕೆಯಾಗಿದೆ ಎಂದು ಹೇಳಬಹುದು. ಯಾಕೆಂದರೆ ನಮ್ಮ ರಾಜ್ಯದಲ್ಲಿ ಎಲ್ಲರಿಗೂ ಮುಕ್ತವಾದ ಪ್ರವೇಶವಿದೆ. ಹಿಂದೆ ಈ ನಾಡಿಗೆ ಯಾತ್ರಿಕರು, ವಿದೇಶಿ ಪ್ರವಾಸಿಗರು ಈ ನಾಡಿಗೆ ಬಂದು ನಾಡನ್ನು ಹೊಗಳಿರುವುದುಂಟು. ಉದಾಹರಣೆಗೆ: ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಸಂದರ್ಭದಲ್ಲಿ ಚೀನಿ ಯಾತ್ರಿಕ ಹೂಯನ್ಸ್ ತಾಂಗ್ ಪ್ರವೇಶ ಕೊಟ್ಟಿದ್ದನು. ಇಂತಹ ಸಂದರ್ಭದಲ್ಲಿ ಆತನಿಗೆ ಬರಮಾಡಿಕೊಂಡು ಗೌರವಾದಾರಗಳನ್ನು ಸಮರ್ಪಿಸಿ, ಕಳಿಸಿದ ಕೀರ್ತಿ ನಾಡಿನ ಸಂಸ್ಕೃತಿಗೆ, ಈ ನೆಲಕ್ಕೆ ಸಲ್ಲುತ್ತದೆ. ಪ್ರಸ್ತುತ ಬೆಂಗಳೂರಂತಹ ನಗರದಲ್ಲಿ ಆಂಧ್ರ, ತಮಿಳುನಾಡು, ಕೇರಳ, ಮಹಾರಾಷ್ಟ್ರ ಹೀಗೆ ಹಲವು ರಾಜ್ಯದ ಜನರು ಇಲ್ಲಿ ನೆಲೆಸಿದ್ದಾರೆ. ಈಗ ಅವರೂ ಇಲ್ಲಿನವರೇ ಆಗಿ ಬದುಕು ಕಟ್ಟಿಕೊಂಡಿದ್ದಾರೆ. ಹೀಗಿದ್ದರೂ ಎಲ್ಲರನ್ನೂ ನಮ್ಮವರೇ ಎಂದು ಸಮಾನತೆಯಿಂದ ಕಾಣುವ ಮನೋಭಾವನೆ ಈ ನಾಡಿನ ಸಂಸ್ಕೃತಿಯಾಗಿದೆ. ಇದು ನಮ್ಮ ಕರ್ನಾಟಕ ಸಂಸ್ಕೃತಿಯ ಒಂದು ಭಾಗವೆಂದು ಹೇಳಬಹುದು.

ಕರ್ನಾಟಕ ಸಂಸ್ಕೃತಿ: ಯುದ್ದನೀತಿ

ಸಾಮಾನ್ಯವಾಗಿ ಯುದ್ದ ಎಂದರೆ ಘರ್ಷಣೆ, ಹೊಡೆದಾಟ, ಒಬ್ಬರ ಸಾಮರ್ಥ್ಯವನ್ನು ಮತ್ತೊಬ್ಬರು ಮಣಿಯುವುದು ಎಂದರ್ಥ. ಆದರೆ ಮೋಸದಿಂದಲ್ಲ! ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಪ್ರತಿಸ್ಪರ್ಧಿಯೊಂದಿಗೆ ಪ್ರಯೋಗ

ಮಾಡುವುದು. ಯುದ್ದಗಳನ್ನು ಯಾಕೆ ಕೈಗೊಳ್ಳುತ್ತಿದ್ದರು? ಎಂಬ ಪ್ರಶ್ನೆ ನಮಗೆ ಮೂಡುವುದು ಸಹಜವೇ. ಹಿಂದಿನ ಕಾಲದಲ್ಲಿ ಒಂದು ರಾಷ್ಟ್ರ ರಕ್ಷಣೆಗಾಗಿ, ಮತ್ತೊಂದು ರಾಜರ ಪ್ರತಿಷ್ಠೆಗಾಗಿ ಯುದ್ದಗಳನ್ನು ಕೈಗೊಳ್ಳುತ್ತಿದ್ದರು. ಅದರಲ್ಲೂ ಕರ್ನಾಟಕದ ಯುದ್ದನೀತಿ ಎಂಬುದು ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. 'ಪ್ರಾಚೀನ ಕರ್ನಾಟಕದ ಯುದ್ದ ಕಲೆಯನ್ನು ಕುರಿತು ಸಂಶೋಧನೆ ನಡೆಸುವುದು ಎಂದರೆ ವೀರಯುಗವನ್ನು ದರ್ಶನ ಮಾಡಿದಂತೆ'[2] ಎಂದು ವಿದ್ವಾಂಸರು ಅಭಿಪ್ರಾಯಿಸಿದ್ದಾರೆ. ಈ ಮಾತಿನ ಹಿನ್ನೆಲೆಯಲ್ಲಿ ತಿಳಿದು ಬರುವ ಅಂಶವೇನೆಂದರೆ; ಪ್ರಾಚೀನ ಕಾಲದಲ್ಲಿ ಯುದ್ದಕ್ಕೆ, ವೀರತ್ವಕ್ಕೆ ಎಷ್ಟು ಮಹತ್ವವಿತ್ತೆಂದು ತಿಳಿದು ಬರುತ್ತದೆ. ಕರುನಾಡಿನ ರಾಜರು ಒಂದು ವಿಶಿಷ್ಟವಾದ ರೀತಿಯಲ್ಲಿ ಯುದ್ದನೀತಿಯನ್ನು ಕಾಯ್ದುಕೊಂಡಿದ್ದರು.

ಕರ್ನಾಟಕದ ರಾಜರು ಯಾವುದೇ ರಾಜ್ಯದ ಮೇಲೆ ಏಕಾಏಕಿ ದಾಳಿ ಮಾಡುತ್ತಿರಲಿಲ್ಲ. ಬದಲಾಗಿ ಮೊದಲಿಗೆ ತಾವು ಯಾವ ರಾಜ್ಯದ ಮೇಲೆ ದಂಡೆತ್ತಿ ಹೋಗಬೇಕೆಂದು ನಿಶ್ಚಯಿಸಿರುತ್ತಾರೋ, ಆ ಸಾಮ್ರಾಜ್ಯಕ್ಕೆ ಮೊದಲು ಒಂದು ಓಲೆಯನ್ನು ಕಳುಹಿಸುತ್ತಿದ್ದರು. ಕಳುಹಿಸಿದ್ದಾದ ಮೇಲೆ ಅವರ ಪ್ರತಿಕ್ರಿಯೆಯನ್ನು ನೋಡಿಕೊಂಡು ಮುಂದುವರೆಯುತ್ತಿದ್ದರು. ಅಂದರೆ 'ನಾವು ನಿಮ್ಮ ಸಾಮ್ರಾಜ್ಯದ ಮೇಲೆ ದಂಡೆತ್ತಿ ಬರಲು ಯತ್ನಿಸಿದ್ದೇವೆ. ಹಾಗಾಗಿ ನಮ್ಮ ಜೊತೆ ಕಾದಾಡಲು ನಿಮಗೆ ಶಕ್ತಿ ಸಾಮರ್ಥ್ಯವಿದ್ದರೆ ನೀವೇ ಸ್ಥಳ, ಕಾಲ ತಿಳಿಸಿರೆಂದೂ', ಶಕ್ತಿ ಸಾಮರ್ಥ್ಯಗಳಿಲ್ಲದೇ ಹೋದಲ್ಲಿ 'ನಾವು ನಿಮ್ಮೊಂದಿಗೆ ಕಾದಾಡಲು ಆಗುವುದಿಲ್ಲ, ತಮಗೆ ಶರಣಾಗುತ್ತೇವೆ' ಎಂತಲೂ ಬೇರೆ ಸಾಮ್ರಾಜ್ಯದ ಇಂಗಿತವನ್ನು ಅರಿತು ನಡೆಯುತ್ತಿದ್ದರು. ಅಲ್ಲದೆ ಅನವಶ್ಯಕವಾಗಿ ಅಮಾಯಕ ಪ್ರಜೆಗಳು, ಪ್ರಾಣಿಗಳು ಸಾಯುವುದು ಬೇಡವೆಂಬ ಮನೋಧರ್ಮ. ಹಾಗೆನೇ ವ್ಯರ್ಥವಾದ ರೀತಿಯಲ್ಲಿ ರಾಜ್ಯದ ಸಂಪತ್ತು ಹಾಳಾಗುವುದು ಬೇಡ ಎಂಬ ಆಲೋಚನೆ ನಾಡಿನ ರಾಜರದ್ದಾಗಿತ್ತು. ಇಂತಹ ದೃಶ್ಯಗಳನ್ನು ನಾವು ಭರತ–ಬಾಹುಬಲಿ ಸಂಘರ್ಷದಲ್ಲಿಯೂ ನೋಡಬಹುದು. ಭರತ ತಮ್ಮನಾದ

ಬಾಹುಬಲಿಯನ್ನು ಯುದ್ಧಕ್ಕೆ ಆಹ್ವಾನಿಸಿದಾಗ, ಬಾಹುಬಲಿ 'ನನ್ನ ಮತ್ತು ನಿನ್ನ ಸಾಮರ್ಥ್ಯದ ಪರೀಕ್ಷೆಯಲ್ಲಿ ಅಮಾಯಕ ಪ್ರಜೆಗಳು, ಮೂಕ ಪ್ರಾಣಿಗಳು ಸಾಯುವುದು ಬೇಡ. ಕಾದಾಡುವುದಾದರೆ; ನಾವಿಬ್ಬರೇ ಕಾದಾಡೋಣ'ವೆಂದು ಎಂದು ಹೇಳುತ್ತಾನೆ. ಇಲ್ಲಿ ಬಾಹುಬಲಿಯ ರಾಜಧರ್ಮವನ್ನು ಕಾಣಬಹುದು. ಇದು ಈ ನೆಲದ ಸಂಸ್ಕೃತಿ. ಇನ್ನೊಬ್ಬರಿಗೆ ಅನಾಯಸವಾಗಿ ಏನೂ ತೊದರೆಯಾಗಬಾರದು ಎಂಬ ಭಾವನೆ ಬಹುದೊಡ್ಡ ಗುಣವಾಗುತ್ತದೆ.

ಕರ್ನಾಟಕ ಸಂಸ್ಕೃತಿ: ವೀರತನ

ಕರ್ನಾಟಕ ಸ್ವಾಭಿಮಾನಕ್ಕೆ ಹೆಸರಾದಂತಹ ನಾಡು. ವೀರತ್ವಕ್ಕೆ, ವೀರತನಕ್ಕೆ ಈ ನಾಡೇ ಸಾಕ್ಷಿ ಎಂದು ಹೇಳಬಹುದು. ಹಿಂದಿನ ಕಾಲದಲ್ಲಿ ಪ್ರತಿ ಮನೆಯಿಂದ ಒಬ್ಬ ವ್ಯಕ್ತಿ ಸೈನ್ಯಕ್ಕೆ ಸೇರಬೇಕಾಗಿತ್ತು. ಅದು ಅಂದಿನ ಸಮಾಜ ಅಥವಾ ಪ್ರಭುತ್ವದ ನಿಯಮವೂ ಆಗಿತ್ತು. ಹೀಗಾಗಿ ಯುದ್ಧಗಳಲ್ಲಿ ಪಾಲ್ಗೊಳ್ಳುವುದು, ನಾಡಿಗಾಗಿ ಪ್ರಾಣ ತೆತ್ತುವುದೆಂದರೆ ನಾಡಿನ ವೀರರಿಗೆ ಪರಮ ಉತ್ಸಾಹ. 'ದೇಹವೆನ್ನುವುದು ಅಶಾಶ್ವತವಾದುದು, ಕೀರ್ತಿಯು ಚಿರಸ್ಥಾಯಿಯಾದುದು. ಅಶಾಶ್ವತವಾದ ದೇಹವು ಹೋದರೂ ಹೋಗಲಿ, ಶಾಶ್ವತವಾದ ಕೀರ್ತಿಯನ್ನು ಸಂಪಾದಿಸಬೇಕೆಂಬುದು ಜನರ ಬಯಕೆಯಾಗಿತ್ತು'[3]. ಆದ್ದರಿಂದಲೇ ಕರ್ನಾಟಕದ ವೀರರು 'ಗೆದ್ದರೆ ಕೀರ್ತಿ, ಸತ್ತರೆ ವೀರ ಸ್ವರ್ಗ' ಎಂಬ ಘೋಷವಾಕ್ಯದೊಂದಿಗೆ ಉತ್ಸಾಹಿಗಳಾಗಿ ಯುದ್ಧಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಇಂತಹ ಪ್ರಕ್ರಿಯೆಗಳು ಗತಕಾಲದ ನಮ್ಮ ಸಂಸ್ಕೃತಿಯನ್ನು ಹೇಳುತ್ತವೆ. ಇದಕ್ಕೆ ಶಾಸನ ಪ್ರಬೇಧಗಳಲ್ಲಿ ಕಂಡು ಬರುವ ವೀರಗಲ್ಲುಗಳೇ ನಿದರ್ಶನ.

ಕರ್ನಾಟಕ ಸಂಸ್ಕೃತಿ: ಧರ್ಮ ಸಮನ್ವಯತೆ

ಕರ್ನಾಟಕ ಹಿಂದೂ, ಕ್ರೈಸ್ತ, ಮುಸಲ್ಮಾನ, ಬೌದ್ಧ, ಜೈನ ಮುಂತಾದ ಧರ್ಮಗಳಿಗೆ ಆಶ್ರಯವನ್ನು ಕೊಟ್ಟ ಶ್ರೇಷ್ಟ ನಾಡು. ಹೀಗೆ ಎಲ್ಲಾ ಧರ್ಮಗಳನ್ನುಸಮಾನ ಭಾವನೆಯಿಂದ ಕಾಣುವ ಸಮನ್ವಯ ಸಂಸ್ಕೃತಿ ಈ ಮಣ್ಣಿನ ಸಹಜ ಗುಣವಾಗಿದೆ. ಈ ಕೆಳಗಿನ ಬೇಲೂರಿನ ಶಾಸನವೊಂದು

ಧಾರ್ಮಿಕ ಕ್ಷೇತ್ರಕ್ಕೆ ಈ ನಾಡಿನ ಕೊಡುಗೆ ಏನೆಂಬುದನ್ನು ತಿಳಿಸುತ್ತದೆ.

'ಯಂ ಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ।
ಬೌದ್ಧಾ ಬುದ್ಧ ಇತಿ ಪ್ರಮಾಣ ಪಟವಃ ಕರ್ತೇತಿ ನೈಯಾಯಿಕಾಃ॥
ಅರ್ಹನ್ನಿತ್ಯಥ ಜೈನ ಶಾಸನ ರತಾಃ ಕರ್ಮೇತಿ ಮೀಮಾಂಸಕಾಃ।
ಸೋಯಂ ವೋ ವಿಧಧಾತು ವಾಂಛಿತ ಫಲಂ ಶ್ರೀಕೇಶವೇಸ್ಸದಾ॥'[4]

ಎಂದು ಹೇಳುವಲ್ಲಿ ಶಿವ, ವಿಷ್ಣು, ಜಿನ, ಬುದ್ಧ ಹೀಗೆ ಹಲವಾರು ನಾಮಗಳನ್ನು ಹೊಂದಿರುವ ವಿಶ್ವಚೇತನ ಶಕ್ತಿಯೊಂದೆ, ಹೀಗಾಗಿ ಯಾವ ಧರ್ಮಕ್ಕೂ, ಅವರ ನಂಬಿಕೆಗಳಿಗೆ ಧಕ್ಕೆಯಾಗದ ಹಾಗೆ ಎಲ್ಲವನ್ನೂ ಸಮಾನವಾದ ರೀತಿಯಲ್ಲಿ ಅಳವಡಿಸಿಕೊಂಡು ಹೋಗುವುದೇ ಧರ್ಮ ಎಂಬುದನ್ನು ಮೇಲಿನ ಶಾಸನದ ಸಾಲುಗಳು ಅರ್ಥೈಸುತ್ತವೆ. ಈ ನಿಟ್ಟಿನಲ್ಲಿ ಇತರೆ ಧರ್ಮಗಳು ನಮ್ಮಲ್ಲಿ ಆಳ್ವಿಕೆಯಲ್ಲಿದ್ದರೂ ಸಹ ರಾಜರು ಎಲ್ಲರನ್ನೂ ಸಮಾನತೆಯಿಂದ ಕಾಣುತ್ತಿದ್ದರು. ಇದೇ ರೀತಿಯಲ್ಲಿ ಈ ಧರ್ಮ ಸಮನ್ವಯತೆಗೆ 'ಬುಕ್ಕರಾಯನ ಶಾಸನ'ವು ಮತ್ತೊಂದು ಸಾಕ್ಷಿಯಾಗಿದೆ. ಈ ಸಮನ್ವಯತೆ ಎಂಬ ದೊಡ್ಡ ಗುಣ ನಮ್ಮ ಕರ್ನಾಟಕ ಸಂಸ್ಕೃತಿಯ ಒಂದು ಭಾಗವಾಗಿದೆ ಎಂದರೆ ತಪ್ಪಾಗಲಾರದು.

ಕರ್ನಾಟಕ ಸಂಸ್ಕೃತಿ: ಸಿಡಿತಲೆ

ರಾಜನಿಗೆ ಮಕ್ಕಳಾಗದಿದ್ದ ಸಂದರ್ಭದಲ್ಲಿ ರಾಜನ ಆಶ್ರಯ ಪಡೆದಿರುವ ವ್ಯಕ್ತಿ; ರಾಜನಿಗೆ ಮಕ್ಕಳಾದಲ್ಲಿ ನನ್ನ ತಲೆಯನ್ನು ಸಿಡಿತಲೆಯನ್ನಾಗಿ ಕೊಡುತ್ತೇನೆ ಎಂದು ಹರಕೆ ಹೊತ್ತುಕೊಳ್ಳುತ್ತಿದ್ದನು. ಆ ಪ್ರಕಾರವಾಗಿ ತನ್ನ ತಲೆಯನ್ನು ಸಿಡಿತಲೆಯನ್ನಾಗಿ ಬಲಿಕೊಡುತ್ತಿದ್ದನು. ಇಂತಹ ಕ್ರಮಕ್ಕೆ ಸಿಡಿತಲೆ ಎಂದು ಕರೆಯುವರು. (ಸಿಡಿತಲೆಯ ಹೆಚ್ಚಿನ ವಿವರಗಳಿಗೆ ಶಾಂಸ್ಕೃತಿಕ ಪಠ್ಯ, ಹಂಪನಾ ಅವರ ಕರ್ನಾಟಕ ಸಂಸ್ಕೃತಿ ಲೇಖನವನ್ನು ನೋಡಬಹುದು). ಈ ಪದ್ದತಿ ನಮ್ಮಲ್ಲಿ ಅಯ್ಯೋ! ಎನ್ನುವ ಕರುಣಾಭಾವನೆ ಬಂದರೂ ಸಹ ಹಿಂದಿನ ಕಾಲದಲ್ಲಿ ಇದೊಂದು ಈ ನಾಡಿನ ಸಂಸ್ಕೃತಿಯಾಗಿತ್ತು.

ಕರ್ನಾಟಕ ಸಂಸ್ಕೃತಿ: ಜೋಳವಾಳಿ ಅಥವಾ ವೇಳೆವಾಳಿ

ಹಿಂದಿನ ಕಾಲದಲ್ಲಿ ಈ ಜೋಳವಾಳಿ ಮತ್ತು ವೇಳೆವಾಳಿ ಎಂಬುವು

ನಿರ್ದಿಷ್ಟವಾದ ವೃತ್ತಿಗಳಾಗಿದ್ದವು. ಇವು ವೃತ್ತಿಗಳೇ ಅಥವಾ ಜವಾಬ್ದಾರಿಗಳೇ ಆಗಿದ್ದರೂ, ನಡೆದು ಕೊಳ್ಳುವ ಸ್ವಾಮಿನಿಷ್ಠೆ ಇದೆಯಲ್ಲಾ! ಅದು ನಮ್ಮ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಜೋಳ ಎಂದರೆ ಒಂದು ವಿಧಧ ಧಾನ್ಯ ಅಥವಾ ಆಹಾರ ಎಂದರ್ಥ. ಪಾಳಿ(ಪಾಲಿ) ಎಂದರೆ ಕರ್ತವ್ಯ ಎಂದರ್ಥ. ಅಂದರೆ ಅನ್ನವನ್ನು ಹಾಕಿ ಸಾಕಿದ ಒಡೆಯನಿಗೆ ಕಷ್ಟ ಬಂದಾಗ, ಒಡೆಯನಿಗೋಸ್ಕರ ಸಹಾಯ ಮಾಡುವುದು. ಉದಾಹರಣೆಗೆ ಯುದ್ದವು ಒದಗಿ ಬಂದಾಗ ಯುದ್ದ ಕಾಲದಲ್ಲಿ ಯುದ್ದ ಭೂಮಿಯಲ್ಲಿ ರಾಜನ ಪರವಾಗಿ ಹೋರಾಡುವುದು. ಇದೊಂದು ಕೃತಾರ್ತವಾದ ಕೆಲಸವಾಗಿದೆ. ಇದು ನಮ್ಮ ಸಂಸ್ಕೃತಿಯ ಇನ್ನೊಂದು ಮುಖವನ್ನು ತೋರಿಸುತ್ತದೆ. ಇದೇ ರೀತಿಯಲ್ಲಿ ಹಿಂದಿನ ಕಾಲದಲ್ಲಿ ವೇಳೆವಾಳಿ ಎಂಬ ಪದ್ದತಿ ರೂಢಿಯಲ್ಲಿತ್ತು. ವೇಳೆವಾಳಿ ಎಂದರೆ ರಾಜನಿಗೆ ಅನ್ನದ ಋಣವನ್ನು ತೀರಿಸುವುದಾಗಿದೆ. ಇದೊಂದು ರೀತಿಯಲ್ಲಿ ಕ್ರತಜ್ಞತೆಯ ಪರಾಕಾಷ್ಠೆ ಎಂದು ಹೇಳಬಹುದು. ಅಂದರೆ 'ತಮಗೆ ಅನ್ನವನ್ನಿಟ್ಟ ಒಡೆಯನು ಮಡಿದರೆ ತಾವೂ ಮಡಿಯುವುದಾಗಿ ಹಲವರು (ವೇಳವಡಿಚರು) ಪ್ರತಿಜ್ಞೆಯನ್ನು ಕೈಗೊಳ್ಳುತ್ತಿದ್ದರು'[5]. ಹೀಗೆ ಪ್ರತಿಜ್ಞೆ ಮಾಡಿದಂತೆ ತನ್ನ ಒಡೆಯ ಸತ್ತಾಗ ತಾನೂ ಆತ್ಮಹತ್ಯೆ ಅಥವಾ ಪ್ರಾಣ ಕಳೆದುಕೊಳ್ಳುತ್ತಿದ್ದನು. ಇದು ನಮಗೆ ಆಶ್ಚರ್ಯ ಅನಿಸಿದರೂ ಸಹ ಹಿಂದಿನ ಕಾಲದಲ್ಲಿ ಇದನ್ನು ಪಾಲಿಸುತ್ತಿದ್ದರು. ಇದು ಮುಂದೆ ಸಂಸ್ಕೃತಿ ಭಾಗವಾಗಿ ಬೆಳೆಯುತ್ತಾ ಹೋಯಿತು. ವಾಸ್ತವ ಸಂದರ್ಭಗಳಲ್ಲಿ ಇವುಗಳನ್ನೆ ಸಂಸ್ಕೃತಿಯ ದೃಷಿಕೋನದಲ್ಲಿ ಅಭ್ಯಸಿಸುತ್ತಿದ್ದೇವೆ.

ಕರ್ನಾಟಕ ಸಂಸ್ಕೃತಿ: ಪರಾಕ್ರಮ ಅಥವಾ ಔದಾರ್ಯ

ಕರ್ನಾಟಕವು ಮೊದಲಿನಿಂದಲೂ ಶೌರ್ಯ ಮತ್ತು ಧೈರ್ಯಕ್ಕೆ ಪ್ರಸಿದ್ದಿಯನ್ನು ಪಡೆದಿದೆ. ಈ ನಾಡಿನ ರಾಜರು ತಮ್ಮ ಮಹತ್ವ ಚರಿತ್ರೆಯುದ್ದಕ್ಕೂ ಚಿರಸ್ಥಾಯಿಯಾಗಿ ಇರಬೇಕೆಂಬ ಉದ್ದೇಶದಿಂದ ಕೆಲವು ಸಾಹಸಗಳನ್ನು ಮೆರೆಯುತ್ತಿದ್ದರು. ತಮ್ಮ ಪರಾಕ್ರಮವನ್ನು ರಾರಾಜಿಸಲು ರಾಜರು ಕುದುರೆಗಳನ್ನು ಗಂಗೆಯಲ್ಲಿ ಮೀಯಿಸಿ ನೇಪಾಳದ ತಪ್ಪಲಲ್ಲಿ ಅವುಗಳನ್ನು ಮೇಯಿಸಿಕೊಂಡು ಬರುತ್ತಿದ್ದರು. ಇದು ಪರಾಕ್ರಮ ಮತ್ತು ಔದಾರ್ಯಕ್ಕೆ ಸಾಕ್ಷಿಯಾಗಿದೆ. ಇಂದಿಗೂ

ನೇಪಾಳ, ಮಹಾರಾಷ್ಟ್ರ, ಒರಿಸ್ಸಾ, ಜೋಧಪುರ್ ಮುಂತಾದ ಪ್ರದೇಶಗಳಲ್ಲಿ ಈ ಬಗೆಯ ಉಲ್ಲೇಖಗಳಿವೆ.

ಈ ಘಟನೆಗಳು ನಮಗೆ ಕ್ಷುಲ್ಲಕವೆನಿಸಿದರೂ ಸಹ ಹಿಂದೆ ಪರಾಕ್ರಮತೆಯನ್ನು ಬೀರುವ ಸಾಹಸ ಗಾಥೆಗಳಾಗಿದ್ದವು. ಅದು ರಾಜನ ಸಾಹಸ ಮನೋಪ್ರವೃತ್ತಿಗೆ ಸಂಬಂಧಿಸಿದ್ದೇ ಅದರೂ ಅದರ ನೆಲೆಯಲ್ಲಿಯೇ ರಾಜ್ಯದ ಪ್ರತಿಷ್ಠೆಯನ್ನು, ಸಂಸ್ಕೃತಿಯನ್ನು ನೋಡುತ್ತೇವೆ.

ಕರ್ನಾಟಕ ಸಂಸ್ಕೃತಿ: ಮಾಸ್ತಿಕಲ್ಲುಗಳು

ಮಹಾಸತಿಯ ನೆನಪಿಗಾಗಿ ನೆಡುವ ಕಲ್ಲನ್ನು ಮಾಸ್ತಿಕಲ್ಲು ಎಂದು ಕರೆಯುತ್ತೇವೆ. ಹಿಂದಿನ ಕಾಲದಲ್ಲಿನ ಸತಿಸಹಗಮನ ಪದ್ಧತಿಯಲ್ಲಿ 'ಪತಿಯೇ ಪರದೈವ' ಎಂಬ ಭಾವನೆಯನ್ನು ಬಿಂಬಿಸಲಾಗಿತ್ತು. ಇದರಿಂದ ತನ್ನ ಗಂಡ ಒಂದು ವೇಳೆ ಸತ್ತು ಹೋದ ಸಂದರ್ಭದಲ್ಲಿ ಗಂಡನ ಚಿತೆಯಲ್ಲಿ ಜೀವ ಸಮೇತವಾಗಿ ಆಕೆ ಸಾಯಬೇಕಿತ್ತು. ಹಾಗಾಗಿ ಅಂತಹ ಮಹಾನ್ ಕಾರ್ಯವನ್ನು ಮೆರೆದ ಆ ಸತಿಯ ಜ್ಞಾಪಕಾರ್ಥವಾಗಿ ಒಂದು ಕಲ್ಲನ್ನು ನೆಡುತ್ತಿದ್ದರು. ಅದನ್ನೇ ಮಾಸ್ತಿಕಲ್ಲುಗಳು ಎನ್ನುವರು. ಈ ಒಂದು ಮಾಸ್ತಿಕಲ್ಲುಗಳ ಹಿನ್ನೆಲೆಯನ್ನು ಗ್ರಹಿಸಿದಾಗ ಇಷ್ಟೊಂದು ಕ್ರೂರವಾದ ಪದ್ಧತಿ ಹಿಂದಿನ ಕಾಲದಲ್ಲಿ ಅಳವಡಿಕೆಯಲ್ಲಿತ್ತೇ? ಎಂಬ ಅನುಮಾನ ನಮ್ಮನ್ನು ಕಾಡದೀರದು. ಯಾಕೆಂದರೆ ಇಂದಿನ ವರ್ತಮಾನ ಕಾಲದಲ್ಲಿ ದೇಹಕ್ಕೆ ಕೇವಲ ಒಂದು ಬೆಂಕಿಯ ಕಿಡಿ ತಾಕಿದರೆ ಸಾಕು; ನಾವು ಅಯ್ಯೋ!, ಅಬ್ಬಾ! ಎಂದು ಚೀರಾಡುತ್ತೇವೆ. ಆದರೆ ಹಿಂದಿನ ಕಾಲದಲ್ಲಿ ಸತ್ತಂತಹ ತನ್ನ ಗಂಡನ ಚಿತೆಯಲ್ಲಿ ಮುಗ್ಧ ಮಹಿಳೆ ಬೆಂದಬೇಕಾದರೆ ಎಷ್ಟೊಂದು ತೀವ್ರತರವಾದ ನೋವು ಅನುಭವಿಸಿರಬಹುದು. ಆದರೆ ಅಂದಿನ ಸಮಾಜ ಇದನ್ನು ಕಡ್ಡಾಯವಾಗಿ ಒಪ್ಪಿಕೊಂಡಿತ್ತು. ಹಾಗೆನೇ ಅದನ್ನು ಚಾಚು ತಪ್ಪದೆ ಪಾಲಿಸುತ್ತಿತ್ತು. ಅದು ನಮ್ಮ ಸಂಸ್ಕೃತಿಯ ಒಂದು ಭಾಗವಾಗಿತ್ತು.

ಕರ್ನಾಟಕ ಸಂಸ್ಕೃತಿ: ವೀರಗಲ್ಲುಗಳು

ನಾಡಿನ ಇತಿಹಾಸವನ್ನು ತಿಳಿಸುವಲ್ಲಿ, ಸಂಸ್ಕೃತಿಯನ್ನು ತಿಳಿಸುವಲ್ಲಿ

ವೀರಗಲ್ಲುಗಳು ಪ್ರಮುಖ ಪಾತ್ರ ವಹಿಸುತ್ತವೆ. 'ಯುದ್ಧದಲ್ಲಿ ಹೋರಾಡಿ ಮಡಿದ ವೀರರ ಸ್ಮಾರಕವಾಗಿ ನಿಲ್ಲಿಸುವ ಕಲ್ಲುಗಳೇ ವೀರಗಲ್ಲುಗಳು'[6]. ಅಂದರೆ ರಾಜ್ಯ ರಕ್ಷಣೆ, ಮಹಿಳೆಯ ಅತ್ಯಾಚಾರ, ಗೋವುಗಳ ಅಪಹರಣ ಸಂದರ್ಭದಲ್ಲಿ ವೀರನು ವೀರ ವೇಶದಿಂದ ಹೋರಾಡಿ ಮಡಿದರೆ, ವೀರನ ನೆನಪಿಗೋಸ್ಕರ ಹಾಕುವ ಕಲ್ಲುಗಳೇ ವೀರಗಲ್ಲುಗಳು. ನಾಡಿನುದ್ದಕ್ಕೂ ಸಿಗುವ ತುರುಗೋಳ್, ಪೆಣ್ಬುಯ್ಯಲ್, ಎರವಸ, ಊರಳಿವು ಮುಂತಾದ ವೀರಗಲ್ಲುಗಳು ಈ ನಾಡಿನ ಸಾಂಸ್ಕೃತಿಕ ಚರಿತ್ರೆಯನ್ನು ಹೇಳುತ್ತವೆ. ನಮ್ಮ ದೇಶ, ಸಂಪತ್ತು ಎಲ್ಲವನ್ನೂ ಕಾಪಾಡಬೇಕಾದುದು ನಮ್ಮೆಲ್ಲರ ಜವಾಬ್ದಾರಿ, ನಮ್ಮ ಕರ್ತವ್ಯ ಎಂದು ಪ್ರತಿಯೊಬ್ಬ ವೀರರನು ಭಾವಿಸುತ್ತಿದ್ದನು. ಹೀಗಾಗಿಯೇ ಹಿಂದಿನ ಕಾಲದಲ್ಲಿ ವೀರರು ಬಹಳ ಉತ್ಸಾಹದಿಂದ ಯುದ್ಧಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ದೇಶವನ್ನು ತಾಯಿಯಂತೆ ಭಾವಿಸಿಕೊಂಡು ಸಾವಿಗೆ ಶರಣಾಗುವುದು ಅತ್ಯಂತ ಮಹತ್ಕಾರ್ಯ. ಇಂತಹ ಅದೆಷ್ಟೋ ಕಾರ್ಯಗಳು ನಮ್ಮ ನಾಡಿನ ಸಂಸ್ಕೃತಿಯನ್ನು ಹೇಳುತ್ತವೆ. ಉದಾಹರಣೆಗೆ ಇಲ್ಲಿ ಹಲ್ಮಿಡಿ ಶಾಸನ, ಬಾದಾಮಿ ಶಾಸನ, ಕುವರ ಲಕ್ಷ್ಮಣನ ಶಾಸನ ಇತ್ಯಾದಿ ಶಾಸನಗಳನ್ನು ಅವಲೋಕನ ಮಾಡಬಹುದು.

ಕರ್ನಾಟಕ ಸಂಸ್ಕೃತಿ: ಜನಪದ ಸಾಹಿತ್ಯ

ಈ ನಾಡಿನ ಜನಪದ ಸಂಸ್ಕೃತಿ, ಸ್ವರೂಪವನ್ನು ತಿಳಿಸಿಕೊಡುವ ಏಕೈಕ ಮಾರ್ಗವೆಂದರೆ ಅದು ಜನಪದ ಸಾಹಿತ್ಯವಾಗಿದೆ. ಆನಪದ ಸಾಹಿತ್ಯವೆನ್ನುವುದು ಜನರ ಮನಸ್ಸಿನ ಅಂತರಂಗದ ಭಾವನೆಗಳನ್ನು ಅಭಿವ್ಯಕ್ತಿ ಪಡಿಸಲು ಇರುವ ಮಾಧ್ಯಮ. ಪೂರ್ವಜರು ಜೀವನದಲ್ಲಿ ತಾವು ಕಂಡುಂಡ ನೋವು–ನಲಿವು ಎಲ್ಲವೂಗಳನ್ನು ಮೌಖಿಕ ರೂಪದಲ್ಲಿ ಕಟ್ಟಿ ಹಾಡುತ್ತಿದ್ದರು. ಕಥೆ ಕಟ್ಟುತ್ತಿದ್ದರು. ಜನಪದ ಸಾಹಿತ್ಯದ ಮೂಲಕ ನಮ್ಮ ಸಂಸ್ಕೃತಿಯ ಕನ್ನಡಿಗಳಾದ ಲಾವಣಿಗಳು, ಗರತಿಯ ಹಾಡುಗಳು, ಕೋಲಾಟ, ಯಕ್ಷಗಾನ ಬಯಲಾಟ, ತೊಗಲುಗೊಂಬೆ ಆಟ, ಹುಲಿವೇಷ, ದೇವರ ಕುಣಿತ, ಪೂಜಾ ಕುಣಿತ, ವೀರಗಾಸೆ ಮೊದಲಾದ ಜನಪದ ಸಾಹಿತ್ಯ ಪ್ರಕಾರಗಳನ್ನು ತಿಳಿಯಬಹುದು. ಇದಲ್ಲದೆ ಜನಪದ ಸಾಹಿತ್ಯದಿಂದಾಗಿ ಕರ್ನಾಟಕದ ಸಂಸ್ಕೃತಿಯ ವೈಶಿಷ್ಟ್ಯತೆಯನ್ನು ಕಾಣಬಹುದು.

ಇದಲ್ಲದೆ ಆತ್ಮಬಲಿ, ಬಲಿದಾನ, ಗರುಡ ಪದ್ದತಿ, ಜೀವನ ದೃಷ್ಟಿ ಇನ್ನೂ ಮುಂತಾದ ಅಂಶಗಳು ಕರ್ನಾಟಕ ಸಂಸ್ಕೃತಿಯ ಪ್ರತೀಕಗಳಾಗಿವೆ. 'ರಾಜನಿಗಾಗಿ ಮಡಿದ ವೀರರ ತ್ಯಾಗ, ಬಲಿದಾನಗಳ ವರ್ಣನೆ, ಸ್ಮಾರಕಗಳ ಸ್ಥಾಪನೆ ಒಂದು ದೃಷ್ಟಿಯಿಂದ ರಾಜತ್ವದ ಆರಾಧನೆ ಮತ್ತು ವೈಭವೀಕರಣದ ಸಂಕೇತ ಎಂಬ ಗ್ರಹಿಕೆ ಇಂದು ಕೆಲವರಲ್ಲಿ ಉಂಟಾಗಿದೆ. ರಾಜತ್ವದ ಶ್ರೇಷ್ಟತೆಗಾಗಿ, ರಾಜ ತೋರಿದ ಪ್ರೀತಿಗಾಗಿ ವೇಳೆವಾಳಿಗಳು ತಮ್ಮನ್ನು ತಾವು ಕೊಂದುಕೊಳ್ಳುವುದು ನ್ಯಾಯಯುತವಾದ್ದತೇ? ಎಂಬ ಅನುಮಾನವೂ ಕೆಲವು ಸಂಶೋಧಕರನ್ನು ಕಾಡಿದೆ. ರಾಜತ್ವದ ಮೌಲ್ಯಗಳನ್ನೇ ಸಾಂಸ್ಕೃತಿಕ ಮೌಲ್ಯಗಳೆಂದು ಭಾವಿಸುವುದು ಎಷ್ಟರಮಟ್ಟಿಗೆ ಸರಿ? ಸಂಸ್ಕೃತಿಯನ್ನು ಚರಿತ್ರೆಯ ಒಂದು ಭಾಗವೆಂದು ಪರಿಗಣಿಸಿದರೆ ಅದು ಕೇವಲ ರಾಜರ ಚರಿತ್ರೆಯಷ್ಟೇ ಅಲ್ಲವೇ ಇದರಿಂದಾಗಿ ಸಂಸ್ಕೃತಿಯ ಪರಿಪೂರ್ಣ ಅಧ್ಯಯನ ಆಯಿತೇ? ಎಂಬ ಪ್ರಶ್ನೆಯು ನಮ್ಮ ಮುಂದಿದೆ'[7]. ಈ ನಿಟ್ಟಿನಲ್ಲಿ ಸಂಸ್ಕೃತಿ ಪರ ವಾದ, ಚರ್ಚೆ ಮಾಡಿದಾಗ ಕೆಲವು ವಿಧಾನಗಳು ಮಾದರಿಯಾಗಿವೆ. ಮತ್ತೆ ಕೆಲವೊಂದು ವಿಧಾನಗಳು ವಾಸ್ತವಕ್ಕೆ ದೂರವಾಗಿವೆ. ಅದೇ ಏನಿದ್ದರೂ ಆಯಾ ಕಾಲಕ್ಕೆ ತಕ್ಕಂತೆ ಒಪ್ಪಿತವಾಗಿರುವುದರಿಂದ ಅಂತಹವುಗಳನ್ನು ನಮ್ಮ ಸಂಸ್ಕೃತಿಯ ಭಾಗವಾಗಿ ನೋಡಬೇಕಾಗುತ್ತದೆ.

ಕೊನೆ ಟಿಪ್ಪಣಿಗಳು :

1. ಡಾ. ಎಚ್ ತಿಪ್ಪೇರುದ್ರಸ್ವಾಮಿ,. ಕರ್ಣಾಟಕ ಸಂಸ್ಕೃತಿ ಸಮೀಕ್ಷೆ,. ಡಿ.ವಿ.ಕೆ ಮೂರ್ತಿ ಪ್ರಕಾಶನ,. ಮೈಸೂರು,. 2013,. ಪುಟ ಸಂಖ್ಯೆ 06.
2. ಡಾ. ಡಿ ಕೆ ಚಿತ್ತಯ್ಯ ಪೂಜಾರ್,. ಕನ್ನಡ ಶಾಸನಾಧ್ಯಯನದ ಬಹುಮುಖಿ ಆಯಾಮಗಳು,. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,. ಹಂಪಿ. 2010. ಪುಟ ಸಂಖ್ಯೆ 27.
3. ಡಾ. ಎಂ ಚಿದಾನಂದಮೂರ್ತಿ,. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಸಮಗ್ರ ಸಂಪುಟ 1,. ಸ್ವಪ್ನ ಬುಕ್ ಹೌಸ್,. ಬೆಂಗಳೂರು,. 2015.
4. ಡಾ. ಎಚ್ ತಿಪ್ಪೇರುದ್ರಸ್ವಾಮಿ,. ಕರ್ಣಾಟಕ ಸಂಸ್ಕೃತಿ ಸಮೀಕ್ಷೆ,. ಡಿ.ವಿ.ಕೆ

ಮೂರ್ತಿ ಪ್ರಕಾಶನ,. ಮೈಸೂರು,. 2013,. ಪುಟ ಸಂಖ್ಯೆ 263.

5. ಡಾ. ಎಂ ಚಿದಾನಂದಮೂರ್ತಿ,. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಸಮಗ್ರ ಸಂಪುಟ 1,. ಸ್ವಪ್ನ ಬುಕ್ ಹೌಸ್,. ಬೆಂಗಳೂರು,. 2015. ಪುಟ ಸಂಖ್ಯೆ 336.
6. ಎಸ್ ಎಸ್ ಭಗವತಿ ಮತ್ತು ಎಚ್ ಎಸ್ ಮೇಲಿನಮನಿ,. ಕನ್ನಡ ಶಾಸನಗಳ ಅಧ್ಯಯನ,. ವಿದ್ಯಾನಿಧಿ ಪ್ರಕಾಶನ, ಗದಗ, ವರ್ಷ 2004, ಪುಟ ಸಂಖ್ಯೆ 125.
7. ಡಾ. ಸಿ ನಾಗಭೂಷಣ,. ಕನ್ನಡ ನಾಡಿನ ಶಾಸನಗಳ ಅಧ್ಯಯನ: ಕೆಲವು ಗ್ರಹಿಕೆಗಳು,. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,. ಹಂಪಿ. 2009. ಪುಟ ಸಂಖ್ಯೆ 32 ಮತ್ತು 33.

ಲೇಖಕರು : ಡಾ. ಪ್ರಸನ್ನಕುಮಾರ್ ಕೆ
ಸಹಾಯಕ ಪ್ರಾಧ್ಯಾಪಕ
ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯ,
ಬೆಂಗಳೂರು–89

***

ಪದ್ಮಪಾಣಿ: ಅಜಂತಾದ ಸೌಂದರ್ಯ, ರಹಸ್ಯ ಮತ್ತು ದುರಂತ ಕಥಾನಕ

(ಪದ್ಮಪಾಣಿ ಕಥಾಸಂಕಲನ) ಲೇಖಕರು: ಡಾ. ಕೆ. ಎನ್. ಗಣೇಶಯ್ಯ

ಪ್ರಸ್ತುತ ಪ್ರಬಂಧವು ಡಾ. ಕೆ. ಎನ್. ಗಣೇಶಯ್ಯ ಅವರ 'ಪದ್ಮಪಾಣಿ' ಲೇಖನವನ್ನು ವಿವರವಾಗಿ ವಿಶ್ಲೇಷಿಸುತ್ತದೆ. ಈ ಲೇಖನವು ಅಜಂತಾ ಗುಹೆಗಳ ನೈಸರ್ಗಿಕ ಮತ್ತು ಆಧ್ಯಾತ್ಮಿಕ ಸೌಂದರ್ಯದ ಹಿನ್ನೆಲೆಯಲ್ಲಿ, ಪ್ರಸಿದ್ಧ 'ಪದ್ಮಪಾಣಿ' ಚಿತ್ರದ ಹಿಂದೆ ಅಡಗಿರುವ ಕಾಲ್ಪನಿಕ ಐತಿಹಾಸಿಕ ದುರಂತ ಕಥೆಯನ್ನು ಅನಾವರಣಗೊಳಿಸುತ್ತದೆ. ಲೇಖನವು ವೈಯಕ್ತಿಕ ಅನುಭವ, ಐತಿಹಾಸಿಕ ಹಿನ್ನೆಲೆ (ವಾಕಾಟಕರು, ಗುಹೆ 1ರ ನಿರ್ಮಾಣ), ಬೌದ್ಧ ತತ್ವಶಾಸ್ತ್ರ (ನಿರ್ವಾಣ, ಹೀನಾಯಾನ ಮತ್ತು ಮಹಾಯಾನದ ವ್ಯತ್ಯಾಸಗಳು), ಕಲೆ ಮತ್ತು ಮಾನವ ಸಂಬಂಧಗಳ (ಪ್ರತಿಕಾರ, ಪ್ರೀತಿ ಮತ್ತು ತ್ಯಾಗ) ಸಂಕೀರ್ಣತೆಯನ್ನು ಸಂಯೋಜಿಸುತ್ತದೆ.

ವಾಕಾಟಕ ರಾಜ ಹರಿಸೇನನ ರಾಣಿ ಕಮಲಾಂಬಿಕೆಯು ತನ್ನ ಹಿಂದಿನ ಪ್ರೇಮಿ ದಿನ್ನಗನ (ಬೌದ್ಧ ಗುರು) ಮೇಲೆ ಪ್ರತೀಕಾರ ತೀರಿಸಿಕೊಳ್ಳಲು, ಚಿತ್ರಕಾರ ವಿಷ್ಣುಶರ್ಮನನ್ನು ಬಳಸಿಕೊಂಡು, ಪದ್ಮಪಾಣಿಯ ಚಿತ್ರದಲ್ಲಿ ತನ್ನ ಸೌಂದರ್ಯವನ್ನು ಪ್ರತಿಬಿಂಬಿಸುವ ಕಥೆಯಿದೆ. ಕಮಲಾಂಬಿಕೆಯ ಈ ಪ್ರಯತ್ನವು ಅಂತಿಮವಾಗಿ ತನ್ನ ಮಗನ ಮುಖಾಂತರ ತಾನೇ ಆಘಾತಕ್ಕೊಳಗಾಗಿ ಬೌದ್ಧ ಭಿಕ್ಷುಣಿಯಾಗಿ ಮಾರ್ಪಾಡಾಗುವುದರೊಂದಿಗೆ ಸಮಾಪ್ತಿಗೊಳ್ಳುತ್ತದೆ. ಕೊನೆಯಲ್ಲಿ, ಕಥೆಗಾರನು

ಅನುಭವಿಸಿದ್ದು ವಾಸ್ತವವೇ ಅಥವಾ ಮಂಪರುಗಣ್ಣಿನಲ್ಲಿ ಕೇಳಿದ ಇತಿಹಾಸವೇ ಎಂಬ ಪ್ರಶ್ನೆಯೊಂದಿಗೆ ಲೇಖನವು ಪೂರ್ಣಗೊಳ್ಳುತ್ತದೆ. ಈ ಪ್ರಬಂಧವು ಅತೀಂದ್ರಿಯ ವಾಸ್ತವಿಕತೆ (Magical Realism) ಯನ್ನು ಬಳಸಿಕೊಂಡು ಕಲೆ ಮತ್ತು ಇತಿಹಾಸದ ನಡುವಿನ ಸೀಮಾರೇಖೆಯನ್ನು ಅಳಿಸುವ ಲೇಖನದ ತಾತ್ವಿಕ ವಿನ್ಯಾಸ, ಅಭಿವ್ಯಕ್ತಿಯ ಸ್ವರೂಪ, ಮತ್ತು ಸಾಹಿತ್ಯಿಕ ಮಹತ್ವವನ್ನು ಪರಿಶೋಧಿಸುತ್ತದೆ.

ಮುಖ್ಯ ಪದಭಾಗಗಳು : ಅಜಂತಾ ಗುಹೆಗಳು, ಪದ್ಮಪಾಣಿ, ಕ್ಯಾಪ್ಟನ್ ಗಿಲ್, ವಾಕಾಟಕರು, ಕಮಲಾಂಬಿಕೆ, ದಿನ್ನಗ, ವಿಷ್ಣುಶರ್ಮ, ನಿರ್ವಾಣ, ಬೌದ್ಧ ಕಲೆ, ಅತೀಂದ್ರಿಯ ವಾಸ್ತವಿಕತೆ.

ಪೀಠಿಕೆ ಮತ್ತು ಲೇಖನದ ಸ್ಥೂಲ ವಿವರಣೆ :

ಡಾ. ಕೆ. ಎನ್. ಗಣೇಶಯ್ಯ ಅವರ "ಪದ್ಮಪಾಣಿ" ಲೇಖನವು ಕಾದಂಬರಿ ಮತ್ತು ಕಲಾ ವಿಮರ್ಶೆಯ ನಡುವಿನ ಸೂಕ್ಷ್ಮ ಪ್ರದೇಶದಲ್ಲಿ ನಿಲ್ಲುವ ಒಂದು ಮಹತ್ವದ ಕಥಾ ಸಂಕಲನವಾಗಿದೆ. ಇದು ಅಜಂತಾ ಗುಹೆಗಳ ಐತಿಹಾಸಿಕ ಮತ್ತು ಕಲಾತ್ಮಕ ಹಿನ್ನೆಲೆಯನ್ನು ಆಧರಿಸಿದ ಅನನ್ಯ ಕಥನವಾಗಿದ್ದು, ಪ್ರಪಂಚದ ಶ್ರೇಷ್ಠ ಕಲಾಕೃತಿಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿರುವ 'ಪದ್ಮಪಾಣಿ' ಭಿತ್ತಿಚಿತ್ರದ ಹಿಂದೆ ಅಡಗಿರುವ ಭಾವನಾತ್ಮಕ ಮತ್ತು ವೈಯಕ್ತಿಕ ಸಂಘರ್ಷಗಳ ಕಥೆಯನ್ನು ಕಟ್ಟಿಕೊಡುತ್ತದೆ. ಲೇಖಕರು ತಮ್ಮ ವೈಯಕ್ತಿಕ ಪ್ರವಾಸದ ಅನುಭವವನ್ನು ನಿರೂಪಣೆಗೆ ಆಧಾರವಾಗಿ ಇಟ್ಟುಕೊಂಡು, ಕಲೆಯ ಸೃಷ್ಟಿಯ ಹಿಂದಿನ ಮಾನವ ಪ್ರೇರಣೆಯನ್ನು ಮತ್ತು ರಾಜ–ರಾಣಿಯರ ಜೀವನದ ರಹಸ್ಯಗಳನ್ನು ಅನ್ವೇಷಿಸುತ್ತಾರೆ. ಈ ಪ್ರಬಂಧವು ಲೇಖನದ ವಿವಿಧ ಪದರಗಳನ್ನು, ಅವುಗಳ ಐತಿಹಾಸಿಕ ಆಧಾರವನ್ನು ಮತ್ತು ಸಾಹಿತ್ಯಿಕ ಅಭಿವ್ಯಕ್ತಿಯ ಸ್ವರೂಪವನ್ನು ವಿಶ್ಲೇಷಿಸುವ ಗುರಿ ಹೊಂದಿದೆ.

ಲೇಖನವು ಲೇಖಕರು ಅಜಂತಾ ಗುಹೆಗಳಿಗೆ ಭೇಟಿ ನೀಡಿದ ಸನ್ನಿವೇಶದಿಂದ ಪ್ರಾರಂಭವಾಗುತ್ತದೆ. ಇದು ಪ್ರಮುಖವಾಗಿ ಮೂರು ಹಂತಗಳನ್ನು ಒಳಗೊಂಡಿದೆ:

• ಆರಂಭಿಕ ಅನುಭವ ಮತ್ತು ಅಡಿಪಾಯ: ನಿರೂಪಣೆಯು ವಘೋರಾ ಕಣಿವೆ ಮತ್ತು ಜಲಪಾತದ ನೈಸರ್ಗಿಕ ಸೌಂದರ್ಯದ ವರ್ಣನೆ, ಹಾಗೆಯೇ ಮಗಳು ಪುಣ್ಯಳು ಅನುಭವಿಸಿದ ಓಂಕಾರದ ಪ್ರತಿಧ್ವನಿಯ ವಿಸ್ಮಯದಿಂದ ಆರಂಭವಾಗುತ್ತದೆ. ಲೇಖಕರು ಗುಹೆ–1ರ ಕತ್ತಲ ಕೋಣೆಯಲ್ಲಿ ಅದೇ ಅಲೌಕಿಕ ಅನುಭವವನ್ನು ಪಡೆದು, ಕಥಾನಕಕ್ಕೆ ವೇದಿಕೆ ಸಿದ್ಧಪಡಿಸುತ್ತಾರೆ.

• ಕಥಾನಕ ಮತ್ತು ದುರಂತದ ಅನಾವರಣ: ಓಂಕಾರದ ಪ್ರತಿಧ್ವನಿಯ ನಂತರ, ನಿಗೂಢ ಪಾತ್ರವಾದ ಕ್ಯಾಪ್ಟನ್ ಗಿಲ್‌ನ ಪ್ರವೇಶವಾಗುತ್ತದೆ. ಗಿಲ್ ಆ ಕತ್ತಲ ಕೋಣೆಗಳ ತಾತ್ವಿಕ ಮಹತ್ವವನ್ನು ('ನಿರ್ವಾಣಕ್ಕೆ ದಾರಿದೀಪ') ವಿವರಿಸುತ್ತಾ, ಪದ್ಮಪಾಣಿ ಚಿತ್ರದ ಹಿಂದೆ ಅಡಗಿರುವ ದುರಂತ ಕಥೆಯನ್ನು ಅನಾವರಣಗೊಳಿಸುತ್ತಾನೆ. ಈ ಕಥೆಯು ವಾಕಾಟಕ ರಾಜ ಹರಿಸೇನ, ರಾಣಿ ಕಮಲಾಂಬಿಕೆ, ಚಿತ್ರಕಾರ ವಿಷ್ಣುಶರ್ಮ ಮತ್ತು ಬೌದ್ಧ ಗುರು ದಿನ್ನಗ ಅವರ ನಡುವಿನ ಪ್ರೀತಿ, ತ್ಯಾಗ ಮತ್ತು ಪ್ರತೀಕಾರದ ಸಂಕೀರ್ಣ ಸಂಬಂಧವನ್ನು ಒಳಗೊಂಡಿದೆ. ದಿನ್ನಗ ಬೌದ್ಧ ಧರ್ಮಕ್ಕಾಗಿ ತನ್ನನ್ನು ತ್ಯಜಿಸಿದ್ದಕ್ಕೆ ಪ್ರತೀಕಾರವಾಗಿ, ಕಮಲಾಂಬಿಕೆಯು ವಿಷ್ಣುಶರ್ಮನಿಂದ ಪದ್ಮಪಾಣಿ ಚಿತ್ರದಲ್ಲಿ ತನ್ನ ಸೌಂದರ್ಯ ಮತ್ತು ದೇಹದ ವಯ್ಯಾರವನ್ನು ತುಂಬುತ್ತಾಳೆ.

• ಸಮಾಪ್ತಿ ಮತ್ತು ಅತೀಂದ್ರಿಯ ವಾಸ್ತವಿಕತೆ: ಅಂತಿಮವಾಗಿ, ಕಮಲಾಂಬಿಕೆಯ ಮಗನು (ಹೊಸ ಚಿತ್ರಕಾರ) ಆ ಭಿತ್ತಿಚಿತ್ರದಲ್ಲಿ ತನ್ನ ತಾಯಿಯ ಸೌಂದರ್ಯವನ್ನು ಗುರುತಿಸಿದಾಗ ಆಕೆಗೆ ಆಘಾತವಾಗುತ್ತದೆ. ಈ ಆಘಾತದಿಂದ ಆಕೆ ಪಶ್ಚಾತ್ತಾಪಗೊಂಡು, ದಿನ್ನಗರ ಬಳಿ ದೀಕ್ಷೆ ಪಡೆದು ಭಿಕ್ಷುಣಿಯಾಗುತ್ತಾಳೆ. ಲೇಖಕರು ಹೊರಗೆ ಬಂದಾಗ, ಪುಣ್ಯಳು ಕ್ಯಾಪ್ಟನ್ ಗಿಲ್ ಒಬ್ಬ ಬ್ರಿಟಿಷ್ ಅಧಿಕಾರಿ, ಅವರ ವಿಷಯವನ್ನು ಹಿಂದಿನ ರಾತ್ರಿ ಮಂಪರಿನಲ್ಲಿ ಕೇಳಿಸಿಕೊಂಡಿದ್ದಾಗಿ ಘೋಷಿಸುತ್ತಾಳೆ. ಇದು ಇಡೀ ಕಥಾನಕವು ವಾಸ್ತವ ಮತ್ತು ಕಲ್ಪನೆಯ ಸಮ್ಮಿಳನವಾಗಿತ್ತು ಎಂಬುದನ್ನು ಸೂಚಿಸುವ ಮೂಲಕ ನಿರೂಪಣೆಗೆ ಸಂಶಯಾತ್ಮಕ ಸಮಾಪ್ತಿ ನೀಡುತ್ತದೆ.

ಬೌದ್ಧ ತತ್ವಶಾಸ್ತ್ರ ಮತ್ತು ಮಾನವ ಸಂಘರ್ಷ:

ಕತ್ತಲೆ ಮತ್ತು ಬೆಳಕಿನ ತತ್ವ: ಅಜ್ಞಾನದಿಂದ ಮುಕ್ತಿಯತ್ತ: ಲೇಖನದ

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025 | VOLUME: 09, ISSUE: 06, DECEMBER 2025

ಅತ್ಯಂತ ಪ್ರಬಲವಾದ ತಾತ್ವಿಕ ವಿನ್ಯಾಸವು ಅಜಂತಾದ ವಿಹಾರಗಳ ಕತ್ತಲೆ ಕೋಣೆಗಳ (Meditation Cells) ಉದ್ದೇಶದಲ್ಲಿದೆ. ಕ್ಯಾಪ್ಟನ್ ಗಿಲ್‌ನ ವಿವರಣೆಯ ಪ್ರಕಾರ, ಈ ಕೋಣೆಗಳು ಕೇವಲ ಧ್ಯಾನಕ್ಕಾಗಿ ಅಲ್ಲ; ಅವು ಓಂಕಾರದ ಪ್ರತಿಧ್ವನಿಯನ್ನು ವರ್ಧಿಸಿ, ಸಾಧಕನ ನರನಾಡಿಗಳನ್ನು ಮೀಟಿ ಆಳವಾದ ಧ್ಯಾನಕ್ಕೆ ಒಳಪಡಿಸುವ ಧ್ವನಿ ವಿಜ್ಞಾನದ (ಂಛಿoಣಥಿ) ಅದ್ಭುತವನ್ನು ಸೂಚಿಸುತ್ತವೆ. ಬೌದ್ಧ ತತ್ವಶಾಸ್ತ್ರದ ಆಧಾರದ ಮೇಲೆ, ಗಿಲ್ ಈ ಕತ್ತಲ ಕೋಣೆಗಳನ್ನು ನಿರ್ವಾಣಕ್ಕೆ ದಾರಿದೀಪ ಎಂದು ವಿವರಿಸುತ್ತಾನೆ. ಸಿದ್ಧಾರ್ಥನ ಉದಾಹರಣೆಯನ್ನು ನೀಡುವ ಮೂಲಕ, ಭೌತಿಕ ಸುಖ ಮತ್ತು ಅರಮನೆಯ ವೈಭವವು ಹೇಗೆ ಅಜ್ಞಾನದ ಕತ್ತಲೆಯ ಕೋಟೆಯಂತಿರುತ್ತದೆ ಎಂದು ವಿವರಿಸಲಾಗುತ್ತದೆ. ಈ ಕತ್ತಲ ಕೋಣೆಯಲ್ಲಿ ಕುಳಿತವರಿಗೆ, ಹೊರಗಿನ ಮಂದ ಬೆಳಕಿನ ಪದ್ಮಪಾಣಿ ಚಿತ್ರವು ಪ್ರಕಾಶಮಾನವಾಗಿ ಕಾಣಿಸುವುದು, ಸತ್ಯದ ಗ್ರಹಿಕೆಯು ಆಂತರಿಕ ದೃಷ್ಟಿಕೋನದ (Inner Eye) ಮೇಲೆ ಅವಲಂಬಿತವಾಗಿದೆ ಎಂಬುದನ್ನು ಸೂಚಿಸುತ್ತದೆ. ಈ ಮೂಲಕ, ಲೌಕಿಕ ಬಾಂಧವ್ಯಗಳ ಅಂಧಕಾರದಿಂದ ಹೊರಬಂದಾಗ ಅಥವಾ ವಿರಕ್ತಿ (detachment) ಸಾಧಿಸಿದಾಗ ಮಾತ್ರ ಸತ್ಯವು ಹೆಚ್ಚು ಸ್ಪಷ್ಟವಾಗಿ, ಪ್ರಜ್ವಲಿಸಿ ಗೋಚರಿಸುತ್ತದೆ ಎಂಬ ಬೌದ್ಧ ತತ್ವವನ್ನು ಲೇಖಕರು ಸಾರುತ್ತಾರೆ.

ಕಮಲಾಂಬಿಕೆಯ ಪ್ರತೀಕಾರ: ಸ್ತ್ರೀ ದೃಷ್ಟಿಕೋನದಿಂದ ಧರ್ಮ ವಿಮರ್ಶೆ : ಕಮಲಾಂಬಿಕೆಯ ಪಾತ್ರವು ಲೇಖನಕ್ಕೆ ಆಧುನಿಕ ಮತ್ತು ಮಾನವೀಯ ಆಯಾಮವನ್ನು ನೀಡುತ್ತಾ, ಬೌದ್ಧ ಧರ್ಮದ ಆಚರಣೆಯ ಕುರಿತು ತೀಕ್ಷ್ಣವಾದ ವಿಮರ್ಶೆಯನ್ನು ಒದಗಿಸುತ್ತದೆ. ಆಕೆ ಬೌದ್ಧ ಗುರು ದಿನ್ನಗನಿಗೆ, "ಬುದ್ಧನ ಕಾಲದಿಂದಲೂ ಹೀಗೆಯೇ ನಡೆದಿದೆ ಗಂಡಸರಿಂದ. ತಾವು ನಿರ್ವಾಣ ಹೊಂದುವ ಸೋಗಿನಲ್ಲಿ ಸ್ತ್ರೀ ಭಾವನೆಗಳ ವಧೆ ನಿರಂತರವಾಗಿ ಸಾಗುತ್ತಲೇ ಬಂದಿದೆ" ಎಂದು ಆರೋಪಿಸುವ ಮೂಲಕ, ನಿರ್ವಾಣದ ಅನ್ವೇಷಣೆಯಲ್ಲಿ ವೈಯಕ್ತಿಕ ಸಂಬಂಧಗಳು ಮತ್ತು ಸ್ತ್ರೀಯರ ತ್ಯಾಗ ಬಲಿಪಶುವಾಗುವುದನ್ನು ಪ್ರಶ್ನಿಸುತ್ತಾಳೆ. ಆಕೆ ತನ್ನ ಸೌಂದರ್ಯವೇ ತನ್ನ ಆಸ್ತಿ ಎಂದು ಘೋಷಿಸಿ, ಅದನ್ನು ಚಿತ್ರಕಲೆಯ

ಮೂಲಕ ಕಾಲಾತೀತ ಅಮರತ್ವಕ್ಕೆ ಒಯ್ಯಲು ಪ್ರಯತ್ನಿಸುತ್ತಾಳೆ. ಇದು ಲೌಕಿಕ ಸಾಧನೆ (ಸೌಂದರ್ಯದ ಮೂಲಕ ಜಗತ್ಪಸಿದ್ಧಿ) ಮತ್ತು ಅಲೌಕಿಕ ಸಾಧನೆ (ನಿರ್ವಾಣ)ಗಳ ನಡುವಿನ ಸಂಕೀರ್ಣ ಸಂಘರ್ಷ ಮತ್ತು ಸಮಾನತೆಯನ್ನು ಹುಡುಕುವ ಮಾನವ ಪ್ರಯತ್ನವನ್ನು ಪ್ರತಿನಿಧಿಸುತ್ತದೆ.

ಕಲಾ ಸೃಷ್ಟಿಯ ನೈತಿಕತೆ : ಕಲಾ ಸೃಷ್ಟಿಯ ನೈತಿಕತೆಯ ಬಗ್ಗೆಯೂ ಚರ್ಚಿಸಲಾಗಿದೆ. ದಿನ್ನಗರು ವಿಷ್ಣುಶರ್ಮನ ಚಿತ್ರಗಳಲ್ಲಿ 'ಏಕತಾನತೆ'ಯನ್ನು ಕಂಡಾಗ ವ್ಯಕ್ತಪಡಿಸಿದ ಚಿಂತೆ ಮಹತ್ವದ್ದಾಗಿದೆ. ಕಲಾವಿದನ ಕಲ್ಪನೆಗೆ ಮಿತಿ ಇರಬಾರದು, ಆದರೆ ವಿಷ್ಣುಶರ್ಮನ ಕಲ್ಪನೆಯು ಕಮಲಾಂಬಿಕೆಯ ಸೌಂದರ್ಯದ ಚೌಕಟ್ಟಿಗೆ ಬಂಧಿಯಾಯಿತು. ಕಲೆಯು ವೈಯಕ್ತಿಕ ಮೋಹ ಅಥವಾ ಆಸೆಗೆ ದಾಸ್ಯಕ್ಕೆ ಸಿಕ್ಕಿದಾಗ, ಅದರ ಸಾರ್ವತ್ರಿಕತೆ ಮತ್ತು ವೈವಿಧ್ಯತೆ ಕಡಿಮೆಯಾಗುತ್ತದೆ ಎಂಬುದನ್ನು ಈ ಅಂಶವು ಸೂಚಿಸುತ್ತದೆ.

ಅಭಿವ್ಯಕ್ತಿಯ ಸ್ವರೂಪ ಮತ್ತು ಸಾಹಿತ್ಯಿಕ ತಂತ್ರ :

ನಿರೂಪಣಾ ತಂತ್ರ: ಲೇಖಕರು, ವೀಣಾ ಮತ್ತು ಪುಣ್ಯ ಅವರ ಅಜಂತಾ ಪ್ರವಾಸದ ವಾಸ್ತವಿಕ ನಿರೂಪಣೆಯು ಹೊರಗಿನ ಚೌಕಟ್ಟಾಗಿದ್ದು, ಇದರೊಳಗೆ ಕ್ಯಾಪ್ಟನ್ ಗಿಲ್ ಹೇಳುವ ಕಮಲಾಂಬಿಕೆ, ದಿನ್ನಗ ಮತ್ತು ವಿಷ್ಣುಶರ್ಮನ ಕಲ್ಪಿತ/ಐತಿಹಾಸಿಕ ದುರಂತ ಕಥೆಯು ಹುದುಗಿದೆ. ಕಥಾನಕದ ಅಂತ್ಯದಲ್ಲಿ ಈ ಚೌಕಟ್ಟು ಮುರಿಯುತ್ತದೆ; ಗಿಲ್ ಒಬ್ಬ ಭ್ರಮೆ, ನೆನಪಿನ ಪ್ರತಿಧ್ವನಿ, ಅಥವಾ ಮಂಪರಿನಲ್ಲಿ ಕೇಳಿದ ವಾಸ್ತವ ಎಂದು ತಿಳಿದುಬರುತ್ತದೆ. ಕ್ಯಾಪ್ಟನ್ ಗಿಲ್ ಏಕಕಾಲಕ್ಕೆ ಐತಿಹಾಸಿಕ ವ್ಯಕ್ತಿ (ಅಜಂತಾ ಚಿತ್ರಗಳನ್ನು ಪ್ರತಿ ಮಾಡಿದ ಬ್ರಿಟಿಷ್ ಅಧಿಕಾರಿ) ಮತ್ತು ಭೂತಕಾಲದ ದುರಂತವನ್ನು ವಿವರಿಸುವ ಆತ್ಮ/ಕಲ್ಪನೆಯಾಗಿರುವುದು, ಲೇಖನಕ್ಕೆ ಅತೀಂದ್ರಿಯ ವಾಸ್ತವಿಕತೆಯ (Magical Realism) ಸ್ಪರ್ಶವನ್ನು ನೀಡುತ್ತದೆ. ಕಲೆಯ ರಹಸ್ಯವನ್ನು ಅನಾವರಣಗೊಳಿಸುವ ವ್ಯಕ್ತಿ ವಾಸ್ತವದಲ್ಲಿ ಇಲ್ಲದಿರುವುದು, ಕಲೆಯ ಪ್ರಭಾವವು ಕಾಲವನ್ನು ಮೀರಿ ಮನಸ್ಸಿನಲ್ಲಿ ಎಷ್ಟು ಪ್ರಬಲವಾಗಿದೆ ಎಂಬುದನ್ನು ಸೂಚಿಸುತ್ತದೆ.

ಸಾಂಕೇತಿಕತೆ (Symbolism) ಮತ್ತು ಪ್ರತಿಬಿಂಬ : ಲೇಖನದಲ್ಲಿ ಸಾಂಕೇತಿಕತೆ ಪ್ರಬಲವಾಗಿದೆ. ಪದ್ಮಪಾಣಿ ಚಿತ್ರವು ಕೇವಲ ಬೋಧಿಸತ್ವನ

ಪ್ರತಿಮೆಯಾಗಿ ಉಳಿಯದೆ, ಕಮಲಾಂಬಿಕೆಯ ಪ್ರತೀಕಾರ ಮತ್ತು ಸ್ತ್ರೀ ಸೌಂದರ್ಯದ ವಿಜೃಂಭಣೆಯ ಸಂಕೇತವಾಗಿ ಮಾರ್ಪಡುತ್ತದೆ. ವಘೋರಾ ಕಣಿವೆ ಮತ್ತು ಜಲಪಾತ ನೈಸರ್ಗಿಕ ಪ್ರಶಾಂತತೆ ಮತ್ತು ಆಧ್ಯಾತ್ಮಿಕತೆಗೆ ಸೂಕ್ತ ವಾತಾವರಣದ ಸಂಕೇತಗಳಾಗಿದ್ದರೆ, ಕ್ಯಾಪ್ಟನ್ ಗಿಲ್ ಕಲೆಯ ಮೇಲಿನ ಮಾನವನ ಮೋಹ, ಅದರ ನಶ್ವರತೆ, ಮತ್ತು 2000 ವರ್ಷಗಳ ಹಿಂದಕ್ಕೆ ಹೋಗಿ ಜೀವಿಸುವ ಆನಂದದಲ್ಲಿ ಮುಳುಗಿರುವುದಾಗಿ ಹೇಳುವ ಮೂಲಕ, ಕಾಲವನ್ನು ಮೀರಿದ ಕಲೆಯ ಪ್ರಭಾವವನ್ನು ಪ್ರತಿನಿಧಿಸುತ್ತಾನೆ. ಕಥಾ ವಸ್ತುವಿನಲ್ಲಿ ಪ್ರತಿಬಿಂಬ (Mirroring) ತಂತ್ರವನ್ನು ಬಳಸಲಾಗಿದೆ: ಕಮಲಾಂಬಿಕೆಯ ಪ್ರತೀಕಾರವು ಅವಳ ಮಗನ ಮೂಲಕವೇ ತಿರುಗುಬಾಣವಾಗುತ್ತದೆ; ಮಗನು ಪದ್ಮಪಾಣಿಯ ಮುಖವನ್ನು ನೋಡಿ ಅದು ಪರಿಚಿತ ಎನಿಸಿದಾಗ, ಕಮಲಾಂಬಿಕೆಯು ತೀವ್ರ ಆಘಾತಕ್ಕೆ ಒಳಗಾಗಿ ಪಾಪಪ್ರಜ್ಞೆಯಿಂದ ಪರಿವರ್ತನೆಗೆ (ಭಿಕ್ಷುಣಿಯಾಗಿ) ದೂಡಲ್ಪಡುತ್ತಾಳೆ.

ಭಾಷಾ ಶೈಲಿ ಮತ್ತು ಅಭಿವ್ಯಕ್ತಿ :ಲೇಖನವು ನಿರೂಪಣಾತ್ಮಕ ಶೈಲಿಯಲ್ಲಿದೆ. ಕುವೆಂಪು ಅವರ ಉದ್ಧಾರದಂತಹ ಪ್ರಾಸಬದ್ಧ ವರ್ಣನೆಗಳೊಂದಿಗೆ, ಕಗ್ಗತ್ತಲೆಯ ವರ್ಣನೆಗೆ ಒಂದು ಸಾಹಿತ್ಯಿಕ ಆಯಾಮವನ್ನು ನೀಡುವ ಮೂಲಕ ಕನ್ನಡ ಸಾಹಿತ್ಯದ ಪರಂಪರೆಯೊಂದಿಗೆ ಸಂಪರ್ಕ ಕಲ್ಪಿಸುತ್ತದೆ. ಲೇಖನದಲ್ಲಿ ದೀರ್ಘ ಸಂಭಾಷಣೆಗಳನ್ನು ಬಳಸಿಕೊಂಡು ಕಥೆಯನ್ನು ಮುನ್ನಡೆಸಲಾಗುತ್ತದೆ. ದಿನ್ನಗನ ಸಂಭಾಷಣೆಗಳು ತಾರ್ಕಿಕ, ಧಾರ್ಮಿಕ ಮತ್ತು ನೈತಿಕ ನಿಯಮಗಳ ಪರ ವಾದವನ್ನು ಮಂಡಿಸಿದರೆ, ಕಮಲಾಂಬಿಕೆಯ ಮಾತುಗಳು ತೀಕ್ಷ್ಣವಾದ ಭಾವನಾತ್ಮಕ ಆವೇಶ ಮತ್ತು ಸ್ತ್ರೀ ನ್ಯಾಯದ ಪರ ವಾದದಿಂದ ಕೂಡಿವೆ. ಈ ಸಂಭಾಷಣೆಗಳು ಕಥೆಗೆ ಅಗತ್ಯವಾದ ನಾಟಕೀಯ ಸಂಘರ್ಷವನ್ನು ಒದಗಿಸುತ್ತವೆ.

ಐತಿಹಾಸಿಕ ಮತ್ತು ಕಲಾತ್ಮಕ ವಿಶ್ಲೇಷಣೆ: ವಾಸ್ತವ ಮತ್ತು ಕಲ್ಪನೆ

ಐತಿಹಾಸಿಕ ಹಿನ್ನೆಲೆ : ವಾಕಾಟಕರು ಮತ್ತು ಮಹಾಯಾನದ ಪ್ರಭಾವವು ಅಜಂತಾದ ಗುಹೆಗಳ ನಿರ್ಮಾಣದಲ್ಲಿನ ಪ್ರಮುಖ ಐತಿಹಾಸಿಕ ಬದಲಾವಣೆಗಳನ್ನು ಮತ್ತು ಘಟನೆಗಳನ್ನು ವಿವರಿಸುತ್ತದೆ. ಕ್ರಿ.ಶ. 2ನೇ ಶತಮಾನದ ನಂತರ ಬೌದ್ಧ ಧರ್ಮದ ಆಂತರಿಕ ಸಂಘರ್ಷದಿಂದ ಸ್ಥಗಿತಗೊಂಡಿದ್ದ ಗುಹಾ ನಿರ್ಮಾಣ ಕಾರ್ಯವು, 5ನೇ ಶತಮಾನದಲ್ಲಿ ಹಿಂದೂ ರಾಜ ಹರಿಸೇನನ (ವಾಕಾಟಕ)

ಆಳ್ವಿಕೆಯಲ್ಲಿ ಪುನರಾರಂಭಗೊಂಡಿತು. ಲೇಖನವು ಹರಿಸೇನ ಗುಪ್ತರ ಕಡೆಯಿಂದ ಕಮಲಾಂಬಿಕೆಯನ್ನು ವಿವಾಹವಾದ ರಾಜಕೀಯ ಸಂಬಂಧವನ್ನು ಪ್ರಮುಖ ಐತಿಹಾಸಿಕ ಅಡಿಪಾಯವಾಗಿ ಬಳಸುತ್ತದೆ. ಅತ್ಯಂತ ಗಮನಾರ್ಹ ಅಂಶವೆಂದರೆ, ಈ ಕಾಲದಲ್ಲಿ ಬೌದ್ಧ ಧರ್ಮವು ಹೀನಾಯಾನದಿಂದ ಮಹಾಯಾನಕ್ಕೆ ಬದಲಾವಣೆಗೊಂಡಿದ್ದು. ಈ ಬದಲಾವಣೆಯು ಮೂರ್ತಿಪೂಜೆಯ ವೈಭವೀಕರಣಕ್ಕೆ ಮತ್ತು ಹೆಂಗಸರಿಗೆ ಧರ್ಮಕಾರ್ಯಗಳಲ್ಲಿ ವಿಪುಲ ಅವಕಾಶಕ್ಕೆ ಕಾರಣವಾಯಿತು. ಕಮಲಾಂಬಿಕೆಯು ಈ ಬದಲಾವಣೆಯನ್ನು ಬಳಸಿಕೊಂಡು ಗುಹೆಗೆ ಪ್ರವೇಶಿಸಿ, ತನ್ನ ಕಥೆಯನ್ನು ಕಲೆಯಲ್ಲಿ ಪ್ರತಿಬಿಂಬಿಸುತ್ತಾಳೆ. ಇದಲ್ಲದೆ, ಚೀನೀ ಯಾತ್ರಿಕ ಹುಆನ್ತ್ಸಂಗ್ ಉಲ್ಲೇಖಿಸಿದಂತೆ, ದಿನ್ನಗ ಎಂಬ ಬೌದ್ಧ ಗುರು ಆ ಕಾಲದಲ್ಲಿ ಅಜಂತಾದಲ್ಲಿ ಇದ್ದುದು ಸಹ ಐತಿಹಾಸಿಕ ವಾಸ್ತವಾಂಶವಾಗಿದೆ.

ಕಲಾತ್ಮಕ ಮತ್ತು ಮಾನವೀಯ ಮಹತ್ವ : ಪದ್ಮಪಾಣಿ ಚಿತ್ರದ ಹಿಂದೆ ಅಡಗಿರುವ ಗಹನವಾದ ಕಲಾತ್ಮಕ ವಿಮರ್ಶೆಯನ್ನು ಮುಂದಿಡುತ್ತದೆ. ಚಿತ್ರಕಾರ ವಿಷ್ಣುಶರ್ಮನ ಕುಶಲತೆಯನ್ನು ಮೆಚ್ಚುವ ಲೇಖಕರು, ಆತ ಗೋಡೆಯ ಮೇಲೆ ಚಿತ್ರಿಸುವ ಮೊದಲು ರೇಷ್ಮೆ ಬಟ್ಟೆಗಳ ಮೇಲೆ ಮಾದರಿಗಳನ್ನು ತಯಾರಿಸುತ್ತಿದ್ದ ಪರಿಶ್ರಮವನ್ನು ವಿವರಿಸುತ್ತಾರೆ. ಆದರೆ, ಬೌದ್ಧ ಗುರು ದಿನ್ನಗರು, ಪದ್ಮಪಾಣಿ ಸೇರಿದಂತೆ ಎಲ್ಲಾ ಚಿತ್ರಗಳಲ್ಲಿ ಕಮಲಾಂಬಿಕೆಯ ಸೌಂದರ್ಯದ ಏಕತಾನತೆ ತುಂಬಿರುವುದನ್ನು ಗುರುತಿಸುತ್ತಾರೆ. ಕಲೆಯ ಉತ್ತುಂಗಕ್ಕೆ ಪ್ರಯತ್ನಿಸಿದ ವಿಷ್ಣುಶರ್ಮನ ಕಲ್ಪನೆಯು ಕಮಲಾಂಬಿಕೆಯ ಸೌಂದರ್ಯದ ಚೌಕಟ್ಟಿಗೆ ಬಂಧಿಯಾಯಿತು ಎಂದು ಅವರು ವಿಶ್ಲೇಷಿಸುತ್ತಾರೆ. ಈ ಮೂಲಕ, ಕಲೆಯು ಸಾರ್ವತ್ರಿಕವಾಗಿರಬೇಕೇ ಅಥವಾ ವೈಯಕ್ತಿಕ ಭಾವನೆಗಳನ್ನು ಪ್ರತಿಬಿಂಬಿಸಬೇಕೇ ಎಂಬ ಪ್ರಶ್ನೆಯನ್ನು ಲೇಖಕರು ಎತ್ತುತ್ತಾರೆ. ಅಂತಿಮವಾಗಿ, ಜಾನ್ ಗ್ರಿಫಿತ್ ಉಲ್ಲೇಖಿಸಿದಂತೆ, 'ಡೈಯಿಂಗ್ ಪ್ರಿನ್ಸೆಸ್' ಚಿತ್ರವು ಹೇಗೆ ದುಃಖ ಮತ್ತು ಭಾವನಾತ್ಮಕತೆಯನ್ನು ಹೊಂದಿದೆಯೋ, ಅದೇ ರೀತಿ ಪದ್ಮಪಾಣಿ ಚಿತ್ರವೂ ದುರಂತಮಯ ಪ್ರೀತಿ, ದ್ರೋಹ ಮತ್ತು ಪ್ರತೀಕಾರದ ಭಾವನೆಗಳನ್ನು ಅಡಗಿಸಿಕೊಂಡಿದ್ದು, ಕಲೆಯ ಸೃಷ್ಟಿಯ ಹಿಂದಿನ ನೋವು ಮತ್ತು ಭಾವನಾತ್ಮಕ ಸೆಳೆತವು ಆ ಕಲಾಕೃತಿಗೆ ಶಾಶ್ವತವಾದ ಶಕ್ತಿಯನ್ನು

ನೀಡುತ್ತದೆ ಎಂದು ಲೇಖಕರು ಪ್ರತಿಪಾದಿಸುತ್ತಾರೆ.

ತೀರ್ಮಾನ (Conclusion)

ಡಾ. ಕೆ. ಎನ್. ಗಣೇಶಯ್ಯ ಅವರ "ಪದ್ಮಪಾಣಿ" ಲೇಖನವು ಕೇವಲ ಅಜಂತಾದ ಮೇಲಿನ ಪ್ರಬಂಧವಲ್ಲ, ಬದಲಿಗೆ ಕಾದಂಬರಿ ಶೈಲಿಯಲ್ಲಿ ಇತಿಹಾಸವನ್ನು ವಿಶ್ಲೇಷಿಸುವ ಒಂದು ವಿಶಿಷ್ಟ ಮತ್ತು ಮಹತ್ವದ ಪ್ರಯತ್ನವಾಗಿದೆ. ಇದು ಕಲೆ, ಇತಿಹಾಸ, ತತ್ವಶಾಸ್ತ್ರ ಮತ್ತು ಮಾನವ ಭಾವನೆಗಳ ನಡುವಿನ ಜಟಿಲವಾದ ಸಂಬಂಧದ ಒಂದು ಅಧ್ಯಯನವಾಗಿ ಹೊರಹೊಮ್ಮುತ್ತದೆ. ಈ ಕೃತಿಯು ಅಜಂತಾದ ಭೌತಿಕ ಅದ್ಭುತಗಳಿಗಿಂತಲೂ ಹೆಚ್ಚಾಗಿ, ಆ ಚಿತ್ರಗಳ ಹಿಂದೆ ಅಡಗಿರುವ ಮಾನವ ಹೃದಯಗಳ ಸಂಕೀರ್ಣತೆಯನ್ನು ಮತ್ತು ಬೌದ್ಧ ತತ್ವಶಾಸ್ತ್ರದ ಗಹನ ಪ್ರಶ್ನೆಗಳನ್ನು ಓದುಗರ ಮುಂದಿಡುತ್ತದೆ. ಕಮಲಾಂಬಿಕೆಯ ದುರಂತ ಕಥೆಯ ಮೂಲಕ, ನಿರ್ವಾಣದ ಹಾದಿಯ ಏಕಾಂತ ಮತ್ತು ಲೌಕಿಕ ಜೀವನದ ಆಕರ್ಷಣೆಯ ನಡುವಿನ ಶಾಶ್ವತ ಸಂಘರ್ಷವನ್ನು ಲೇಖಕರು ಎತ್ತಿ ತೋರಿಸುತ್ತಾರೆ; ಪ್ರೀತಿಯ ತ್ಯಾಗ ಮತ್ತು ಪ್ರತೀಕಾರದ ಹಂಬಲವು ಹೇಗೆ ವಿಶ್ವಪ್ರಸಿದ್ಧ ಕಲಾಕೃತಿಯ ಸೃಷ್ಟಿಗೆ ಕಾರಣವಾಗಬಹುದು ಎಂಬುದನ್ನು ಇದು ನಿರೂಪಿಸುತ್ತದೆ. ಕ್ಯಾಪ್ಟನ್ ಗಿಲ್‌ನ ನಿಗೂಢ ಪಾತ್ರವು ಭೂತಕಾಲದ ನೆನಪುಗಳು ಮತ್ತು ಸತ್ಯವು ಹೇಗೆ ಅಸ್ಪಷ್ಟವಾಗಿ ಉಳಿಯಬಹುದು ಎಂಬುದನ್ನು ಸಾಂಕೇತಿಸುತ್ತದೆ. ಲೇಖನದ ಅಂತ್ಯವು ವಾಸ್ತವ ಮತ್ತು ಕನಸಿನ ನಡುವೆ ಓಲಾಡುವ ಮೂಲಕ, ಕಲೆಯ ಅನುಭವವು ಕಾಲಾತೀತ ಮತ್ತು ವೈಯಕ್ತಿಕ ಗ್ರಹಿಕೆಗೆ ಒಳಪಟ್ಟಿದೆ ಎಂಬ ತಾತ್ವಿಕ ಸತ್ಯವನ್ನು ಮನವರಿಕೆ ಮಾಡಿಕೊಡುತ್ತದೆ. ಅಂತಿಮವಾಗಿ, ಪದ್ಮಪಾಣಿಯ ಸೌಂದರ್ಯವು ಇಂದಿಗೂ ಸೂರ್ಯ–ಚಂದ್ರರಿರುವವರೆಗೆ ಉಳಿದಿದೆ ಎಂದರೆ, ಅದು ಕೇವಲ ಬುದ್ಧನ ಮಹಿಮೆಯಲ್ಲ, ಬದಲಿಗೆ ಆ ಕೃತಿಯಲ್ಲಿ ಅಡಗಿರುವ ಮನುಷ್ಯ ಹೃದಯಗಳ ನೋವು, ಹಂಬಲ ಮತ್ತು ಪ್ರತೀಕಾರದ ಪ್ರಬಲ ಶಕ್ತಿಯೂ ಆಗಿದೆ.

ಗ್ರಂಥಸೂಚಿ (References) – APA ಶೈಲಿ

1. ಪದ್ಮಪಾಣಿ (ಕಥಾಸಂಕಲನ) – ಡಾ. ಕೆ.ಎನ್ ಗಣೇಶಯ್ಯ
2. Anon. (2005). ಅಜಂತಾ ಎಲ್ಲೋರಾ: ಒಂದು ಪ್ರವಾಸಿ ಮಾರ್ಗದರ್ಶಿ. ಮಿತ್ತಲ್ ಪಬ್ಲಿಕೇಷನ್ಸ್.
3. Anon. (2006). ಅಜಂತಾ ಮತ್ತು ಎಲ್ಲೋರಾ [ವೀಡಿಯೊ ಸಿಡಿ]. ಮಹಾರಾಷ್ಟ್ರ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ.
4. ಬೆಹಲ್, ಬಿ. ಕೆ. (2004, ಸೆಪ್ಟೆಂಬರ್ 25–ಅಕ್ಟೋಬರ್ 8). ಅಜಂತಾ, ಮೂಲ ಸೆಲೆ. ಫ್ರಂಟ್‌ಲೈನ್, 21(20).
5. ಬಸ್ಸಾಗ್ಲಿ, ಎಂ. (1977). ಅಜಂತಾ. ವಿಶ್ವ ಕಲಾ ವಿಶ್ವಕೋಶದಲ್ಲಿ (ಸಂಪುಟ 1, ಪುಟಗಳು 160–178).
6. ಮಜುಂದಾರ್, ಆರ್. ಸಿ., & ಅಲ್ಟೆಕರ್, ಎ. ಎಸ್. (ಸಂ.). (1960). ವಾಕಾಟಕ–ಗುಪ್ತ ಯುಗ. (ಭಾರತೀಯ ಜನರ ಹೊಸ ಇತಿಹಾಸ ಸರಣಿ, ಸಂಪುಟ VI). ಮೋತಿಲಾಲ್ ಬನಾರಸಿದಾಸ್. (ಮೂಲ ಕೃತಿ ಪ್ರಕಟಣೆ 1946).
7. ಮಿರಾಶಿ, ವಿ. ವಿ. (1941). ಅಜಂತಾದ ಗುಹೆ ಘಿಗಿಖ ರಲ್ಲಿನ ವಾಕಾಟಕ ಶಾಸನ. (ಹೈದರಾಬಾದ್ ಪುರಾತತ್ವ ಸರಣಿ,14). ಹಿಸ್ ಹೈನೆಸ್ ದಿ ನಿಜಾಮ್ ಡೊಮಿನಿಯನ್ಸ್‌ನ ಪುರಾತತ್ವ ಇಲಾಖೆಗಾಗಿ ಬ್ಯಾಪ್ಟಿಸ್ಟ್ ಮಿಷನ್ ಪ್ರೆಸ್.
8. ರಾಧಿಕಾ ಅಬಯ್ಸೆಕರ. (2002). ಬುದ್ಧನ ಸಂಬಂಧಿಕರು ಮತ್ತು ಶಿಷ್ಯರು. ದಿ ಕಾರ್ಪೊರೇಟ್ ಬಾಡಿ ಆಫ್ ದಿ ಬುದ್ಧ ಎಜುಕೇಷನಲ್ ಫೌಂಡೇಶನ್.
9. ಸ್ಪಿಂಕ್, ಡಬ್ಲ್ಯೂ. ಎಂ. (1981). ಅಜಂತಾದ ಕಾಲಾನುಕ್ರಮ: ಗುಹೆ 1ರ ಪೋಷಣೆ. ಎ. ಕೃಷ್ಣ (ಸಂ.), ಛವಿ 2 ರಲ್ಲಿ (ಪುಟಗಳು 144–157). ಭಾರತ್ ಕಲಾ ಭವನ್. (ಮೂಲ ಕೃತಿ ಪ್ರಕಟಣೆ 1941, ನಿಜಾಮ್ಸ್ ಡೊಮಿನಿಯನ್ಸ್ ಎಂದು).

ಆಕರಗ್ರಂಥಗಳು (Additional Resources)

1. ಬೌದ್ಧ ಕಲೆ ಮತ್ತು ವಾಸ್ತುಶಿಲ್ಪದ ಕುರಿತು: ಹಂಟಿಂಗ್‌ಟನ್, ಎಸ್. ಎಲ್. (1985). ಪ್ರಾಚೀನ ಭಾರತದ ಕಲೆ: ಬೌದ್ಧ, ಹಿಂದೂ, ಜೈನ. ವೆದರ್‌ಹಿಲ್.

2. ಝಿಮ್ಮರ್, ಎಚ್. (1955). ಭಾರತೀಯ ಏಷ್ಯಾದ ಕಲೆ: ಅದರ ಪೌರಾಣಿಕ ಮತ್ತು ಧಾರ್ಮಿಕ ರೂಪಾಂತರಗಳು. ಪ್ಯಾಂಥಿಯಾನ್ ಬುಕ್ಸ್.

3. ಅಜಂತಾ ಗುಹೆಗಳ ಇತಿಹಾಸ ಮತ್ತು ಸಂರಕ್ಷಣೆ ಕುರಿತು: ಫರ್ಗುಸನ್, ಜೆ. (1879). ಭಾರತದ ಶಿಲಾ ಕೆತ್ತಿದ ದೇವಾಲಯಗಳು. ಜಾನ್ ಮರ್ರೆ.

4. ಗ್ರಿಫಿತ್ಸ್, ಜೆ. (1896). ಅಜಂತಾ, ಖಂಡೇಶ್, ಭಾರತದ ಬೌದ್ಧ ಗುಹಾ ದೇವಾಲಯಗಳ ವರ್ಣಚಿತ್ರಗಳು. ಡಬ್ಲ್ಯೂ. ಗ್ರಿಗ್ಸ್.

5. ವಾಕಾಟಕ ರಾಜವಂಶ ಮತ್ತು ಅವರ ಕಾಲದ ಇತಿಹಾಸದ ಕುರಿತು: ಜಾಮ್ಖೇಡ್ಕರ್, ಎ. ಪಿ. (2014). ಅಜಂತಾ: ಒಂದು ಸಾಂಸ್ಕೃತಿಕ ಯಾತ್ರೆ. ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್.

6. ಬೌದ್ಧ ಧರ್ಮದ ತತ್ವಶಾಸ್ತ್ರ ಮತ್ತು ಮಹಾಯಾನ ಬೌದ್ಧ ಧರ್ಮದ ಕುರಿತು: ಕಾನ್ಜ್, ಇ. (1993). ಬೌದ್ಧ ಧರ್ಮದ ಒಂದು ಕಿರು ಇತಿಹಾಸ. ಒನ್‌ವರ್ಲ್ಡ್ ಪಬ್ಲಿಕೇಷನ್ಸ್.

7. ಪವರ್ಸ್, ಜೆ. (2007). ಟಿಬೆಟಿಯನ್ ಬೌದ್ಧ ಧರ್ಮಕ್ಕೆ ಪರಿಚಯ. ಸ್ನೋ ಲಯನ್ ಪಬ್ಲಿಕೇಷನ್ಸ್.

ಲೇಖಕರು : ಮನೋಜ್.ಎಂ[1]

1. ಸಂಶೋಧನಾ ವಿದ್ಯಾರ್ಥಿ ಸಾಮಾಜಿಕ ಮತ್ತು ಮಾನವಿಕ ವಿಭಾಗ
ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು,
manojm.cssh@srinivasuniversity.edu.in,
ಸಹಾಯಕ ಪ್ರಧ್ಯಾಪಕರು, ಸಂತ ಫ್ರಾನ್ಸಿಸ್ ಕಾಲೇಜು, ಕೋರಮಂಗಲ,
ಬೆಂಗಳೂರು–34
manojm7190@gmail.com

***

ಸಾಂಸ್ಕೃತಿಕ ತಲ್ಲಣಗಳು

ಸಂಸ್ಕೃತಿ ಎಂಬ ಪದವು ಕನ್ನಡದಲ್ಲಿ ಇಂಗ್ಲೀಷಿನ (Culture) ಎಂಬ ಪದಕ್ಕೆ ಸಂವಾದಿಯಾಗಿ ಬಳಕೆಯಾಗುತ್ತಿದೆ. ಈ (Culture) ಶಬ್ದಕ್ಕೆ ಲ್ಯಾಟಿನ್ ಭಾಷೆಯ (Culture) ಎಂಬ ಶಬ್ದ ಮೂಲವಾಗಿದೆ. (Culture) ಎಂದರೆ ಲ್ಯಾಟಿನ್ ಭಾಷೆಯಲ್ಲಿ ವ್ಯವಸಾಯ ಮಾಡು, ಪರಿಷ್ಕರಿಸು, ಪೂಜೆಮಾಡು, ಗೌರವಿಸು, ಸೇವಿಸು, ನಿಷ್ಟೆತೋರು, ಲಕ್ಷ್ಯದಲ್ಲಿರಿಸು ಎಂಬಂತೆ ವಿವಿಧ ಅರ್ಥಗಳಿವೆ. ಈ ಶಬ್ದದಿಂದಲೇ ಜರ್ಮನ್ ಭಾಷೆ (Culture) ಎಂಬ ಶಬ್ದವನ್ನು ರೂಪಿಸಿಕೊಂಡ ಮೇಲೆ ಇಂಗ್ಲೀಷ್ ಭಾಷೆ ಕೂಡ (Culture) ಎಂಬ ರೂಪವನ್ನು ಸಾಧಿಸಿಕೊಂಡು ಚಲಾವಣೆಗೆ ತಂದಿತು. ಪ್ರಸಿದ್ಧ ಮಾನವಶಾಸ್ತ್ರಜ್ಞನಾದ ಇ.ಬಿ. ಟೈಲರ್ ಮೊದಲಿಗೆ ಈ (Culture) ಎಂಬ ಪದಕ್ಕೆ ಸಮಗ್ರವಾದ ವ್ಯಾಖ್ಯಾನವನ್ನು ನೀಡಿ ಜಗತ್ಪ್ರಸಿದ್ಧವಾಗುವಂತೆ ಮಾಡಿದನು. ಇವನ ನಂತರ ಮ್ಯಾಥ್ಯೂ ಅರ್ನಾಲ್ಡ್ ಭಿನ್ನ ದೃಷ್ಟಿಯಿಂದ ಸಂಸ್ಕೃತಿಯನ್ನು ವ್ಯಾಖ್ಯಾನಿಸಿದ ಟೈಲರ್‌ನದು ಮಾನವಶಾಸ್ತ್ರಜ್ಞರ ವಾಸ್ತವತಾವಾದದ ಪಂಥ. ಆರ್ನಾಲ್ಡ್ ನದು ರಮ್ಯತಾವಾದಿಗಳ ಆದರ್ಶವಾದದ ಪಂಥ.

Culture ಶಬ್ದವು ಇಂಗ್ಲೀಷ್ ನಲ್ಲಿ ಅದರ ಈಗಿನ ಅರ್ಥದಲ್ಲಿ ಹೆಚ್ಚಾಗಿ ಪ್ರಯೋಗವಾಗುತ್ತಿರುವುದು ಸುಮಾರು ನೂರೈವತ್ತು ವರ್ಷಗಳಿಂದೀಚೆಗೆ. ಈ ಪದಕ್ಕೆ ಇದೂವರೆಗೆ ಸ್ಪಷ್ಟವಾದ ಖಚಿತವಾದ ಇದಮಿತ್ಥಂ ಎಂಬ ಅರ್ಥವನ್ನು ನೀಡಲು ಸಾಧ್ಯವಾಗಿಲ್ಲ. ಇದರ ಬಗ್ಗೆ ಡಿ.ವಿ.ಜಿಯವರು ಹೀಗೆ ಹೇಳುತ್ತಾರೆ.

"ಸಂಸ್ಕೃತಿ ಶಬ್ದವು ಅರ್ಥವಿಲ್ಲದ್ದೆಂದು ಯಾರೂ ಹೇಳರು. ಅದು ಅರ್ಥವುಳ್ಳದ್ದು ಮಾತ್ರವಲ್ಲ. ಅದರ ಅರ್ಥವು ವಿಶಾಲವಾದುದು, ಬಹುಮುಖವಾದುದು ಮತ್ತು ನಮ್ಮ ಜೀವನಕ್ಕೆ ಮುಖ್ಯವಾದದ್ದು. ಯಾವ ಅಧಿಕಾರ ಪತ್ರವಾಗಲಿ, ಪ್ರಮಾಣಭೂತವಾದ ನಿಘಂಟಾಗಲಿ ಅದಕ್ಕೆ ಅರ್ಥವಿವರಣೆ ಕೊಡದಿದ್ದರೂ, ವಿದ್ವಜ್ಜನ ಪ್ರಯೋಗದಿಂದ ಅಮಾತಿನ ಅರ್ಥವನ್ನು ನಮ್ಮ ಮನಸ್ಸುಗಳಿಗೆ ವಿಶದಪಡಿಸಿಕೊಳ್ಳಬಹುದಾಗಿದೆ. ನಮಗೆ ಅತ್ಯಂತ ಸಾರವತ್ತಾಗಿ, ನಮ್ಮ ಅನುದಿನದ ಉಪಯೋಗದಲ್ಲಿರುವ ಎಷ್ಟೋ ಪದಗಳಿಗೆ ಅರ್ಥಸೂತ್ರವನ್ನು ಹೇಳುವುದು ಸುಲಭವಲ್ಲ. ಮನುಷ್ಯ ಎಂದರೆ ಏನು? ಧರ್ಮ ಎಂದರೆ ಏನು? ಇಂಥ ಪ್ರಶ್ನೆಗಳು ಕೇಳಲಿಕ್ಕೆ ಎಷ್ಟು ಸುಲಭವೋ ಉತ್ತರ ಹೇಳಲಿಕ್ಕೆ ಅಷ್ಟು ಸುಲಭವಲ್ಲ. ತೇಜಸ್ವಿಯವರು ಈ ಕುರಿತು ವ್ಯಕ್ತಿವಿಶಿಷ್ಟ ಸಿದ್ಧಾಂತದಲ್ಲಿ ಹೀಗೆ ಹೇಳುತ್ತಾರೆ:

ನಮ್ಮ ಜೀವನದ ಸಾಮಾಜಿಕ ಪರಿಸರದಲ್ಲೇ ಎಷ್ಟೋ ಪರಸ್ಪರ ವಿರುದ್ಧವಾದವು ಏಕಕಾಲದಲ್ಲಿ ಚಲಾವಣೆಯಲ್ಲಿರುತ್ತವೆ. ಸಿ.ವಿ. ರಾಮನ್ನರಿಗೊಬ್ಬರು ಬಿ.ವಿ. ರಾಮನ್ನರು, ಪತ್ರಿಕೆಯಲ್ಲಿ ಭೌತಶಾಸ್ತ್ರದ ಪುಟ ತಿರುವಿದರೆ ವಾರ ಭವಿಷ್ಯ, ಕ್ರಾಪಿನ ಹಿಂದಕ್ಕೆ ಜುಟ್ಟು ಪರಸ್ಪರ ವಿರುದ್ಧವಾದವು ಒಂದೇ ನೆತ್ತಿಯನ್ನು ಹತ್ತಿ ಕುಳಿತುಕೊಂಡಿರುತ್ತವೆ. ಇರಬಾರದೆಂದಲ್ಲ, ಒಂದಕ್ಕೊಂದಕ್ಕೆ ಸಾಂಸ್ಕೃತಿಕವಾಗಿ ಬೌದ್ಧಿಕವಾಗಿ ಅಪಾರ ಘರ್ಷಣೆ ನಡೆಯುತ್ತಿರಬೇಕು. ಆಗ ಮಾತ್ರ ಎಂಥ ಶಾಂತಿಯುತ ಸಹ ಬಾಳ್ವೆಯಲ್ಲೂ ಧರ್ಮಾಧರ್ಮ ವಿಚಾರ, ಸತ್ಯಾಸತ್ಯ ವಿವೇಚನೆ ನಡೆಯುತ್ತಿರುತ್ತದೆ. ಸಂಸ್ಕೃತಿಯೂ ವಿಸ್ತಾರಗೊಳ್ಳುತ್ತದೆ. ಆದರೆ ನಮ್ಮ ಸಹಬಾಳ್ವೆಯು ಸಲೀಸು ವಾತಾವರಣದಲ್ಲಿ ಒಳಗೊಳಗೇ ಕ್ರೋಧ ಅಂತರ್ಗಾಮಿಯಾಗಿ ಬೆಳೆದು ಸಂಸ್ಕೃತಿಯ ಛಿದ್ರತೆಯಲ್ಲಿ ಪರ್ಯಾಯ ಅವಸಾನವಾಗುತ್ತದೆ. ಈ ಗುಣ ಇದರ ಕಾರಣಗಳೆಲ್ಲ ಸಂಸ್ಕೃತಿಯ ಅತ್ಯಂತ ಸಂಕೀರ್ಣವಲಯದ ಸಿಕ್ಕುಸಿಕ್ಕುಗಳಲ್ಲಿ ಕಂಡುಹಿಡಿಯಲಾಗದಂತೆ ವಿಲೀನಗೊಂಡು ಮರೆಯಾಗಿ ಹೋಗಿದೆ. (ವ್ಯಕ್ತಿ ವಿಶಿಷ್ಟ ಸಿದ್ಧಾಂತ – ಪುಟ. 4)

ನವೋದಯ ಕಾಲ ಬಹಳ ಮುಖ್ಯ ವಿಮರ್ಶಕರಾದ ಡಿ.ವಿ.ಜಿ. ಸಂಸ್ಕೃತಿಯನ್ನು ಹೀಗೆ ವಿವರಿಸದ್ದಾರೆ. ಮನುಷ್ಯ ಪ್ರಾಣಿಯನ್ನು ಗುರುತಿಸಬಲ್ಲೆವು,

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025 | VOLUME: 09, ISSUE: 06, DECEMBER 2025

ಬೆರಳಿನಿಂದ ತೋರಿಸಬಲ್ಲೆವು, ಆದರೆ ಮಾತಿನಿಂದ ಲಕ್ಷಣ ವಿವರಣೆಕೊಡುವುದು ಕಷ್ಟ. ಆದರೂ ಉತ್ತರಗಳುಂಟು. ಅವುಗಳನ್ನು ಕಂಡುಕೊಳ್ಳುವುದು ಪರಿಶ್ರಮದಿಂದ ಸಾಧ್ಯ" (ಡಿ.ವಿ.ಜಿ. 1985, ಪುಟ. 9–10) ಎಂದರೆ 'ಸಂಸ್ಕೃತಿ' ಎಂಬ ಶಬ್ದದ ಅರ್ಥ ನೇರವಾಗಿ ಹೊಳೆಯುವುದಿಲ್ಲ. ಅದು ಇಕ್ಕಟ್ಟಿನದಾಗಿದೆ ಎಂಬುದು ಅವರ ಅಭಿಪ್ರಾಯವಾಗಿದೆ. ಪ್ರಖ್ಯಾತ ಸಮಾಜವಾದಿ ಕಿಶನ್ ಪಟ್ನಾಯಕ್ ಅವರು ಹೀಗೆ ಹೇಳುತ್ತಾರೆ.

ವ್ಯಾಪಾರದ ಮೂಲಕವಲ್ಲ, ಸಂಸ್ಕೃತಿಯ ವಿಕಾಸದ ಮೂಲಕವೇ ಮನುಷ್ಯನ ಜಾಗತೀಕರಣವಾಗಬೇಕು. ಆರ್ಥಿಕ ನೀತಿಗಳು ಹಾಗೂ ಅಭಿವೃದ್ದಿಯ ಧೋರಣೆ ಮನುಷ್ಯನ ಸಾಂಸ್ಕೃತಿಕ ಧ್ಯೇಯಗಳನ್ನು ಹಿಮ್ಮೆಟ್ಟಿಸಕೂಡದು ಎನ್ನುವುದು ಸಂಸ್ಕೃತಿಯ ಕರೆಯಾಗಿದೆ. ಹೀಗಾಗಿ ನಮ್ಮ ಕಾಲದ ಎರಡು ಸವಾಲುಗಳೆಂದರೆ (ಅ) ಮನುಷ್ಯನ ಸಂಸ್ಕೃತಿ ಹಾಗೂ ಮಾನದಂಡಗಳನ್ನು ನಾವು ಅಮೂಲಾಗ್ರವಾಗಿ ವ್ಯಾಖ್ಯೆ ಮಾಡಬೇಕಾಗಿದೆ, (ಆ) ವ್ಯಾಪಾರ ಹಾಗೂ ಅಭಿವೃದ್ಧಿಯ ನೀತಿಗಳನ್ನು ಸಾಂಸ್ಕೃತಿಕ ಧ್ಯೇಯಗಳಿಗನುಗುಣವಾಗಿ ರೂಪಿಸಬೇಕು ಮನುಷ್ಯ ಮನುಷ್ಯನ ನಡುವಣ ಅಸಮಾನತೆಯನ್ನು ಲಂಘಿಸಲಾಗದ ಕಂದರಗಳನ್ನಾಗಿಸಿ, ದೇಶಗಳ ನಡುವಣ ಅಸಮಾನತೆಯನ್ನು ಮತ್ತಷ್ಟು ಹೆಚ್ಚಿಸಿ ವ್ಯಾಪಾರದ ಜಾಗತೀಕರಣ ಮಾಡುವುದು ಸಾಧ್ಯವೇ ವಿನಾ ಮನುಷ್ಯನ ಜಾಗತೀಕರಣವನ್ನಲ್ಲ. ಮನುಷ್ಯನ ಜಾಗತೀಕರಣ ಒಂದು ಸಾಂಸ್ಕೃತಿಕ ಧ್ಯೇಯವಾಗಿದೆ. (ಪ್ರತಿಚಿಂತನೆ ಪುಟ. 25)

ವಿದ್ಯಾಪ್ರಭಾವವನ್ನಾಗಲಿ, ಸಾಹಿತ್ಯ ಮಹಿಮೆಯನ್ನಾಗಲಿ, ಸಭ್ಯಜನರ ಗುಣಗಳನ್ನಾಗಲಿ ಕುರಿತು ಹೇಳುವ ಸಂದರ್ಭದಲ್ಲಿ ಸಂಸ್ಕೃತಿ ಎಂಬ ಪದವನ್ನು ವಿಶೇಷವಾಗಿ ಬಳಸಲಾಗುತ್ತದೆ. ಈ ಮಾತು ತುಂಬಾ ಪೂರ್ವದಲ್ಲಿ ಬಳಕೆಯಾದಂತಿಲ್ಲ. ಪುರಾತನ ಗ್ರಂಥಗಳಲ್ಲಿಯೂ ಈ ರೀತಿ ಪದ ಪ್ರಯೋಗ ಕಂಡುಬರುವುದಿಲ್ಲ. ಆದರೆ ಇದಕ್ಕೆ ಸಂವಾದಿಯಾಗಿ 'ಸಂಸ್ಕಾರ' ಎಂಬ ಪದವನ್ನು ಪೂರ್ವದಲ್ಲಿ ಬಳಸಲಾಗಿದೆ. ಉದಾಹರಣೆಗೆ 'ಷೋಡಷ ಸಂಸ್ಕಾರಗಳು', 'ಬುದ್ಧಿ ಸಂಸ್ಕಾರ' ಇತ್ಯಾದಿ ಸಂಸ್ಕಾರಗೊಂಡ ಭಾಷೆ 'ಸಂಸ್ಕೃತ' ಹಾಗೆಯೇ ಒಳ್ಳೆಯ ವಿದ್ಯಾ ಸಂಸ್ಕಾರ ಹೊಂದಿದ ಮನುಷ್ಯನನ್ನು 'ಸುಸಂಸ್ಕೃತನು' ಎಂದು ಕರೆಯುವುದು

ಒಂದು ವಾಡಿಕೆಯಾಗಿತ್ತು. ಇದು ನವೋದಯ ಕಾಲದ ಚಿಂತಕರ ಅಭಿಪ್ರಾಯವಾಗಿತ್ತು. ಆದರೆ ತೇಜಸ್ವಿಯವರು ಈ ರೀತಿಯ ನಂಬಿಕೆಯವರಲ್ಲ.

'ಸಂಸ್ಕೃತಿ' ಎಂಬ ಪದವು ಇಂಗ್ಲೀಷಿನ (Culture) ಎಂಬುದಕ್ಕೆ ಸಂವಾದಿಯಾಗಿ ಬಳಕೆಯಾಗುತ್ತಾ ವ್ಯವಸಾಯಕ್ಕೆ ಸಂಬಂಧಿಸಿದಂತೆ ವಿವಿಧ ಪರಿಭಾಷೆಯಲ್ಲಿ ಚಲಾವಣೆಗೆ ಬಂದಿರುವುದನ್ನು ಕಾಣುತ್ತೇವೆ. 'Agriculture' ಎಂದರೆ ಭೂವ್ಯವಸಾಯ ಇದರಿಂದ ಬೆಳೆಗಳನ್ನು ಬೆಳೆಯುವುದು. 'ಹಾರ್ಟಿಕಲ್ಚರ್' (ತೋಟಬೆಳೆಸುವುದು) ಆರ್ಬೊರಿಕಲ್ಚರ್ (ಮರ, ಪೊದೆಗಳನ್ನು ಬೆಳೆಸುವುದು) ಸೆರಿಕಲ್ಚರ್ (ರೇಷ್ಮೆಹುಳು ಸಾಕುವುದು) ಪಿಸ್ಸಿಕಲ್ಚರ್ (ಮೀನು ಸಾಕುವುದು) ಹೀಗೆ ಅರ್ಥ ವಿಸ್ತಾರವಾಗುತ್ತಾ ಬಂದು ಈಗ ವ್ರಣದ ಕೀವಿನಿಂದ ವಿಷಾಣುಗಳನ್ನು ಉತ್ಪತ್ತಿ ಮಾಡುವುದು (ಬ್ಯಾಕ್ಟೀರಿಯಾಲಾಜಿಕಲ್ ಕಲ್ಚರ್) ಎಂಬ ಅರ್ಥವು ಪ್ರಾಪ್ತವಾಗಿದೆ. ಈಚೇಗೆ ಕಲ್ಚರ್ ಎಂದರೆ ಅಮೇರಿಕಾದಲ್ಲಿ ನಾನಾ ಜನಾಂಗಗಳ ಸಮಾಜ ಸಂಸ್ಥೆಗಳು, ವಿವಾಹ ಮೊದಲಾದ ಪದ್ಧತಿಗಳು, ಗೃಹನಿರ್ವಹಣೆಯ ರೀತಿ, ಭೋಜನ ಸಂಪ್ರದಾಯ ಸಮಾಜ ಮುರ್ಯಾದೆ ಮೊದಲಾದ ಜೀವನ ಕ್ರಮಗಳಿಗೆ ಪೂರಕವಾಗಿ ಈ ಪದ ಬಳಕೆಯಾಯಿತು. ಸುಮಾರು ನೂರಮೂವತ್ತೆರಡು ವರ್ಷಗಳ ಹಿಂದೆ 'ಕಲ್ಚರ್' ಎಂದರೆ ಮನುಷ್ಯನ ಬುದ್ಧಿಯ ವ್ಯವಸಾಯ. ಮನಸ್ಸಿನ ಮೇಲ್ಮೆ, ಅಂತರಂಗ ಸಂಸ್ಕಾರ ಎಂಬ ಅರ್ಥದಲ್ಲಿ ಪ್ರಚಾರಕ್ಕೆ ಬಂದಿತು. (ನಾಗಪ್ಪ ಗೌಡ ಆಧುನಿಕ ಕನ್ನಡ ಕಾದಂಬರಿಗಳಲ್ಲಿ ಸಾಂಸ್ಕೃತಿಕ ಪಲ್ಲಟ ಸ್ವರೂಪಗಳು ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧ)

ಹೀಗೆ ಸಾಹಿತ್ಯ, ಸಂಗೀತ, ಚಿತ್ರಕಲೆ, ಶಿಲ್ಪ ಮೊದಲಾದ ಕಲೆಗಳ ಮೂಲಕ ಉಂಟಾಗತಕ್ಕ ಉತ್ತಮ ಮನೋಭಾವವೇ ಕಲ್ಚರ್ ಎಂದು ಸೀಮಿತವಾದ ಅರ್ಥದಲ್ಲಿ ರೂಡಿಗೆ ಬಂದಿತು. ಸುಮಾರು ನೂರು ಮೂವತ್ತೆರಡು ವರ್ಷಗಳ ಹಿಂದೆ (1869) ಮ್ಯಾಥ್ಯೂ ಆರ್ನಾಲ್ಡ್ ಎಂಬ ರಮ್ಯತಾವಾದದ ಪರಂಪರೆಯಲ್ಲಿ ಬಂದ ಆಂಗ್ಲೇಯ ವಿದ್ವಾಂಸನು 'ಕಲ್ಚರ್ ಅಂಡ್ ಅನಾರ್ಕಿ' (Culture and Anarchy ಸಂಸ್ಕೃತಿ ಮತ್ತು ಅನಾಯಕತ್ವ) ಎಂಬ ಲೇಖನದಲ್ಲಿ ಸಂಸ್ಕೃತಿಗೆ ವ್ಯಾಖ್ಯಾನ ನೀಡುತ್ತಾ ಇಂಗ್ಲೆಂಡಿನ ಮಧ್ಯಮವರ್ಗದ ಮೇಲೆ ಆಕ್ಷೇಪ ಎತ್ತುತ್ತಾನೆ.

ಆರ್ನಾಲ್ಡ್ ನಿಗೆ, ಸಂಸ್ಕೃತಿ ನಿರ್ಮಿತಿಯಲ್ಲಿ ಯಾವ ಕಾಳಜಿಯನ್ನು ತೋರಿಸದ ದುಡಿವವರ್ಗದ ಬಗ್ಗೆಗಾಗಲಿ, ಭೋಗದಲ್ಲಿ ಮುಳುಗಿರುವ ಸಿರಿವಂತರ ಬಗ್ಗೆಯಾಗಲಿ ಆಕ್ಷೇಪವಿಲ್ಲ. ಆದರೆ ಇಂಗ್ಲೆಂಡಿನ ಮಧ್ಯಮ ವರ್ಗ ಕೂಡಾ ಪ್ರಾಪಂಚಿಕ ಆಸೆಗಳಿಗೆ ಬಲಿ ಬಿದ್ದು ಸಂಸ್ಕೃತಿಹೀನವಾಗುತ್ತಿರುವುದು ಅವನಿಗೆ ಕಳವನ್ನುಂಟುಮಾಡಿದೆ. ಇದಕ್ಕೆ ಕಾರಣ ಹತ್ತೊಂಭತ್ತನೆಯ ಶತಮಾನದಲ್ಲಿ ವಿಜ್ಞಾನದ ಪ್ರಗತಿ–ಕೈಗಾರಿಕರಣಗಳಿಂದ ಮೂಡಿದ ಆಧುನಿಕತೆಯು ಇಂಗ್ಲೆಂಡಿನ ಜನರ ಬುದ್ಧಿ–ವಿಚಾರಗಳನ್ನು ಹರಿತಗೊಳಿಸಿದ ಕಾಲವಾಗಿತ್ತು. ಆಗ ಕಂಗೆಟ್ಟು ಹೋದ ಭಾವನಾವಾದಿಗಳು, ಮನುಷ್ಯನ ಏಕಾಂತದ ಬಗ್ಗೆ. ಅಂತರಂಗದ ಪಾವಿತ್ರ್ಯದ ಬಗ್ಗೆ ನೈತಿಕ ಮೌಲ್ಯಾದರ್ಶಗಳ ಬಗ್ಗೆ, ಆಧ್ಯಾತ್ಮದ ಬಗ್ಗೆ ಆಲೋಚಿಸತೊಡಗಿದರು. ಈ ನಿಟ್ಟಿನಲ್ಲಿಯೇ ಮ್ಯಾಥ್ಯೂ ಆರ್ನಾಲ್ಡ್ ನ ಸಂಸ್ಕೃತಿ ವ್ಯಾಖ್ಯಾನವೂ ಅಭಿವ್ಯಕ್ತಗೊಂಡಿರುವುದನ್ನು ಗಮನಿಸಬೇಕಾಗುತ್ತದೆ. ಕೈಗಾರಿಕಾ ಕ್ರಾಂತಿಹುಟ್ಟುಹಾಕಿದ ಭೌತಿಕ ಸಂಪತ್ತಿನ ಆಶೆಯು ಪಶ್ಚಿಮ ಸಂಸ್ಕೃತಿಯೊಡನೆ ಭಾರತಕ್ಕೂ ಬಂದಿದೆಯೆಂದು, ಇಲ್ಲಿನ ಮಧ್ಯಮ ವರ್ಗದ ಜನರು ಕಂಗೆಟ್ಟು, ಸಂಸ್ಕೃತಿ ಎಂದರೆ, ಭೌತಸಂಪತ್ತಿನ ನಾಗರಿಕತೆಯ ಬೆಳವಣಿಗೆಯಲ್ಲ ಆತ್ಮಸಂಪತ್ತಿನ ಒಳಗಿನ ಮಾಗುವಿಕೆ ಎಂದು ವ್ಯಾಖ್ಯಾನಿಸುವ ಪ್ರಯತ್ನ ಮಾಡುತ್ತಾರೆ.

ಶಂಬಾ ಜೋಶಿಯವರ ಪ್ರಕಾರ ಸಂಸ್ಕೃತಿ ಎಂಬುದು ಕೇವಲ ಅಧ್ಯಾಯನದ ಪ್ರತ್ಯೇಕ ವಸ್ತುವಲ್ಲ. ಜಡವಲ್ಲ. ಅದು ಒಟ್ಟು ಜೀವನ ಕ್ರಮ ಅದು ನಮ್ಮ ಕಾಲದ ಸಂಗತಿ– ವಿಸಂಗತಿಗಳನ್ನು ಅರ್ಥಮಾಡಿಕೊಳ್ಳುವ ವಿಶಿಷ್ಟ ಬಗೆ. ಅದು ನಿನ್ನೆಯಿಂದ ಪ್ರವಹಿಸುತ್ತಾ ಇಂದು ಬಂದು ನಾಳೆಗೆ ಪ್ರವಹಿಸುವ ಸತತಕ್ರಿಯೆ. ಅದು ಚೈತನ್ಯ, ನಿನ್ನೆ–ಇಂದು–ನಾಳೆಗಳ ಸಂಗಮದ ಕ್ರಿಯೆಯಲ್ಲಿ ಸಂಸ್ಕೃತಿಗೆ (ಅರ್ಥಾತ್ ಜೀವನಕ್ಕೆ) ಬೆಲೆಯಿರುತ್ತದೆ. (ಶಂಬಾ ಸಂಸ್ಕೃತಿ ಚಿಂತನೆ: ಮಲ್ಲೇಪುರಂ ಜಿ. ವೆಂಕಟೇಶ 1998. ಪುಟ. 17) ಅಂದರೆ ಸಂಸ್ಕೃತಿ ನಿಂತ ನೀರಲ್ಲ ಅದು ಚಲನಶೀಲವಾದುದು. ಮನುಷ್ಯನ ಬದುಕಿನೊಂದಿಗೆ ಸಾತತ್ಯ ಸಂಬಂಧ ಹೊಂದಿರುತ್ತದೆ. ಒಂದು ಕಾಲಮಾನದ ಬದುಕನ್ನು ಅರ್ಥೈಸಲು ಸಂಸ್ಕೃತಿಯ ಅಧ್ಯಾಯನದ ಬಹುಮುಖ್ಯ ಎಂಬುದನ್ನು ಮೇಲಿನ ಮಾತುಗಳು ಸೂಚಿಸುತ್ತವೆ.

ವಾಸ್ತವವಾಗಿ ಸಂಸ್ಕೃತಿಯೆಂದರೆ ಕಟ್ಟಲಾಗಿರುವುದು ಮತ್ತು ಸಂಸ್ಕೃತಿಯು ಚಾರಿತ್ರಿಕ ಅಗತ್ಯಕ್ಕೆ ತಕ್ಕಂತೆ ಬದಲಾಗುತ್ತದೆ. ಆಧುನಿಕ ಶಿಕ್ಷಣ ಕ್ರಮದಿಂದ ರೂಪುಗೊಂಡ ಬುದ್ಧಿ ಜೀವಿಗಳು ಹೊಸ ರೀತಿಯ ಕೆಲವು ನಿರ್ವಹಣೆಗಳನ್ನು ಮಾಡಬೇಕಾಗಿ ಬಂತು. ಅದು ರಾಜಕೀಯ; ಸಂಸ್ಕೃತಿ; ತತ್ವಜ್ಞಾನ; ಧಾರ್ಮಿಕ ಪುನರುತ್ಥಾನ – ಹೀಗೆ ಹತ್ತು ನಿರ್ವಹಣೆಯ ವಿಧಾನಗಳನ್ನು ಬೇರೆ ಬೇರೆ ಸಂವಹನ ಮಾಧ್ಯಮಗಳಲ್ಲಿ ರೂಪಿಸಬೇಕಾಗಿಬಂತು. ಬೌದ್ಧಿಕವಾಗಿಯೂ ಈ ಗುಂಪಿನ ಜನರು ಕೆಲವನ್ನು 'ಆಯ್ಕೆ' ಮಾಡಿಕೊಳ್ಳಬೇಕಾದ ಅನಿವಾರ್ಯ ಪರಿಸ್ಥಿತಿಯು ಒದಗಿಬಂತು. ಒಂದು ಸಣ್ಣ ಉದಾಹರಣೆಯನ್ನು ಕೊಡಬೇಕೆಂದರೆ – ಒಟ್ಟಾರೆಯಾದ ಸಾಮಾಜಿಕ ಪರಿಸ್ಥಿತಿಯಲ್ಲಿ 'ಅಕ್ಷರಸ್ಥರ ಗುಂಪು' ಸಣ್ಣದಿದ್ದರೂ ಅವರು ಹೊಸ ಮಾದರಿಯ ಸಂವಹನ ಮಾಧ್ಯಮವನ್ನು ರೂಪಿಸಿಕೊಳ್ಳಬೇಕಾಗಿ ಬಂತು. ಬರಹ ಸಂವಹನದ ಮಾಧ್ಯಮ ಮಾತ್ರವೇ ಅಲ್ಲ. ಅದು ಹೊಸ ಬಗೆಯ ಜ್ಞಾನದ ಮಾಧ್ಯಮವೂ ಹೌದು. ಹಾಗೂ ಬರಹಗಳ ಸಂವಹನ ಸಾಧ್ಯತೆಗೂ–ಅಧಿಕಾರಕ್ಕೂ ಕೆಲವು ಬಗೆಯ ಸಂವಾದ ಸಾಧ್ಯವೆಂದು ತಿಳಿದ ಕಾಲವೂ ಹೌದು.

ಮಾರುಕಟ್ಟೆ ಸಂಸ್ಕೃತಿಯಲ್ಲಿ ಸ್ವಾತಂತ್ರ್ಯವೆನ್ನವುದು ಹುಸಿಯಾಗಿರುತ್ತದೆ.ಮತ್ತು ಅದು ಮನುಷ್ಯನೆಂದರೆ ಒಬ್ಬ ಗಿರಾಕಿಯೆಂದು ಮಾತ್ರ ಪರಿಭಾವಿಸುತ್ತದೆ. ವ್ಯಕ್ತಿಯ ಅನನ್ಯತೆಯೆಂದರೆ ಮಾರುಕಟ್ಟೆಯನ್ನು ತುಂಬಾ ಆಸೆಯಿಂದ ನೋಡುವವನು ಮಾತ್ರ. ಈ ದೃಷ್ಟಿಯಿಂದ ವ್ಯಕ್ತಿಯು ಅಸ್ತಿತ್ವವೇ ಅದರ ದೃಷ್ಟಿಯಲ್ಲಿ ಅರ್ಥಹೀನವಾಗಿದೆ. ಬಂಡವಾಳಗಾರನು ವ್ಯಕ್ತಿಯನ್ನು ಬೇರೆ ಹೇಗೆ ನೋಡಲು ಸಾಧ್ಯವೆಂಬ ಪ್ರಶ್ನೆಯಂತೂ ಇದ್ದೇ ಇದೆ. ಆದರೆ ವ್ಯಕ್ತಿಯ ಘನತೆಯಿರುವುದು ಸೋದರತನದಲ್ಲಿ ಮಾತ್ರ. ಇಲ್ಲಿ ನಾವು ಸೋದರತನವೆನ್ನುವುದನ್ನು ನೋಡುವಾಗಲೂ ವಿಶೇಷ ರೀತಿಯಿಂದಲೇ ಗಮನಿಸಬೇಕು. ವ್ಯಕ್ತಿಯು ತನ್ನ ಸೋದರನನ್ನು ನೋಡುವಾಗ ಅದರಲ್ಲಿ ಆತ್ಮೀಯತೆಯಿರುತ್ತದೆ. ಸೋದರನಾಗುವುದು ಎಂದರೆ ಮತ್ತೊಬ್ಬ ಜೀವಿಯನ್ನು ಗೌರವಿಸುವುದೂ ಹೌದು.ಬಂಡವಾಳವಾದಕ್ಕೆ ಇದು ಇಲ್ಲ. ಅದು ಮನುಷ್ಯರನ್ನು ಗೌರವಿಸುವುದೇ

ಇಲ್ಲ. ಈ ದೃಷ್ಟಿಯಿಂದ ನಾವು ಮಾರ್ಕ್ಸ್‌ವಾದವನ್ನು ಗಮನಿಸಬೇಕು–ಮಾರ್ಕ್ಸ್‌ವಾದವು ಸಾಮಾಜಿಕ ಅರ್ಥಶಾಸ್ತ್ರ. ಅದು ಕೆಲವರು ಭಾವಿಸಿರುವಂತೆ ಕೇವಲ ಒಂದು ಶಿಸ್ತಿನ ಥಿಯರಿಯು ಅಲ್ಲ. ಮಾರುಕಟ್ಟೆಯ ಮೂಲಕ ಅದು ವ್ಯಕ್ತಿಯನ್ನು ನೋಡಲು ಹೋಗುವುದಿಲ್ಲ. ಮಾರ್ಕ್ಸ್‌ವಾದದ ದೃಷ್ಟಿಯಲ್ಲಿ ಮನುಷ್ಯನಿಗೆ ಮಾರುಕಟ್ಟೆಯು ಬೇಕಾಗಬಹುದೇ ಹೊರತು ಬೇರೆ ಕಾರಣಕ್ಕೆ ಅಲ್ಲ. ಮಾರ್ಕ್ಸ್‌ವಾದಕ್ಕೆ ಮಾರುಕಟ್ಟೆಯೇ ಕೇಂದ್ರವಲ್ಲ. ಮಾರ್ಕ್ಸ್‌ವಾದವು ಹೇಳುವುದು ಮನುಷ್ಯನ ಘನತೆಯನ್ನು ಮಾತ್ರ. ನಾವು ಏನನ್ನು ಮಾಡಬೇಕು ಎನ್ನವುದು ಒಂದು ಸಂದರ್ಭದಲ್ಲಿ ಲೆನಿನ್‌ಗೆ ಮುಖ್ಯವಾಯಿತು. ಇಲ್ಲಿ ನಾವು ಮಾನವತಾವಾದಿ ಅಸ್ತಿತ್ವದ ಕುರಿತು ಯೋಚಿಸಬಹುದು. ಮಾನವತಾವಾದಿ ಅಸ್ತಿತ್ವವು ಹೇಳುವುದು ಮನುಷ್ಯರು ಭಿನ್ನರಾಗಿಯೂ ಇರುತ್ತಾರೆ. ಅವರವರಿಗೆ ಅವರವರ ಅಸ್ತಿತ್ವವು ಇದ್ದೇ ಇರುತ್ತದೆ. ಮಾನವತಾವಾದಿ ಉದಾರತೆಯ ದೃಷ್ಟಿಕೋನವೂ ಇಲ್ಲಿ ಗಮನಾರ್ಹ–ಉದಾರವಾದಿ ದೃಷ್ಟಿಕೋನದ ನಿಲುವುಗಳನ್ನು ಕುರಿತು ಯೋಚಿಸಬಹುದು. ಅವರೆಲ್ಲರೂ ಮನುಷ್ಯರು ಮತ್ತು ಅವರೆಲ್ಲರೂ ಭಿನ್ನವಾಗಿರುವುದನ್ನು ನಾವು ಗೌರವಿಬೇಕು ಎನ್ನುವುದು ಉದಾರತೆಯ ಲಕ್ಷಣವಾಗಿದೆ. ಮನುಷ್ಯನ ಘನತೆಯಿರುವುದೇ ಅವರವರ ಭಿನ್ನತೆಯಲ್ಲಿ ಎಂದು ಉದಾರತೆಯು ನಂಬುತ್ತದೆ. ಇದಕ್ಕೆ ಸಂಬಂಧ ಪಟ್ಟಂತೆ ನಾವು ಬಳಸುವ ಮತ್ತೊಂದು ಪದವೂ ಇಲ್ಲಿ ಮುಖ್ಯ–ಪ್ರಜ್ಞಾವಂತರು ಎಂಬುದನ್ನು ನಾವೀಗ ಸಲೀಸಾಗಿ ಬಳಸುತ್ತೇವೆ. ಹೀಗೆ ಬಳಸುವಾಗ ಪ್ರಜ್ಞೆ ಎಂಬುದನ್ನು ನಾವು ವಿಶೇಷ ಅರ್ಥದಲ್ಲಿ ಬಳಸುತ್ತೇವೆ. ಆದರೆ ಪ್ರಜ್ಞೆಯೆನ್ನುವುದು ಅದರಷ್ಟಕ್ಕೆ ರೂಪುಗೊಂಡುದಲ್ಲ. ಅದು ಉದ್ಭವಗೊಂಡದಲ್ಲ. ಅದು ರೂಪಿತವಾದುದು. ಈ ಕುರಿತು ಮಾರ್ಕ್ಸ್‌ವಾದವು ತನ್ನ ನಿಲುವನ್ನು ಸ್ಪೊಷ್ಟವಾಗಿ ಹೇಳಿದೆ–ಮನುಷ್ಯನ ಪ್ರಜ್ಞೆಯೆನ್ನುವುದು ರೂಪಿತವಾದುದೇ ವಿನಃ ಅದು ತನ್ನ ಪಾಡಿಗೆ ಉದ್ಭವವಾಗಿರುವುದು ಅಲ್ಲ. ಮನುಷ್ಯರ ಚರಿತ್ರೆಗೂ ವ್ಯಕ್ತಿತ್ವಕ್ಕೂ ಒಂದು ರೀತಿಯ ಸಂಬಂಧವಿದೆ. ಮನುಷ್ಯನ ಕುರಿತಾದ ವ್ಯಾಖ್ಯೆಯು ಪ್ರಾರಂಭವಾಗುವುದೇ ಸಾಮಾಜಿಕ ಮತ್ತು ರಾಜಕೀಯವಾದ ದೃಷ್ಟಿಕೋನಗಳಿಂದ. ಮಾರ್ಕ್ಸ್‌ವಾದವು ಉದಾರವಾದ

ನಿಲುವನ್ನು ಹೊಂದಿಲ್ಲ. ಬಂಡವಾಳವಾದವು ವಾಸ್ತವವಾಗಿ ಶ್ರಮಜೀವಿ ವರ್ಗ ಮೇಲೆ ಹಿಡಿತವನ್ನು ಸಾಧಿಸುತ್ತದೆ. ಮತ್ತು ಅದರ ಮೂಲಕವೇ ಅನೇಕ ಸಂಗತಿಗಳನ್ನು ನಿಯಂತ್ರಣ ಮಾಡುತ್ತದೆ.

ಆಧುನಿಕ ಶಿಕ್ಷಣ ಕ್ರಮದಿಂದ ರೂಪುಗೊಂಡ ಬುದ್ಧಿ ಜೀವಿಗಳು ಹೊಸ ರೀತಿಯ ಕೆಲವು ನಿರ್ವಹಣೆಗಳನ್ನು ಮಾಡಬೇಕಾಗಿ ಬಂತು. ಅದು ರಾಜಕೀಯ; ಸಂಸ್ಕೃತಿ; ತತ್ವಜ್ಞಾನ; ಧಾರ್ಮಿಕ ಪುನರುತ್ಥಾನ – ಹೀಗೆ ಹತ್ತು ನಿರ್ವಹಣೆಯ ವಿಧಾನಗಳನ್ನು ಬೇರೆ ಬೇರೆ ಸಂವಹನ ಮಾಧ್ಯಮಗಳಲ್ಲಿ ರೂಪಿಸಬೇಕಾಗಿಬಂತು. ಬೌದ್ಧಿಕವಾಗಿಯೂ ಈ ಗುಂಪಿನ ಜನರು ಕೆಲವನ್ನು 'ಆಯ್ಕೆ' ಮಾಡಿಕೊಳ್ಳಬೇಕಾದ ಅನಿವಾರ್ಯ ಪರಿಸ್ಥಿತಿಯು ಒದಗಿಬಂತು. ಒಂದು ಸಣ್ಣ ಉದಾಹರಣೆಯನ್ನು ಕೊಡಬೇಕೆಂದರೆ – ಒಟ್ಟಾರೆಯಾದ ಸಾಮಾಜಿಕ ಪರಿಸ್ಥಿತಿಯಲ್ಲಿ 'ಅಕ್ಷರಸ್ಥರ ಗುಂಪು' ಸಣ್ಣದಿದ್ದರೂ ಅವರು ಹೊಸ ಮಾದರಿಯ ಸಂವಹನ ಮಾಧ್ಯಮವನ್ನು ರೂಪಿಸಿಕೊಳ್ಳಬೇಕಾಗಿ ಬಂತು. ಬರಹ ಸಂವಹನದ ಮಾಧ್ಯಮ ಮಾತ್ರವೇ ಅಲ್ಲ. ಅದು ಹೊಸ ಬಗೆಯ ಜ್ಞಾನದ ಮಾಧ್ಯಮವೂ ಹೌದು. ಹಾಗೂ ಬರಹಗಳ ಸಂವಹನ ಸಾಧ್ಯತೆಗೂ–ಅಧಿಕಾರಕ್ಕೂ ಕೆಲವು ಬಗೆಯ ಸಂವಾದ ಸಾಧ್ಯವೆಂದು ತಿಳಿದ ಕಾಲವೂ ಹೌದು.

ಆಧುನಿಕತೆಯೆನ್ನುವುದು ಒಂದು ಪರಿಕಲ್ಪನೆ. ಬೇರೆ ಬೇರೆ ಚಾರಿತ್ರಿಕ ಸಂದರ್ಭಗಳಲ್ಲಿ 'ಆಧುನಿತೆ'ಯ ಪರಿಕಲ್ಪನೆಯೂ ಬೇರೆ ಬೇರೆಯಾಗುತ್ತಾ ಹೋಗುತ್ತದೆ. ಉತ್ಪಾದನೆಯ ಸಂಬಂಧಗಳು ಬದಲಾಗುತ್ತಿರುವಂತೆ 'ಆಧುನಿಕತೆ'ಯ ರೂಪಗಳು ಬೇರೆಯಾಗುತ್ತವೆ. ರೇಡಿಯೋದ ಎದುರು ಟಿ.ವಿ. ಆಧುನಿಕ, ಟಿ.ವಿ.ಯ ಎದುರು ಕಂಪ್ಯೂಟರ್ ಆಧುನಿಕ. ಆದರೆ ಆಧುನಿಕತೆಯು ಸಾಹಿತ್ಯದಲ್ಲಿ ಬರುವಾಗ ಇದರ ಪ್ರಶ್ನೆಯು ಬೇರೆಯಾಯಿತು. 'ಆಧುನಿಕತಾವಾದ'ವನ್ನು 'ಮಾಡರ್ನಿಸಂ'ಗೆ ಪರ್ಯಾಯವಾಗಿ ಬಳಸುತ್ತೇವೆ. ಹೀಗೆ ಬಳಸುವಾಗ ಅದರ ಹಿಂದಿನ ರೊಮಾಂಟಿಸಿಸಂನ ಜೊತೆಗೆ ಹೋಲಿಕೆಯಿತ್ತು. ಈ ದೃಷ್ಟಿಯಿಂದ ಆಧುನಿಕತಾವಾದವನ್ನು ಮಾರ್ಕ್ಸ್‌ವಾದವು ತುಂಬಾ ಸೂಕ್ಷ್ಮವಾಗಿ ಪರಿಶೀಲಿಸಿತು. ವಾಸ್ತವವಾಗಿ ಆಧುನಿಕತಾವಾದವೆಂಬ ಪರಿಕಲ್ಪನೆಯು ರೂಪುಗೊಂಡಿರುವುದು

ಮೊದಲನೆಯ ಮಹಾಯುದ್ಧದ ತರುವಾಯ. ಆಗ ಇದು ಒಂದು ತಾತ್ವಿಕ ಅಲೆಯಾಗಿ ಬಳಕೆಯಾಯಿತು.

ಆಧುನಿಕತಾವಾದದಲ್ಲಿ ಬೇರೆ ಬೇರೆ ದೃಷ್ಟಿಕೋನಗಳು ಇವೆ ಹಾಗೂ ಆಧುನಿಕತಾವಾದವು ರೂಪುಗೊಂಡು ಅದಕ್ಕೆ ಒಂದು ವೈಚಾರಿಕ ಆಕೃತಿಯು ಬರಲು ಬಂಡವಾಳಶಾಹಿ ವ್ಯವಸ್ಥೆಯೇ ಕಾರಣವಾಗಿದೆ. ಆಧುನಿಕ ಯುಗದ ಬೂರ್ಜ್ವಾ ಲೇಖಕರು ಆಧುನಿಕ ಯುಗದಲ್ಲಿ ಮನುಷ್ಯನ ಅಸ್ತಿತ್ವವನ್ನು ಬೇರೆ ರೀತಿಯಲ್ಲಿ ಪರಿಗಣಿಸಿದರು. ಆಧುನಿಕತಾವಾದಿಗಳ ಪ್ರಕಾರ ಜೀವನವೆಂದರೆ ಅದು ಅನೂಹ್ಯ. ಅದನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಆಧುನಿಕತಾವಾದಿಗಳು ಇದಕ್ಕೆ ಸಂಬಂಧಿಸಿದಂತೆ ಮತ್ತೊಂದು ವಿಚಾರವನ್ನು ಮಂಡಿಸುತ್ತಾರೆ. ಜೀವನವೆನ್ನುವುದು ವ್ಯಕ್ತಿಯೊಬ್ಬನಿಗೆ ಸಂಬಂಧಿಸಿದ್ದು. ಅವನು ಒಂಟಿ ಹಾಗೂ ಅಸಹಾಯಕ. ಮತ್ತೊಂದು ರೀತಿಯಿಂದ ವ್ಯಕ್ತಿಯು ತನ್ನ ಪರಿಸರಕ್ಕಿಂತ ಬೇರೆಯಾಗಿ ಬದುಕುತ್ತಾನೆ. ಪ್ರತಿಯೊಬ್ಬನಿಗೂ ಅವನದೇ ಎನ್ನಬಹುದಾದ ಒಂದು ಪ್ರತ್ಯೇಕ ಅಸ್ತಿತ್ವವಿರುತ್ತದೆ. ಅವನ ಜೀವನದ ಅರ್ಥ; ಜೀವನದ ಅಸಹಾಯಕತೆ; ಯಾವುದೂ ಅವನಿಗೇ ತಿಳಿದಿರುವುದಿಲ್ಲ. ವ್ಯಕ್ತಿಯ ಬದುಕು ಅನ್ನುವುದು ಅನೇಕ ರೀತಿಯ ಅಸಾಂಗತ್ಯದಿಂದ ಕೂಡಿರುತ್ತದೆ. ಅದಕ್ಕೆ ಒಂದು ತರ್ಕ; ಒಂದು ನಿರ್ದಿಷ್ಟ ಗುರಿಯೆಂಬುದು ಇರುವುದಿಲ್ಲ. ಆಧುನಿಕತಾವಾದದ ಈ ಚಿಂತನಾಕ್ರಮಗಳು ಬಂಡವಾಳಶಾಹಿ ವ್ಯವಸ್ಥೆಯ ಉಪ ಉತ್ಪಾದನೆಯೆನ್ನುವುದರಲ್ಲಿ ಸಂಶಯವಿಲ್ಲ. ಕೈಗಾರೀಕರಣದ ಪ್ರಕ್ರಿಯೆಯಿಂದಾಗಿ ಸಾಮಾಜಿಕವಾಗಿ ಪ್ರತ್ಯೇಕಗೊಂಡ ಗುಂಪು ಈ ವಾದವನ್ನು ಬೆಂಬಲಿಸಿತು. ಈ ದೃಷ್ಟಿಯಿಂದಲೇ ಮಾರ್ಕ್ಸ್‌ವಾದ ಆಧುನಿಕತಾವಾದವನ್ನು ವಿರೋಧಿಸುತ್ತದೆ. ನಟರಾಜ ಹುಳಿಯಾರು ಅವರು ಆಧುನಿಕತೆ ಮತ್ತು ಆಫ್ರಿಕನ್ ಸಾಹಿತ್ಯವನ್ನು ಚರ್ಚಿಸಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು (ನಟರಾಜ ಹುಳಿಯಾರ್., ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, 2004).

ಆಧುನಿಕತೆಗೆ ಚರಿತ್ರೆಯ ಬಗ್ಗೆ ಒಂದು ಧನಾತ್ಮಕವಾದ ದೃಷ್ಟಿಕೋನವಿಲ್ಲ. ಅದರ ಪ್ರಕಾರ, ಆಧುನಿಕ ಸನ್ನಿವೇಶವೇ ಬೇರೆ. ಆದುದರಿಂದ ಚರಿತ್ರೆಯ

ಜೊತೆಗೆ ಅನುಸಂಧಾನ ನಡೆಸಬೇಕಾದ ಯಾವ ಅಗತ್ಯವೂ ಇಲ್ಲ. ಆಧುನಿಕತಾವಾದದ ಪ್ರಕಾರ ಆಧುನಿಕ ಸನ್ನಿವೇಶವೆನ್ನುವುದು ರೂಪುಗೊಂಡಿರುವ ಬಗೆಯೇ ಬೇರೆ. ಆಧುನಿಕತಾವಾದದ ಪ್ರಕಾರ ಆಧುನಿಕ ಸನ್ನಿವೇಶವೆನ್ನುವುದು ಚಲನರಾಹಿತ್ಯ ಹಾಗೂ ಅವನತ ಮುಖಿಯಾಗಿರುವಂಥದ್ದು. ಆಧುನಿಕ ಸನ್ನಿವೇಶ ನಿಂತ ನೀರಿನಂತೆ ಇರುವುದರಿಂದ ಒಂದು ಪರ್ಯಾಯವಾದ ಜೀವನ ಕ್ರಮವನ್ನು ಹುಡುಕಬೇಕಾದ ಅಗತ್ಯವಿದೆಯೆಂದು ಆಧುನಿಕತಾವಾದವು ಪ್ರತಿಪಾದಿಸುತ್ತದೆ. ಪರ್ಯ್ಯಾಯ ಜೀವನ ಕ್ರಮದ ಹುಡುಕಾಟವೆಂದರೆ ಅದು ಸಾಂಪ್ರದಾಯಿಕತೆಯನ್ನು ಒಪ್ಪುವುದು ಅಲ್ಲ. ಸಾಂಪ್ರದಾಯಿಕ ಚಿಂತನಾ ಕ್ರಮ ಮನುಷ್ಯನನ್ನು ಆವರಸಿಕೊಂಡು ಬಿಡುತ್ತದೆಯೆಂದು; ಆದುದರಿಂದ ಅದನ್ನು, ವಿರೋಧಿಸಬೇಕೆಂದು ಆಧುನಿಕತಾವಾದವು ಪ್ರಬಲವಾಗಿ ಪ್ರತಿಪಾದಿಸುತ್ತದೆ

20ನೇ ಶತಮಾನದ ಮೊದಲಲ್ಲಿ ಸಮಾಜವಾದಿ ಸೋವಿಯತ್ ರಷ್ಯಾ 'ಶ್ರಮಜೀವಿ ವಿಜ್ಞಾನ'ದ ಪರಿಕಲ್ಪನೆಯ ಮೂಲಕ ರಾಜಕೀಯ ನಿಯಂತ್ರಣದ ಮಾತನ್ನಾಡಿತು. ಇದರ ತತ್ಪರ್ಯ ಇಷ್ಟೆ; ವಿಜ್ಞಾನಕ್ಕೆ ಅತ್ಯಂತ ಉದಾತ್ತಾರ್ಥದಲ್ಲಿ ಸಂಸ್ಕೃತಿಯ ನಿಯಂತ್ರಣ ಇದ್ದೇತೀರಬೇಕು. ಈ ಶತಮಾನದಲ್ಲಿ ಕೆಲವು ವಿಜ್ಞಾನಿಗಳು, ವಿಜ್ಞಾನಿ – ತಾತ್ವಿಕರು ಒಳಗಿನಿಂದಲೇ ಕೆಲವು ಆತ್ಮ ನಿಷೇಧಗಳನ್ನು ಸೃಷ್ಟಿಸಲು ಪ್ರಯತ್ನಿಸಿದರು. ಕೆಲವರು ನೇರವಾಗಿ ಆಧುನಿಕ ವಿಜ್ಞಾನದ ಚರಿತ್ರೆಯನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ವಿವರಿಸುವ ಕೆಲಸ ಮಾಡಿದರೆ, ಇನ್ನು ಕೆಲವರು ವಿಜ್ಞಾನದ ಕುರೂಪೀ ಮುಖಗಳನ್ನು ತೋರಿಸಿ, ವಿಮರ್ಶಿಸುವ ಕೆಲಸ ಮಾಡಿದರೆ, ಇನ್ನು ಕೆಲವರು ವಿಜ್ಞಾನದ ಚರಿತ್ರೆಯನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ವಿವರಿಸುವ ಕೆಲಸ ಮಾಡಿದರು. ಮೊದಲ ಗುಂಪಿನಲ್ಲಿ ನಾನು ತೀವ್ರವಾಗಿ ಪ್ರತಿಸ್ಪಂದಿಸುವ ಮಂದಿ ಎಂದರೆ ಪಾಲ್ ಫೇಯರ್ ಬೆಂಡ್ ಮತ್ತು ಕಾಪ್ರ. ಎರಡನೆಯ ಗುಂಪಿನಲ್ಲಿ ಥಾಮಸ್ ಕೂನ್. ಈ ಪಟ್ಟಿ ನನ್ನ ವೈಯಕ್ತಿಕ ಜ್ಞಾನದ ಮಿತಿ ತೋರಿಸುವ ಪಟ್ಟಿ ಎಂದು ಪ್ರತ್ಯೇಕವಾಗಿ ವಿವರಿಸಬೇಕಿಲ್ಲ.

ಕಾಫ್ಕ ಆಧುನಿಕ ವಿಜ್ಞಾನವನ್ನು ವಿವರಿಸುವ ಕ್ರಮವೇ ತುಂಬ ಕುತೂಹಲಕಾರಿ. ಡೇಕಾರ್ಟನ ತಾತ್ವಿಕ ಗ್ರಹಿಕೆ ಮುಂದುವರಿದು ಇಡೀ ಆಧುನಿಕ

ಪಶ್ಚಿಮ ವಿಜ್ಞಾನದ ಮೂಲಸ್ಥಿತಿಗಳನ್ನು ರೂಪಿಸಿದ ಕ್ರಮದ ಬಗ್ಗೆ ಈತ ತುಂಬ ಖಚಿತವಾಗಿ ವಿವರಿಸುತ್ತಾನೆ. 'ಸಸ್ಯ ಮತ್ತು ಪ್ರಾಣಿಗಳನ್ನು ಕೂಡಾ ಕೇವಲ ಯಂತ್ರಗಳೆಂದೇ ಡೇಕಾರ್ಟ್ ಪರಿಗಣಿಸುತ್ತಾನೆ. ಮನುಷ್ಯನ ವ್ಯಕ್ತಿತ್ವವು ಚಿಂತನಶೀಲವಾದ ಚೇತನದಿಂದ ಒಳಗೊಂಡಿದೆ. ಆದರೆ ಮನುಷ್ಯ ದೇಹ ಕೂಡಾ ಯಾಂತ್ರಿಕತೆಯಲ್ಲಿ ಪ್ರಾಣಿಗಳ ದೇಹಕ್ಕಿಂತ ಭಿನ್ನವಾಗಿಲ್ಲ' ಎಂಬುದು ಆತನ ವಾದ. ಇದಕ್ಕೆ ವಿರುದ್ಧವಾದ ನಿಲುವೆಂದರೆ ಪೌರಸ್ತ್ಯದೃಷ್ಟಿ. 'ನಾವು ನಮ್ಮ ಇಂದ್ರಿಯಗಳ ಮೂಲಕ ಗ್ರಹಿಸಬಲ್ಲ ಎಲ್ಲ ಭೌತವಸ್ತುಗಳೂ, ಸಂಗತಿಗಳೂ ಒಂದೇ ಮೂಲಭೂತ ಸತ್ಯದಿಂದ ಹೊರಹೊಮ್ಮಿದ ವಿಭಿನ್ನ ಮುಖಗಳು' ಎಂಬುದೇ ಪೌರಸ್ತ್ಯ ದೃಷ್ಟಿಯ ವಿಶೇಷ. (ಡಿ ಆರ್ ನಾಗರಾಜ್ ಸಾಹಿತ್ಯ ಕಥನ, ಪುಟ. 193) ಹಾಗೂ 1774–1785 ರಲ್ಲಿಯೇ ವಾರನ್ ಹೇಸ್ಟಿಂಗ್ಸ್ ಭಾರತೀಯ ಸಂಸ್ಕೃತಿಯನ್ನು ಅರ್ಥವಿಸಿಕೊಳ್ಳಬೇಕು ಎಂಬಂತೆ ಮಾತಾಡಲು ಪ್ರಾರಂಭಿಸಿದ್ದ. ಇದನ್ನೇ ಮಾಹಿತಿ ಮತ್ತು ಪ್ರಭುತ್ವದ ದ್ವಂದ್ವ ಸಂಯೋಜನೆಯೆಂದು ಎಡ್ವರ್ಡ್ ಸೈದ್ ಕರೆಯುತ್ತಾನೆ. ಈ ಸಂದರ್ಭದಲ್ಲಿಯೇ 'ವಸ್ತುನಿಷ್ಠಜ್ಞಾನ' (Objective knowledge) ಎಂಬ ಪರಿಭಾಷೆ ಹುಟ್ಟಿಕೊಂಡದ್ದು.ಮೆಕಾಲೆಯು ಇಂಗ್ಲೀಷಿನಿಂದ ಮಾತ್ರವೇ ಭಾರತೀಯ ಯುವಕರ ಉದ್ಧಾರವು ಸಾಧ್ಯವೆಂದು ಪ್ರಬಲವಾಗಿ ನಂಬಿದ್ದ. ಆದರೆ ಭಾರತದಲ್ಲಿ ಮಿಶನರಿಗಳ ಪ್ರವೇಶ ಇಂಗ್ಲೀಷ್ ಸಾಹಿತ್ಯದ ಅಧ್ಯಯನ ಕ್ರಮಕ್ಕೆ ಹೊಸ ಸಾಧ್ಯತೆಯನ್ನು ರೂಪಿಸಿಕೊಟ್ಟಿತ್ತು. 1813ರ ವೇಳೆಗೆ ಇಂಗ್ಲೆಂಡಿನಲ್ಲಿಯೂ ಶಿಕ್ಷಣ ಕ್ರಮದ ಮಹತ್ವದ ಬದಲಾವಣೆ ಕಾಣಿಸಿಕೊಂಡಿತ್ತು. 1792 ರಲ್ಲಿಯೇ ಚಾರ್ಲ್ಸ್ ಗ್ರಾಂಟ್ ಭಾರತದ ಜಾತಿ ಪದ್ಧತಿ; ಮೂರ್ತಿ ಪೂಜೆ ಮುಂತಾದವುಗಳನ್ನು ಟೀಕಿಸಿದ್ದ. ಜಾತಿ ಪದ್ಧತಿಯಿಂದ ಭಾರತದಲ್ಲಿ ಹೆಚ್ಚು ಅಪರಾಧಗಳು ಜರುಗುತ್ತವೆ ಎಂದು ಭಾವಿಸಿ ಅದನ್ನು ಕಟುವಾಗಿ ಟೀಕಿಸಿ ಬರೆದಿದ್ದ. ಇದಕ್ಕಾಗಿಯೇ 'ಒಂದೇ ಅಧಿಕಾರ ಒಂದೇ ಮನಸ್ಸು' ಸೂತ್ರ ಮಂಡಿಸಿದ್ದ. (Gaurivishwanathan ಪೂರ್ವೋಕ್ತ, ಪು. 73) (ಕೇಶವ ಶರ್ಮ. ಕೆ. ಪಡು– ಮೂಡು)

ಬಂಡವಾಳಶಾಹಿ ವ್ಯವಸ್ಥೆಯೆನ್ನುವುದು ಹೇಗೆ ಒಂದು ಕೇಂದ್ರೀಕೃತ

ಪ್ರಭುತ್ವ ಮತ್ತು ಅದರ ಪ್ರಭಾವವು ಸೃಜನಶೀಲತೆಯ ಮೇಲೆ ಯಾವ ರೀತಿಯ ಪರಿಣಾಮವಾಗಿ ಕಾಣಿಸಿಕೊಳ್ಳುತ್ತದೆಯೆಂದು ಚರ್ಚಿಸಿತು. ವಾಲ್ಟರ್ ಬೆಂಜಮಿನ್; ಅಡರ್ನೋ ಅಂಥವರು ಬಂಡವಾಳಶಾಹಿ ಜಗತ್ತು ಮತ್ತು ವ್ಯಕ್ತಿಯ ಸೃಜನಶೀಲತೆಯ ಪ್ರತಿಭೆಯನ್ನು ವೈಜ್ಞಾನಿಕವಾಗಿ ವಿವರಿಸಿದರು. ದುಡಿಯುವ ವರ್ಗದ ಜನಸಮೂಹವು ಪಡೆಯುವ ಎಚ್ಚರ; ದುಡಿಯುವ ವರ್ಗದ ಮೇಲೆ ಶಿಕ್ಷಣ ಬೀರುವ ಪ್ರಭಾವ; ಬಂಡವಾಳವಾದವನ್ನು ಸ್ಥಾನಪಲ್ಲಟಗೊಳಿಸಲು ಬೇಕಾದ ಸಮಾಜವಾದ ಚರ್ಚೆಗೆ ಬಂತು. ಮಾರ್ಕ್ಸ್‌ವಾದಿಗಳ ಪ್ರಕಾರ ಬಂಡವಾಳವಾದವು ಸಾಚಾ ಅಲ್ಲ. ಅದಕ್ಕೆ ಪ್ರಾಮಾಣಿಕತೆಯಿಲ್ಲ. ಅದು ಮನುಷ್ಯರನ್ನು; ರಾಜಕೀಯ ವ್ಯವಸ್ಥೆಯನ್ನು ಲಂಚಕೋರತನದಿಂದ ಕೂಡಿಕೊಳ್ಳುವಂತೆ ಮಾಡುತ್ತದೆ. ಅಷ್ಟೇ ಅಲ್ಲ. ಅದಕ್ಕೆ ಅಸಹನೆಯಿದೆ. ಸಿನಿಕತನವಿದೆ. ಜನಾಂಗೀಯತೆಯಿದೆ. ಅದು ಸಮೂಹ ಜೀವನದ ಚಿಂತನಾಕ್ರಮವನ್ನು ದಮನಿಸುತ್ತದೆ. ಹೀಗಿರುವುದರಿಂದಲೇ ಬಂಡವಾಳವಾದವು ಯಾವುದೇ ಕಾರಣಕ್ಕೆ ಧಾರ್ಮಿಕ ಮತ್ತು ಜನಾಂಗೀಯ ಅಲ್ಪಸಂಖ್ಯಾತರನ್ನು ರಕ್ಷಿಸುವುದಿಲ್ಲ. ಸಂಸ್ಕೃತಿಯ ಬಹುಮುಖತೆಯ ಬಗ್ಗೆಯೂ ಅದಕ್ಕೆ ಗೌರವವಿಲ್ಲ. ಅದಕ್ಕೆ ವಾಗ್ವಾದವು ಬೇಕಿಲ್ಲ. ವಿಧೇಯತೆಯನ್ನು ನಂಬುತ್ತದೆ. ಆದರೆ ಕಾರ್ಯಕಾರಣ ಸಂಬಂಧಗಳನ್ನು ಕಷ್ಟ ಪಡುವುದಿಲ್ಲ. ಹೀಗಾಗಿ ಆಧುನಿಕತಾವಾದವು ತನ್ನ ಸುತ್ತ ಒಂದು ಗೋಡೆಯನ್ನು ಕಟ್ಟಿಕೊಂಡಿದೆ. ಅದರಾಚೆಗೆ ಅದು ಬರುವುದಿಲ್ಲ. ಆ ಕೋಟೆಯೊಳಗೆ ಉಳಿದವರನ್ನು ಬಿಡುವುದಿಲ್ಲ. ಮಾರ್ಕ್ಸ್‌ವಾದಿ ವಿಮರ್ಶೆ, ಹೋರಾಟ, ಬದಲಾವಣೆ, ಮನುಷ್ಯ ಅಸ್ತಿತ್ವದ ಉಳಿವನ್ನು ಕುರಿತು ಚಿಂತಿಸುತ್ತದೆ. ಆದುದರಿಂದ ಮಾರ್ಕ್ಸ್‌ವಾದಿ ವಿಮರ್ಶೆಯು 'ಆಧುನಿಕತಾವಾದ'ವನ್ನು ವಿರೋಧಿಸುತ್ತದೆ. ಅದು ತಾತ್ವಿಕ ಮುಖಾಮುಖಿಯೂ ಹೌದು. (ಕೇಶವಶರ್ಮ.ಕೆ – ನೀಲನಕ್ಷೆ)

ಇಡೀ ಜಗತ್ತಿನಾದ್ಯಂತ ಸಂಸ್ಕೃತಿ ಒಂದೇ ರೀತಿಯಲ್ಲಿ ಗೋಚರಿಸುವುದಿಲ್ಲ. ಭಿನ್ನ ಭಿನ್ನ ಪ್ರದೇಶಗಳು, ಬೇರೆ ಬೇರೆ ಭಾಷೆಗಳು ಹಾಗೂ ಜನಾಂಗಗಳಿರುವಾಗ ಅದಕ್ಕನುಗುಣವಾಗಿಯೇ ಸಂಸ್ಕೃತಿಗಳು ರೂಪುಗೊಳ್ಳುತ್ತವೆ. ಹೀಗೆ ರೂಪುಗೊಂಡ ಸಂಸ್ಕೃತಿಗಳು, ಕಾಲ, ದೇಶ ಮತ್ತು ಪರಿಸ್ಥಿತಿಗಳಿಗಳಿಗನುಗುಣವಾಗಿ ನಿರಂತರವಾಗಿ

ಬದಲಾವಣೆಗೆ ಒಳಗಾಗುತ್ತಿರುತ್ತವೆ. ಈ ಸಮಾಜಕ್ಕೆ ಹೇಗೆ ಒಂದು ಚಲನಶೀಲತೆ ಇದೆಯೋ ಹಾಗೆ ಸಂಸ್ಕೃತಿಗೂ ಒಂದು ಚಲನಶೀಲತೆಯಿದೆ. ಆದರೆ ಸಮಾಜ ಬದಲಾದಷ್ಟು ವೇಗವಾಗಿ ಸಂಸ್ಕೃತಿ ಬದಲಾವಣೆಗೆ ಒಳಗಾಗುವುದಿಲ್ಲ. ಹೊಸದರ ಜೊತೆ ಘರ್ಷಿಸುತ್ತಲೇ ಹಳೆಯದನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಿರುತ್ತದೆ. ಇದನ್ನು ಗಮನಿಸಿಯೇ ಹರ್ ಸ್ಕೂವಿಟ್ಗ್ ಸಂಸ್ಕೃತಿಯ ಏಕ ಕಾಲದಲ್ಲಿ ಸ್ಥಗಿತತೆ ಮತ್ತು ಚಲನಶೀಲತೆ ಎರಡನ್ನು ಪಡೆದಿರುತ್ತದೆ." ಎಂದು ಅಭಿಪ್ರಾಯಪಟ್ಟಿದ್ದಾನೆ.

ಜಗತ್ತಿನಾದ್ಯಂತ ಕಂಡುಬರುವ ಸಂಸ್ಕೃತಿಗಳಲ್ಲಿ ವೈವಿಧ್ಯತೆಯಿದೆ. ಒಂದೇ ರೀತಿಯ ಸಂಸ್ಕೃತಿಗಳಿಲ್ಲ. ಇರುವುದಕ್ಕೆ ಸಾಧ್ಯವೂ ಇಲ್ಲ. ಅನೇಕ ಸಂಸ್ಕೃತಿಗಳಲ್ಲಿ ಸಾಮ್ಯತೆಗಳು ಕಂಡುಬಂದರೂ ಅವುಗಳಲ್ಲಿಯೂ ವೈವಿದ್ಯತೆಯಿದ್ದೆ ಇರುತ್ತದೆ.

ಆಳಿದ ಮತ್ತು ಆಳಿಸಿಕೊಂಡ ಸಂಸ್ಕೃತಿಯ ನಡುವಣ ಸಂಬಂಧದ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸುತ್ತಿರುವುದು ಸರಿಯಷ್ಟೆ ವಸಾಹತು ಸನ್ನಿವೇಶದಲ್ಲಿ ಆಳಿದ ದೇಶವನ್ನು ಅಭಿವೃದ್ಧಿಹೊಂದಿದ ದೇಶವೆಂದು ಕರೆಯುವುದು ಕೂಡಾ ಇಲ್ಲಿ ಗಮನಾರ್ಹ. ಆಳಿದ ದೇಶದ ಪ್ರಕ್ರಿಯೆಗಳು ಸಹಜವಾಗಿಯೇ ಆಳಿಸಿಕೊಂಡ ದೇಶದ ಮೇಲೆ ಕ್ರಿಯಾತ್ಮಕವಾದ ಪರಿಣಾಮವನ್ನು ಬೀರುತ್ತವೆ. ಇಲ್ಲಿ ಪ್ರಭುತ್ವದ ಅಂಶಗಳು ಕೆಲವು ಸಂಗತಿಗಳನ್ನು ಒಳಗೊಂಡಿರುತ್ತವೆ. ಪ್ರಭುತ್ವಕ್ಕೆ ಅದರದ್ದೇ ಆದ ಹಿತಾಸಕ್ತಿ ಮುಖ್ಯ. ಆಳುವ ಸಂಸ್ಕೃತಿ ಮತ್ತು ಆಳಿಸಿಕೊಳ್ಳುವ ಸಂಸ್ಕೃತಿಗಳ ನಡುವೆ ದ್ವಂದ್ವಾತ್ಮಕವಾದ ಸಂಬಂಧವಿರುತ್ತದೆ. ಇದರೊಂದಿಗೆ ಪ್ರಭುತ್ವವು ತನ್ನ ಸಾಂಸ್ಕೃತಿಕ ಅಂಶಗಳನ್ನು, ಮೌಲ್ಯಗಳನ್ನು ಆಳಿಸಿಕೊಳ್ಳುವುದರ ಮೇಲೆ ಹೇರುವಾಗಲೇ ಅತ್ಯಂತ ಸಂಕೀರ್ಣತೆಯು ಇರುತ್ತದೆ. ಒಂದು ಸಂಸ್ಕೃತಿಯು ಬೇರೊಂದು ಸಂಸ್ಕೃತಿಯ ಒಳಗಡೆ ಪ್ರವೇಶಿಸುವಾಗ ಸಾಂಸ್ಕೃತಿಕ ಶಾಕ್‌ಗಳು ಉಂಟಾಗುತ್ತವೆ. ಸಾಂಸ್ಕೃತಿಕ ವಿದ್ಯುತ್ ಸಂಚಾರವು ಬೇರೆ ಬೇರೆ ರಹದಾರಿಗಳನ್ನು ತೆರೆಯುತ್ತದೆ. ಇದು ಬಹುಮುಖಿ ಸಂವಾದಕ್ಕೆ ಎರವಾದ ಪ್ರಕ್ರಿಯೆಯೂ ಹೌದು

ರೇಮಂಡ್ ವಿಲಿಯಮ್ಸ್ ಸಂಸ್ಕೃತಿ ಶಬ್ದದ ಅರ್ಥವ್ಯಾಪ್ತಿಯನ್ನು ಮತ್ತು ಸಂಸ್ಕೃತಿ ಸಿದ್ಧಾಂತ. ಬೆಳವಣಿಗೆಯನ್ನು ಸಮಾಜ ಮತ್ತು ಆರ್ಥಿಕ ಅಂಶಗಳ ಬೆಳವಣಿಗೆಗೆ ಪೂರಕವಾಗಿ ವಿವರಿಸುತ್ತಾನೆ.

'ಸಂಸ್ಕೃತಿ ಪದದ ಅರ್ಥವು ವಿಸ್ತಾರವಾಗುತ್ತಾ ಬಂದಂತೆ ಅದು ಒಂದು ಸಿದ್ಧಾಂತವಾಗಿ, ಚಾರಿತ್ರಿಕ ಬೆಳವಣಿಗೆಯನ್ನು ಪಡೆದಂತೆ ಬೇರೆಲ್ಲಾ ಸಿದ್ಧಾಂತಗಳ ಮೇಲೆ ಪ್ರಭಾವವನ್ನು ಬೀರುತ್ತಾ ಬಂದಿತು.' ಇದು ಸಂಸ್ಕೃತಿ ಸಿದ್ಧಾಂತಕ್ಕೆ ಒಂದು ರೀತಿಯಲ್ಲಿ ಸಹಾಯಕವಾದರೂ, ಇದೇ ಸಂಸ್ಕೃತಿಯ ವ್ಯಾಖ್ಯಾನ ಮತ್ತು ಅರ್ಥ ವಿವರಣೆಗೆ ಕಷ್ಟಕರವು ಆಯಿತು. ಹದಿನಾರು ಮತ್ತು ಹದಿನೇಳನೆ ಶತಮಾನದಲ್ಲಿ ಯುರೋಪಿನ ಸಾಮಾಜಿಕ ಮತ್ತು ಆರ್ಥಿಕ ರಂಗಗಳಲ್ಲಿ ಅಗತ್ಯವಾದ ಬದಲಾವಣೆಗಳುಂಟಾಗುವವರೆಗೆ ಸಂಸ್ಕೃತಿಯ ಅರ್ಥವು ಬರೀ ಕೃಷಿಗೆ, ಪ್ರಾಣಿಗಳಿಗೆ, ಮನುಷ್ಯನ ಮನಸ್ಸುಗಳ ವಿಚಾರ ಪ್ರಕ್ರಿಯೆಗೆ ಸೀಮಿತವಾಗಿತ್ತು. ಹದಿನೆಂಟನೆ ಶತಮಾನದಲ್ಲಿ ಸಂಸ್ಕೃತಿ ಪದಕ್ಕೆ ಹೊಸ ಅರ್ಥ ವ್ಯಾಪ್ತಿ ಪ್ರಾಪ್ತವಾಯಿತು. ಸಂಸ್ಕೃತಿಗೆ ಪೂರಕವಾಗಿ ನಾಗರೀಕತೆ ಒಂದು ಸಿದ್ಧಾಂತವಾಗಿ ರೂಪಿತವಾಯಿತು. ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳುವಾಗ ಅಗತ್ಯವಾಗಿ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಆಗುವ ಬದಲಾವಣೆಗಳನ್ನು ಪರಗಣಿಸಲೇಬೇಕಾದ ಅನಿವಾರ್ಯತೆ ಉಂಟಾಯಿತು. ಹೀಗೆ ಸಂಸಕೃತಿಯ ಅರ್ಥವು ವಿಸ್ತಾರವಾಗುತ್ತಾ ಬಂದು ಮಾನವಿಕ ಹಾಗೂ ಸಾಮಾಜಿಕ ಸಿದ್ಧಾಂತವಾಗಿ ಸಂಸ್ಕೃತಿ ಸಮಾಜದ ಅವಿಭಾಜ್ಯ ಅಂಗವಾಯಿತು. ಮನುಷ್ಯನ ಮನಸ್ಸಿನ ಕರ್ಷಣ ಮತ್ತು ಪ್ರತಿಕ್ರಿಯೆಗಳು ಆಂತರಿಕ ಪ್ರಕ್ರಿಯೆಯ ರೂಪದಲ್ಲಿ ಕಲೆಗಳಲ್ಲಿಹೊಸ ಅರ್ಥ ವ್ಯಾಪ್ತಿ ಪ್ರಾಪ್ತವಾಯಿತು. ಸಂಸ್ಕೃತಿಗೆ ಪೂರಕವಾಗಿ ನಾಗರೀಕತೆ ಒಂದು ಸಿದ್ಧಾಂತವಾಗಿ ರೂಪಿತವಾಯಿತು. ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳುವಾಗ ಅಗತ್ಯವಾಗಿ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಆಗುವ ಬದಲಾವಣೆಗಳನ್ನು ಪರಗಣಿಸಲೇಬೇಕಾದ ಅನಿವಾರ್ಯತೆ ಉಂಟಾಯಿತು. ಹೀಗೆ ಸಂಸ್ಕೃತಿಯ ಅರ್ಥವು ವಿಸ್ತಾರವಾಗುತ್ತಾ ಬಂದು ಮಾನವಿಕ ಹಾಗೂ ಸಾಮಾಜಿಕ ಸಿದ್ಧಾಂತವಾಗಿ ಸಂಸ್ಕೃತಿ ಸಮಾಜದ ಅವಿಭಾಜ್ಯ ಅಂಗವಾಯಿತು. ಮನುಷ್ಯನ ಮನಸ್ಸಿನ ಕರ್ಷಣ ಮತ್ತು ಪ್ರತಿಕ್ರಿಯೆಗಳು ಆಂತರಿಕ ಪ್ರಕ್ರಿಯೆಯ ರೂಪದಲ್ಲಿ ಕಲೆಗಳಲ್ಲಿ ಅಭಿವ್ಯಕ್ತವಾಗುತ್ತವೆ. ಇವು ಸಂಸ್ಕೃತಿಯ ಬಹುಮುಖ್ಯ ಆಧಾರಗಳಾಗುತ್ತವೆ. ರೇಮಂಡ್ ವಿಲಿಯಮ್ಸ್‌ನೆ ಇನ್ನೊಂದು ಕಡೆಯಲ್ಲಿ

‘ಸಂಸ್ಕೃತಿ’ಯ ಬಗ್ಗೆ ವ್ಯಾಖ್ಯಾನಿಸುತ್ತಾ ಮೂರು ರೀತಿಯ ಪ್ರಮುಖ ವ್ಯಾಖ್ಯೆಗಳನ್ನು ನೀಡುತ್ತಾನೆ. ಸಂಸ್ಕೃತಿಯ, ಮಾನವನ ಕೆಲವು ನಿರ್ದಿಷ್ಟವಾದ ಸರ್ವಸಮ್ಮತವಾದ ಮೌಲ್ಯಗಳ ಮೂಲಕ ಪರಿಪೂರ್ಣನಾಗಲು ಬಯಸುವ ಸ್ಥಿತಿ ಅಥವಾ ಪ್ರಕ್ರಿಯೆ. ಇದನ್ನು ಮಾದರಿ ವ್ಯಾಖ್ಯಾನವೆಂದು ಕರೆದಿದ್ದಾನೆ.

1. ಬುದ್ಧಿಜೀವಗಳು, ಬೌದ್ಧಿಕ ಮತ್ತು ಕಲ್ಪನಾತ್ಮಕವಾದ ವಿಚಾರಗಳು. ಆಲೋಚನೆಗಳು ಹಾಗೂ ಅನುಭವಗಳನ್ನು ವಿವಿಧ ರೀತಿಯಲ್ಲಿ ದಾಖಲುಗೊಳಿಸುವ ಕಾರ್ಯವೇ ಸಂಸ್ಕೃತಿ ಇದನ್ನು ಡಾಕುಮೆಂಟರಿ ಎಂದು ಗುರುತಿಸಿದ್ದಾನೆ.

2. ಸಂಸ್ಕೃತಿ ಎಂದರೆ ಮನುಷ್ಯನ ನಿರ್ದಿಷ್ಟವಾದ ಜೀವನ ವಿಧಾನ, ಅವನ ಅರಿವು ಮತ್ತು ಕಲೆಗಳಲ್ಲಿ ಮಾತ್ರವಲ್ಲದೆ ಸಾಮಾಜಿಕ ಸಂಸ್ಥೆಗಳು ಮತ್ತು ಅವನ ಸಾಮಾನ್ಯ ವರ್ತನೆಗಳ ಮೂಲಕವೂ ಕೆಲವು ಮೌಲ್ಯಗಳು ಅಭಿವ್ಯಕ್ತವಾಗುತ್ತವೆ. ಇದನ್ನು ಸಾಮಾಜಿಕ ವ್ಯಾಖ್ಯಾನ ಎಂದಿದ್ದಾನೆ.

ಸಂಸ್ಕೃತಿಯಲ್ಲಿ ಎರಡು ಪದರುಗಳನ್ನು ಕೆಲವರು ಗುರುತಿಸುತ್ತಾರೆ. ಅವರ ಪ್ರಕಾರ ದುಡಿವ ವರ್ಗ ಕೆಳಗಿನ ಸಂಸ್ಕೃತಿಯನ್ನು, ಕವಿಗಳು–ಕಲಾವಿದರು, ತತ್ತ್ವಶಾಸ್ತ್ರಿಗಳು, ಆಳುವ ವರ್ಗದವರು ಸಂಸ್ಕೃತಿಯ ಮೇಲು ಪದರವನ್ನು ನಿರ್ಮಿಸಿಕೊಳ್ಳುತ್ತಾರೆ. ಇದು ಯಾವಾಗ ಚರಿತ್ರೆಯಲ್ಲಿ ಶ್ರಮವಿಭಜನೆಗೊಂಡು ದುಡಿಯುವ ದೇಹವೂ. ಆಲೋಚಿಸುವ ಬುದ್ಧಿಯೂ (ಮನಸ್ಸು) ಎರಡು ಪ್ರತ್ಯೇಕ ಜಗತ್ತುಗಳಾಗಿ ಒಡೆದುಹೋಗವೋ ಅಂದಿನಿಂದ ಸಂಸ್ಕೃತಿಯಲ್ಲಿ ಕೆಳ ಮತ್ತು ಮೇಲುಗಳ ಈ ಅಂತರ ಸೃಷ್ಟಿಗೊಂಡಿತು.

ಯೂರೋಪಿನ ಸಂಸ್ಕೃತಿ ಚಿಂತಕರು ಭಾರತೀಯ ಸಂಸ್ಕೃತಿಯನ್ನು ವಿಶ್ಲೇಷಿಸುವ ನೆಲೆಗಟ್ಟಿನ ಹಿನ್ನೆಲೆಯಲ್ಲಿರುವ ರಾಜಕಾರಣವನ್ನು ಡಾ. ಕೇಶವಶರ್ಮರವರು ಸ್ಪಷ್ಟವಾಗಿ ಹಾಗೂ ಸರಿಯಾಗಿಯೇ ಗುರುತಿಸುತ್ತಾರೆ.

ಯೂರೋಪಿಯನ್ ಸಂಸ್ಕೃತಿಯು ಭಾರತೀಯ ಬುಡ ಕಟ್ಟುಗಳ ಬಗೆಗೆ ನೋಡಿದ ಕ್ರಮಕ್ಕೂ, ನವೋದಯ ಮಧ್ಯಮ ವರ್ಗದ ಬರಹಗಾರರು ನೋಡಿದ ಕ್ರಮಕ್ಕೂ ಕೆಲವು ವ್ಯತ್ಯಾಸಗಳಿವೆ. ಯುರೋಪ್ ಕೇಂದ್ರಿತ ಚಿಂತನಾ ಕ್ರಮದಲ್ಲಿ ಭಾರತೀಯ ಸಂಸ್ಕೃತಿಯ ವ್ಯಾಖ್ಯಾನವು ಶುರುವಾಗುವುದು ಅಧ್ಯಯನ

ವಿಷಯವೆಂಬಂತೆ ಮಾತ್ರ. ಈ ದೃಷ್ಟಿಯಿಂದ ಭಾರತೀಯ ಸಾಮಾಜಿಕ ಸಂಸ್ಕೃತಿಗಳ ವಿಷಯವು ಯುರೋಪ್ ಕೇಂದ್ರಿತ ಚಿಂತಕರಿಗೆ ಒಂದು ರೀತಿಯಲ್ಲಿ ಪ್ರಯೋಗಶಾಲೆಯಲ್ಲಿರುವ ವಸ್ತು ಮಾತ್ರ. ಇವರು ಭಾರತೀಯ ಬುಡಕಟ್ಟು ಸಂಸ್ಕೃತಿಗಳ ಬಗ್ಗೆ ಚಿಂತಿಸುವಾಗ ತೀರಾ ಅನಾಗರಿಕ ಜಗತ್ತನ್ನು ಬರೆಹಗಳಲ್ಲಿ ಅನಾವರಣ ಮಾಡುವ ಉತ್ಸಾಹದಲ್ಲಿರುತ್ತಾರೆ. ಯುರೋಪಿಯನ್ ಚಿಂತಕರ ಚರ್ಚೆ ಮುಖ್ಯವಾಗಿ ಪ್ರಮೇಯಕ್ಕೆ ಬೇಕಾದ ಸಾವಯವ ವಸ್ತುವನ್ನು ಭಾರತೀಯ ಸಂಸ್ಕೃತಿಗಳ ಬಿಂಬದಿಂದ ಆಯ್ದುಕೊಳ್ಳುವಲ್ಲಿದೆ. ಈ ರೀತಿಯ ಚರ್ಚೆಯ ಅಂತಿಮತೀರ್ಪು ಇರುವುದು ಭಾರತೀಯ ಸಮಾಜದ ಮೇಲೆ ರಾಜಕಾರಣದ ಹಿಡಿತವನ್ನು ಸ್ಥಾಪಿಸುವುದರಲ್ಲಿ ಮಾತ್ರ. (ಕೇಶವಶರ್ಮ, 1998, ಪುಟ. 61–62) ಈ ರೀತಿ ಭಾರತೀಯ ಸಂಸ್ಕೃತಿಯನ್ನು ಛಿದ್ರಗೊಳಿಸಿ ವ್ಯಾಖ್ಯಾನಿಸುವ ದೃಷ್ಟಿಯ ಉದ್ದೇಶವೆಂದರೆ ಭಾರತೀಯ ಸಂಸ್ಕೃತಿ ಬಂಡವಾಳಶಾಹಿ ವ್ಯವಸ್ಥೆಯ ಸಂಸ್ಕೃತಿಗೆ ಸರಿಸಮವಾಗಿ ಹೊಂದಿಕೊಳ್ಳಬೇಕೆಂಬುದಾಗಿತ್ತು. ಸಂಸ್ಕೃತಿಯ ಬಗೆಗೆ ವಿವೇಚನೆ ಮಾಡುವುದನ್ನು ಭಾರತೀಯರಿಗೆ ಕಲಿಸಿದ್ದು ಕೂಡ ಇಂಗ್ಲೀಷ್ ವಿದ್ಯಾಭ್ಯಾಸವೇ ಎಂದರೆ ತಪ್ಪಾಗಲಾರದು.

ಸಂಸ್ಕೃತಿ ಎಂದರೆ ಅದೊಂದು ಜೀವನ ವಿಧಾನ. ಒಂದು ಜನ ಸಮುದಾಯದ ಜೀವನ ವಿಧಾನವೇ ಆ ಸಮಾಜದ ಸಂಸ್ಕೃತಿ. ಎಂದರೆ ಜನಸಮೂಹದ ಬದುಕಿನ ವಿಧಿ, ಆಚರಣೆಗಳು, ರೀತಿ–ನೀತಿಗಳು ಇವೆಲ್ಲವುಗಳನ್ನೊಳಗೊಂಡು ಹೊರಹೊಮ್ಮುವ ಅರ್ಥವೇ ಸಂಸ್ಕೃತಿ. ಸಾಹಿತ್ಯ, ಸಂಗೀತ ಮೊದಲಾದ ಕಲೆಗಳು ನಮ್ಮ ಬದುಕುವ ರೀತಿ–ನೀತಿಗಳನ್ನು ಚಿತ್ರಿಸುವುದರಿಂದ ಸಂಸ್ಕೃತಿಯು ಇವುಗಳಲ್ಲಿ ವ್ಯಕ್ತವಾಗುತ್ತದೆ. ಆಯಾಕಾಲ ದೇಶಗಳಲ್ಲಿ ನಿರ್ಮಿತವಾದ ಸಾಹಿತ್ಯಾದಿಕಲೆಗಳಲ್ಲಿ ಅಂದಂದಿನ ಸಂಸ್ಕೃತಿಯ ರೂಪಗಳನ್ನು ಕಾಣಬಹುದಾಗಿದೆ.

ಕನ್ನಡದಲ್ಲಿ ಕಳೆದ ಕೆಲವು ವರ್ಷಗಳಿಂದ ನಡೆದಿರುವ ಸಂಸ್ಕೃತಿ ವಿಶ್ಲೇಷಣೆಗಳನ್ನು ಗಮನಿಸಿದರೆ ಏಕಮುಖಿ ವಿಶ್ಲೇಷಣೆಯ ದೃಷ್ಟಿಕೋದಿಂದ ಬಹುಮುಖಿ ದೃಷ್ಟಿಕೋನದತ್ತ ಸಾಗಿಬರುತ್ತಿರುವುದು ಸ್ಪಷ್ಟವಾಗುತ್ತದೆ. ಈ

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025 | VOLUME: 09, ISSUE: 06, DECEMBER 2025

ದೃಷ್ಟಿಕೋನಕ್ಕೆ ಪೂರಕವಾಗಿ ಅನೇಕ ಪರಿಕಲ್ಪನೆಗಳು ಮೈದಾಳಿವೆ. ಆರಂಭದಲ್ಲಿ ರಾಷ್ಟ್ರೀಯ ಸಂಸ್ಕೃತಿ, ಭಾರತೀಯ ಸಂಸ್ಕೃತಿ, ವಸಾಹತುಶಾಹಿ ಸಂಸ್ಕೃತಿ, ಬಂಡವಾಳಶಾಹಿ ಸಂಸ್ಕೃತಿ ಎಂಬಂಥ ಪರಿಕಲ್ಪನೆಗಳು ಬಳಕೆಯಲ್ಲಿದ್ದು. ಇತ್ತೀಚೆಗೆ ಪ್ರಧಾನ – ಅಧೀನ, ಶಿಷ್ಟ – ಜನಪದ, ಆರ್ಯ – ದ್ರಾವಿಡ, ವೈದಿಕ – ಅವೈದಿಕ, ಯಜಮಾನ – ದುಡಿವವರ್ಗ, ಜನಪರ – ಜನವಿರೋಧಿ, ಸಮಾನಾಂತರ – ಪರ್ಯಾಯ, ಮುಖ್ಯ – ಉಪಸಂಸ್ಕೃತಿ, ಪ್ರತಿಸಂಸ್ಕೃತಿ ಈ ರೀತಿಯ ಪರಿಕಲ್ಪನೆಗಳಿಂದ ಒಟ್ಟು ಸಮಾಜದ ಬದುಕಿನ ವಿವಿಧ ಆಯಾಮಗಳನ್ನು, ಸಾಂಸ್ಕೃತಿಕ ಜಗತ್ತನ್ನು ಪ್ರವೇಶಿಸುವ ಪ್ರಯತ್ನ ದಿಟ್ಟವಾಗಿ ಸಾಗುತ್ತಿರುವುದು ಒಂದು ಆರೋಗ್ಯಕರ ಬೆಳವಣಿಗೆಯೆನ್ನಬಹುದು. ಇದು ಲಂಕೇಶ ಮತ್ತು ತೇಜಸ್ವಿಯವರ ನಂಬಿಕೆ. ಏಕೆಂದರೆ ಭಾರತದಂಥ ಬಹು ಸಂಸ್ಕೃತಿಗಳ ಸಾಂಸ್ಕೃತಿಕ ಲೋಕಗಳ ಸ್ಪಷ್ಟ ಪರಿಚಯವಾಗುವುದು ಈ ರೀತಿಯ ಅಧ್ಯಯನಗಳಿಂದ ಮಾತ್ರ ಸಾಧ್ಯವಾಗಬಹುದು. ಈ ಮೇಲಿನ ಪರಿಕಲ್ಪನೆಗಳ ಜೊತೆಗೆ ಮತ–ಧರ್ಮ ಸೂಚಕವಾದ ಹಿಂದೂ ಸಂಸ್ಕೃತಿ, ಜೈನ ಸಂಸ್ಕೃತಿ, ಇಸ್ಲಾಂ ಸಂಸ್ಕೃತಿ ಹಾಗೂ ಪ್ರದೇಶ–ಭಾಷಾಸೂಚಕವಾದ ಕನ್ನಡ ಸಂಸ್ಕೃತಿ,

ಈ ರೀತಿಯ ಸಂಸ್ಕೃತಿಯ ಅಖಂಡತೆಯ ಪರಿಕಲ್ಪನೆಗಳನ್ನು ನಿರಚನವಾದವು ಮುಖ್ಯವಾಗಿ ಪ್ರಶ್ನಿಸುತ್ತದೆ ಎಂಬುದಾಗಿ ವಿಮರ್ಶಕ ಕೇಶವಶರ್ಮರವರು ಹೇಳುವ ಅಭಿಪ್ರಾಯಗಳನ್ನು ಇಲ್ಲಿ ಗಮನಿಸಬೇಕಾಗುತ್ತದೆ. “ಸಂಸ್ಕೃತಿಯ ಪರಿಕಲ್ಪನೆಯು ಒಂದು ಸ್ಥಿರವಾದ ಮತ್ತು ಮೌಲ್ಯಾತ್ಮಕವಾದ ವಿಧಾನ ಏನೂ ಅಲ್ಲ. ಸಂಸ್ಕೃತಿಯ ಚಿಂತನೆಯಲ್ಲಿ ರಚನಾವಾದಿಗಳು ಭಾವಿಸಿಕೊಂಡಂತೆ ಕೇಂದ್ರಿತವಾದ ಮೌಲ್ಯ ಸಂಬಂಧಿ ಪ್ರಶ್ನೆಗಳೆನ್ನುವುದು ಇಲ್ಲ. ಹಾಗೇಯೇ ಅದಕ್ಕೆ ಅನೇಕ ಅಂತರ್ ಪಠ್ಯಗಳಿರುತ್ತವೆ ಮತ್ತು ಅನೇಕ ಅರ್ಥಗಳಿರುತ್ತವೆ. ಒಂದು ಸಂಸ್ಕೃತಿ, ಒಂದು ಮೌಲು. ಒಂದು ಕೇಂದ್ರವೆನ್ನುವುದನ್ನು ನಿರಚನ ಸಿದ್ಧಾಂತವು ನಿರಾಕರಿಸುತ್ತದೆ. ಉದಾಹರಣೆಗೆ: ನಾವೀಗ ಬಳಸುತ್ತಿರುವ ‘ಅಖಂಡ ಕರ್ನಾಟಕದ ಸಂಸ್ಕೃತಿ. ಅಖಂಡ ಭಾರತೀಯ ಸಂಸ್ಕೃತಿ ಮುಂತಾದ ಪರಿಭಾಷೆಗಳು ಕೇಳುವುದಕ್ಕೆ ತುಂಬಾ ಆಕರ್ಷಕವಾಗಿದ್ದರೂ ಈ ರೀತಿಯ ಅಖಂಡತೆಯ ಪರಿಕಲ್ಪನೆಯೇ ನಿರಚನದ ಪ್ರಕಾರ ಪ್ರಶ್ನಾರ್ಹ. ನಾವು ನಮಗೆ ಬೇಕಾದಂತೆ ಅಖಂಡ ಕರ್ನಾಟಕ

ಸಂಸ್ಕೃತಿಯೆನ್ನುವ ಪರಿಕಲ್ಪನೆಯನ್ನು ಕಟ್ಟಿಕೊಂಡಿದ್ದೇವೆ ಅಷ್ಟೇ." (ರಚನೆ–ನಿರಚನೆ, 2000, ಪು. 91)

ತೆಲುಗು ಸಂಸ್ಕೃತಿ, ತಮಿಳು ಸಂಸ್ಕೃತಿ, ಮರಾಠಿ ಸಂಸ್ಕೃತಿ ಎಂಬ ಪರಿಕಲ್ಪನೆಗಳು ಬಹಳ ಹಿಂದಿನಿಂದಲೂ ಬಳಕೆಯಾಗುತ್ತಾ ಬಂದಿವೆ. ಈ ಬಗೆಯ ದೃಷ್ಟಿಕೋನ ಪ್ರಧಾನ ಪರಿಕಲ್ಪನೆಗಳಿಂದ ಸಂಸ್ಕೃತಿಯ ಬೇರೆ ಬೇರೆ ಮಗ್ಗಲುಗಳ ದರ್ಶನ ಲಭ್ಯವಾಗುತ್ತದೆ. ಸ್ಥಾಪಿತಹಿತಾಸಕ್ತಿಯ ಮೌಲ್ಯ ಕಲ್ಪನೆಗಳನ್ನು ಪಲ್ಲಟಗೊಳಿಸಲು, ಕೀಳೆಂದು ಪರಿಗಣಿತವಾಗಿರುವುದನ್ನು ಮೌಲ್ಯೀಕರಿಸಲು ಬೇರೆ ಬೇರೆ ರೀತಿಯ ಹಾದಿಗಳನ್ನು ಸಂಸ್ಕೃತಿಗಳು ಕಂಡುಕೊಂಡಿವೆ. ಅವುಗಳಲ್ಲೊಂದೆಂದರೆ ಅಸಂಪ್ರದಾಯಿಕವಾಗಿ ಆಲೋಚಿಸುವುದು.

ಗ್ರಂಥ ಋಣ :

1) ಕೇಶವ ಶರ್ಮ.ಕೆ ರಚನೆ–ನಿರಚನೆ, 2000, ಅಭಿನವ, ಬೆಂಗಳೂರು.
2) ಕೇಶವಶರ್ಮ.ಕೆ., ನೀಲನಕ್ಷೆ., ಗೀತಾಂಜಲಿ ಪುಸ್ತಕ ಪ್ರಕಾಶನ., ಶಿವಮೊಗ್ಗ
3) ಕೇಶವ ಶರ್ಮ. ಕೆ. ಪಡು– ಮೂಡು ವಸಾಹತುಶಾಹಿ ಅನುಭವದ ಕುರಿತ ಲೇಖನಗಳು., 2013., ಸೃಷ್ಟಿ ಪಬ್ಲಿಕೇಷನ್ಸ್., ಬೆಂಗಳೂರು.
4) ನಟರಾಜ ಹುಳಿಯಾರ್ ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, 2004.
5) ಡಿ. ಆರ್. ನಾಗರಾಜ್ ಸಾಹಿತ್ಯ ಕಥನ, 1996., ಅಕ್ಷರ ಪ್ರಕಾಶನ., ಹೆಗ್ಗೋಡು
6) ಶಂಬಾ ಸಂಸ್ಕೃತಿ ಚಿಂತನೆ: ಮಲ್ಲೇಪುರಂ ಜಿ. ವೆಂಕಟೇಶ 1998.

ಲೇಖಕರು : ಡಾ. ಕುಸುಮಾಂಜಲಿ ಎಲ್. ಸಿ. ಜಗದೀಶ್
#101 6ನೇ ರಸ್ತೆ, 2ನೇ ಹಂತ
ಬೃಂದಾವನ ಬಡಾವಣೆ, ಮೈಸೂರು – 570 020

***

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025 | VOLUME: 09, ISSUE: 06, DECEMBER 2025

ಕರ್ನಾಟಕದ ಜನಪದ ನೃತ್ಯಕಲೆಗಳು ಮತ್ತು ಕೊಡಗಿನ ಎರವರ ಕುಣಿತ

ಜಾನಪದವು ಎನ್ನುವುದು ಜನತೆಯ ಜೀವನದ ಸರ್ವಾಂಗೀಣವನ್ನು ಒಳಗೊಂಡುದುದಾಗಿದೆ. ಜನಪದ ಶ್ರೀಸಾಮಾನ್ಯರ ದಿನನಿತ್ಯದ ಬದುಕಿನೊಂದಿಗೆ ಸದಾ ಬೆಸೆದುಕೊಂಡಿರುವಂತದ್ದು. ಜನಪದ ಸಾಹಿತ್ಯ, ಜನಪದ ಭಾಷೆಗಳಂತೆ ಜನಪದ ಕಲೆಯೂ ಇದರಲ್ಲಿ ಒಂದುಗೂಡಿದೆ. ಸಂಗೀತ, ನೃತ್ಯ, ನಾಟಕ, ಚಿತ್ರಕಲೆ, ಶಿಲ್ಪಕಲೆ ಮೊದಲಾದುವುಗಳು ಈ ಜನಪದ ಕಲೆಯ ಪ್ರಮುಖ ಅಂಗಗಳಾಗಿವೆ. ಕನ್ನಡನಾಡು ಬಹು ವಿಶಾಲವಾದ ಪ್ರದೇಶವನ್ನೊಳಗೊಂಡಿದೆ ಇದು ದಕ್ಷಿಣ ಭಾರತದ ಸಂಸ್ಕೃತಿಯ ಮೂಲನೆಲೆ. ಮೂಲದ್ರಾವಿಡ ಜನಾಂಗಗಳ ತವರು. ಈ ನಾಡಿನಲ್ಲಿ ಪ್ರಾಚೀನ ಕಾಲದಿಂದಲೂ ಜನಪದಕಲೆಗಳು ಇದ್ದವು ಎನ್ನುವುದಕ್ಕೆ ಅಭಿಜಾತಕಲೆಗಳೇ ನಿದರ್ಶನವಾಗಿವೆ. ಅಭಿಜಾತ ಕಲೆಗಳು ಅನುಭವಿಯಾದ ಗುರುವಿನ ಸಂಸರ್ಗದಿಂದ ದೊರೆಯುವಂತದ್ದು, ಜನಪದ ಕಲೆಗಳು ಜನರ ನಡುವೆಯೇ ಪುಕ್ಕಟ್ಟೆಯಾಗಿ ದೊರೆಯುತ್ತವೆ. ಜಾನಪದ ಕಲೆಗಳನ್ನು ಪ್ರತ್ಯಕ್ಷ ನೋಡುವುದರಿಂದ, ಕೇಳುವುದರಿಂದ ಈ ಕಲೆಗಳನ್ನು ತಿಳಿದುಕೊಳ್ಳಬಹುದು ಇದಕ್ಕೆ ಅಗತ್ಯವಾಗಿ ಬೇಕಾದುದು–ಶ್ರದ್ಧೆ ಮತ್ತು ಸಮರ್ಪಣೆ. ಜನಪದಕಲೆಗಳ ಮೂಲವನ್ನು ಅರಸುತ್ತಾ ಹೋದರೆ ಅದು ಇಂದು ನಿನ್ನೆಯದಲ್ಲ. ತಲೆತಲಾಂತರಗಳಿಂದ ಅವು ಬೇಸಾಯಗಾರರ, ಕೂಲಿಯಾಳುಗಳ ಅಂಗಳದಲ್ಲಿ

ಹುಟ್ಟಿಕೊಂಡು ಬಂದವುಗಳು. ಭಾಷೆಗಳಲ್ಲಿ ಇದ್ದಂತೆ ಇವುಗಳಲ್ಲಿಯೂ ಸಹ ಪ್ರಾದೇಶಿಕ ಭಿನ್ನತೆಯಿದೆ. ಹೀಗಿದ್ದರು ಸಹ ವೈವಿಧ್ಯಮುಖತೆಯಿಂದ ಏಕತೆಯೆಡೆಗೆ ಸಾಗುವ ಪ್ರಕಾರವಾಗಿ ಕಾಣಸಿಗುತ್ತದೆ. ಜನಪದ ಕಲೆಗಳನ್ನು ಜನಪದರ ಸುಗ್ಗಿ ಸಮಾರಂಭಗಳಲ್ಲಿ, ಹಬ್ಬ–ಹುಣ್ಣಿಮೆಗಳಲ್ಲಿ ಇವುಗಳನ್ನು ಪ್ರತ್ಯಕ್ಷವಾಗಿ ಕಾಣಬಹುದು. ಜನಪದರಿಗಿದ್ದ ಸಂಸ್ಕಾರ, ಅನುಭವಗಳೇ ಇವೆಲ್ಲದಕ್ಕು ಅರಿವು ತಂದು ಕೊಡುವ ಗುರುವಾಗಿ ಗೋಚರಿಸುತ್ತದೆ.

KEY WORDS: ಜನಪದ ಕಲೆ, ಆದಿವಾಸಿಗಳು, ಬುಡಕಟ್ಟು ಕುಣಿತ, ಅಲಾವಿ ಕುಣಿತ, ಎರವರ ಕುಣಿತ.

“ಜನಪದ ಹಾಡುಕುಣಿತಗಳ ಜಲಮೂಲ ನಮ್ಮ ಅನಕ್ಷರಸ್ಥ ಗ್ರಾಮೀಣರ ಅಂತರಂಗ, ಅವು ಬೆಳೆದುದು ಲೋಕಕ್ಕೆ ಅನ್ನ ಬೆಳೆದುಕೊಡುವ ರೈತನ ಅಂಗಣದಲ್ಲಿ ನಮ್ಮ ಜನಪದ ನಂಬಿಕೆಗೆ ಹುಟ್ಟಿದ ಪರಿಸರವೇ ಶಾಲೆ, ಪಟ್ಟ ಅನುಭವವೇ ಗುರು”[1]

ಜನಪದಕಲೆಗಳ ಮುಖ್ಯ ಆಶಯವೇ ಮಾನಸಿಕ ನೆಮ್ಮದಿ. ಈ ನೆಮ್ಮದಿಯಿಂದ ಹೃದಯ ಸಂಸ್ಕಾರವೂ ಆಗುತ್ತದೆ. ಕಲೆಯೆನ್ನುವುದು ಕಲೆಗಾಗಿ ಎನ್ನುವ ತತ್ವವನ್ನು ಜನಪದ ಕಲೆಗಳು ಸಮರ್ಥಿಸಿಕೊಂಡರು ಹಲವಾರು ಕಲೆಗಳು ಇತ್ತೀಚೆಗೆ ಬರಬರುತ್ತಾ ವೃತ್ತಿ ಕಲೆಗಳಾಗಿ ಪರಿವರ್ತನೆಗೊಂಡಿವೆ. ಆದರೂ ತಿಳಿಯುಬೇಕಾದ ಮುಖ್ಯ ಅಂಶವೆಂದರೆ ಇವು ಹೊಟ್ಟೆಪಾಡಿಗಾಗಿ ಹುಟ್ಟಿಕೊಂಡವುಗಳಲ್ಲ. “ಭಯ–ಭ್ರಮೆಗಳಿಂದಾಗಿ ನಂಬಿಕೆ, ದೈವೀಆರಾಧನೆಗೆ ಜೋತು ಬಿದ್ದು ಸಂಪ್ರದಾಯಕ್ಕೆ ಅಂಟಿಕೊಂಡು ಬಂದವುಗಳೇ ಹೆಚ್ಚು, ದೈವೀಆರಾಧನೆಗಾಗಿಯೇ ಹುಟ್ಟಿಕೊಂಡ ಈ ಹಾಡು– ಕುಣಿತಗಳಲ್ಲಿ ಕೆಲವು ಕಾಲಾನಂತರದಲ್ಲಿ ಮನರಂಜನೆಯ ಮಾಧ್ಯಮವಾದುವು. ಮತ್ತೆ ಕೆಲವು ಉಪಜೀವನದ ಮಾರ್ಗವಾದವು. ಕೆಲವಂತೂ ವಿಶೇಷವಾಗಿ ದೈವೀಆರಾಧನೆಗಾಗಿಯೇ ಮೀಸಲಾದುವು. ಅಂತೂ ಶತಮಾನಗಳಿಂದ ಅವನ ಬದುಕಿನೊಂದಿಗೆ ಇವು ಉಳಿದುಕೊಂಡು ಬಂದವುಗಳಾಗಿವೆ”.[2]

ಜನಪದಕಲೆಗೆ ತನ್ನದೇ ಆದ ಒಂದು ನಿಲುವು ಹಾಗೂ ಗತಿಯೂ

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025 | VOLUME: 09, ISSUE: 06, DECEMBER 2025

ಇದೆ. ಸೃಷ್ಟಿಯ ಅವ್ಯಕ್ತ ಸ್ವರೂಪದ, ನಾದಮಾಧುರ್ಯದ ಅನುಕರಣೆಯೇ ಕಲೆಯಾಗಿ ಹೊರಸೂಸಿದೆ. ಇದರ ವಿಶೇಷತೆಯೆಂದರೆ ಆಯಾ ಭಾಗದ ಜನಜೀವನದ ಸಂಸ್ಕೃತಿಯನ್ನು ಈ ಕಲೆಯಲ್ಲಿ ಕಾಣಬಹುದು. ಮನುಷ್ಯನನ್ನು ತಾನಿರುವ ಸ್ಥಿತಿಗಿಂತ ಉನ್ನತ ಸ್ಥಿತಿಗೆ ತರುವುದೇ ಕಲೆಯ ಬಹುಮುಖ್ಯವಾದ ಕೆಲಸವಾಗಿದೆ. ಇದು ಸಂಸ್ಕೃತಿಯ ಸಾರವಾಗಿರುತ್ತದೆ. ಆದರೆ ಕಲೆಯು ಕಾಮವಾಸನೆಗೆ ಅಂಟಿಕೊಂಡರೆ ಮಾತ್ರ ಅದು ತನ್ನ ಸೌಂದಯ್ಯವನ್ನು ಕಳೆದುಕೊಂಡು ಸತ್ವಹೀನವೆನಿಸುತ್ತದೆ. ಅಂಥ ಕಲೆಯಿಂದ ಯಾವ ಸಂತೋಷವೂ ಆಗಲಾರದು. ಕಾಮವಾಸನೆಯನ್ನು ಸುಟ್ಟರೆ ಮಾತ್ರ ಕಲೆಯ ಬೆಳವಣಿಗೆ ಸಾಧ್ಯ. ಅಲ್ಲಿ ನೈಜತೆಯು ಮೈವೆತ್ತು ಕುಣಿಯುತ್ತದೆ. ಕೃತಕತೆಗೆ ಎಲ್ಲಿಯೂ ಎಡೆ ಇರಕೂಡದು. ಹೀಗಿದ್ದ ಕಲೆ ಮಾನವ ಸಂಸ್ಕೃತಿಯ ಪ್ರತೀಕವಾಗಿರುತ್ತದೆ.

ಹಲವಾರು ವಿದ್ವಾಂಸರು ಕಲೆ ಕುರಿತು ಈ ಕೆಳಗಿನಂತೆ ತಮ್ಮ ಹೇಳಿಕೆ ನೀಡಿದ್ದಾರೆ. "ಮಾನವ ಕಲ್ಯಾಣಕ್ಕೆ ಹೇತುವಾದುದು ಕಲೆ" ಎಂದು ಟಾಲಸ್ಟಾಯ್‌ರವರು, "ಮಾನವನ ಚಿತ್ರರಂಗದರ್ಶನವೇ ಕಲೆ" ಎಂದು ಹೆಬ್ಬಲ್‌ರವರು, "ನಿಸರ್ಗದ ರಸಗಟ್ಟಿಯೆ ಕಲೆಯೆಂದು" ಫಾಲ್ಬಾಕ್‌ರವರು, "ಜೀವನ ದರ್ಶನ ಮಾಡಿಸುವುದೇ ಕಲೆ" ಎಂದು ಸಿ. ಇ. ಎಂ. ಜೋಡ್‌ರವರು. "ಆತ್ಮದರ್ಶನ ಮಾಡಿಸುವುದೇ ಕಲೆ' ಎಂದು ಅರವಿಂದರು ಹೇಳುತ್ತಾರೆ. ಇದರೊಂದಿಗೆ ಕಲೆ ಎಂದರೆ ಸೌಂದರ್ಯದರ್ಶನ ಎಂದವರು ಹಲವು ದಾರ್ಶನಿಕರು. ಮೂಕಪ್ರಾಣಿಗಳಲ್ಲಿಯೂ ಕೂಡ ಮನುಷ್ಯನಲ್ಲಿಯಂತೆ ಕಲೆಯ ಸ್ವರೂಪವನ್ನು ಗುರುತಿಸಬಹುದಾಗಿದೆ. ಜನಪದ ಕಲೆಯಲ್ಲಿ ಕಲಾವಿದ ಮತ್ತು ಪ್ರೇಕ್ಷಕರೀರ್ವರಿಗೂ ತೃಪ್ತಿ ಸಂತೋಷಗಳನ್ನುಂಟು ಮಾಡುವುದೇ ಕಲೆಯಾಗಿದೆ. ಇತಿಹಾಸದ ಪುಟಗಳನ್ನು ಕೆದಕಿ ನೋಡಿದಾಗ ಜನಪದ ಕಲೆಗಳು ಅತಿ ಪುರಾತನ ಕಾಲದಲ್ಲಿಯೇ ಮಾನವನಲ್ಲಿ ಹುಟ್ಟಿದುವೆಂದು ತಿಳಿಯಬಹುದು. "ಇವು ನಿರ್ದಿಷ್ಟವಾಗಿ ಯಾವಾಗ ಹುಟ್ಟಿದವೆಂದು ಹೇಳಲು ಸಾಧ್ಯವಿಲ್ಲ. ಕ್ರಿ. ಪೂ. 3000ಕ್ಕೆ ಮೊದಲೇ ಅವನು ಕೆತ್ತಿದ ಅಥವಾ ಕೊರೆದ ಚಿತ್ರಗಳು ಗುಹೆಯಲ್ಲಿ ದೊರೆಯುತ್ತವೆ, ಅದಕ್ಕಿಂತಲೂ ಹಿಂದಿನ ಕಾಲದಲ್ಲಿ ಅವನು ಉಪಯೋಗಿಸಿದ

ಕಲ್ಲಿನ ಆಯುಧಗಳ ಮತ್ತು ಮಣ್ಣಿನ ಮಡಿಕೆಗಳ ಅವಶೇಷಗಳು ದೊರೆತಿವೆ. ಕೆಲವು ಕಾಡುಜನ ಬೆಂಕಿಯನ್ನು ಮಾಡುವ ಸಲಕರಣೆಗೆ ಒಂದು ಸುಂದರ ರೂಪವನ್ನು ಕೊಟ್ಟಿರುತ್ತಾರೆ. ಪ್ರಾಕ್ತನರ ಹಾಡುಗಳು, ಕುಣಿತ ಮುಂತಾದುವು ಅವರ ಮತಸಂಸ್ಕಾರದ ಅಂಗಗಳಾಗಿದ್ದವು".[3]

ಆದಿವಾಸಿಗಳ ಕಲೆ ಚಿತ್ರರೂಪದ ಸಂಕೇತಗಳಲ್ಲಿ ಇದ್ದದ್ದು ಕಂಡುಬರುತ್ತದೆ. ಅವುಗಳು ಕೇಡು ಮತ್ತು ಕಾಯಿಲೆಗಳ ನಿವಾರಿಸುವ ರಕ್ಷೆಗಳಾದ್ದವು. ಇವು ಹೆಚ್ಚಾಗಿ ಬೇಟೆ ಮತ್ತು ಯುದ್ಧಗಳನ್ನು ಪ್ರತಿಬಿಂಬಿಸುತ್ತವೆ. ಅವರ ಶಿಲ್ಪಕಲೆಗಲೆಲ್ಲ ವೀರ–ಪ್ರಶಸ್ತಿಗಾಗಿ ಹುಟ್ಟಿದವುಗಳಾಗಿವೆ. ಅವರು ಚಿತ್ರಗಳನ್ನು ಮಾಟಕ್ಕಾಗಿಯೂ ಉಪಯೋಗಿಸುತ್ತಿದ್ದರು. ಕಲೆಯು ಸಂಕೇತಗಳನ್ನು ಕುಲದೇವತೆಯು ಲಾಂಛನಗಳಾಗಿಯೂ ಬಳಸುತ್ತಿದ್ದರು. ಪುರಾತನರ ಕಲೆಯ ಅಂಶಗಳನ್ನು ಇಂದು ಹಳ್ಳಿಯ ಜನಪದರ ಕಲೆಗಳಲ್ಲಿ ಕಂಡುಕೊಳ್ಳಬಹುದು. ದೇವ–ದೇವತೆಗಳ ಜಾತ್ರೆ ಮೊದಲಾದ ಸಂಭ್ರಮಗಳಲ್ಲಿ ಮುಖವಾಡ ಧರಿಸಿ ಕುಣಿದು ಹಾಡುವುದನ್ನು ಕಾಣುತ್ತೇವೆ. ಆಗ ನರ್ತನ ಮಾಡುವುದೂ ಉಂಟು, ಜನಪದ ಕಲೆ ಯಾವುದೋ ಜಾತಿ– ಮತಕ್ಕೆ ಮೀಸಲಾಗಿರದೆ ಶ್ರೀಸಾಮಾನ್ಯರ ಜೀವನದ ವಿವಿಧ ಘಟ್ಟಗಳಲ್ಲೂ ಕಾಣಿಸಿಕೊಳ್ಳುತ್ತದೆ. ಮದುವೆ, ಮುಂಜಿ, ಹುಟ್ಟು, ಸಾವು ಶಾಸ್ತ್ರಗಳಲ್ಲೂ, ಸುಗ್ಗಿಸಂಭ್ರಮಗಳಲ್ಲೂ, ಭತ್ತ ಕುಟ್ಟುವಾಗ, ರಾಗಿ ಬೀಸುವಾಗ, ಹೊಲಗದ್ದೆಗಳ ಹಸನು ಮಾಡುವಾಗ ಹೀಗೆ ಅದು ಹಲವು ಪ್ರಸಂಗಗಳಲ್ಲಿ ಮೈದೋರುತ್ತದೆ. ಸ್ತ್ರೀ ಪುರುಷರೆನ್ನದೆ ಎಲ್ಲರಿಗೂ ಈ ಕಲೆ ಅಗತ್ಯವಾಗಿ ಬೇಕಿತ್ತು. ಬುಡಕಟ್ಟು ಜನರಿಂದ ಹಿಡಿದು, ಗ್ರಾಮ್ಯರ ಪ್ರತಿ ಮನೆ ಮನೆಗಳಲ್ಲೂ ಇದನ್ನು ಕಾಣಬಹುದು. ಪ್ರಾತಃಕಾಲ ಎದ್ದು ಗೃಹಿಣಿಯರು ಹೊಸ್ತಿಲ ತೊಳೆದು, ರಂಗೋಲಿ ಹಾಕಿ, ಹೂ ತಂದಿಟ್ಟುಕೊಂಡು, ಸ್ನಾನ ಪೂಜಾದಿಗಳನ್ನು ತೀರಿಸಿಕೊಂಡು, ಅಡುಗೆ ಮಾಡಿ, ಉಂಡು ದುಡಿತಕ್ಕೆ ತೆರಳುವ ದಿನನಿತ್ಯದ ಆಗು ಹೋಗುಗಳಲ್ಲೂ ಒಂದು ರೀತಿಯ ಕಲೆ ಹುದುಗಿ ಕೊಂಡಿರುತ್ತದೆ. ಜೀವನದ ಒಂದಂಶವೇ ಎನ್ನುವ ರೀತಿಯಲ್ಲಿ ಶ್ರೀಸಾಮಾನ್ಯನ, ಬದುಕಿನಲ್ಲಿ ಜನಪದ ಕಲೆ ಬೆರೆತುಕೊಂಡು ಬಂದಿದೆ.

ಕಲೆಗಳಲ್ಲಿ ಲಲಿತಕಲೆ ಮತ್ತು ಉಪಯುಕ್ತ ಕಲೆ ಎಂಬ ವಿಭಜನೆ ಆದದ್ದು ಆಧುನಿಕ ಕಾಲದಲ್ಲಿ, ಹಿಂದೆ ಈ ವಿಂಗಡಣೆ ಇದ್ದಿರಲಿಲ್ಲ, ಕಾಮಸೂತ್ರ ಮೊದಲಾದ ಗ್ರಂಥಗಳು ಹೇಳುವ 64 ಕಲೆಗಳಲ್ಲಿ ಶಿಲ್ಪ, ಚಿತ್ರ. ವಾಸ್ತು ಮುಂತಾದ ಲಲಿತ ಕಲೆಗಳೊಡನೆ ಉಪಯುಕ್ತ ಕಲೆಗಳೂ ಸೇರಿಕೊಂಡಿವೆ. ಶಿಲ್ಪ, ಚಿತ್ರ ಮೊದಲಾದ ಕಲೆಗಳು ಮೊದಮೊದಲು ಬೌದ್ಧಮತಕ್ಕೂ, ಬರಬರುತ್ತಾ, ಶೈವ, ವೈಷ್ಣವ ಮತಗಳಿಗೂ ಮತ್ತು ಇಸ್ಲಾಂ ಮತಕ್ಕೂ ಅಧೀನವಾಗಿದ್ದುದನ್ನು ತಿಳಿಯಬಹುದು. ಜನಪದ ಕಲೆಗಳಲ್ಲಿ ನೃತ್ಯಕಲೆಯು (ಕುಣಿತ) ಅತ್ಯಂತ ಪ್ರಮುಖವಾದುದು. ಮನುಷ್ಯನ ವಿಚಾರಗಳು ಹಾವಭಾವಗಳ ಮಾಧ್ಯಮದೊಂದಿಗೆ ಗೋಚರವಾದಾಗ ಹೆಜ್ಜೆ ಚೆಲ್ಲಿ, ತಾಳ–ಗತ್ತುಗಳೊಂದಿಗೆ ಮೈಮಣಿಸುವ ಕಲೆಯು ನೃತ್ಯಕಲೆಯಾಗಿದೆ. ಭಾವಗಳು ಭಂಗಿಗಳ (ಸನ್ನೆ) ಮುಖಾಂತರ ಹೊರಚೆಲ್ಲುತ್ತವೆ. ಆ ಭಂಗಿಗಳಿಗೆ ತನ್ನದೇ ಆದ ಅರ್ಥವಿರುತ್ತದೆ. ಅವುಗಳನ್ನು ಅರಿತಾಗ ಅಲ್ಲಿ ಆನಂದವುಂಟಾಗುತ್ತದೆ. ತನ್ನ ಸುಖ ದುಃಖದ ರಾಗಾಲಾಪಗಳನ್ನು ಕಲಾಕಾರನು ಹಾವಭಾವಗಳಲ್ಲಿ ತೋರಿಸುತ್ತಾನೆ. ಮಾತು ಬಾರದ ಮುನ್ನ ಮನುಷ್ಯನಲ್ಲಿ ಈ ನೃತ್ಯಕಲೆ ಹುಟ್ಟಿಕೊಂಡು ಬಂದಿದೆ ಎಂದು ಅಂದಾಜಿಸಬಹುದು. ಜನಪದ ಕಲೆಗೆ ಮುಖ್ಯವಾಗಿ ಬೇಕಾದದ್ದು ತರಂಗಿತತೆ, ತನ್ಮಯತೆ, ಮಿತವಾದ ಗತಿ ಹಾಗು ವಿನ್ಯಾಸ ಇವುಗಳಿದ್ದರೆ ಎಂಥವರನ್ನು ಆಕರ್ಷಿಸುತ್ತದೆ. ಕುಣಿಯುವವನು ನೃತ್ಯಗತಿಯ ಮೂಲಕ ಸುಖ, ದುಃಖ, ಹಿಗ್ಗು, ಉತ್ಸಾಹ, ಮರುಕ ಸಂತಾಪಗಳನ್ನು ಒಳಗೊಂಡ ನವರಸಗಳನ್ನು ತೋರಿಸಿಕೊಡುತ್ತಾನೆ. ಅನಕ್ಷರಸ್ಥರಾದ ಕೆಳವರ್ಗದ ಜನರು ಹೆಚ್ಚಾಗಿ ಈ ಕುಣಿತಗಳಲ್ಲಿ ಭಾಗವಹಿಸುವ ವಾಡಿಕೆ. ಹೀಗಾಗಿ ಇವು ಅನಾಗರಿಕ, ಒರಟು ಎಂದು ಹೀಗಳೆದವರೂ ಉಂಟು. ಇದು ಸತ್ಯಕ್ಕೆ ದೂರವಾದ, ಹುರುಳಿಲ್ಲದ ಮಾತು. ಪ್ರಾಪಂಚಿಕ ಜೀವನದಲ್ಲಿ ಬೇಸರವನ್ನು ಕಳೆದು ಕೊಳ್ಳುವುದಕ್ಕಾಗಿ ಕುಣಿಯುತ್ತ ಬಂದ ಕಲಾಕಾರರ ಈ ಕುಣಿತವನ್ನು ಕಂಡ ಎಲ್ಲರೂ ತಮ್ಮ ಬೇಸರವನ್ನು ಪರಿಹರಿಸಿಕೊಳ್ಳಬಹುದಾದುದು ಸತ್ಯ.

ಡಾ. ಕಾರಂತರು, “ಕನ್ನಡ ನಾಡಿನಲ್ಲಿ ಕನಿಷ್ಠ ನೂರು ರೀತಿಯ ಜನಪದ ನೃತ್ಯಗಳನ್ನು ಕಾಣಬಹುದು ಎಂದಿದ್ದಾರೆ. ದಕ್ಷಿಣ ಕನ್ನಡದ ಜನರಿಗೆ ನರ್ತನವು

ಅವರ ಜೀವನದ ಉಸಿರಾಗಿದೆ. ಹೊಲದ ಕೆಲಸ ಮುಗಿದಾಗ, ಮೈ ಬೆವರು ಇಳಿಸಿಕೊಂಡು ಮನೆಗೆ ಬಂದಾಗ ಕುಣಿಯುವರು. ಹೊಟ್ಟೆಗೆ ಅನ್ನ ಬಿದ್ದರೂ ಸರಿ, ಇಲ್ಲದಿದ್ದರೂ ಸರಿ ಇವರಿಗೆ ಕುಣಿತ ಜೀವನದ ಎಲ್ಲಕ್ಕೂ ಬೇಕು"4 ಎನ್ನುವ ಮಾತನ್ನು ಕಾರಂತರು ಒತ್ತಿ ಹೇಳಿದ್ದಾರೆ. ಜನಪದ ಕುಣಿತಗಳು ದೇವರ ಇಲ್ಲವೆ ಭೂತ ಪ್ರೇತಗಳ ಆರಾಧನೆಯ ನೆಪದಲ್ಲಿ ಮನೆಮಾಡಿಕೊಂಡಿವೆ. ಸುಖ ದುಃಖಗಳ ಪ್ರತೀಕವಾಗಿ ಮತ್ತೆ ಕೆಲವು ಮನರಂಜನೆಗೆ ವಾಡಿಕೆ ಕುಣಿತವಾಗಿವೆ. ಲಂಬಾಣಿ ಕುಣಿತ, ಮರಗಾಲ ಕುಣಿತ, ಉಮ್ಮತ್ತಾಟ, ಕಾಡ್ಯಾಕುಣಿತ, ಕಂಗಿಲ ಕುಣಿತ, ಒತ್ತೆಕೋಲ ಕುಣಿತ, ಕೀಲು ಕುದುರೆ ಕುಣಿತ, ಸುಗ್ಗಿ ಕುಣಿತ, ಹೋಳಿ ಕುಣಿತ, ಸಿದ್ಧವೇಷ ಕುಣಿತ ಮೊದಲಾದವು. ಮನರಂಜನೆಗೆ ಮೀಸಲಾದ ಕುಣಿತಗಳಾಗಿವೆ. ಪೂಜಾಕುಣಿತ, ಪುರವಂತನ ಕುಣಿತ, ಚೌಡಮ್ಮನ ಕುಣಿತ, ಎಲ್ಲಮ್ಮನ ಕುಣಿತ (ಜೋಗತಿ), ದೇವರಗುಡ್ಡ ಕುಣಿತ, ವೀರಗಾಸೆ ಕುಣಿತ, ಒನಕೆ ಕುಣಿತ, ಅಲಾವಿ ಕುಣಿತ, ಕರಗ ಕುಣಿತ, ಕಂಬಿ ಕುಣಿತ, ನಂದಿಕೋಲ ಕುಣಿತ, ಕರಗೋಲ ಕುಣಿತ, ಡೊಳ್ಳು ಕುಣಿತ, ಹಾಗು ಕೋಲಾಟ ಮೊದಲಾದವುಗಳು ಆರಾಧನೆಗಾಗಿ ರೂಢಿಯಲ್ಲಿವೆ. ಭೂತಾರಾಧನೆ, ಆಂಜನಯ್ಯನ ವೇಷ, ಮಾರಿಕುಣಿತ, ಗುಮಟೆಕುಣಿತ ಗೇರ್ಕುಣಿತ, ದಕ್ಕೆ ಬಲಿಕುಣಿತ, ವೈದ್ಯ ಕುಣಿತ ಮೊದಲಾದುವುಗಳು ಭೂತಾರಾಧನೆಗೆ ಮೀಸಲಾದ ಕುಣಿತಗಳಾಗಿವೆ. ದೇವತೆ ಹಾಗು ಭೂತ ಪ್ರೀತ್ಯರ್ಥವಾಗಿ ಬಂದ ಕುಣಿತಗಳನ್ನು ಅತಿ ಧಾರ್ಮಿಕವೆಂದೂ, ಜನನ ಮರಣ ಮದುವೆ ಮೊದಲಾದ ವಿಧಿಕಾರಗಳಲ್ಲಿ ಬರುವ ಕುಣಿತಗಳನ್ನು ಸಾಮಾಜಿಕವೆಂದೂ, ಬೇಟೆ ಇಲ್ಲವೆ ಯುದ್ಧಕಾಲದಲ್ಲಿ ಆರ್ಭಟಿಸುವ ಕುಣಿತಗಳನ್ನು ಕ್ಷಾತ್ರೀಯವೆಂದೂ, ಸುಗ್ಗಿ, ಮಳೆಗಾಲ ಮೊದಲಾದ ಋತುಗಳಲ್ಲಿ ಕುಣಿಯುವಂಥವುಗಳನ್ನು ಋತುಪ್ರಮಾಣಿತವೆಂದೂ ಕರೆಯಬಹುದು.

ಕುಣಿತಗಳ ಒಟ್ಟು ಉದ್ದೇಶ ಸಂತೋಷ. ಹಿಂದಿನವರು ಆಯಾ ಸಂದರ್ಭಗಳಲ್ಲಿ ಅವರಿಗನಿಸಿದಂತೆ ಕುಣಿಯುತ್ತಾ ಬಂದಿದ್ದಾರೆ. ಅವು ಕಣ್ಣಿಂದ ಕಣ್ಣಿಗೆ ಹಬ್ಬಿ, ಸಂಪ್ರದಾಯಕ್ಕಂಟಿಕೊಂಡು ಅಷ್ಟಿಷ್ಟು ಬದಲಾವಣೆಗಳೊಂದಿಗೆ ಈಗಲೂ ಬಳಕೆಯಲ್ಲುಳಿದುಕೊಂಡು ಬಂದಿವೆ. ಆಯಾ ಕುಣಿತಗಳಿಗೆ ಇಂತಿಂಥ

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025 | VOLUME: 09, ISSUE: 06, DECEMBER 2025

ವೇಷ ಭೂಷಣಗಳೆಂದು ಗೊತ್ತಿದ್ದರೂ–ಕಟ್ಟು ನಿಟ್ಟಿನ ನಿರ್ಬಂಧವೇನಿಲ್ಲ. ತಮಗೆ ದೊರೆಯುವ ವಸ್ತುಗಳನ್ನೇ ಉಪಯೋಗಿಸಿಕೊಳ್ಳಬಹುದು. ಒಮ್ಮೊಮ್ಮೆ ಈ ವೇಷ ನೋಡಿ ನಗು ಬರುವುದೂ ಉಂಟು, ಹೀಗೆ ಜನಪದ ನೃತ್ಯಗಳು ಸಾಮಾನ್ಯರ ಬದುಕಿನಲ್ಲಿ ಒಂಟಿಯಾಗಿಯೂ ಸಾಮೂಹಿಕವಾಗಿಯೂ ರೂಢಿಯಲ್ಲಿದ್ದುದನ್ನು ಗುರುತಿಸಬಹುದಾಗಿದೆ.

ಈ ಜನಪದ ಕುಣಿತಗಳಲ್ಲಿ ಕೋಲಾಟ ಸುಗ್ಗಿಯ ಕುಣಿತ, ಭೂತಾರಾಧನೆ, ಡೊಳ್ಳು, ಕುಣಿತ, ಅಲಾವಿ ಕುಣಿತ, ಪುರವಂತರ ಕುಣಿತಗಳು ಬಹು ಆಕರ್ಷಿಕವಾಗಿರುತ್ತವೆ. ಕೋಲುಗಳಿಂದ ಆಡುವ ಆಟ ಕೋಲಾಟವಾಗಿದ್ದು ಮೂಲತಃ ಇದು ಹೊರಗಿನಿಂದ ಬಂದ ಆಟವಾಗಿದೆ. ಕೋಲುಗಳಿಗೆ ಕಟ್ಟಿದ ಗೆಜ್ಜೆಗಳ ಸಪ್ಪಳ ಹಾಗು ಕಾಲುಗೆಜ್ಜೆಯ ಸಪ್ಪಳಗಳಿಗೆ ತಕ್ಕಂತೆ ಹೆಜ್ಜೆ ಹಾಕುತ್ತಾ, ಕೋಲು ಬಾರಿಸುತ್ತ ಮೈಬಳಕಿಸುವ ಸಾಮೂಹಿಕ ನೃತ್ಯ ನೋಡುವವರನ್ನು ಬೆರಗುಗೊಳಿಸುತ್ತದೆ. ಹಬ್ಬ ಹುಣ್ಣಿಮೆ, ಜಾತ್ರೆ ಮೊದಲಾದ ಉತ್ಸವಗಳಲ್ಲಿ ಈ ಕೋಲಾಟ ಆಡುವರು. ಮಕ್ಕಳಿಂದ ಮುದುಕರೂ ಈ ಕುಣಿತದಲ್ಲಿ ಭಾಗವಹಿಸುವುದುಂಟು. ಕಾಡುಗೊಲ್ಲರ ಹಾಗು ಲಂಬಾಣಿ ಜನರ ವಿಶೇಷ ಆಟವಿದು. ದೈವೀ ಆರಾಧನೆಗಾಗಿ ಹುಟ್ಟಿಕೊಂಡು ಬಂದ ಈ ಕಲೆ ಕೃಷ್ಣಗೊಲ್ಲತಿಯರ ಮೆಚ್ಚಿನ ಕುಣಿತವಾಗಿದೆ. ದೇವರನ್ನು ಕುರಿತ ಹಾಡುಗಳನ್ನೂ ಈ ಆಟದಲ್ಲಿ ಹಾಡುವರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ತಂದಾನಾ ತಾನಾ' ಎಂಬ ಸ್ವರದೊಂದಿಗೆ ಆಡುವ ಕೋಲಾಟ ಬಹುಮೋಜಿನದಾಗಿದೆ. ಕರ್ನಾಟಕದ ಎಲ್ಲಾ ಜಿಲ್ಲೆಯಲ್ಲಿಯೂ ಹಬ್ಬಹರಿದಿನಗಳ ಸಂದರ್ಭದಲ್ಲಂತೂ ಈ ಆಟ ಆಡುವದನ್ನು ಈಗಲೂ ಕಾಣಬಹುದಾಗಿದೆ. ಕೋಲಾಟದಲ್ಲಿ ಗಣೇಶಸ್ತುತಿ ಕೋಲು, ಚಿತ್ತಾರದ ಕೋಲು, ಮೂರಾಳು ಸುತ್ತಾಡುವ ಕೋಲು, ಗೀರುಕೋಲು, ಚೆಂಡಾಡುವ ಕೋಲು, ತೇರುಕೋಲು, ಕಾದಲಗೋಪುಕೋಲು, ಕುಕ್ಕರಗಾಲುಕೋಲು, ಜಡೆಕೋಲು, ಕೊರವಂಜಿಲು ಹೀಗೆ ಹಲವು ಪ್ರಕಾರಗಳಿವೆ. ಇದು ಅತ್ಯಂತ ಜನಪ್ರಿಯವಾದ ಆಟವಾಗಿದೆ.

ಉತ್ತರ ಕರ್ನಾಟಕದಲ್ಲಿ ವೀರಶೈವರ ಮದುವೆ ಸಮಾರಂಭದ ಕಾಲದಲ್ಲಿ

(ಗುಗ್ಗಳ), ಹಾಗು ವೀರಭದ್ರದೇವರ ಜಾತ್ರೆಯಲ್ಲಿ ಪುರವಂತರ ಕುಣಿತ ವೀರಾವೇಶಕ್ಕೆ ಸಾಕ್ಷಿಯಾಗಿದೆ. ಡೊಳ್ಳು ಕುಣಿತ ಹಾಲು ಮತದವರ ಪ್ರೀತಿಯ ಕುಣಿತವಾಗಿದೆ. ಅಲಾವಿ ಕುಣಿತವು ಮುಸಲ್ಮಾನರ ಹಬ್ಬದ ಸಂದರ್ಭದಲ್ಲಿ ಎಲ್ಲ ಮತದವರೂ ಕುಣಿಯುವ ಕಲೆಯಾಗಿದೆ. ಇವು ಸಾಮೂಹಿಕ ನೃತ್ಯಗಳ ಸಾಲಿನಲ್ಲಿ ಸೇರತಕ್ಕಂಥವು. ಭೂತನೃತ್ಯಗಳು ಹಳ್ಳಿಯ ದೆವ್ವಕ್ಕೆ ಅರ್ಪಿಸುವ ಅರ್ಚನೆಗಳಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯ ವೈದ್ಯರ ಡಮರು ಸೇವೆಯಂತೂ ಅರ್ಥವತ್ತಾದ ಕಲೆಯೆನಿಸಿದೆ. ದುಷ್ಟಶಕ್ತಿಗಳಾದ ದೆವ್ವ, ಪೀಡೆಗಳ ಕಾಟ ತಪ್ಪಿಸಿಕೊಳ್ಳಲು ಈ ಭೂತಾರಾಧನೆ ನಡೆಯುತ್ತಾ ಬಂದಿದೆ. ಆಯುಷ್ಯ ತೀರದ ಮುನ್ನವೇ ಸತ್ತವರು ದೆವ್ವ ಆಗುತ್ತಾರೆಂದು ನಂಬಿಕೆಯಿದೆ. ಇದರಿಂದಾಗಿ ಕೊರತ್ತಿ, ಕೊರಗತನಿಯ, ಆಲಿಭೂತ, ಪಂಜುರುಳಿ, ತಲ್ಕುಡ ಮತ್‌ಕಲ್ಲುರ್ಟಿ, ಕುಪ್ಪೆ ಪಂಜುರ್ಲಿ, ಶಿರಾಡಿಭೂತ, ಜಟ್ಟಿಗೆ ಬೊಬ್ಬಯ್ಯ, ಮಾಣಿ, ಉಂಬಲಿ ಮುಂತಾದ ಭೂತಗಳ ವೇಷಹಾಕಿ ಕುಣಿಯುವವರನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಲೂ ಕಾಣಬಹುದು.

ಮೈಸೂರು ಸೀಮೆಯಲ್ಲಿಯ ಒನಕೆ ಕುಣಿತವು ಒಂದು ಹವ್ಯಾಸಿ ಕಲೆಯಾಗಿದೆ. ಪೂಜಾ ಕುಣಿತದ ಪೂರ್ವಭಾವಿ ಕುಣಿತವಿದು. ದೇವರ ಜಾತ್ರೆ ನಡೆದಾಗ ನಂದೀ ಧ್ವಜ ಹಿಡಿದುಕೊಂಡು ಕುಣಿಸುವ ಸಂಭ್ರಮ ಉತ್ತರ ಕರ್ನಾಟಕದಲ್ಲಿ ಮನೆ ಮಾತಾಗಿದೆ. ಅದರಂತೆ ಕೀಲುಕುದುರೆ, ಮರಗಾಲ ಕುಣಿತ, ಕರಗದ ಕುಣಿತಗಳೂ ಜನಪ್ರಿಯ ಕಲೆಗಳಾಗಿವೆ. ಸುಗ್ಗಿಯ ಕುಣಿತವಂತೂ ಎಲ್ಲ ಕಡೆಗೆ ಇದ್ದು ಫಲವಾದ ಬೆಳೆಯ ಸಂತೃಪ್ತಿಯ ದ್ಯೋತಕವಾಗಿದೆ. ಬಯಲಾಟಗಳಲ್ಲಿ ಬರುವ ಹೆಜ್ಜೆಯ ಕುಣಿತಗಳಂತೂ ಶಾಸ್ತ್ರಜ್ಞರನ್ನು ಬೆರಗುಗೊಳಿಸಿವೆ. ಕೊಡಗು ಜಿಲ್ಲೆಗೆ ಸೀಮಿತವಾರ ಉಮ್ಮತಾಟಿ ದೈವೀ ಆರಾಧನೆಯ ಕುಣಿತವಾಗಿದ್ದು, ಇತ್ತೀಚೆಗೆ ಒಂದು ಹದವಾದ ಕಲೆಯಾಗಿ ಕಂಗೊಳಿಸಿದೆ. ಇದರೊಂದಿಗೆ ಎರವರ ಕುಣಿತವು ಅತ್ಯಂತ ಪ್ರಸಿದ್ಧವಾದ ಜನಪದ ಕುಣಿತವಾಗಿದೆ. ದೀಪಾವಳಿ, ಸಂಕ್ರಾತಿ, ಯುಗಾದಿ ಹಬ್ಬಗಳಲ್ಲಿ ಸುಗ್ಗಿ ಮತ್ತು ವಸಂತ ಕಾಲದಲ್ಲಿ ಉಮ್ಮತಾಟವನ್ನು ಹೆಣ್ಣು ಮಕ್ಕಳೇ ಕುಣಿಯುತ್ತಾರೆ.

ವೈದ್ಯ ಕುಣಿತವೂ ಬಹು ಆಕರ್ಷಕವಾಗಿದ್ದು–ಯಕ್ಷಗಾನಗಳಲ್ಲಿ ಬರುವ

ಕುಣಿತಗಳಿಗೆ ಇದುವೆ ಮೂಲ ಪ್ರೇರಣೆ ಎಂದು ಹೇಳುತ್ತಾರೆ. ಈ ಕುಣಿತ ಮಾತ್ರ ತೀರ ಸುಂದರವಾದ, ತರಂಗಬದ್ಧವಾದ ಪ್ರತಿಯೊಂದು ಭಾವರಸಕ್ಕೂ ಒದಗಿಬಂದಿರುವ ನೃತ್ಯ ವಿಧಾನವಾಗಿದೆ. ಇದರಲ್ಲಿ ಸದಾ ಶರೀರಕ್ಕೆ ಕೆಲಸವಿದೆ. ನಖಶಿಖಾಂತ ಶರೀರ ವಿನ್ಯಾಸಗಳಿವೆ. ಕುಣಿತ, ಜಿಗಿತೆ. ಹಿನ್ನಡೆ, ಮುನ್ನಡೆ, ಕೈಬಳಕು, ಮೈಬಳಕು ಇಂಥ ಸುಸಂಬದ್ಧವಾಗಿ ಹೊಂದಿಕೊಂಡ ನೃತ್ಯಗೀತಗಳಿವೆ. ಹೆಣ್ಣು ಮಕ್ಕಳು ಜೋಡಿಕೂಡಿ, ಕತ್ತರಿ ಕೈಹಾಕಿ ಆಡುವ ಪುಗಡಿ ಆಟವು ಬಹು ಆಕರ್ಷಕವಾಗಿರುತ್ತದೆ. ಇದಕ್ಕೆ ಬಗಾಟ ಬಗರಿ, ಸಕ್ಕಸರಿಗಿ ಎಂದೂ ಕರೆಯುವ ವಾಡಿಕೆ. ಮಕ್ಕಳಿಗಂತೂ ಇದು ಅಚ್ಚುಮೆಚ್ಚು. ಈ ಆಟ ಆಡುವುದರಿಂದ ಹೆಣ್ಣುಮಕ್ಕಳಿಗೆ ವ್ಯಾಯಾಮವಾಗುತ್ತದೆ. ಅವರ ಶರೀರದಲ್ಲಿ ಸೌಂದರ್ಯವರ್ಧನೆಯಾಗುತ್ತದೆ. ಅನೇಕ ಜೋಡಿಗಳು ಹೀಗೆಯೆ ಕೂಡಿಕೊಂಡು ಆಡುವ ಜುಮ್ಮಾ ಆಟವೂ ಅಷ್ಟೇ ಆಕರ್ಷಕವಾಗಿದೆ. ಪರಸ್ಪರ ಸ್ನೇಹ ಸಂವರ್ಧನೆಗೆ, ಸಹೃದಯತೆಗೆ ಇಂಥ ಕುಣಿತಗಳು ಸಹಾಯಕಾರಿಯಾಗಿವೆ.

ಜನಪದ ನೃತ್ಯದ ಜಾಯಮಾನವೆಂದರೆ ಸರಳತೆ, ಅದರಲ್ಲಿ ದಕ್ಷತೆಯನ್ನೂ ಕಾಣಬಹುದು. ಕುಣಿತದ ಧಾಟಿಗಳೂ ಕಡಮೆ. ಅವರ ಕುಣಿತಕ್ಕೆ ಸ್ಫೂರ್ತಿ ನೀಡುವ ಸಂಗತಿಗಳೆಂದರೆ ಉತ್ಸಾಹ ಮತ್ತು ಆವೇಶ, ರೌದ್ರ, ವೀರ, ಶೃಂಗಾರ, ರಸಗಳು ಮಾತ್ರ ಅವರಿಗೆ ಸಂಪೂರ್ಣವಾಗಿ ಪರಿಚಯವಾಗುತ್ತದೆ. ಕುಣಿತಗಳು ಸ್ವಾರ್ಥ ಸಾಧನೆಗಳಾಗಿ, ಹಣಗಳಿಕೆಗಾಗಿ ಇಲ್ಲವೆ ಪ್ರತಿಷ್ಠೆಗೋಸುಗ ಹುಟ್ಟಿಕೊಂಡು ಬಂದವುಗಳಲ್ಲ. ಗ್ರಾಮೀಣ ಜನತೆಯ ಸಂಸ್ಕೃತಿಯನ್ನು ಅವರ ಸ್ವಭಾವಸಿದ್ಧವಾದ ಚಟುವಟಿಕೆಗಳನ್ನು ಈ ನೃತ್ಯಗಳ ಮುಖಾಂತರ ಕಂಡುಕೊಳ್ಳಬಹುದು. ಜಾನಪದ ನೃತ್ಯಗಳು ಹಳ್ಳಿಯ ಸ್ವಭಾವದ ಚಟುವಟಿಕೆಗಳನ್ನು ತೋರಿಸುತ್ತವೆ. ಅವುಗಳೆಲ್ಲ ಸಾಮೂಹಿಕ ನೃತ್ಯಗಳಾಗಿದ್ದರೂ ನರ್ತಕನು ತನ್ನ ಜಾಣತನ, ಕೌಶಲ್ಯಗಳನ್ನು ಪ್ರದರ್ಶಿಸಲು ಸಾಧ್ಯವಿದೆ. ಸಾಮಾನ್ಯವಾಗಿ ಜಾನಪದ ನೃತ್ಯಗಳಲ್ಲಿ ಅಸೂಯೆ ಮತ್ತು ಸ್ವಾರ್ಥಗಳಿರುವುದಿಲ್ಲ. ಏಕೆಂದರೆ ಈ ಕುಣಿತದ ಧ್ಯೇಯವೇ ತಾವು ನಂಬಿರುವ ದೈವಾರಾಧನೆ ಮತ್ತು ಅವರ ಆತ್ಮಾನಂದ. ಅದರಲ್ಲಿ ಸ್ವಾರ್ಥತೆಯ ಯಾವುದೇ ಗಂಧಕೂಡ ಇರುವುದಿಲ್ಲ.

ಕೊನೆ ಟಿಪ್ಪಣಿಗಳು:

1. ಗೊ. ರು. ಚನ್ನಬಸಪ್ಪ (ಸಂ) ಕರ್ನಾಟಕ ಜನಪದ ಕಲೆಗಳು, ಕ, ಸಾ. ಪ, 1977, . 4. XIII
2. ಗೊ. ರು. ಚನ್ನಬಸಪ್ಪ (ಸಂ) ಕರ್ನಾಟಕ ಜನಪದ ಕಲೆಗಳು, ಕ, ಸಾ. ಪ, 1977, . 4. XIII
3. ಕನ್ನಡ ವಿಶ್ವಕೋಶ, ಮೈ. ವಿ. ವಿ., ಪು. 256
4. ಶಿವರಾಮ ಕಾರಂತ (ಲೇ) ಬಿಡಿಬರಹಗಳು, ಪು. 219

ಪರಾಮರ್ಶನ ಗ್ರಂಥಗಳು:

1. ಶಿರೂರ ಬಿ.ವ್ಹಿ. (2012 ಐದನೇ ಮುದ್ರಣ), ಸಂಶೋಧನ ಸ್ವರೂಪ, ಅನ್ನಪೂರ್ಣ ಪ್ರಕಾಶನ.
2. ಸಿದ್ದಪ್ಪಶೆಟ್ಟಿ ಆರ್, ಸಿ.ಮಾದೇಗೌಡ, ಆರ್.ಪಿ. ಹರೀಶ್, (2008)ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ)ಕಾಯಿದೆ 2006, ಏಟ್ರಿ ಪ್ರಕಾಶನ ಬೆಂಗಳೂರು.
3. ಹರೀಶ ಪಿ.ಎನ್. (1993) ಎರವರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ.
4. ಹರೀಶ್ ಬಾಬು, (2019) ಬುಡಕಟ್ಟು ಮತ್ತು ಗಿರಿಜನರ ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ.

ಲೇಖಕರು : ಪ್ರಸನ್ನ
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರಕಲಗೂಡು, ಹಾಸನ ಜಿಲ್ಲೆ.
ಮತ್ತು ಸಂಶೋಧಕರು ಕನ್ನಡವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

***

ವರ್ತಮಾನದಲ್ಲಿ ಚಿತ್ರದುರ್ಗದ ಪ್ರದರ್ಶನಾತ್ಮಕ ಕಲೆಗಳ ಸಾಂಸ್ಕೃತಿಕ ಪಲ್ಲಟ

ಆದಿಮಾನವನ ಕಾಲದಿಂದಲೂ ಹಲವು ಪ್ರಾದೇಶಿಕ ವಿಶಿಷ್ಟ ಗುಣಲಕ್ಷಣಗಳನ್ನು ಮೈಗೂಡಿಸಿಕೊಂಡು ಜನಪದ ವೃಂದಗಳಲ್ಲಿ ಪ್ರದರ್ಶನಗೊಳ್ಳುತ್ತ ಬಂದ ಪ್ರದರ್ಶನ ಕಲೆಗಳು ಆಯಾ ವೃಂದದ ವೀರೋತ್ಸಾಹದ ಅಭಿವ್ಯಕ್ತಿಗೆ, ಕಲಾತ್ಮಕ ಆವಿಷ್ಕಾರಕ್ಕೆ ಪ್ರತೀಕವಾಗಿವೆ. ಯಾವುದೇ ಕಲಾ ಪ್ರಕಾರ ಪ್ರದರ್ಶಿತಗೊಂಡಾಗಲೇ ಅದು ಜನಸಮೂಹಕ್ಕೆ ತಲುಪುವುದು ಹಾಗೂ ಆ ಕಲೆಗಳ ಮೂಲಕ ಸಂವಹನಗೊಳ್ಳುತ್ತ ಬದಲಾಗುವುದು ನಡೆಯುತ್ತಿರುತ್ತದೆ. ಪ್ರತಿ ವೃಂದಕ್ಕೆ ಸೀಮಿತವಾದ ಮತ್ತು ವಿಶಿಷ್ಟವಾದ ನಡಾವಳಿ, ಸಂಪ್ರದಾಯ, ನಂಬುಗೆ, ಹಾಡು, ಕುಣಿತ, ಆರಾಧನೆ, ಆಚರಣೆ ಮುಂತಾದವು ಜನಪದ ಕಲೆಗಳಲ್ಲಿ ಸಮಾವೇಶಗೊಳ್ಳುವ ಸ್ಥೂಲ ಸಂಗತಿಗಳು. "ಮೌಖಿಕ ಪರಂಪರೆಯ ಅಲಿಖಿತ ರೂಢಿ ಸಂಪ್ರದಾಯಗಳ ಮೂಲಕ ಜನಾಂಗ ಸಂಸ್ಕೃತಿಯ ಮಹತ್ವದ ವಾಹಕಗಳಾಗಿರುವುದರ ಜೊತೆಗೆ ಸಾಂಸ್ಕೃತಿಕ ಸಾಧನೆಯ ಸಂಕೇತ ಮತ್ತು ಸಾಕ್ಷ್ಯಾಧಾರಗಳಾಗಿವೆ."[1]

ಜನಪದ ಪ್ರದರ್ಶನ ಕಲೆಗಳ ವೈವಿಧ್ಯತೆ ಮತ್ತು ವ್ಯಾಪ್ತಿ ಏಕಕಾಲಕ್ಕೆ ವಿಸ್ಮಯಕಾರಿಯಾಗಿದೆ. ಅವುಗಳು ಸಾಂಸ್ಕೃತಿಕವಾಗಿ ಪಲ್ಲಟಗೊಂಡ ಬಗೆಯ ವಿಶ್ಲೇಷಣೆ, ವಿವರಣೆ ಮತ್ತು ಅಧ್ಯಯನ ಸುಲಭವಾಗಿ ಯಾರೊಬ್ಬರ ತೆಕ್ಕೆಗೂ

ದಕ್ಕುವಂಥದಲ್ಲ. ಏಕೆಂದರೆ ಪ್ರತಿಯೊಂದು ಜನಪದ ಕಲಾ ಪ್ರಕಾರ ತನ್ನದೇ ಆದ ವಿಶಿಷ್ಟ ಗುಣಲಕ್ಷಣಗಳನ್ನು ಹೊಂದಿರುತ್ತದೆ. ಜನಪದ ಪ್ರದರ್ಶನ ಕಲೆಗಳನ್ನು ಕೆಲವು ನಿರ್ದಿಷ್ಟ ಸೂತ್ರಗಳಿಗೆ, ನಿಯಮಗಳಿಗೆ ಒಳಪಡಿಸುವುದು ತುಂಬಾ ಜಟಿಲ. ಅವುಗಳ ಪಲ್ಲಟದ ಬಗ್ಗೆ ಚರ್ಚಿಸುವಾಗಲೂ ಅಷ್ಟೇ ಸಂಕೀರ್ಣ. ಕೆಲವು ಕಲೆಗಳು ವಾದ್ಯ ಪ್ರಧಾನವಾದರೆ, ಕೆಲವು ಕುಣಿತ ಪ್ರಧಾನದವು, ಮತ್ತೆ ಕೆಲವುಗಳಲ್ಲಿ ಹಾಡು, ಕಥೆ ಪ್ರಧಾನವಾಗುತ್ತದೆ. ವಾದ್ಯ, ಹಾಡು, ಕುಣಿತಗಳಿಲ್ಲದ ಜನಪದ ಕಲಾಮೇಳಗಳಿಲ್ಲ ಎನ್ನುವಷ್ಟರ ಮಟ್ಟಿಗೆ ಪರಸ್ಪರ ಸಂಕೀರ್ಣ ಸಂಯೋಜನೆಯನ್ನು ಈ ಜನಪದ ಪ್ರದರ್ಶನಾತ್ಮಕ ಕಲೆಗಳು ಹೊಂದಿವೆ. ಇವುಗಳಲ್ಲಿ ಕೆಲವು ಆಯಾ ಪ್ರದೇಶಕ್ಕೆ ಮಾತ್ರ ವಿಶಿಷ್ಟವೆನಿಸಿದ್ದರೆ ಇನ್ನೂ ಕೆಲವು ಎಲ್ಲ ಪ್ರದೇಶಗಳಲ್ಲೂ ಪ್ರಚಲಿತವಿರುವುದು ಕಂಡು ಬರುತ್ತದೆ. ಆಯಾ ಪ್ರದೇಶದ ಭೌಗೋಳಿಕತೆ, ಹವಾಗುಣ, ಜನಸಮುದಾಯಗಳ ಸಾಂದ್ರತೆ, ಅವರಲ್ಲಿನ ವೈವಿದ್ಯತೆ, ಅದರ ಮೂಲಕ ಆರ್ಥಿಕತೆ, ಸಾಂಸ್ಕೃತಿಕತೆ, ಧಾರ್ಮಿಕತೆ ಮೊದಲಾದವುಗಳ ಪ್ರಭಾವ ಇದಕ್ಕೆ ಕಾರಣವಾಗುತ್ತದೆ. ಆಯಾ ಪ್ರದೇಶದ ಕಲೆಗಳ ಹುಟ್ಟಿಗೂ ಈ ಅಂಶಗಳು ಪ್ರೇರಣೆಯಾಗುವುದುಂಟು. ಈ ರೀತಿಯ ಅಂಶಗಳ ಪ್ರೇರಣೆಯು ಚಿತ್ರದುರ್ಗ ಜಿಲ್ಲೆಗೆ ಹೊರತಾಗಿಲ್ಲ ಎಂದು ಹೇಳಬಹುದು.

ನಮ್ಮ ಸಂಸ್ಕೃತಿಯ ಜೀವಕೇಂದ್ರವೇ ಜನಪದವಾಗಿರುವಾಗ ಜನಪದ ಪ್ರದರ್ಶನ ಕಲೆಗಳು ಸಮುದಾಯಗಳ ಜೀವನ ವಿಧಾನವನ್ನು ಅರ್ಥ ಮಾಡಿಕೊಳ್ಳಲು ನೆರವಾಗುವಂಥವುಗಳು. ಪ್ರಾಚೀನ ಮಾನವನ ಜೀವನದ ಹಾದಿ ಯಾವ ರೀತಿಯಲ್ಲಿ ಸಾಗಿ ಬಂತೆಂಬುದನ್ನು ಇವತ್ತಿನ ಪ್ರದರ್ಶಕ ಕಲೆಗಳು ಮನವರಿಕೆ ಮಾಡಿಕೊಡಬಲ್ಲವು. "ಆರಾಧನೆ ಮತ್ತು ಆಚರಣೆಗಳ ಕ್ರಿಯೆಗಳೇ ಕಲೆಗಳಾಗಿ ಜನನ ಹೊಂದಿ ಪೂರ್ಣ ಸ್ವರೂಪದ ಕಲೆಗಳಾದದ್ದು ಒಂದು ಬಗೆಯಾದರೆ, ಧರ್ಮ ಅಥವಾ ಪ್ರಸಾರಕ್ಕಾಗಿ ಹುಟ್ಟಿದ ಕಲೆಗಳು ನಂತರ ಧರ್ಮ ಪಂಥದ ಉದ್ದೇಶ ಮೀರಿ ಸಾರ್ವಜನಿಕ ಕಲೆಗಳಾದದ್ದು ಇನ್ನೊಂದು ಬಗೆ. ಕಲೆಯೇ ಪ್ರವೃತ್ತಿಯಾಗಿ ನಂತರ ಅದೊಂದು ಪರಂಪರೆಯಾಗಿ ಬೆಳೆದದ್ದು ಒಂದು ಬಗೆಯಾದರೆ, ಇರುವ ವ್ಯವಸ್ಥೆಗೆ ಪ್ರತಿಭಟನೆಯಾಗಿ ಹೊಸ ಕಲೆಗಳು

ಹುಟ್ಟಿಕೊಂಡದ್ದು ಮತ್ತೊಂದು ಬಗೆ ಹೀಗೆ ಹಲವು ಕುತೂಹಲವನ್ನು ಕೆರಳಿಸುವ ಕಲೆಗಳು ನಮ್ಮ ಸಂಸ್ಕೃತಿಯ ಅಧ್ಯಯನಕ್ಕೆ ಪ್ರಧಾನ ಆಕರಗಳಾಗುತ್ತವೆ. ಇಂಥ ಕಲೆಗಳ ಬೋಧನೆಯಿಂದ ಬಹುತೇಕ ದುಡಿಯುವ ವರ್ಗದ ಜನರ ಮೌಖಿಕ ಇತಿಹಾಸವನ್ನು ನಿಜ ಸ್ವರೂಪದಲ್ಲಿ ಅರ್ಥೈಸಿಕೊಳ್ಳಲು ಸಾಧ್ಯ. ಅಲ್ಲದೇ ಈ ಮೂಲಕ ಇತಿಹಾಸವನ್ನು ಕೂಡ ಸತ್ಯದ ಓರೆಗಲ್ಲಿಗೆ ಹಚ್ಚಿ ಪುನರೂಪಿಸಬಹುದು."2 ನಂಬಿಕೆ, ಸಂಪ್ರದಾಯ, ಮನರಂಜನೆ, ಆರಾಧನೆ ಇತ್ಯಾದಿಗಳತ್ತ ಕೈ ತೋರಿಸುವ ಕಲೆಗಳ ಜೊತೆ ಕುಣಿತ, ವಾದ್ಯ ಹಾಗೂ ಹಾಡು ಪ್ರಧಾನವಾದ ಕಲೆಗಳು ಇವೆ.

ಪಾಶ್ಚಾತ್ಯರು ನೀಡಲಾರಂಭಿಸಿದ ಶಿಕ್ಷಣ ಮತ್ತು ಅದರ ಮೂಲಕ ಡಿಕ್ಕಿ ಹೊಡೆದ ವೈಜ್ಞಾನಿಕ ತಿಳುವಳಿಕೆಗಳು, ಅನುಕೂಲಗಳು ನಮ್ಮ ಜೀವನ ಶೈಲಿಗೆ ಚಲನಶೀಲತೆಯನ್ನು ತಂದು ಕೊಟ್ಟವು. ಇದರಿಂದಾಗಿ ಪರಂಪರಾಗತ ಮೌಲ್ಯಗಳು, ನಂಬಿಕೆಗಳು, ಜೀವನ ಪದ್ಧತಿಗಳು ಕಂಪನಗೊಂಡು ಹೊಸ ಜೀವನ ವಿಧಾನ ರೂಪುಗೊಳ್ಳಲಾರಂಭಿಸಿತು. ಇದರ ಪರಿಣಾಮ ಕಲೆಗಳ ಸ್ವರೂಪ ಲಕ್ಷಣಗಳ ಮೇಲೆ ಉಂಟಾಗದಿರಲು ಸಾಧ್ಯವೇ? ಗ್ರಾಮೀಣ ಬದುಕು ತೀವ್ರತರ ಬದಲಾವಣೆಗಳನ್ನು ಅನುಭವಿಸಿದೆ. ಕಾಲ–ಕಾಲಕ್ಕೂ ಬದಲಾವಣೆಯ ಗುರುತುಗಳು ಗೋಚರಿಸುತ್ತಿವೆ. ಹೀಗಿರುವಾಗ ಜನಪದ ಕಲೆಗಳು ತಮ್ಮ ಮೂಲದ ಗುಣಲಕ್ಷಣಗಳನ್ನು ಉಳಿಸಿಕೊಳ್ಳಲು ಸಾಧ್ಯವೇ? ಅವು ಉದ್ದೇಶಿತ ಹಾಗೂ ಅನುದ್ದೇಶಿತ ಸ್ವಾರ್ಥಕವಾಗಿ ತಮ್ಮನ್ನು ಬದಲಾವಣೆಗೆ ಒಡ್ಡಿಕೊಳ್ಳುವುದು ಸಹಜ ಕ್ರಿಯೆಯಾಗಿದೆ. ಹೀಗೆ ನಮ್ಮ ಜನಪದ ಪ್ರದರ್ಶನ ಕಲೆಗಳು ನಮ್ಮ ಹಿರಿಯರ ಕೊಡುಗೆ. ಅವೆಲ್ಲವನ್ನು ಹಿಂದೆ ಇದ್ದಂತೆಯೇ ಕಾಪಾಡಿಕೊಳ್ಳಬೇಕಾದುದು ಇಂದಿನ ಕರ್ತವ್ಯ ಎಂಬುದು ಮುಗ್ಧ ಅಭಿಮಾನದ ಮಾತಾಗುತ್ತದೆ. ಪರಂಪರಾಗತವಾದುದೆಲ್ಲ ಶ್ರೇಷ್ಠವಲ್ಲ ಎಂಬ ತಿಳುವಳಿಕೆಯ ಹಿನ್ನೆಲೆಯಲ್ಲಿ ಪರಂಪರೆಯಿಂದ ಬಂದುದು ಸಮಕಾಲೀನ ಸಂದರ್ಭಕ್ಕೆ ಎಷ್ಟರ ಮಟ್ಟಿಗೆ ಪ್ರಸ್ತುತವಾಗುತ್ತದೆ ಎಂಬುದನ್ನು ನಾವು ಗಮನಿಸಬೇಕು.

ಯಾವುದೇ ಜಿಲ್ಲೆ ಅಥವಾ ಪ್ರಾದೇಶಿಕ ಕಲೆ, ಸಾಹಿತ್ಯವಾದರೂ ಅದು ತನ್ನ ಸುತ್ತಮುತ್ತಲಿನ ಪ್ರಾಕೃತಿಕ, ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಂಶಗಳ

ಕೊಡುಕೊಳ್ಳುವಿಕೆಗಳಿಂದ ಇಲ್ಲವೆ ಪ್ರಭಾವಗಳಿಂದ ರೂಪು ಪಡೆದುಕೊಳ್ಳುತ್ತದೆ. ಇಂಥ ಪ್ರಭಾವಗಳಿಂದಾಗಿ ಆಯಾ ಪ್ರದೇಶಕ್ಕೆ ತಕ್ಕಂತೆ ಜನಪದ ಕಲೆಗಳು ಆಚರಣೆಗೊಳ್ಳುವ ಅಥವಾ ಪ್ರದರ್ಶನಗೊಳ್ಳುವ ರೀತಿಯಲ್ಲಿ ಭಿನ್ನವಾಗಿರುತ್ತವೆ. ಸಾವಿರಾರು ವರ್ಷಗಳಿಂದ ಕಲೆಗಳು ಇಲ್ಲಿಯೇ ಹುಟ್ಟಿದ್ದರೆ ಮತ್ತೆ ಕೆಲವು ಬೇರೆ ಕಡೆಯಿಂದ ವಲಸೆ ಬಂದು ಸ್ಥಳೀಯ ಕಲೆಗಳ ಮೇಲೆ ತಮ್ಮ ಪ್ರಭಾವ ಬೀರಿವೆ. ಇಲ್ಲವೇ ಸ್ಥಳೀಯ ಕಲೆಯಲ್ಲಿ ಮಿಳಿತಗೊಂಡು ತಮ್ಮದೇ ಆದ ಹೊಸ ಸಂಕೀರ್ಣ ರೂಪ ಪಡೆದುಕೊಂಡಿವೆ. ಹೀಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರದರ್ಶನದಲ್ಲಿರುವ ಕಲೆಗಳ ಸಾಂಸ್ಕೃತಿಕ ಪಲ್ಲಟಗಳ ಕುರಿತು ನೋಡುವುದಾದರೆ;

ಖಾಸಬೇಡರ ಪಡೆ ಕುಣಿತವು ಚಿತ್ರದುರ್ಗವನ್ನು ಆಳಿದ ಪಾಳೆಯಗಾರರ ಕಾಲದಲ್ಲಿ ಯುದ್ಧಕಲೆಯಾಗಿ ಪ್ರಚಲಿತವಿದ್ದಂಥ ಕಲೆಯಾಗಿ ಕಂಡುಬಂದಿದ್ದು, ರಾಜ ಪ್ರಭುತ್ವದ ಆಳ್ವಿಕೆಯ ಅವನತಿಯ ನಂತರ ಸಹಜವಾಗಿ ಈ ಕಲೆಯು ಕೆಲವು ಶತಮಾನಗಳ ಕಾಲ ತನ್ನ ಅಸ್ಥಿತ್ವವನ್ನು ಕಳೆದುಕೊಂಡಿರುತ್ತದೆ. ಕೆಲವು ದಶಕಗಳಿಂದಷ್ಟೇ ಪುನಃ ಈ ಕಲೆಯನ್ನು ನಾಡಿನ ಜನತೆ ಪ್ರಚಲಿತಕ್ಕೆ ತಂದಿದ್ದು, ಪಾಳೆಯಗಾರರ ಕಾಲದ ಯುದ್ಧಕಲೆಯಾಗಿದ್ದ ಇದು ಪ್ರಸ್ತುತ ಮನರಂಜನಾತ್ಮಕ ಕಲೆಯಾಗಿ ಸ್ಥಾನಪಲ್ಲಟವಾಗಿರುವುದನ್ನು ಗುರುತಿಸಬಹುದಾಗಿದೆ.

ಚಿತ್ರದುರ್ಗದ ಪರಿಸರದಲ್ಲಿ ಮರಗಾಲು ಕುಣಿತವು ನಗರದ ಪ್ರಮುಖ ನಾಲ್ಕು ಗರಡಿ ಮನೆಗಳಲ್ಲಿನ ಸಂಪ್ರದಾಯಬದ್ಧ ಆಚರಣೆಯಾದ, ಮಟ್ಟಿಪೂಜೆ ಎನ್ನುವಂತಹ ವಿಶೇಷ ಸಂದರ್ಭದಲ್ಲಿ ಮಾತ್ರ, ಗರಡಿ ಮನೆಯ ಪೈಲ್ವಾನರುಗಳಿಂದ ಸಾಮೂಹಿಕವಾಗಿ, ಸಂಪ್ರದಾಯಿಕತೆಯ ಅಡಿಯಲ್ಲಿ ಪ್ರಚಲಿತವಿತ್ತು ಆದರೆ ಈಗೀಗ ಗರಡಿ ಮನೆಯ ಮಟ್ಟಿಪೂಜೆ ಆಚರಣೆಯ ಜೊತೆಜೊತೆಗೆ ಸಾರ್ವಜನಿಕ ಸಭೆ ಸಮಾರಂಭಗಳು, ಮೆರವಣಿಗೆಗಳು ಮೊದಲಾದ ಲೌಕಿಕ ಸಂದರ್ಭಗಳಲ್ಲಿಯೂ ಪ್ರದರ್ಶನಗೊಳ್ಳುತ್ತಿರುವುದನ್ನು ಕಾಣಬಹುದು. ಚಿತ್ರದುರ್ಗದ ಪರಿಸರದಲ್ಲಿ ಒಂದು ಕಾಲದಲ್ಲಿ ಸಂಪ್ರದಾಯಬದ್ಧ ಆಚರಣೆಯಾಗಿ ಪ್ರದರ್ಶನವನ್ನು ಕಾಣುತ್ತಿದ್ದ ಈ ಕಲೆಯು ಲೌಕಿಕ ಜೀವನದ ಅನೇಕ ಸಂದರ್ಭಗಳಲ್ಲಿ ಪ್ರದರ್ಶನ ಕಾಣುತ್ತಿರುವುದು ಇದರ ಸಾಂಸ್ಕೃತಿಕ ಸ್ಥಾನಪಲ್ಲಟವನ್ನು ಸೂಚಿಸುತ್ತದೆ.

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025 | VOLUME: 09, ISSUE: 06, DECEMBER 2025

ಕರ್ನಾಟಕದಾದ್ಯಂತ ಪ್ರಚಲಿತವಿರುವ ಕೋಲಾಟವು ಜನಪದ ಕಲೆಗಳಲ್ಲಿಯೇ ಅತ್ಯಂತ ಪುರಾತನವಾದ ಕಲೆಯಾಗಿದೆಯೆಂದು ಹೇಳಲಾಗುತ್ತದೆ. ಇಂತಹ ಕೋಲಾಟವು ಜನಪದರ ಬಿಡುವಿನ ವೇಳೆಯಲ್ಲಿ, ಸುಗ್ಗಿ ಸಂದರ್ಭದಲ್ಲಿ, ಆಯಾ ಸಮುದಾಯದ ಹಬ್ಬ ಹರಿದಿನಗಳಲ್ಲಿ ಮನರಂಜನೆಯ ಸಲುವಾಗಿ ಪ್ರದರ್ಶನ ಕಾಣುತ್ತಿತ್ತು. ಆಧುನಿಕತೆಯ ಪರಿಣಾಮ ಇದಕ್ಕೆ ಬೇಡಿಕೆ ಹೆಚ್ಚಾಗಿ ಶಾಲಾ ಕಾಲೇಜುಗಳು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಂತಹ ಸರ್ಕಾರಿ ಸಂಸ್ಥೆಗಳ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ, ಯುವಜನ ಮೇಳಗಳಲ್ಲಿ, ಪ್ರತಿಭಾ ಕಾರಂಜಿಯಂತಹ ಕಾರ್ಯಕ್ರಮಗಳಲ್ಲಿ ಸ್ಪರ್ಧಾತ್ಮಕ ಕಲೆಯಾಗಿ ಪ್ರದರ್ಶನಗೊಳ್ಳುತ್ತಿರುವುದನ್ನು ಕಾಣಬಹುದು. ಚಿತ್ರದುರ್ಗ ಜಿಲ್ಲೆಯಲ್ಲಿ ಬೇಡ ಜನಾಂಗಕ್ಕೆ ಸೀಮಿತವಾಗಿದ್ದು, ಏಕಲವ್ಯನ ಕುಣಿತ ಇಂದು ಸಾರ್ವತ್ರಿಕ ಕಲೆಯಾಗಿ ಕಂಡುಬಂದಿದೆ. ಪ್ರಸ್ತುತ ದಿನಮಾನಗಳಲ್ಲಿ ಯಾವ ಸಮುದಾಯದವರು ಬೇಕಾದರೂ ಇದನ್ನು ಕಲಿತು, ತಮ್ಮ ಜೀವನ ನಿರ್ವಹಣೆಗೆಂದು ವೃತ್ತಿಕಲೆಯಾಗಿ ಮಾಡಿಕೊಂಡು ಪ್ರದರ್ಶಿಸುತ್ತಿರುವ ಉದಾಹರಣೆಗಳು ಚಿತ್ರದುರ್ಗ ಪರಿಸರದಲ್ಲಿ ಕಂಡುಬಂದಿದೆ. ಈ ರೀತಿಯ ಅಂಶವನ್ನು ಇಲ್ಲಿನ ವೀರಗಾಸೆ ಕುಣಿತ, ತಮಟೆ ಮೇಳ, ಸೋಮನ ಕುಣಿತ ಮೊದಲಾದ ಪ್ರದರ್ಶನಾತ್ಮಕ ಕಲೆಗಳಲ್ಲಿಯೂ ಗುರುತಿಸಬಹುದಾಗಿದೆ.

ತಳಸಮುದಾಯಗಳ ಜೀವನಾಡಿಯಾದಂತಹ ತಮಟೆ ವಾದ್ಯವು ಮೊಳಗುತ್ತಿದ್ದದ್ದು, ಆಯಾ ಗ್ರಾಮದ ಶಕ್ತಿ ದೇವತೆಗಳ ಜಾತ್ರೋತ್ಸವಗಳ ಸಂದರ್ಭಗಳಲ್ಲಿ ಮಾತ್ರವಾಗಿತ್ತು. ಇದನ್ನು ಹೊರೆತು ಪಡಿಸಿ ಆಯಾ ಸಮುದಾಯದ ಹುಟ್ಟು, ಸಾವು, ಮದುವೆ ಇತ್ಯಾದಿ ಜೀವನಾವರ್ತನ ಆಚರಣೆಗಳಲ್ಲಿ ಆಗಾಗ್ಗೆ ಕಂಡು ಬರುತ್ತಿತ್ತು; ಆದರೆ ಕೆಲವು ದಶಕಗಳಿಂದ ಹಲವಾರು ಸರ್ಕಾರಿ ಸಂಸ್ಥೆಗಳು ತಮಟೆ ಮೇಳದ ಆಕರ್ಷಣೆಗೆ ಒಳಗಾಗಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸುತ್ತಿವೆ. ಇದರಿಂದಾಗಿ ತಮಟೆ ಮೇಳವು ಹಟ್ಟಿಯನ್ನು ದಾಟಿ ನಗರದ ಪ್ರಮುಖ ಸಭೆ ಸಮಾರಂಭಗಳ ಕಡೆ ಮುಖ ಮಾಡಿದೆಯೆಂದು ಹೇಳಬಹುದು. ಇದಷ್ಟೇ ಅಲ್ಲದೆ ಶಾಲಾ ಕಾಲೇಜುಗಳಲ್ಲಿ ಯುವಕರಿಗೆ ತಮಟೆ ಮೇಳದಂತಹ ಅನೇಕ ಜನಪದ

ವಾದ್ಯಗಳನ್ನು ನುಡಿಸುವ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ. ಈ ಎಲ್ಲಾ ಕಾರಣಗಳಿಂದ ತಮಟೆ ಮೇಳವು ತನ್ನ ಮೂಲ ಸ್ಥಾನದಿಂದ ಸಾಂಸ್ಕೃತಿಕವಾಗಿ ಪಲ್ಲಟಗೊಳ್ಳುತ್ತಿರುವುದನ್ನು ಕಾಣಬಹುದು.

ಚಕ್ಕೆ ಭಜನೆಯ ಉಗಮ ಮತ್ತು ವಿಕಾಸದ ಬಗ್ಗೆ ಗಮನಿಸಿದಾಗ ಈ ಕಲೆಯು ಶ್ರೀರಾಮನ ಮೇಲಿನ ಭಕ್ತಿ ಹಾಗೂ ಆರಾಧನೆಯ ಹಿನ್ನೆಲೆಯಾಗಿ ಶ್ರೀರಾಮನನ್ನೇ ಭಜಿಸುವ ಕಲೆಯಾಗಿ ಪ್ರದರ್ಶನಗೊಳ್ಳುತ್ತಿತ್ತು. ಇದರ ಆಕರ್ಷಣೆ ನವ ಯುವಕರನ್ನು ಸೆಳೆದು ಚಕ್ಕೆ ಭಜನೆ ಕುಣಿತದ ಕಲಿಕೆಗೆ ಮುಂದುಮಾಡಿ ತಮ್ಮ ಶಾಲಾ ಕಾಲೇಜುಗಳಲ್ಲಿ ನಡೆಯುವ ಪ್ರತಿಭಾ ಕಾರಂಜಿ, ಯುವ ಜನ ಮೇಳದಂತಹ ಕಾರ್ಯಕ್ರಮಗಳ ಸ್ಪರ್ಧೆಗಳಲ್ಲಿ ವಿಜೇತರಾಗುವ ಸಲುವಾಗಿ ಈ ಕಲೆಯ ಆದರಣೆ ಹೆಚ್ಚುತ್ತಿರುವದನ್ನು ಕಾಣಬಹುದು. ಇದರ ಜೊತೆಗೆ ಭಕ್ತಿಗೀತೆಗಳಿಗೆ ಹಾಡುತ್ತ ಕುಣಿಯುವ ಈ ಕಲೆಯಲ್ಲಿ ಸಿನಿಮಾ ಗೀತೆಗಳೂ ಸಹ ಬಂದು ಸೇರುತ್ತಿರುವುದು ಇದರ ಸಾಂಸ್ಕೃತಿಕ ಪಲ್ಲಟದ ಗಮನಾರ್ಹ ಅಂಶವಾಗಿದೆ. ಹಾಗೇಯೇ ಧಾರ್ಮಿಕ ಕಲೆಗಳಾದ ಗೊರವರ ಕುಣಿತ, ಸೋಮನ ಕುಣಿತ, ಡೊಳ್ಳು ಕುಣಿತ, ವೀರಗಾಸೆ ಕುಣಿತ ಈ ಮೊದಲಾದ ಪ್ರದರ್ಶನಾತ್ಮಕ ಕಲೆಗಳು ಒಂದು ನಿರ್ದಿಷ್ಟ ದೈವದ ಆಚರಣೆಯ ಅಂಗವಾಗಿ ಆಯಾ ಹಳ್ಳಿಗಳಲ್ಲಿ ಪ್ರದರ್ಶನಗೊಳ್ಳುತ್ತಿದ್ದಂತಹ ಕಲೆಗಳಾಗಿದ್ದು, ಇಂದು ಎಂಬುದು ಸಾರ್ವಜನಿಕ ಕಲೆಗಳಾಗಿ ನಗರದ ಅನೇಕ ಧಾರ್ಮಿಕೇತರ ಸಂದರ್ಭಗಳಲ್ಲಿ ಪ್ರದರ್ಶನ ಕಾಣುತ್ತಿವೆ.

ಹೀಗೆ ಖಾಸಗಿ ಮತ್ತು ಸರ್ಕಾರಿ ಸಂಘ ಸಂಸ್ಥೆಗಳ ಕಲಾ ಪ್ರೋತ್ಸಾಹವೆಂತಲೋ ಅಥವಾ ಕಲಾವಿದರುಗಳ ಜೀವನ ನಿರ್ವಹಣೆಯ ಅನಿವಾರ್ಯತೆಯೆಂತಲೋ ಇವು ಧಾರ್ಮಿಕತೆಯ ಚೌಕಟ್ಟನ್ನು ಸಡಿಲಿಕೆ ಮಾಡಿಕೊಂಡು ಸಾರ್ವತ್ರಿಕ ಸಭೆ ಸಮಾರಂಭಗಳಲ್ಲಿ ಪ್ರದರ್ಶನ ಕಾಣುತ್ತಿವೆ. ಒಂದು ಕಾಲ ಘಟ್ಟದಲ್ಲಿ ಧಾರ್ಮಿಕತೆಯ ಬಿಗಿ ಚೌಕಟ್ಟಿನಲ್ಲಿ ಮಾತ್ರ ಪ್ರದರ್ಶನ ಕಾಣುತ್ತಿದ್ದ ಈ ಕಲೆಗಳು ಜನಸಾಮಾನ್ಯರ ಲೌಕಿಕ ಜೀವನದ ಅನೇಕ ಸಂದರ್ಭಗಳಲ್ಲಿ ಪ್ರದರ್ಶನ ಕಾಣುತ್ತಿರುವಂತ ಸ್ಥಾನಪಲ್ಲಟದ ಅಂಶಗಳನ್ನು ಈ

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025 | VOLUME: 09, ISSUE: 06, DECEMBER 2025

ಕಲೆಗಳಲ್ಲಿ ಗಮನಿಸಬಹುದು. ಬಹು ಮುಖ್ಯವಾಗಿ ಈ ಮೇಲಿನ ಕಲೆಗಳೆಲ್ಲವೂ ಗಂಡು ಕಲೆ, ಪುರುಷ ಪ್ರಧಾನ ಕಲೆಗಳು ಎಂದು ಹೆಸರಿಸಲಾಗಿತ್ತು. ಆದರೆ ಆಧುನಿಕತೆಯು ಈ ಸಂಕೋಲೆಯನ್ನು ಒಡೆದು, ನಿಷೇಧಿಸಲ್ಪಟ್ಟ ಹೆಣ್ಣು ಮಕ್ಕಳನ್ನೂ ಸಹ ಇದರ ತೆಕ್ಕೆಯಲ್ಲಿ ಬರಮಾಡಿಕೊಂಡಿವೆ. ಉದಾಹರಣೆಗೆ ಜಿಲ್ಲೆಯ ಮಹಿಳಾ ತಮಟೆ ಮೇಳ, ಗೊರವಿಯರ ಮೇಳ, ಡೊಳ್ಳು ಮೇಳ, ವೀರಗಾಸೆ ಮೇಳ ಈ ಮೊದಲಾದ ಮಹಿಳಾ ಕಲಾ ತಂಡಗಳು ತಲೆಯೆತ್ತಿರುವುದನ್ನು ನೋಡಬಹುದು.

ಹಬ್ಬ ಹರಿದಿನಗಳು, ಜಾತ್ರೋತ್ಸವಗಳ ಸಂದರ್ಭದಲ್ಲಿ ವಿಶಿಷ್ಟವಾದ ಸಾಂಪ್ರದಾಯಿಕ ನಂಬಿಕೆಗಳಿಂದ ಜನ್ಯವಾದ ಕಲೆಗಳು ಧಾರ್ಮಿಕ ಕಲೆಗಳೆನಿಸಿಕೊಳ್ಳುತ್ತವೆ. ಇವುಗಳನ್ನು ನಿರ್ದಿಷ್ಟ ಜನಾಂಗ, ನಿರ್ದಿಷ್ಟ ಸಂದರ್ಭಗಳಲ್ಲಿ ಮಾತ್ರ ಪ್ರದರ್ಶಿಸಲಾಗುತ್ತದೆ. ಆದರೆ ಲೌಕಿಕ ಕಲೆಗಳಿಗೆ ಕಾಲದ ಕಟ್ಟಾಗಲಿ, ಸಂದರ್ಭದ ಬಂಧವಾಗಲಿ, ಮತ ಧರ್ಮಗಳ ಚೌಕಟ್ಟಾಗಲಿ ಇಲ್ಲ. ಯಾವುದೇ ಜನಾಂಗ ಇವುಗಳನ್ನು ಕಲಿತು, ಸಂದರ್ಭ ಸಿಕ್ಕಾಗ ಪ್ರದರ್ಶಿಸಿ ಸಂತೋಷಿಸಬಹುದು. ಕೋಲಾಟ, ತಮಟೆ ಕುಣಿತ, ಮೊಹರಂ ಕುಣಿತ, ಮರಗಾಲು, ಕೀಲುಕುದುರೆ, ಗಾರುಡಿಗೊಂಬೆ ಹೀಗೆ ಅನೇಕ ಬಗೆಯ ಕಲೆಗಳನ್ನು ಈ ಸಾಲಿಗೆ ಉದಾಹರಿಸಬಹುದು. ಇವುಗಳ ಆಂಗಿಕ ಅಭಿನಯ, ಹೆಜ್ಜೆಯ ಗತ್ತು, ವಾದ್ಯಗಳ ಸಹಚರ್ಯ, ವೇಷಭೂಷಣಗಳ ವೈವಿಧ್ಯ ಮುಂತಾದವುಗಳು ತುಂಬಾ ಅಪರೂಪದವು. ಆದರೆ ಹಿಂದೆ ಇದ್ದಂತಹ ಸ್ವರೂಪದಲ್ಲಿಯೇ ಇಂದಿಗೂ ಪ್ರದರ್ಶನ ಕಾಣುತ್ತಿವೆ ಎಂದು ಹೇಳಲಾಗದು. ಆಧುನಿಕತೆ ಇವುಗಳ ಅಂತರ್ಯದಲ್ಲಿ ಇಳಿದು ಅನೇಕ ಬದಲಾವಣೆಗಳಿಗೆ ಈಡುಮಾಡಿರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಹಳ್ಳಿಯ ಜನಗಳು ತಮ್ಮ ಸ್ವಂತ ಆಂತರಿಕ ಅಭೀಪ್ಸೆಯಿಂದ ಕಲಿಯುತ್ತಿದ್ದ ಮತ್ತು ಪ್ರದರ್ಶಿಸುತ್ತಿದ್ದ ಈ ಕಲೆಗಳು ಅನೇಕ ಸಾಂಸ್ಕೃತಿಕ ಪಲ್ಲಟಗಳಿಗೆ ಒಳಗಾಗಿ, ಬದಲಾಗುತ್ತಿರುವುದನ್ನು ಸಮಕಾಲೀನ ಸಂದರ್ಭದಲ್ಲಿ ಗುರುತಿಸುವಂತಹ ಕೆಲಸವನ್ನು ಪ್ರಸ್ತುತ ಅಧ್ಯಾಯದಲ್ಲಿ ಮಾಡಲಾಗಿದೆ.

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025 | VOLUME: 09, ISSUE: 06, DECEMBER 2025

ಪ್ರದರ್ಶನಾತ್ಮಕ ಕಲೆಗಳ ಪರಿಕರಗಳು ಮತ್ತು ವಸ್ತ್ರ – ವೇಷಭೂಷಣಗಳಲ್ಲಿನ ಪಲ್ಲಟ

ಪ್ರದರ್ಶನಾತ್ಮಕ ಕಲೆಗಳು ಜನಪದರ ಜೀವನದಲ್ಲಿ ಹಾಸುಹೊಕ್ಕಾಗಿ ಬೆರೆತಿವೆ. ಇಂತಹ ಕಲೆಗಳು ತಮ್ಮದೇ ಆದ ಸಂಪ್ರದಾಯಗಳನ್ನು ಬೆಳೆಸಿಕೊಂಡು ಜನ ಜೀವನದ ಮೇಲೆ ಪ್ರಭಾವವನ್ನು ಬೀರುತ್ತಾ ಬಂದಿವೆ. ಆಧುನಿಕತೆಯ ಪ್ರಭಾವ ಕಡಿಮೆ ಇದ್ದ ದಿನಗಳಲ್ಲಿ ಈ ಕಲೆಗಳೇ ಮನರಂಜನೆಯ ಮುಖ್ಯ ಸಾಧನಗಳಾಗಿ ಮೆರೆದಿದ್ದವು. ದೈವಾರಾಧನೆಯ ಅಂಗವಾಗಿಯೂ ಇವು ಬೆಳೆದು ಬಂದದ್ದನ್ನು ನೋಡಬಹುದು. ಚಕ್ಕೆ ಭಜನೆ, ತೊಗಲುಗೊಂಬೆಯಾಟ, ಗೊರವರ ಕುಣಿತ, ಡೊಳ್ಳು ಕುಣಿತ, ನಂದಿಕೋಲು, ವೀರಗಾಸೆ, ಭಜನಾಮೇಳ ಮೊದಲಾದ ಅನೇಕ ಕಲೆಗಳಲ್ಲಿ ಧಾರ್ಮಿಕತೆಯ ಸ್ವರೂಪವನ್ನು ಸ್ಪಷ್ಟವಾಗಿ ಗುರುತಿಸಬಹುದು. ಧಾರ್ಮಿಕ ಸಂದರ್ಭಗಳಲ್ಲಿ ಇವು ಕಾಣಿಸಿಕೊಂಡರೂ ಸ್ವತಂತ್ರವಾದ, ಪ್ರಭಾವಿಯಾದ ಲೌಕಿಕ ಕಲೆಗಳಾಗಿಯೂ ರೂಪುಗೊಂಡು ಅನ್ಯ ಸಂದರ್ಭಗಳಲ್ಲಿ ಸಾಂಸ್ಕೃತಿಕವಾಗಿ ಪಲ್ಲಟಗಳಿಗೆ ಒಳಪಟ್ಟು ಮನರಂಜನೆಯ ಹಾದಿ ಹಿಡಿದು ಬಂದಿರುವುದನ್ನು ಕಾಣಬಹುದು. ಹೀಗೆ ಅನೇಕ ಪಲ್ಲಟಗಳಿಗೆ ಒಳಗಾದರೂ ಸಹ ಒಂದಲ್ಲಾ ಒಂದು ರೀತಿಯಲ್ಲಿ ತನ್ನ ಹಳೆಯ ಧಾರ್ಮಿಕ ಸಂಬಂಧವನ್ನು ಉಳಿಸಿಕೊಂಡೇ ಬಂದಿವೆ. ಕೋಲಾಟ, ಮರಗಾಲು, ಕೀಲುಕುದುರೆ, ತಮಟೆಮೇಳ ಮುಂತಾಗಿ ಅನೇಕ ಕಲೆಗಳು ಮೇಲು ನೋಟಕ್ಕೆ ಲೌಕಿಕ ಕಲೆಗಳಾಗಿ ಕಂಡರೂ ಹಲವು ಸಂದರ್ಭಗಳಲ್ಲಿ ದೇವರ ಜಾತ್ರೋತ್ಸವಗಳಲ್ಲಿ, ವಿಶೇಷವಾದ ದಿನಗಳಲ್ಲಿ ಈ ಕಲೆಗಳ ಪ್ರದರ್ಶನವು ಆಚರಣೆಯ ಒಂದು ಅಂಗವಾಗಿ ಪ್ರದರ್ಶನ ಕಾಣುತ್ತಿರುತ್ತವೆ. ಹೀಗೆ ಎಲ್ಲಾ ಜನಪದ ಪ್ರದರ್ಶನ ಕಲೆಗಳ ಹಿನ್ನೆಲೆಯಲ್ಲಿಯೂ ಕೂಡ ಧಾರ್ಮಿಕ ಪ್ರಭಾವವಿರುವುದು ಕಂಡು ಬರುತ್ತದೆ.

ಜನಪದ ಪ್ರದರ್ಶನಾತ್ಮಕ ಕಲೆಗಳು ನಿತ್ಯದ ಬದುಕಿನೊಂದಿಗೆ ಬೇರ್ಪಡಿಸಲಾಗದಂತೆ ಬೆರೆತು ಹೋಗಿವೆ. ಅವು ಕೇವಲ ಮನರಂಜನೆಗೆ ಮಾತ್ರ ಸೀಮಿತವಾದವುಗಳಲ್ಲ; ಬದಲಿಗೆ ಕಲೆಗಳು ಮಾನವನ ಜೀವನ ವಿಧಾನಗಳೇ ಆಗಿವೆ. ಅವುಗಳಿಗೆ ಒಂದಕ್ಕೊಂದು ವಿಶಿಷ್ಟವಾದ ಸಾಂದರ್ಭಿಕತೆಗಳಿವೆ. ಅವನ್ನು

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025 | VOLUME: 09, ISSUE: 06, DECEMBER 2025

ಬದುಕಿನಿಂದ ಬೇರ್ಪಡಿಸಿದರೆ ಅವು ನಮ್ಮ ಜೀವನದಿಂದ ಬೇರ್ಪಟ್ಟು ತುಣುಕುಗಳಾಗಿ ಕಾಣುತ್ತವೆ. ಅಂದರೆ ಕಲೆಗಳು ಕೇವಲ ಇತರರಿಗೆ ಮನರಂಜನೆ ನೀಡಲು ಮಾತ್ರ ಪ್ರದರ್ಶನವಾಗುವುದಿಲ್ಲ, ಬದುಕಿನ ಸಾಂದರ್ಭಿಕ ಅಗತ್ಯಗಳಿಗೆ ತಕ್ಕ ಹಾಗೆ ಆಚರಣೆಯ ಭಾಗವಾಗಿ ಕೆಲವೊಮ್ಮೆ ಪ್ರದರ್ಶನಗೊಳ್ಳುತ್ತವೆ. ಕೆಲವೊಮ್ಮೆ ಇವು ಉಪಕಸುಬು, ಕುಲಸೇವೆ, ವಂಶಪಾರಂಪರ್ಯ ಕರ್ತವ್ಯಗಳಾಗಿಯೂ ವಿಧಿಸಲ್ಪಡುತ್ತವೆ. ಕಡ್ಡಾಯವಾಗಿ ಆಚರಿಸಲೇಬೇಕಾದ ವಿಧಿಕ್ರಿಯೆಗಳಾಗಿ, ಜವಾಬ್ದಾರಿಗಳಾಗಿ ಹೆಗಲು ಹತ್ತುತ್ತವೆ. ಅಂದರೆ ಕೆಲವು ಕಲೆಗಳನ್ನು ಜನ ತಮ್ಮ ಇಚ್ಛೆಯಂತೆ ಆಯ್ಕೆ ಮಾಡಿಕೊಳ್ಳುವಂತಿಲ್ಲ ಅವು ಅವರ ಕುಲಕಟ್ಟಿನ ಕರ್ತವ್ಯಗಳೂ ಆಗಿವೆ. ಉದಾಹರಣೆಗೆ ಗೊರವರ ವೇಷ ಮತ್ತು ಕುಣಿತ ಮೈಲಾರ ದೇವರಿಗೆ ದೀಕ್ಷೆಯಾದವರ ಹಕ್ಕು ಮತ್ತು ಸೇವೆ. ಬೇರೆ ಜನರು ಈ ವೇಷ ಹಾಕುವಂತಿಲ್ಲ. ಇದರ ಜೊತೆಗೆ ದೇವರ ಸೇವೆಯ ಹಿನ್ನೆಲೆಯಲ್ಲಿ ಅದರದ್ದೇ ಆದ ವಸ್ತ್ರ, ವೇಷಭೂಷಣಗಳನ್ನು ತೊಟ್ಟು ಇವರು ಕುಣಿಯಬೇಕಾಗುತ್ತದೆ ಆದರೆ ಇತ್ತೀಚಿನ ದಿನಗಳಲ್ಲಿ ಬದುಕಿನ ಅನಿವಾರ್ಯತೆ ಮತ್ತು ಬಡತನಗಳಿಂದ ಬೇಸತ್ತ ಧಾರ್ಮಿಕ ಕಲೆಗಳ ಕಲಾವಿದರು ತಮ್ಮ ಹೊಟ್ಟೆಪಾಡಿಗೆ ಇತರೆ ಸಂದರ್ಭಗಳಲ್ಲಿಯೂ ಅವುಗಳನ್ನು ಪ್ರದರ್ಶಿಸುತ್ತಾ ಬಂದಿರುವುದು, ಒಂದು ಕಲೆಯು ತನ್ನ ಸಾಂಸ್ಕೃತಿಕ ಪಲ್ಲಟಕ್ಕೆ ಒಳಗಾಗಿರುವುದನ್ನು ಸೂಚಿಸುತ್ತದೆ.

ಇಂದಿಗೂ ನಮ್ಮಲ್ಲಿ ತಮಟೆ ಬಾರಿಸುವವರು ಮಾದಿಗ ಸಮುದಾಯದವರು, ಉರುಮೆ ಬಾರಿಸುವವರು ಹೊಲೆಯರು ಹೀಗೆ ಇವೆಲ್ಲಾ ಕುಲಕಟ್ಟಿನ ಸೇವೆ ಮತ್ತು ಹಕ್ಕುಗಳಾಗಿವೆ; ಆದರೆ ಇಂದಿನ ದಿನಮಾನಗಳಲ್ಲಿ ವಾದ್ಯಗಳನ್ನು ನುಡಿಸುವ ಕಲೆಯು ಆಸಕ್ತಿ ಹೊಂದಿದ ಯಾವೊಬ್ಬ ವ್ಯಕ್ತಿಯಾದರೂ ಕಲಿತು ನುಡಿಸುವ ಬದಲಾವಣೆಗಳು ಉಂಟಾಗಿ ಯಾರೂ ಬೇಕಾದರೂ ನಿರ್ವಹಿಸಬಹುದಾದ ಕಲೆಗಳಾಗಿ ಪಲ್ಲಟಗಳಿಗೆ ಒಳಗಾಗುತ್ತಲಿವೆ. ಇಂದು ಯಾವ ಕಲೆಯೂ ಕೀಳಲ್ಲ, ಯಾವ ಕಲೆಯೂ ಮೇಲಲ್ಲ. ಆದರಿಸುವ ಗುಣವನ್ನು ಹೊಂದಿರಬೇಕಾತ್ತದೆ ಅಷ್ಟೇ. ಜಾತಿಗೆ ಅಂಟಿಕೊಂಡಿದ್ದ ಅನೇಕ ಕಲೆಗಳು, ಇಂತಹದ್ದೇ ದಿನಗಳಲ್ಲಿ ಮಾತ್ರ ಪ್ರದರ್ಶಿಸಲ್ಪಡಬೇಕು ಎಂಬ ಯಾವ ಮಿತಿಯೂ ಇಲ್ಲ.

ಇಂದು ಜಾತಿ ಸಂಕೋಲೆಗಳನ್ನು ಮೀರಿ, ಜಾತಿ ಮುಕ್ತ, ಸಂದರ್ಭ ಮುಕ್ತ ಪ್ರದರ್ಶನವನ್ನು ಕಾಣುತ್ತಿವೆ.

ಜನಪದ ಪ್ರದರ್ಶನಾತ್ಮಕ ಕಲೆಗಳಲ್ಲಿ ಏಕವ್ಯಕ್ತಿ ಪ್ರದರ್ಶನಗಳು ಕಡಿಮೆ, ಗುಂಪು ಪ್ರದರ್ಶನಗಳೇ ಹೆಚ್ಚು. ಅಲಾವಿ ಕುಣಿತ, ಕೋಲಾಟ, ಡೊಳ್ಳು ಕುಣಿತ, ಚಕ್ಕೆ ಭಜನೆ ಹೀಗೆ ಯಾವ ಕಲೆಗಳನ್ನು ತೆಗೆದುಕೊಂಡರೂ ಇವುಗಳು ಹಿಂದಿನ ದಿನಮಾನಗಳಲ್ಲಿ ಅಭಿವ್ಯಕ್ತವಾಗುತ್ತಿದ್ದದ್ದು ಏಕ ಸಮುದಾಯದ ವ್ಯಕ್ತಿಗಳಿಂದ; ಆದರೆ ಇಂದು ಇವೇ ಕಲಾ ತಂಡಗಳಲ್ಲಿ ವಿವಿಧ ಸಮುದಾಯದ ಯುವಕರು ಸೇರಿ ಒಂದಾಗಿ ಕಲೆಯನ್ನು ಪ್ರದರ್ಶನ ಮಾಡುತ್ತಾ ಜಾತಿ ಸಂಕೋಲೆಗಳಿಂದ ಹೊರ ಬಂದಿರುವುದನ್ನು ಕಾಣಬಹುದು. ಉದಾಹರಣೆಗೆ 'ಅಲಾವಿ' ಕುಣಿತದಂತಹ ಕಲೆಗಳಲ್ಲಿ ಮುಸ್ಲಿಂ ಯುವಕರು ಮಾತ್ರ ಕುಣಿಯಬೇಕು ಎಂಬ ಷರತ್ತುಗಳೇನೂ ಇರದೆ, ಇಡೀ ಊರೇ ರಂಗಭೂಮಿಯಾಗಿ, ಊರಿನ ಎಲ್ಲ ಸಮುದಾಯದ ಎಲ್ಲ ಯುವಕರೂ ಸಾಲುಗಟ್ಟಿ ನಿಂತು ಅಲಾವಿ ಹೆಜ್ಜೆ ಹಾಕವುದು ಬದಲಾವಣೆಯ ಮುನ್ನುಡಿ ಎಂದು ಹೇಳಬಹುದು.

ಪಾಳೆಯಗಾರರ ಕಾಲದ ಯುದ್ಧ ಕಲೆಯಾಗಿ ಪ್ರದರ್ಶನ ಕಾಣುತ್ತಿದ್ದ ಖಾಸಬೇಡರ ಪಡೆ ಕುಣಿತವು ಅಂದಿನ ದಿನಮಾನಗಳಲ್ಲಿ ಬಳಕೆಯಾಗುತ್ತಿದ್ದ ಕೆಲವು ವಸ್ತ್ರವೇಷಭೂಷಣ, ಚರ್ಮದ ಉಡುಗೆ–ತೊಡುಗೆಗಳು ಮತ್ತು ಆಯುಧ ಪರಿಕರಗಳು ಮೊದಲಾದವುಗಳೆಲ್ಲವೂ ಸಾಂಪ್ರದಾಯಿಕತೆಯನ್ನು ಕಾಯ್ದುಕೊಂಡಿತ್ತು. ಅದು ಹಳೆಯ ಸಂಸ್ಕೃತಿ ಆದರೆ ಇಂದಿನ ಆಧುನಿಕ ದಿನಮಾನಗಳಲ್ಲಿ ಸಾಂಪ್ರದಾಯಿಕ ಉಡುಗೆ–ತೊಡುಗೆಗಳನ್ನು ಕಾಣಲು ಕಷ್ಟಸಾಧ್ಯವಾಗಿರುತ್ತದೆ. ಶತಮಾನಗಳಷ್ಟು ಕಾಲ ಅವಸಾನ ಹೊಂದಿ, ಮರು ಹುಟ್ಟು ಪಡೆದಿರುವ ಈ ವಿಶಿಷ್ಟ ಕಲೆಯು ಇಂದಿನ ಯುಗಮಾನಕ್ಕೆ ತಕ್ಕಂತೆ ಉಡುಗೆ ತೊಡುಗೆಗಳು, ಆಯುಧ ಪರಿಕರಗಳು ಮತ್ತು ವಾದ್ಯ ಮೇಳಗಳಲ್ಲಿ ಬದಲಾವಣೆಯಾಗಿರುವುದು ಕಂಡು ಬರುತ್ತದೆ.

ಮರಗಾಲು ಕುಣಿತವು ಚಿತ್ರದುರ್ಗದಲ್ಲಿ ವಿಶೇಷವಾಗಿ ಗರಡಿ ಮನೆಗಳ ಮಟ್ಟಿಪೂಜೆ ಎನ್ನುವಂಥ ಆಚರಣೆಯ ಅಂಗವಾಗಿ ಸಂಪ್ರದಾಯಬದ್ಧ ವಿಧಿ–

ವಿಧಾನಗಳು, ಉಡುಗೆ–ತೊಡುಗೆಗಳು ಮತ್ತು ಚರ್ಮ ವಾದ್ಯಗಳೊಂದಿಗೆ ಪ್ರದರ್ಶನ ಕಾಣುತ್ತಿತ್ತು. ಸಾಂಪ್ರದಾಯಿಕ ಉಡುಗೆಯಾದ ರೇಷ್ಮೆ ಕಚ್ಚೆಪಂಚೆಯ ಬದಲಾಗಿ ಇಂದಿನ ಯುವಕರು ಆಯಾಯ ಗರಡಿ ಮನೆಗಳ ಹೆಸರುಳ್ಳ ಟೀಶರ್ಟ್ ಮತ್ತು ಪ್ಯಾಂಟ್‌ಗಳಂಥಹ ಆಧುನಿಕ ಉಡುಗೆ ತೊಡುಗೆಗಳನ್ನು ಬಳಸುತ್ತಿರುವುದು ಕಂಡು ಬರುತ್ತದೆ. ಇದಲ್ಲದೆ ಉರುಮೆ, ಡೊಳ್ಳಿನಂಥಹ ಚರ್ಮ ವಾದ್ಯಗಳು ಕಣ್ಮರೆಯಾಗಿ ಫೈಬರ್ ಅಥವಾ ಪ್ಲಾಸ್ಟಿಕ್ ಹಾಳೆಗಳನ್ನು ಹೊದಿಸಿದ ತಗಡಿನ ಹೊಳವುಗಳನ್ನು ಬಳಸುತ್ತಿರುವುದು ಕಂಡು ಬರುತ್ತದೆ.

ಏಕಲವ್ಯನ ಕುಣಿತ, ಕೀಲುಕುದುರೆ ಕುಣಿತ, ಗಾರುಡಿಗೊಂಬೆ ಕುಣಿತದಂಥಹ ಕಲೆಗಳಲ್ಲಿ ಬಳಕೆಯಾಗುವ ಬಿಲ್ಲು ಬಾಣ, ಕೃತಕ ಕುದುರೆಗಳು, ಕೃತಕ ಮನುಷ್ಯಾಕೃತಿಗಳು ಮತ್ತು ಕಲಾವಿದರು ಬಳಸುತ್ತಿದ್ದಂತಹ ಉಡುಗೆ–ತೊಡುಗೆಗಳು ಇವೆಲ್ಲವೂ ಅಪ್ಪಟ ಜನಪದ ದೇಸಿ ಸಂಪ್ರದಾಯಿಕ ಮೂಲದವುಗಳಾಗಿದ್ದವು. ಇವುಗಳನ್ನು ಸಹಜವಾಗಿ ತಮ್ಮ ತಮ್ಮ ಊರಿನಲ್ಲಿಯೇ ಸಿಗುವ ಮಣ್ಣು, ಕಟ್ಟಿಗೆ, ಬಿದಿರಿನ ದಬ್ಬೆ, ಹಲಗೆಗಳು, ಪ್ರಾಕೃತಿಕ ಬಣ್ಣಗಳು ಮೊದಲಾದವುಗಳ ಸಹಾಯದಿಂದ ತಯಾರಿಸಿಕೊಳ್ಳುತ್ತಿದ್ದರು. ಅದೇ ರೀತಿಯಲ್ಲಿ ತಮ್ಮ ದೈನಂದಿನ ಉಡುಗೆ–ತೊಡುಗೆಗಳಿಗೆ ಕಲಾತ್ಮಕತೆಯನ್ನು ತುಂಬಿ ಕುಣಿತಕ್ಕೆ ತಕ್ಕುದಾದ ವಸ್ತ್ರವೇಷಭೂಷಣಗಳು ಮತ್ತು ಆಭರಣಗಳನ್ನು ತಾವೇ ಸ್ವತಃ ತಯಾರಿಸಿಕೊಳ್ಳುತ್ತಿದ್ದರು. ಆದರೆ ಆಧುನಿಕತೆಯ ಭರದಲ್ಲಿ ಇಂದು ಎಲ್ಲವೂ ರೆಡಿಮೇಡ್ ರೂಪದಲ್ಲಿ ಮಾರುಕಟ್ಟೆಯಲ್ಲಿ ದೊರೆಯುತ್ತವೆ. ಅವು ಎಷ್ಟರ ಮಟ್ಟಿಗೆ ಎಂದರೆ ಮರದ ಹಲಗೆಗಳಿಗೆ ಮಣ್ಣು ಮೆತ್ತಿದ ಕುದುರೆಗಳು, ಮನುಷ್ಯಾಕೃತಿಗಳು, ರಾಕ್ಷಸರು ಈ ಎಲ್ಲಾ ಆಕೃತಿಗಳ ಬದಲಾಗಿ ಪ್ಲಾಸ್ಟಿಕ್ ಅಥವಾ ಫೈಬರ್‌ನ ಕೀಲುಕುದುರೆ, ಗಾರುಡಿಗೊಂಬೆಯ ವಿವಿಧ ಕಲಾಕೃತಿಗಳು ಸಿದ್ಧ ರೂಪದಲ್ಲಿ ದೊರೆಯುತ್ತಿವೆ ಹಾಗೂ ಅವುಗಳು ದೀರ್ಘಕಾಲ ಬಾಳಿಕೆ ಬರುವುದಲ್ಲದೇ ಖರ್ಚುವೆಚ್ಚಗಳಲ್ಲಿಯೂ ಕಲಾವಿದರಿಗೆ ಆರ್ಥಿಕ ಸಂಕಷ್ಟವೆನಿಸದೇ ಇರುವುದರಿಂದ ಇವುಗಳ ಬಳಕೆ ಹೆಚ್ಚಾಗಿರುತ್ತದೆ. ಇದಲ್ಲದೇ ಹಳೆಯ ಮಾದರಿಯ ಕಲಾಕೃತಿಗಳಿಗಿಂತಲೂ ಆಧುನಿಕ ತಂತ್ರಜ್ಞಾನದಲ್ಲಿ ಮೂಡಿ ಬಂದಿರುವ ಈ

ಹೊಸ ಯುಗದ ಕಲಾಕೃತಿಗಳು ವರ್ಣರಂಜಿತವಾಗಿದ್ದು, ಪ್ರೇಕ್ಷಕರನ್ನು ಅತ್ಯಂತ ಆಕರ್ಷಣೀಯವಾಗಿ ಸೆಳೆಯುತ್ತವೆ.

ಒಂದು ಕಾಲಘಟ್ಟದಲ್ಲಿ ಕೋಲಾಟ, ತಮಟೆ ಮೇಳ, ಅಲಾವಿ ಕುಣಿತದಂಥಹ ಕೆಲವು ಕಲೆಗಳಿಗೆ ಇಂತಹದ್ದೇ ವಸ್ತ್ರ, ವೇಷಭೂಷಣಗಳನ್ನು ಧರಿಸಬೇಕೆಂಬ ಪರಿಪಾಠ ಇರುತ್ತಿರಲಿಲ್ಲ. ಜನಪದರು ಅವರ ದೈನಂದಿನ ಉಡುಗೆಗಳಲ್ಲಿಯೇ ಈ ಕಲಾ ಪ್ರದರ್ಶನವನ್ನು ನೀಡುತ್ತಿದ್ದರು. ಆದರೆ ಇಂದಿನ ದಿನಮಾನಗಳಲ್ಲಿ ಪ್ರೇಕ್ಷಕರನ್ನು ಸೆಳೆಯುವ ಸಲುವಾಗಿಯೋ? ತಮ್ಮ ತಂಡದ ಪ್ರಚಾರಕ್ಕೆಂದೋ? ಕುಣಿತದ ಆಕರ್ಷಣೆ ಹೆಚ್ಚಾಗಿಸಲೆಂದೋ? ಸಮವಸ್ತ್ರದ ಪರಿಪಾಠಗಳು ರೂಢಿಯಲ್ಲಿವೆ. ಸಮೂಹ ನೃತ್ಯಗಳಾಗಿರುವ ಈ ಕಲೆಗಳ ಕಲಾವಿದರುಗಳೆಲ್ಲರಿಗೂ ಒಂದೇ ಬಗೆಯ ವರ್ಣರಂಜಿತ ಸಮವಸ್ತ್ರಗಳನ್ನು ಧರಿಸುವಂತೆ ಆಧುನಿಕತೆಯು ತನ್ನ ಪ್ರಭಾವ ಬೀರುತ್ತಿದೆ. ಕೋಲಾಟದಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಜನಪದ ಸಾಹಿತ್ಯದ ಜೊತೆ ಜೊತೆಗೆ ಇಂದಿನ ಸಿನಿಮಾ ಸಾಹಿತ್ಯವೂ ನೃತ್ಯದಲ್ಲಿ ಬಳಕೆಯಾಗುತ್ತಿರುವುದು ಕಂಡುಬರುತ್ತಿದೆ.

ಪಂಡರಿ ಭಜನೆ, ಚಕ್ಕೆ ಭಜನೆ, ಗೊರವರ ಕುಣಿತ, ಸೋಮನ ಕುಣಿತ, ಡೊಳ್ಳು, ವೀರಗಾಸೆ, ನಂದಿಕೋಲಿನಂತಹ ಧಾರ್ಮಿಕ ಆಚರಣಾ ಸಂಬಂಧಿ ಕಲೆಗಳು ಆಯಾ ದೈವದ ಧಾರ್ಮಿಕ ಸಾಮಗ್ರಿಗಳು, ಪಾರಂಪಾರಿಕ ವಸ್ತ್ರ, ವೇಷಭೂಷಣಗಳು, ಆಭರಣಗಳು, ಚರ್ಮವಾದ್ಯಗಳು ಇತ್ಯಾದಿಗಳನ್ನು ಬಳಸಿಕೊಂಡು ವಿಧಿ–ವಿಧಾನಗಳಂತೆ, ನೇಮನಿಷ್ಠೆಯಿಂದ ಪ್ರದರ್ಶನ ಕಾಣುತ್ತಿದ್ದವು. ಇತ್ತೀಚಿನ ದಿನಮಾನಗಳಲ್ಲಿ ಇವೆಲ್ಲವೂ ಕೊಂಚ ಸಡಿಲಿಕೆ ಕಂಡು, ಕೆಲವು ಪರಿಕರಗಳಲ್ಲಿ, ವಸ್ತ್ರಾಭರಣಗಳಲ್ಲಿ ಆಧುನಿಕತೆಯ ಗಾಳಿ ಬೀಸುತ್ತಿವೆ. ಕಲೆಯೊಂದು ತನ್ನನ್ನು ತಾನು ಅಂದಂದಿನ ಜಾಯಮಾನಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳದೇ ಇದ್ದರೆ ನಶಿಸಿ ಹೋಗುವ ಸಾಧ್ಯತೆಗಳಿರುತ್ತವೆ ಹಾಗಾಗಿ ಇಂತಹ ಕೆಲವು ಬದಲಾವಣೆಗಳು ಇಂದಿಗೆ ಅನಿವಾರ್ಯವಾಗಿವೆ.

ನಮ್ಮ ಜನಪದ ಕಲೆಗಳೆಲ್ಲವೂ ಅವುಗಳ ವಸ್ತ್ರಾಭರಣ, ಕಲಾ ಸಾಮಗ್ರಿಗಳು ಮತ್ತು ಪ್ರದರ್ಶನದ ಸ್ವರೂಪಗಳಲ್ಲಿ ಹೊಸದನ್ನು ಮೈಗೂಡಿಸಿಕೊಂಡು ತಮ್ಮನ್ನು

ತಾವು ಜೀವಂತವಾಗಿರಿಸಿಕೊಳ್ಳಲು ಪ್ರಯತ್ನಿಸುತ್ತಿವೆ. ಉದಾಹರಣೆಗೆ ಡೊಳ್ಳು ಕುಣಿತದ ಸಾಂಪ್ರದಾಯಿಕ ಉಡುಗೆಯಾದ ಕಪ್ಪು ಕಂಬಳಿಯ ಬದಲಾಗಿ ಆಧುನಿಕರಣದ ವರ್ಣರಂಜಿತ ಹುಲಿಪಟ್ಟಿಯ ವಸ್ತ್ರವೇಷಭೂಷಣಗಳು ಹೆಚ್ಚಾಗಿ ಬಳಕೆಯಾಗಲ್ಪಡುತ್ತಿವೆ. ವೀರಗಾಸೆಯ ಧಾರ್ಮಿಕ ಪರಿಕರಗಳಾದ ರುದ್ರಾಕ್ಷಿ ಮಾಲೆ, ಶಂಖ, ರುಂಡಮಾಲೆ ಇನ್ನಿತರ ವಿವಿಧ ಆಭರಣಗಳೆಲ್ಲವೂ ಆಧುನಿಕತೆಯ ಆರ್ಟಿಫಿಶಿಯಲ್ ಪರಿಕರಗಳಾಗಿವೆ. ಇಂತಹ ಅದೆಷ್ಟೋ ಉದಾಹರಣೆಗಳು ನಮ್ಮ ಬದಲಾದ ಪ್ರದರ್ಶನಾತ್ಮಕ ಕಲೆಗಳ ವಿಚಾರವಾಗಿ ಗುರುತಿಸಬಹುದಾಗಿದ್ದು, ಈ ಬದಲಾವಣೆಗಳು ಇಂದಿನ 'ರೆಡಿಮೇಡ್ ಯುಗಕ್ಕೆ ತಕ್ಕಂತೆ ಜನಪದ ಪ್ರದರ್ಶನಾತ್ಮಕ ಕಲೆಗಳನ್ನು ರೀಮೇಡ್ ಮಾಡುತ್ತಿವೆಯೇನೋ ಎಂದೆನಿಸುತ್ತದೆ'. ಪ್ರದರ್ಶನ ಕಲೆಗಳು ಸಹಕಾರವನ್ನು ಅಪೇಕ್ಷಿಸುತ್ತವೆ ಮತ್ತು ಅಭಿವ್ಯಕ್ತಿಸುತ್ತವೆ. ಇಲ್ಲೆಲ್ಲಾ ವ್ಯಕ್ತಿ ಪ್ರಜ್ಞೆಗಿಂತ ಸಮಷ್ಟಿ ಪ್ರಜ್ಞೆ ಮುಖ್ಯವೆನಿಸುತ್ತದೆ. ಕುಣಿಯುವ ಒಬ್ಬೊಬ್ಬರೂ ಎಲ್ಲರಿಗೂ ಹೊಂದಿಕೊಳ್ಳಬೇಕು, ಹೊಂದಿಕೊಳ್ಳದಿದ್ದರೆ ಪ್ರದರ್ಶನ ನಡೆಯುವುದಿಲ್ಲ. ಕಲೆಯ ಪ್ರದರ್ಶನಕ್ಕೆ ಸಮುದಾಯದಲ್ಲಿದ್ದ ಸ್ತರ ವಿನ್ಯಾಸಗಳು ಗೌಣವಾಗಿ, ಸಂಪ್ರದಾಯಗಳು ಸಡಿಲಗೊಂಡು ಸಾರ್ವತ್ರಿಕದ ಹಾದಿ ಹಿಡಿಯುವತ್ತ ಕಲೆಗಳು ಪಲ್ಲಟಗೊಳ್ಳುತ್ತಿವೆ. ದೇವರ ಉತ್ಸವ, ಮೆರವಣಿಗೆ, ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಬೀದಿ ಬೀದಿಗಳಲ್ಲಿ ಮೆರವಣಿಗೆ ಹೊರಡುವ ಹತ್ತಾರು ಕಲಾ ತಂಡಗಳು ಹಲವು ಸಮುದಾಯದ ಕಲಾವಿದರನ್ನು ತನ್ನ ತೆಕ್ಕೆಗೆ ಹಾಕಿಕೊಂಡು ಮುಂದೆ ಸಾಗುತ್ತಿವೆ ಎಂದು ಹೇಳಬಹುದು.

ಒಟ್ಟಾರೆಯಾಗಿ ಒಂದು ಜನಾಂಗದ ಸಾಂಸ್ಕೃತಿಕ ಅಭೀಪ್ಸೆ, ಒತ್ತಾಸೆಗಳಿಂದಾಗಿ ಕಲೆಗಳು ಹುಟ್ಟಿ ಬೆಳೆದಿರುತ್ತವೆ. ಅವು ದೇಶ, ಕಾಲ, ಪರಿಸರಗಳಿಗೆ ತಕ್ಕಂತೆ ಬೆಳೆಯುತ್ತ, ಬದಲಾಯಿಸಿಕೊಳ್ಳುತ್ತ ಸಾಗುತ್ತಿರುತ್ತವೆ. ಹೀಗೆ ಸಾಗುವುದೇ ಅವುಗಳ ಜೀವಂತಿಕೆಗೆ ಸಾಕ್ಷಿ. ನಮ್ಮ ಜನಪದ ಕಲೆಗಳು ಒಂದಾನೊಂದು ಕಾಲದಲ್ಲಿ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳ ಅಂಗಗಳಾಗಿ ಜನ್ಮ ತಳೆದು ಅಭಾದಿತವಾಗಿ ಪ್ರವಹಿಸುತ್ತಾ ಬಂದಿವೆ. ಆಧುನಿಕತೆಯ ಪ್ರಭಾವದಿಂದ ಸ್ವಲ್ಪಮಟ್ಟಿಗಿನ ವೈವಿಧ್ಯತೆಗಳನ್ನು ಮೈಗೂಡಿಸಿಕೊಂಡಿರಬಹುದು ಆದರೆ ತಮ್ಮ

ಮೂಲ ಅಸ್ಮಿತೆಗಳನ್ನು ಸಂಪೂರ್ಣವಾಗಿ ಮರೆತಿರುವುದಿಲ್ಲ ಎಂಬುದನ್ನು ಗಮನಿಸಬಹುದು.

ಕೊನೆ ಟಿಪ್ಪಣಿಗಳು

1. ಅಂಬಳಿಕೆ ಹಿರಿಯಣ್ಣ., ಡಾ.ಶಾಲಿನಿ ರಘುನಾಥ (ಸಂ), – ಜನಪದ ಕಲೆ : ಅವಲೋಕನ, ಪು.ಸಂ 53.
2. ಹಿ.ಚಿ.ಬೋರಲಿಂಗಯ್ಯ – ಕರ್ನಾಟಕ ಜನಪದ ಕಲೆಗಳ ಕೋಶ, ಪು.ಸಂ 12.

ಪರಾಮರ್ಶನ ಗ್ರಂಥಗಳು

1. ಅಂಬಳಿಕೆ ಹಿಯಣ್ಣ, ಶಾಲಿನಿ ರಘುನಾಥ, ಜನಪದ ಕಲೆ : ಅವಲೋಕನ, 2010, ಕರ್ನಾಟಕ ಜಾನಪದ ಅಕಾಡೆಮಿ ಬೆಂಗಳೂರು.
2. ಗವೀಶ ಹಿರೇಮಠ, ಜಾಗತೀಕರಣ ಮತ್ತು ಜಾನಪದ, 2007, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.
3. ತಿಪ್ಪೇಸ್ವಾಮಿ ಜಿ.ಆರ್., ಜಾಗತೀಕರಣ ಮತ್ತು ಜಾನಪದ, 2011, ಕರ್ನಾಟಕ ಜಾನಪದ ಅಕಾಡೆಮಿ ಬೆಂಗಳೂರು.
4. ಬೋರಲಿಂಗಯ್ಯ ಹಿ.ಚಿ. (ಸಂ), ಕರ್ನಾಟಕ ಜನಪದ ಕಲೆಗಳ ಕೋಶ, 2015, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

ಲೇಖಕರು : ಡಾ. ರುಜುವಾನ್
ಸಾಹಿತಿಗಳು., ಅಂದನೂರು
ಹೊಳಲ್ಕೆರೆ ತಾಲ್ಲೂಕು
ಚಿತ್ರದುರ್ಗ ಜಿಲ್ಲೆ
rujusuchi@gmail.com

***

ಪ್ರೌಢದೇವರಾಯನ ಶಾಸನಗಳು : ಸಂಸ್ಕೃತಿ

ಕ್ರಿ.ಶ. ಹದಿನಾಲ್ಕನೆಯ ಶತಮಾನದ ಪೂರ್ವಾರ್ಧದಲ್ಲಿ ಉದಯಿಸಿದ ವಿಜಯನಗರ ಸಾಮ್ರಾಜ್ಯವು ಜಾಗತಿಕ ನಕಾಶೆಯಲ್ಲಿ ತನ್ನದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿದೆ. ರಾಜಕೀಯ ಇತಿಹಾಸದೊಂದಿಗೆ ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಟ್ಟ ಹೆಗ್ಗಳಿಕೆ ಈ ಸಾಮ್ರಾಜ್ಯದ್ದು. ತುಂಗಭದ್ರೆಯ ಒಡಲಲ್ಲಿ ದಕ್ಷಿಣ ಭಾರತವನ್ನು ಏಕ ಛತ್ರದಡಿಗೆ ತಂದು ಈ ಭಾಗದ ಪರಂಪರಾಗತ ಧರ್ಮ, ಜನಜೀವನ ವಿಧಾನಗಳನ್ನು ರಕ್ಷಿಸಿ ಅವುಗಳ ಉತ್ಥಾನಕ್ಕೆ ತನ್ನದೇ ಮೌಲ್ಯಯುತವಾದ ಕೊಡುಗೆಯನ್ನು ನೀಡಿತು. ಧರ್ಮ, ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪ ಹಾಗೂ ಸಂಸ್ಕೃತಿ ಪರಂಪರೆಗೆ ವಿಜಯನಗರ ಮನೆತನವು ಕೈಗನ್ನಡಿಯಾಯಿತು. ಅದರಲ್ಲೂ ವಿಶ್ವಪ್ರಸಿದ್ಧ ವಿಜಯನಗರ ಸಾಮ್ರಾಜ್ಯದ ಇತಿಹಾಸದಲ್ಲಿ ಪ್ರೌಢದೇವರಾಯನ ಅವಧಿಯು 'ಸುವರ್ಣಯುಗ'ವೆಂದು ಹೆಸರು ಪಡೆದಿದೆ. ಸಂಗಮ ವಂಶದ ಪ್ರಸಿದ್ಧ ಅರಸನಾದ ಪ್ರೌಢದೇವರಾಯನು ಕ್ರಿ.ಶ. 1424 ರಿಂದ 1446ರವರೆಗೆ ಸುಮಾರು ಎರಡು ದಶಕಗಳಿಗೂ ಹೆಚ್ಚು ಅವಧಿ ವಿಜಯನಗರ ಸಾಮ್ರಾಜ್ಯದ ಅರಸನಾಗಿ ಅತ್ಯಂತ ದಕ್ಷತೆ ಮತ್ತು ಚಾಣಾಕ್ಷತೆಯಿಂದ ಆಡಳಿತ ನಡೆಸುತ್ತಾನೆ. ಈತನ ಅವಧಿಯ ಸುಮಾರು ಮುನ್ನೂರು ಶಾಸನಗಳು, ಸಮಕಾಲೀನ ಪ್ರವಾಸಿಗರ ಬರವಣಿಗೆ, ಸಾಹಿತ್ಯ ಕೃತಿಗಳು ಎಲ್ಲವೂ ಅವನೊಬ್ಬ ಅಸಾಮಾನ್ಯ ಪ್ರತಿಭೆಯುಳ್ಳ ಜನಾನುರಾಗಿ ಅರಸನಾಗಿದ್ದನೆಂದೂ ಹೇಳುತ್ತವೆ. ವಿಜಯನಗರ ಸಾಮ್ರಾಜ್ಯಕ್ಕೆ ಸರ್ವಧರ್ಮ ಪೋಷಣೆಯ ಗುಣದ ಮೊದಲ

ಬೀಜ ಬಿತ್ತಿದವನು ಇಮ್ಮಡಿ ದೇವರಾಯನೇ ಆಗಿದ್ದಾನೆ. ಅಲ್ಲದೇ ಮುಸಲ್ಮಾನರಿಗೆ ತನ್ನ ಸೈನ್ಯದಲ್ಲಿ ಮತ್ತು ಆಡಳಿತದಲ್ಲಿ ಅವಕಾಶ ನೀಡಿದ ಮೊದಲಿಗನೆಂಬ ಹೆಗ್ಗಳಿಕೆ ಇವನದ್ದಾಗಿದೆ. ಸಾಹಿತ್ಯ ಪೋಷಣೆಯ ದೃಷ್ಟಿಯಿಂದಲೂ ಗಮನಾರ್ಹ ಪ್ರೋತ್ಸಾಹ ನೀಡಿರುವುದನ್ನು ಗಮನಿಸಬಹುದಾಗಿದೆ.

ಪ್ರೌಢದೇವರಾಯನ ಶಾಸನಗಳು ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ಗೋವಾ, ಕೇರಳ ಮತ್ತು ತಮಿಳುನಾಡು ಮುಂತಾದ ರಾಜ್ಯಗಳಲ್ಲಿ ಹರಡಿದ್ದು, ಅವು ಕನ್ನಡ, ತೆಲುಗು, ತಮಿಳು ಮತ್ತು ಸಂಸ್ಕೃತ ಭಾಷೆಗಳಲ್ಲಿವೆ. ಇವುಗಳನ್ನು ಅವಲೋಕಿಸಿದಾಗ ಅವುಗಳು ಕೇವಲ ಪ್ರೌಢದೇವರಾಯನ ದಿಗ್ವಿಜಯಗಳನ್ನು ಮಾತ್ರ ತಿಳಿಸದೆ, ಈ ನೆಲದ ಕನ್ನಡ ಭಾಷೆಯ ಶ್ರೀಮಂತಿಕೆಯನ್ನು, ಭಾಷಾ ವೈಶಿಷ್ಟ್ಯವನ್ನು ಅರಹುತ್ತವೆ. ಜೊತೆಗೆ ಸಮಾಜದ ಹಲವು ಒಳಸುಳಿವುಗಳ ಬಗೆಗೆ ಮಾಹಿತಿಯನ್ನು ನೀಡುತ್ತವೆ. ಸಾಮಾನ್ಯ ಜನರು ನೀಡಿದ ದಾನಗಳು, ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ನಂಬಿಕೆ ಆಚರಣೆಗಳು, ವೃತ್ತಿಗಳು ಹೀಗೆ ಮುಂತಾದವುಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. ಹೀಗಾಗಿ ಈ ಎಲ್ಲಾ ಸಂಗತಿಗಳನ್ನು ಅರಿತು ಪ್ರೌಢದೇವರಾಯನ ಶಾಸನಗಳಲ್ಲಿರುವ ವೈಶಿಷ್ಟ್ಯತೆಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಪ್ರೌಢದೇವರಾಯನ ಅವಧಿಯ ಶಾಸನಗಳಲ್ಲಿ ಇದೂವರೆಗೂ ಹೆಚ್ಚು ಬೆಳಕಿಗೆ ಬಾರದ ಅನೇಕ ಸಂಗತಿ ಇಲ್ಲಿ ದಾಖಲಾಗಿವೆ. ಅವುಗಳಲ್ಲಿ ಮುಖ್ಯವಾಗಿ ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ಗೋವಿನಹಳ್ಳಿಯ ಕ್ರಿ.ಶ. 1445ರ ತಾಮ್ರ ಶಾಸನವು ಪ್ರೌಢದೇವರಾಯನಿಗೆ ಹೃದಯರೋಗದ ಕಾಯಿಲೆಯಿದ್ದ ಕುರಿತಾಗಿ ಮಾಹಿತಿಯನ್ನು ನೀಡುತ್ತದೆ. ಈ ಹೃದಯದ ರೋಗವನ್ನು ವಾಸಿ ಮಾಡಲು ನಾಗನಾಥಾರ್ಯಸೂರಿ (ನಾಗಭಟ್ಟ) ಎಂಬ ವೈದ್ಯನು ವಿವಿಧ ರೀತಿಯ ಶಾಂತಿ ಪೂಜೆಗಳನ್ನು ಮಾಡಿ, ಪುರಾಣಾದಿಗಳನ್ನು ಪರಿಶೀಲಿಸಿ, ಕಾಶಿ ಮೊದಲಾದ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ, ಲಕ್ಷ ಸ್ನಾನಗಳನ್ನು ಪೂರೈಸಿ, ಅನೇಕ ಬ್ರಾಹ್ಮಣರಿಗೆ ಭೋಜನ ಮತ್ತು ದಾನಗಳನ್ನು ನೀಡಿ, ಎಲ್ಲ ತೀರ್ಥಗಳಲ್ಲೂ ನಿಯಮಾನುಸಾರ ಭಕ್ತಿಯಿಂದ ಆಚರಣೆಗಳನ್ನು ನಡೆಸಿ ಹಿಂತಿರುಗುತ್ತಾನೆ. ಹಿಂತಿರುಗಿ ಬಂದು

ಅರಸನ ಹೃದಯರೋಗಕ್ಕೆ ಅನೇಕ ವಿದ್ವಾಂಸರ ಸೂಚನೆಯಂತೆ ಮತ್ತು ಪಾರಂಪರಿಕ ಶಾಸ್ತ್ರಗಳು ತಿಳಿಸುವಂತೆ ಚಿಕಿತ್ಸೆಯನ್ನು ನೀಡುತ್ತಾನೆ. ಈ ಚಿಕಿತ್ಸೆ ಫಲಕಾರಿಯಾಗಿ ಅರಸನ ಕಾಯಿಲೆ ಗುಣವಾಗುತ್ತದೆ. ಇದರಿಂದ ಸಂತೋಷಪಟ್ಟ ಅರಸನು ಚಂದ್ರಮೌಳೇಶ್ವರನ ಸನ್ನಿಧಿಯಲ್ಲಿ ಚಿಕಿತ್ಸೆ ನೀಡಿದ ನಾಗಭಟ್ಟನಿಗೆ ಗೋವಹಳ್ಳಿ ಮತ್ತು ಬೊಮ್ಮನಹಳ್ಳಿ ಗ್ರಾಮಗಳನ್ನು 'ದೇವರಾಯಪುರ'ವೆಂದು ಮರು ಹೆಸರಿಟ್ಟು ದಾನ ನೀಡುವನು. ಈ ನಾಗಭಟ್ಟನು ಶಾಸನದಲ್ಲಿ ಉಲ್ಲೇಖವಾಗಿರುವ ಮೊದಲ ಹೃದಯರೋಗದ ವೈದ್ಯನಾಗಿದ್ದಾನೆ. ಇವನು ಯಾವ ಔಷಧಿಯಿಂದ ರೋಗ ಗುಣಪಡಿಸಿದನೆಂಬ ವಿವರವಿದ್ದಿದ್ದರೆ ಈ ಶಾಸನವು ಜಾಗತಿಕ ಮಹತ್ವ ಪಡೆಯುತ್ತಿತ್ತು.

ಕೋಲಾರ ಜಿಲ್ಲೆ ಮೂಲೂರು ತಾಲ್ಲೂಕಿನ ತೇಕಲ್ಲು ಗ್ರಾಮದ ಕ್ರಿ.ಶ. 1431ರ ಶಾಸನದಲ್ಲಿ ಇಮ್ಮಡಿ ದೇವರಾಯನ ಕಾಲದಲ್ಲಿ ಸಾಳುವ ಗೋಪರಾಜನು ತೇಕಲ್ಲನ್ನು ಆಳುತ್ತಿರುತ್ತಾನೆ. ಇವನ ಪ್ರಧಾನಿಯಾದ ಸಿಂಗರಾಜನು ತೇಕಲ್ಲಿನ ವರದರಾಜ ದೇವರ ಮುಖಮಂಟಪದ ಗೋಪುರಕ್ಕೆ ಬಾಗಿಲನ್ನು ಮಾಡಿಸಲು ಮಾದನಹಳ್ಳಿಯಲ್ಲಿ ಬೆಳೆದಿದ್ದ ಗಂಡಭೇರುಂಡವೆಂಬ ಮಾವಿನ ಮರವನ್ನು ತರಿಸುತ್ತಾನೆ. ಹೀಗೆ ತರಿಸಿದ ಮರದಿಂದ ತೇಕಲ್ಲಿನ ಬಡಗಿಯಾದ ಭೋಜದೇವೋಜನು ಬಾಗಿಲನ್ನು ಮಾಡಿ ಅದರ ಕಬ್ಬಿಣದ ಕೆಲಸವನ್ನು ಕಮ್ಮಾರ ಅಂಗೋಜನ ಕೈಯಲ್ಲಿ ಮಾಡಿಸುತ್ತಾನೆ. ಈ ಬಾಗಿಲನ್ನು ಮಾಡಿದ ಭೋಜದೇವನಿಗೆ ಹಾಗೂ ಅಂಗೋಜನಿಗೆ ದಾನವನ್ನು ನೀಡುತ್ತಾನೆ. ದೇವರ ಕೆಲಸದ ಬ್ರಾಹ್ಮಣರಿಗೆ, ಪಾತ್ರದವರಾದ ಚೆನ್ನಿಯ ಮಕ್ಕಳಾದ ವರದಿ, ಹಿರಿಯ ವರದಿ, ನಿಟ್ಟೆಯ ವರದಿ, ಸಿಂಗಿಯ ಮಗಳಾದ ಬಡನಾಚಿ, ಚಿಕ್ಕ ಅಳವಿಯ ಮಗಳಾದ ಕಸ್ತೂರಿ, ಅಂಗರಂಗವನ್ನು ಮತ್ತು ಮಂಟಪವನ್ನು ಸಾರಿಸುವ ಊಳಿಗದ ತಿಮ್ಮಿಗೆ, ಹಾಡುಗಾರ್ತಿ ಅಲ್ಲೆನಾಚಿ ಅರಂಗಿದೇವಿ, ನಟುವ ಚಿಕ್ಕನಾಚಿ, ಗಂಗಾಯಿ ಮೊದಲಾದವರಿಗೆ ಆಳಂಬಾಳು, ಕೆಂದೂಳ, ವಿರಂಗಪುತ್ತೂರು, ಹುಣಿಸೆಕೊಪ್ಪ, ಅಣ್ಣಂದನ ಹಳ್ಳಿ ಹೀಗೆ ಒಟ್ಟು ಆರು ಗ್ರಾಮಗಳನ್ನು ದಾನವಾಗಿ ನೀಡಲಾಗಿದೆ. ಇಲ್ಲಿ ನಮ್ಮ ಗಮನ ಸೆಳೆಯುವ ಅಂಶಗಳೆಂದರೆ ವಿಶೇಷವಾದ

ಗಂಡಭೇರುಂಡವೆಂಬ ಮಾವಿನ ಮರ. ಈ ಮರಕ್ಕೆ ಆ ಹೆಸರುಬರಲು ಕಾರಣ ಅದು ಇದ್ದ ಆಕಾರ–ಗಾತ್ರವೋ ಅಥವಾ ಆ ಮರದ ಜಾತಿಯೋ ಎಂಬುದು ತಿಳಿಯುವುದಿಲ್ಲ. ಈಗಂತೂ ಈ ಹೆಸರಿನ ತಳಿಯ ಮಾವಿನಮರ ಎಲ್ಲೂ ಇಲ್ಲ. ಅರಸನ ಬಾಗಿಲು ಮಾಡಿಸುವ ಬಯಕೆಗೆ ಅಪರೂಪವಾದ ಮಾವಿನಮರ ಬಲಿಯಾಗಿದೆ. ಈ ಶಾಸನದ ಮತ್ತೊಂದು ಮಹತ್ವದ ಅಂಶವೆಂದರೆ ದೇವಾಲಯದ ಸೇವೆಗೆ ನೇಮಿಸಲ್ಪಡುತ್ತಿದ್ದ ಪಾತ್ರದವರು, ಹಾಡುಗಾರ್ತಿಯರು, ನೃತ್ಯಗಾರ್ತಿಯರು, ಬೇರೆ ಬೇರೆ ವೃತ್ತಿಯ ಹೆಣ್ಣುಮಕ್ಕಳನ್ನು ಇದು ಉಲ್ಲೇಖಿಸಿದೆ. ಇದರಿಂದಾಗಿ ಆ ಕಾಲದ ದೇವಾಲಯದಲ್ಲಿನ ವ್ಯವಸ್ಥೆಯ ಮೇಲೆ, ಸ್ತ್ರೀಯರಿಗೆ ಅಲ್ಲಿದ್ದ ಪಾತ್ರದ ಬಗ್ಗೆ ತಿಳಿಯಬಹುದಾಗಿದೆ. ಒಟ್ಟಾರೆ ದೇವಾಲಯ ನಿರ್ಮಾಣ ಪ್ರಕ್ರಿಯೆಯ ಬಗ್ಗೆ ಈ ಶಾಸನ ಬೆಳಕು ಚೆಲ್ಲುತ್ತದೆ.

ಪ್ರೌಢದೇವರಾಯನ ಅವಧಿಯ ಅನೇಕ ಶಾಸನಗಳು ವೀರ ಪರಂಪರೆಯ ಕುರಿತು ಬೆಳಕು ಚಲ್ಲುತ್ತವೆ. ಈ ಕುರಿತು ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕು ಕಾಯ್ಕಿಣಿಯ ಕ್ರಿ.ಶ.1427ರ ವೀರಗಲ್ಲು ಶಾಸನದಲ್ಲಿ3 ಮಹಾಪ್ರಧಾನಿಯಾದ ತಿಮ್ಮಣ್ಣವೊಡೆಯರು ಹೊನ್ನಾವರವನ್ನು ಆಳುವಾಗ ಯಾವುದೋ ಕಾರಣದಿಂದ ಪಾರ್ಸಿ ವ್ಯಾಪಾರಿ ಸಂಘದ ಮುಖ್ಯಸ್ಥ ಉಂಮರಮರಕಾಲನು ಪ್ರಧಾನಿ ತಿಮ್ಮಣ್ಣವೊಡೆಯರ ಬಳಿ ಜಗಳ ಮಾಡಿಕೊಳ್ಳುತ್ತಾನೆ. ಕೊನೆಗೆ ಅವನು ನಗಿರೆಯ ಅರಸ ಸಂಗಿರಾಯವೊಡೆಯರ ಬಳಿ ಹೋಗಿ ತಿಮ್ಮಣ್ಣವೊಡೆಯರೊಂದಿಗೆ ಸಂಧಾನ ಮಾಡಿಸುವಂತೆ ಕೋರುತ್ತಾನೆ. ಆಗ ಸಂಗಿರಾಯನು ತನ್ನ ಪ್ರಧಾನ ರಾವುತನಾದ ಕೋಟೇಶ್ವರ ನಾಯಕನ ಜೊತೆ ಸಾವಿರ ಮಂದಿ ಸೈನಿಕರನ್ನು ಕಾಸರಕೋಡಿಗೆ ಕಳುಹಿಸಿ ಹಂಜಮಾನರಿಗೆ ರಕ್ಷಣೆ ನೀಡುತ್ತಾನೆ. ಇದನ್ನು ತಿಳಿದ ತಿಮ್ಮಣ್ಣವೊಡೆಯನು ಮೋಸದಿಂದ ಕಾಸರಗೋಡನ್ನು ಮುತ್ತಿ, ಪಾರ್ಸಿಗಳನ್ನು ಮತ್ತು ಅವರ ಹೆಂಗಸರನ್ನು ಸೆರೆಹಿಡಿದು ತರುವನು. ಈ ಸಮಯದಲ್ಲಿ ಕೋಟೇಶ್ವರ ನಾಯಕನು ಅವನ ಜೊತೆ ಹೋರಾಡಿ ಪಾರ್ಸಿ ನಾಯಕನಾದ ಉಂಮರಮರಕಾಲ ಹಾಗೂ ಅವರ ಹೆಣ್ಣುಗಂಡುಗಳ ಸಹಿತ ಎಲ್ಲರನ್ನು ರಕ್ಷಿಸುತ್ತಾನೆ. ನಂತರ ತಿಮ್ಮಣ್ಣವೊಡೆಯರ ಮೇಲೆ ದಾಳಿ

ನಡೆಸಿ ಮಹಾಪ್ರತಾಪಿಯಾದ ದೇವರಣವನ್ನು ಕೊಂದು, ಮೂರು ಚಾವಡಿಯ ವೀರಭಟರನು ಓಡಿಸಿ ತನ್ನ ಶೌರ್ಯವನ್ನು ಮೆರೆದು ಮಡಿಯುತ್ತಾನೆ. ಪರದೇಶದ ವ್ಯಾಪಾರಿಗಳ ರಕ್ಷಣೆಗೆ ನಿಂತ ಕೋಟೇಶ್ವರನ ಮತ್ತು ಅವನ ಒಡೆಯನಾದ ನಗಿರೆಯ ಸಂಗೀರಾಯರ ಪ್ರಯತ್ನ ಮೆಚ್ಚಬೇಕಾದ್ದೆ. ಈ ಹೋರಾಟದಲ್ಲಿ ಪಾರ್ಸಿಜನರು ಮತ್ತು ಹೆಣ್ಣುಮಕ್ಕಳನ್ನು ಸೆರೆಹಿಡಿದಿದ್ದು ಆ ಕಾಲದ ಯುದ್ಧದ ಅಡ್ಡ ಪರಿಣಾಮಗಳನ್ನು ಬಿಂಬಿಸುತ್ತದೆ. ಬೆಂಗಳೂರು ಗ್ರಾಮಂತರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಮಳೂರುಪಟ್ಟಣದ ಕ್ರಿ.ಶ. 1432ರ ವೀರಗಲ್ಲೊಂದು4 ಬಹಳ ಕುತೂಹಲಕಾರಿ ವಿಷಯವನ್ನು ತಿಳಿಸುತ್ತದೆ. ಗ್ರಾಮದವರೆಲ್ಲ ಶಿವರಾತ್ರಿ ಹಬ್ಬದ ದಿವಸ ಒಂದು ದೇವಾಲಯದಲ್ಲಿ ಸೇರಿ ಜಾಗರಣೆ ಮಾಡುತ್ತಿರುತ್ತಾರೆ. ಆಗ ಆ ದೇವಾಲಯಕ್ಕೆ ಕಳ್ಳರು ದಾಳಿ ಮಾಡುವರು. ಆಗ ಅವರನ್ನು ಎದುರಿಸಿ ಹೋರಾಡಿದ ಮಲ್ಲಯ್ಯನು ಮಾಯಿತಮ್ಮ ಕಳ್ಳರನ್ನು ಗಾಯ ಮಾಡಿ ತಾನೂ ಗಾಯಗೊಂಡು ಮಡಿಯುತ್ತಾನೆ. ಅವನ ತಮ್ಮ ಮುಂಚಿಯಣ್ಣ ವೀರಗಲ್ಲನ್ನು ಹಾಕಿಸುತ್ತಾನೆ. ಈ ರೀತಿಯ ವಿಷಯ ತಿಳಿಸುವ ವೀರಗಲ್ಲು ಕನ್ನಡದಲ್ಲಿ ಇದೊಂದೇ ಆಗಿದೆ.

ತಂದೆಯೇ ಮಗನ ವೀರಗಲ್ಲನ್ನು ನೆಟ್ಟಿರುವ ಹೃದಯ ವಿದ್ರಾವಕ ಘಟನೆಯ ಕುರಿತು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕು ಕೊಳವಳ್ಳಿ ಗ್ರಾಮದ ಮಾಸ್ತಿ ದೇವಾಲಯದಲ್ಲಿನ ವೀರಗಲ್ಲಿನ ಕ್ರಿ.ಶ. 1432ರ ಶಾಸನದಲ್ಲಿ5 ಬೊಮ್ಮರಸ ಹೆಗ್ಗಡೆ ತನ್ನ ಮಗನಾದ ಪುಟ್ಟಹೆಗ್ಗಡೆಯ ಹೆಸರಿನಲ್ಲಿ ವೀರಗಲ್ಲನ್ನು ನಡೆಸುತ್ತಾನೆ. ಅಂದರೆ ಕೊಳವಳ್ಳಿ ಗ್ರಾಮಕ್ಕೆ ಶತ್ರುಗಳ ಸೈನ್ಯ ದಾಳಿ ಮಾಡಿದಾಗ ಪುಟ್ಟಹೆಗ್ಗಡೆ ಎನ್ನುವವನು ಕುಮಾರ ರಾಮನಾಥನ ಹಾಗೆ ಪ್ರತಾಪವನ್ನು ತೋರಿಸಿ ಬಾಣಗಳ ಗಾಯದಿಂದ ಮಡಿಯುತ್ತಾನೆ. ಅವನ ತಂದೆ ಬೊಂಮ್ಮರಸ ಹೆಗ್ಗಡೆ ವೀರಗಲ್ಲನ್ನು ಹಾಕಿಸುವನು. ಕುಮಾರರಾಮನ ಪ್ರತಾಪ ಅಂದು ಯುದ್ಧಮಾಡುವ ವೀರರಿಗೆ ಆದರ್ಶವಾಗಿತ್ತೆಂದು ಈ ಶಾಸನದಿಂದ ತಿಳಿಯುತ್ತದೆ.

ಉಡುಪಿ ಜಿಲ್ಲೆ ಉಡುಪಿ ತಾಲ್ಲೂಕಿನ ಬಾರಕೂರು ಗ್ರಾಮದ ಸೋಮೇಶ್ವರ ಗುಡಿಯ ಪಶ್ಚಿಮ ಗೋಡೆ ಬಳಿಯ ಶಾಸನ ಹಾಗೂ ಚೌಳಿಕೇರಿಯ ಗಣಪತಿ

ಗುಡಿಯ ಬಳಿಯಿರುವ ಕ್ರಿ.ಶ. 1430ರ ಶಾಸನ6ಗಳ ಪ್ರಕಾರ ಮಹಾಪ್ರಧಾನಿಯಾದ ಚಂಡರಸವೊಡೆಯರು ಬಾರಕೂರು ತುಳುರಾಜ್ಯವನ್ನು ಆಳುತ್ತಿರುತ್ತಾರೆ. ಈ ಸಮಯದಲ್ಲಿ ಬಾರಕೂರು ಹತ್ತು ಕೇರಿಯ ಒಳಗಣ ಚೌಳಿಯಕೇರಿ ಮತ್ತು ಮೂಡುಕೇರಿಯ ವ್ಯಾಪಾರಿಗಳ ನಡುವೆ ವ್ಯವಹಾರದ ವಿಷಯವಾಗಿ ಮನಃಸ್ತಾಪವಾಗುತ್ತದೆ. ಇದನ್ನು ಅರಿತ ಪ್ರಧಾನಿ ಎರಡೂ ಕೇರಿಯ ಮುಖಂಡರನ್ನು ಕರೆಯಿಸಿ ಅವರಿಬ್ಬರಿಗೂ ಸಂಧಾನ ಮಾಡಿಸಲು ಪ್ರಯತ್ನಿಸುತ್ತಾನೆ. ಮತ್ತೊಮ್ಮೆ ಮನಸ್ತಾಪವಾಗದ ಹಾಗೆ ಅನೇಕ ಕಟ್ಟಳೆಗಳನ್ನು ಮಾಡಿ ಎರಡೂ ಕೇರಿಯವರು ಅದರಂತೆ ನಡೆದುಕೊಳ್ಳಬೇಕೆಂದು ಸೂಚಿಸುತ್ತಾನೆ. ಈ ಸಮಯದಲ್ಲಿ ಸಕ್ಕರೆ ಮಾರಾಟಕ್ಕೆ ಸಂಬಂಧಪಟ್ಟಂತೆ ವಿಶೇಷವಾಗಿ ಕಟ್ಟಳೆಯನ್ನು ರೂಪಿಸಲಾಯಿತು. ಚೌಳೀಯಕೇರಿ ಮತ್ತು ಮೂಡುಕೇರಿಯ ಸೆಟ್ಟಿಗಳು ಎತ್ತಿನ ಗಾಡಿಯಲ್ಲಿ ಮತ್ತು ತಲೆಯಲ್ಲಿ ಹೊರಿಸಿಕೊಂಡು ಬಂದ, ಬೇರೆ ದೇಶದವರು ಗಾಡಿಯಲ್ಲಿ ತಂದ ಸಕ್ಕರೆಯನ್ನು ದಾಸ್ತಾನು ಮಾಡಲು ಎರಡು ಗಾಣಗೊಟ್ಟಿಗೆಯಷ್ಟು ಜಾಗವನ್ನು ನಿರ್ಧರಿಸಿ ಅಲ್ಲಿ ಉತ್ತರಕ್ಕೆ ಬಾಗಿಲಿರುವ ಮಳಿಗೆಯನ್ನು ಕಟ್ಟಿಸುತ್ತಾರೆ. ಆ ಮಳಿಗೆಯಲ್ಲಿನ ಸಕ್ಕರೆಗೆ ಎರಡೂ ಕೇರಿಯವರು ಕೂಡಿ ಅದರ ಬೆಲೆಯನ್ನು ನಿರ್ಧರಿಸಿ ಮಾರಾಟ ಮಾಡಬೇಕು. ಮಾರಾಟವಾಗದೆ ಉಳಿದ ಸಕ್ಕರೆಯನ್ನು ಯಾರೂ ಕೂಡ ತಮ್ಮ ಕೇರಿಗಳಿಗೆ ಒಯ್ಯದೆ ದಾಸ್ತಾನು ಮಳಿಗೆಯಲ್ಲೇ ಇಟ್ಟು ಮುಂದೆ ಮಾರಬೇಕು ಎಂದು ಕಟ್ಟಲೇ ವಿಧಿಸಲಾಗಿದೆ. ಎರಡೂ ಕೇರಿಯಲ್ಲಿ ಏನಾದರೂ ಜಗಳವಾದರೆ ಧರ್ಮದ ಆಧಾರದಲ್ಲಿ ಸರಿಮಾಡಿಕೊಳ್ಳುತ್ತೇವೆ, ಆಯುಧಗಳನ್ನು ಹಿಡಿದು ಹೋರಾಡುವುದಿಲ್ಲ ಎಂದು ಇಬ್ಬರಿಂದಲೂ ಒಡಂಬಡಿಕೆಯನ್ನು ಮಾಡಿಸಿ ಬರೆಯಿಸಿಕೊಳ್ಳಲಾಗಿದೆ. ಇದಕ್ಕೇನಾದರೂ ತಪ್ಪಿದರೆ ಅರಮನೆಗೆ ಹನ್ನೆರಡು ಸಾವಿರ ಹೊನ್ನನ್ನು ದಂಡವಾಗಿ ಕೊಡುತ್ತೇವೆಂದು ಎಲ್ಲರಿಂದಲೂ ಒಪ್ಪಿಗೆ ಪಡೆಯಲಾಗಿದೆ. ವಿಜಯನಗರ ಅರಸರ ಅವಧಿಯಲ್ಲಿ ವ್ಯಾಪಾರಕ್ಕೆ ಯಾವ ರೀತಿ ಮಹತ್ವವಿತ್ತು ಎಂಬುದನ್ನು ಈ ಶಾಸನ ತಿಳಿಸುತ್ತಿದೆ. ವ್ಯಾಪಾರಿಗಳ ರೀತಿ–ನೀತಿಗಳು, ಅವರಲ್ಲಿ ಇರುತ್ತಿದ್ದ ಒಡಕುಗಳು, ವಸ್ತುಗಳನ್ನು ದಾಸ್ತಾನು ಇಡುವುದು, ದಾಸ್ತಾನು ಮಳಿಗೆಗಳನ್ನು ಕಟ್ಟಿಸುವುದು, ಬೆಲೆಯನ್ನು

ನಿರ್ಧರಿಸುವುದು ಮುಂತಾದ ವಿಷಯಗಳು ಇಮ್ಮಡಿ ದೇವರಾಯನ ಅವಧಿಯ ವಾಣಿಜ್ಯ ನೀತಿಯನ್ನು ತೋರಿಸುತ್ತದೆ. ಕಟ್ಟಳೆಯನ್ನು ಮೀರಿದವರಿಗೆ ಅಧಿಕ ದಂಡ ವಿಧಿಸುತ್ತಿದ್ದರೆಂದೂ ಈ ಶಾಸನದಿಂದ ತಿಳಿಯುತ್ತದೆ.

ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕು ತೇಕಲ್ಲುವಿನ ಕ್ರಿ.ಶ. 1434ರ ಶಾಸನವು7 ಇಮ್ಮಡಿ ದೇವರಾಯನ ನಿರೂಪದಂತೆ ಲಕ್ಕಣ್ಣವೊಡೆಯ ಮತ್ತು ಮಾದಣ್ಣವೊಡೆಯರು ಸಾಳುವ ಗೋಪರಾಜನಿಗೆ ತೇಕಲ್ಲನ್ನು ಮಾನ್ಯವಾಗಿ ನೀಡುವರು. ತೇಕಲ್ಲಿನಲ್ಲಿ ಈಗಾಗಲೆ ಹೊಯ್ಸಳರ ಬಲ್ಲಾಳರಾಯನ ಪ್ರಧಾನಿಗಳಾದ ವಲ್ಲಪ್ಪದಣ್ಣಾಯ್ಕರು ಮತ್ತು ಸಿಂಗಿದಣ್ಣಾಯ್ಕರು ನಿರ್ಮಿಸಿದ್ದ ಕಲ್ಲಿನ ಕೋಟೆಯ ಎಲ್ಲ ಭಾಗಗಳು ಬಿದ್ದು ಹಾಳಾಗಿದ್ದವು. ಅಲ್ಲಿನ ಅಧಿಕಾರ ವಹಿಸಿಕೊಂಡ ಗೋಪರಾಜನು ತನ್ನ ಪ್ರಧಾನಿ ಸಿಂಗರಾಜನ ಮೂಲಕ ಪುನಃ ಕೋಟೆಯನ್ನು ನಿರ್ಮಿಸುತ್ತಾನೆ. ಒಳಕೋಟೆ, ಹೊರಕೋಟೆ ಎರಡನ್ನೂ ಕಟ್ಟಿಸಿ ಕೋಟೆಯ ಒಳಗೆ ವರದರಾಜದೇವರ ಮುಖಮಂಟಪದ ಹತ್ತಿರ ರಾಜಗಂಭೀರವೆಂಬ ಹೆಸರಿನ ಕೊತ್ತಳವನ್ನು ಕಟ್ಟಿಸುತ್ತಾನೆ. ಈ ಕೊತ್ತಳಕ್ಕೆ ಗೋಪರಾಜ ಮತ್ತು ತಿಪ್ಪರಾಜರುಗಳು ಹುಲಿಗಳನ್ನು ಹಿಡಿಸಿತಂದು ಕೊತ್ತಳದಲ್ಲಿ ಹಾಕಿ ಅವುಗಳನ್ನು ಬೇಟೆಯಾಡಿದರೆಂದು ಶಾಸನದಲ್ಲಿದೆ. ಈ ಶಾಸನದ ಪ್ರಕಾರ ಅರಸರು ಬೇಟೆಯಾಡುತ್ತಿದ್ದ ಒಂದು ವಿಧಾನವನ್ನು ಅರಿಯಬಹುದು. ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನ ಅಂದವಳ್ಳಿಯ ಕ್ರಿ.ಶ. 1430ರ ದಾಖಲೆಯ ಪ್ರಕಾರ8 ಗೋವೆ ಗುತ್ತಿಯ ರಾಜ್ಯವನ್ನು ಆಳುತ್ತಿದ್ದ ಹಂಪೆಯ ರಾಯನನ್ನು ಕರೆಯಿಸಿಕೊಂಡ ಇಮ್ಮಡಿ ದೇವರಾಯನು ಹಂಪೆಯ ಕಲ್ಲು ಮಠದಲ್ಲಿ ಇದ್ದ ವಿಶ್ವೇಶ್ವರಾರಣ್ಯ ಗುರುಗಳಿಗೂ ಅಲ್ಲಿದ್ದ ವಿದ್ಯಾಶಂಕರ ದೇವರಿಗೂ ಅಂದವಳ್ಳಿಯೆಂಬ ಗ್ರಾಮವನ್ನು ದಾನವಾಗಿ ನೀಡಿಸುತ್ತಾನೆ. ಈ ಅಂದವಳ್ಳಿ ಗ್ರಾಮವು ಗೋವೆ ಗುತ್ತಿಯ ರಾಜ್ಯದಲ್ಲಿದ್ದುದರಿಂದ ಅಲ್ಲಿನ ಅಧಿಕಾರಿಯನ್ನೇ ಕರೆಯಿಸಿ ದಾನ ನೀಡಿಸಿರುವುದು ದೇವರಾಯನ ಉತ್ತಮ ವ್ಯಕ್ತಿತ್ವ ಮತ್ತು ಅಧಿಕಾರಿಗಳೊಂದಿಗಿನ ಮಧುರ ಸಂಬಂಧವನ್ನು ತೋರಿಸುತ್ತದೆ. ಅವನಿಗೆ ತಾನು ಚಕ್ರವರ್ತಿಯೆಂಬ ಬಿಗುವಾನವಿರಲಿಲ್ಲವೆಂದು ಈ ಘಟನೆ ನಿರೂಪಿಸುತ್ತದೆ. ಅಲ್ಲದೆ

ಪ್ರೌಢದೇವರಾಯನ ಅವಧಿಯಲ್ಲಿ ಇಪ್ಪತ್ತೇಳಕ್ಕೂ ಹೆಚ್ಚು ಮಂತ್ರಿಗಳ ಹೆಸರುಗಳು ಶಾಸನಗಳಲ್ಲಿ ಉಲ್ಲೇಖವಾಗಿರುವುದನ್ನು ಗಮನಿಸಬಹುದು. ಹೀಗೆ ಮೇಲಿನ ಪ್ರತಿಯೊಂದು ಶಾಸನಗಳು ಒಂದಲ್ಲ ಒಂದು ದೃಷ್ಟಿಯಿಂದ ಉಪಯುಕ್ತವಾದ ಮಾಹಿತಿಯನ್ನು ಹಾಗೂ ಹೊಸ ಸಂಶೋಧನೆಗೆ ದಾರಿಯನ್ನು ಎಡೆಮಾಡಿಕೊಡುತ್ತವೆ.

ಪ್ರೌಢದೇವರಾಯನ ಶಾಸನಗಳ ಅಧ್ಯಯನವನ್ನು ಕೇವಲ ರಾಜಕೀಯ ಹಾಗೂ ಸಾಂಸ್ಕೃತಿಕ ಸಂಗತಿಗಳ ಅಧ್ಯಯನಕ್ಕೆ ಸೀಮಿತಗೊಳಿಸದೆ, ಸಾಹಿತ್ಯಿಕ, ಭಾಷಿಕ ಹಾಗೂ ಛಂದಸ್ಸಿನ ಅಧ್ಯಯನದ ದೃಷ್ಟಿಯಿಂದಲೂ ಆಕರಗಳಾಗಿ ಉಪಯೋಗಿಸಿಕೊಳ್ಳಬಹುದು. ಹೀಗಾಗಿ ಪ್ರೌಢದೇವರಾಯನ ಶಾಸನಗಳನ್ನು ಬಹುರೂಪದ ನೆಲೆಗಟ್ಟಿನಲ್ಲಿ ಬಳಸಿಕೊಳ್ಳುವ ಸಾಧ್ಯತೆಗಳಿವೆ. ಇತಿಹಾಸದ ಘಟನೆಗಳಿಗೆ, ದಾಖಲೆಗಳಿಗೆ ಸೀಮಿತವಾಗಿ ಬಳಸಿಕೊಳ್ಳುತ್ತಿದ್ದ ವಿಜಯನಗರದ ಶಾಸನಗಳು, ಇಂದು ಬಹುಮುಖಿ ಆಯಾಮವನ್ನು ಪಡೆದುಕೊಂಡಿವೆ. ರಾಜಕೀಯ ಕ್ಷೇತ್ರದೊಂದಿಗೆ ಸಾಮಾಜಿಕ, ಸಾಂಸ್ಕೃತಿಕ, ವೈಚಾರಿಕ, ವೈಜ್ಞಾನಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಮುಂತಾದ ನೆಲೆಗಳಲ್ಲಿ ಸಂಶೋಧನೆಗಳಿಗೆ ಬಳಕೆಯಾಗುತ್ತಿರುವುದು ಮಹತ್ವದ ವಿಷಯವಾಗಿದೆ. ಈ ಶಾಸನಗಳೆಲ್ಲವೂ ಕೂಡ ಜನಸಾಮಾನ್ಯರ ಸರಳ ಬದುಕನ್ನು ಪ್ರತಿಬಿಂಬಿಸುತ್ತವೆ.

ಕೊನೆ ಟಿಪ್ಪಣಿಗಳು

1. ಡಾ. ಡಿ.ವಿ. ಪರಮಶಿವಮೂರ್ತಿ, ಪ್ರೌಢದೇವರಾಯನ ಶಾಸನಗಳು, ಪುಟ–361.
2. ಅದೇ, ಪುಟ–153.
3. ಅದೇ, ಪುಟ–72.
4. ಅದೇ, ಪುಟ–159.
5. ಅದೇ, ಪುಟ–219.
6. ಅದೇ, ಪುಟ–123, 127.
7. ಅದೇ, ಪುಟ–248.
8. ಅದೇ, ಪುಟ–114.

ಆಕರ ಗ್ರಂಥ.

1. ಪರಮಶಿವಮೂರ್ತಿ ಡಿ.ವಿ., 2007, ಪ್ರೌಢದೇವರಾಯನ ಶಾಸನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಲೇಖಕರು : ಡಾ. ಮೇಘನ ಜಿ.
ಉಪನ್ಯಾಸಕರು ಮತ್ತು ಸಂಶೋಧಕರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ,
ರಾಯಚೂರು
meghasreeg034@gmail.com

***

‘ತಿಪ್ಪೆ’ : ಸಾಂಸ್ಕೃತಿಕ ಅಧ್ಯಯನ

ಕಸದಿಂದ ರಸ; ರಸದಿಂದ ಕಸ ಎಂಬ ಸಾಲು ನಮ್ಮ ನಡುವೆ ನಿತ್ಯ ಪ್ರಯೋಗಗೊಳ್ಳುತ್ತಿರುತ್ತದೆ. ಈ ಕಸವೆಲ್ಲಾ ಸೇರುವ ಜಾಗವೇ ತಿಪ್ಪೆ. ತಿಪ್ಪೆಯಲ್ಲಿ ಕರಗಿ ರಸವಾಗುವ ಕ್ರಿಯೆಯೇ ಕೃಷಿ ಪದ್ಧತಿಯ ಜೀವಸತ್ತ್ವ ಗೊಬ್ಬರ. ತಿಪ್ಪೆ ಕುರಿತು ಸಾಂಸ್ಕೃತಿಕವಾಗಿ ಬಹುದೊಡ್ಡ ಚರಿತ್ರೆಯೇ ಇದೆ. ಇದೊಂದು ಜನಪದರ ಸಾರ್ಥಕ ಭೂಮಿ. ಸಾಮಾನ್ಯ ಅರ್ಥದಲ್ಲಿ ಕಸವನ್ನು, ಬೇಡವಾದುದನ್ನು ಒಂದು ಕಡೆ ರಾಶಿ ಹಾಕುವುದು ಎಂದರ್ಥ. ಆದರೆ ಈ ಅರ್ಥ ಮುಂದುವರೆದು ಬೇಡವಾದುದು, ಅಸಹ್ಯ, ಕೆಟ್ಟದ್ದು, ಅನಾರೋಗ್ಯಕರವಾದುದು ಈ ಮೊದಲಾದ ಅರ್ಥದಲ್ಲೂ ಬಳಕೆ ಮಾಡುತ್ತಾ ತಿಪ್ಪೆಯೊಂದಿಗೆ ಮನುಷ್ಯ ಹೊಂದಿರುವ ಅವಿನಾಭಾವ ನಂಟನ್ನು ಮರೆಮಾಚುತ್ತಿದ್ದೇವೆ. ತಿಪ್ಪೆಯಿಂದ ಸೃಷ್ಟಿಗೊಳ್ಳುವ ಗೊಬ್ಬರದ ಫಲವಂತಿಕೆಯನ್ನು ತಿಪ್ಪೆಯ ಜಗತ್ತಿನಿಂದಲೇ ಕಳಚಿದ್ದೇವೆ.

ತಿಪ್ಪೆ ಎಂಬ ಪದವು ಗಾದೆಯಾಗಿ, ಒಗಟಾಗಿ, ಬೈಗುಳವಾಗಿ, ನುಡಿಗಟ್ಟಾಗಿ ಹಲವು ಕಡೆ ಬಳಕೆಯಾಗಿದೆ. ತಿಪ್ಪೆಯಲ್ಲಿ ಒಂದು ಸಾಂಸ್ಕೃತಿಕ ಜಗತ್ತೇ ಅಡಗಿದೆ. ಈ ಜಗತ್ತಿನ ಶೋಧದಿಂದ ಅದರ ಅರಿವು ಹಾಗೂ ತಿರಸ್ಕಾರ ಕಡಿಮೆಯಾಗಬಹುದು. ತಿಪ್ಪೆಯು ಸಮಾಜದ ಒಂದು ಮುಖ್ಯ ಭಾಗವಾಗಿ ನಗರ, ಮಹಾನಗರಗಳಲ್ಲಂತೂ ಕಸದ ವಿಲೇವಾರಿ ಕುರಿತು ಒಂದು ಸಮಿತಿಯೇ ರಚನೆಯಾಗಿ, ವಿಜ್ಞಾನ ಹಾಗೂ ಸಮಾಜ ಶಾಸ್ತ್ರಗಳಲ್ಲಿ ಸಂಶೋಧನ ಅಧ್ಯಯನಗಳೇ

ಪ್ರಾರಂಭವಾಗಿವೆ. ಆದರೆ ಸಾಹಿತ್ಯದಲ್ಲಿ ಮಾತ್ರ ಅದೊಂದು ನಿರ್ಲಕ್ಷಿತ ಪ್ರದೇಶವಾಗಿಯೇ ಉಳಿದಿದೆ. ಪ್ರೇಮ ಮತ್ತು ಕಾಮ, ಹಣದ ಜಗತ್ತಿನಲ್ಲಿ ಕುರುಡಾಗಿರುವ ಸಾಹಿತ್ಯಕ್ಕೆ ಸಮಾಜದ ನಿರ್ವಹಣೆಯ ಹೊಣೆಗಾರಿಕೆಯು ಅರ್ಥಹೀನ.

ತಿಪ್ಪೆ ಎಂಬ ಪದವು ಮೂಲತಃ ದ್ರಾವಿಡ ಶಬ್ದವಾಗಿದೆ. ತಮಿಳಿನಲ್ಲಿ ತಿಪ್ಪೈ ಎಂದು, ತೆಲುಗಿನಲ್ಲಿ ತಿಪ್ಪ ಎಂದೂ, ಕನ್ನಡದಲ್ಲಿ, ತುಳುವಿನಲ್ಲಿ ತಿಪ್ಪೆ ಎಂದು ಬಳಕೆಯಲ್ಲಿದೆ. ಈ ಪದವು ಮೂಲತಃ ಗುಡ್ಡ, ರಾಶಿ, ದಿಬ್ಬ ಈ ಅರ್ಥಗಳಿಂದ ಸೂಚಿತವಾಗುತ್ತಿತ್ತು. ಈ ಪದವು ಇಂದು ಹೀನಾರ್ಥವನ್ನು ಪಡೆದು ಕಸ ಅಥವಾ ಸಗಣಿ ಹಾಕುವ ರಾಶಿಗೆ ಬಳಕೆಯಾಗುತ್ತಿದೆ. ನಯಸೇನ ಕವಿಯು ಧರ್ಮಾಮೃತ ಕೃತಿಯಲ್ಲಿ ಈ ಪದವನ್ನು ಈ ರೀತಿಯಲ್ಲಿ ಬಳಸಿದ್ದಾನೆ 'ವಾರಿಜಷಂಡಮಂ ಪದೆದು ಪೊರ್ದುವವೋಲ್ ಕಳಹಂಸೆ ತಿಪ್ಪೆಯಂ'. ಒಂಬತ್ತನೇ ಶತಮಾನದಲ್ಲಿಯೇ ಅಂದಿನ ಶಾಸನಗಳಲ್ಲಿ ಈ ಪದವು ಬಳಕೆಯಾಗಿದೆ. ಹದಿಮೂರನೇ ಶತಮಾನದ ಶಾಸನಗಳಲ್ಲಿ 'ತಿರ್ಪೆಸುಂಕ' ಎಂದರೆ ಗೊಬ್ಬರದ ಗುಂಡಿಯ ಮೇಲೆ ಹಾಕುವ ಸುಂಕ ಎಂಬ ಅರ್ಥವಿದೆ. ಈ ತಿರ್ಪೆಸುಂಕ ಪದವು ಹಲವು ಕಡೆ ಬಳಕೆಯಲ್ಲಿದೆ. ತಿಪ್ಪೆಯೂರ್ ಎಂಬುದು ಹತ್ತನೇ ಶತಮಾನದ ಶಾಸನದಲ್ಲಿಯೇ ಬಳಕೆಯಾಗಿದೆ. ತಿಪ್ಪೆಗೊಂಡನಹಳ್ಳಿ, ತಿಪಟೂರು, ತಿಪ್ಪೂರು, ತಿಪ್ಪೇಸಂದ್ರ, ತಿಪ್ಪಳ್ಳಿ ಈ ಊರುಗಳ ಹೆಸರಿನ ಹಿಂದೆ ಜನಪದ ಐತಿಹ್ಯಗಳ ಚರಿತ್ರೆಯೇ ಅಡಗಿದೆ.

ಗೊಬ್ಬರದ ವಿಚಾರಕ್ಕೂ ಮೊದಲು ತಿಪ್ಪೆಯ ವಿಚಾರಕ್ಕೆ ಬರೋಣ. ಇದೊಂದು ಜನಪದರ ನಿತ್ಯ ಕಸದ ಜಾಗ. ಮನೆಯ ಕಸವನ್ನು, ಪ್ರಾಣಿಗಳ ಸಗಣಿಯನ್ನು ಹಾಗೂ ತಮಗೆ ವ್ಯರ್ಥ ಅನಿಸಿದ್ದನ್ನು ಒಂದು ಕಡೆ ರಾಶಿ ಹಾಕುತ್ತಾರೆ. ಈ ರಾಶಿ ಹಾಕಲು ಈ ಕಸವನ್ನು ಮಂಕ್ರಿ, ತಟ್ಟಿ, ಪುಟ್ಟಿ, ಪುಟ್ಕಿ, ಪುಟ್ಗೆ, ಬುಟ್ಟಿ, ಗೂಡೆ ಮೊದಲಾದ ಅರ್ಥದಲ್ಲಿ ಬಳಸುವ ಈ ಮಂಕ್ರಿಯಲ್ಲಿ ತುಂಬಿ ತಲೆಯಲ್ಲಿ ಹೊತ್ತು ತಂದು ಹಾಕುತ್ತಾರೆ. ಈ ಒಂದು ಚಿತ್ರಣವೇ ನಮ್ಮ ಕನ್ನಡ ಸಂಸ್ಕೃತಿಯ ಶತಮಾನಗಳ ಹಳೆಯ ನೆನಪುಗಳನ್ನು ತೆರೆದು ತೋರಿಸುವುದು. ತಾನು ಅಶುದ್ದತೆ ತುಂಬಿಕೊಳ್ಳುತ್ತಾ ನಮ್ಮ ಇಷ್ಟದ ಜಾಗಗಳನ್ನೆಲ್ಲಾ ಶುದ್ಧಮಾಡುವ

ಈ ತಿಪ್ಪೆಗೆ ತಿರಸ್ಕಾರ ತಪ್ಪಿದ್ದಲ್ಲ. ಆದರೆ ನಮ್ಮ ಜನ ವರ್ಷಕ್ಕೊಮ್ಮೆ ಶಾಸ್ತ್ರವೆಂಬಂತೆ ತಿಪ್ಪೆಯ ಪೂಜೆಯನ್ನು ಮಾಡುವರು. ದೀಪಾವಳಿಯಲ್ಲಿ ಮನೆಯಲ್ಲಿ ಮಾಡುವ 'ಹಟ್ಟಿ' ಪೂಜೆಯ ಇನ್ನೊಂದು ಆಯಾಮ ಇದೇ ಆಗಿದೆ. ತಿಪ್ಪೆಯ ಸಗಣಿ ತಂದು 'ತಿಪ್ಪಪ್ಪಯ್ಯ'ನನ್ನು ಹಾಕುವ ಪದ್ದತಿಯು ಒಂದು ಜನಪದ ಆಚರಣೆಯೇ ಆಗಿದೆ. ತಿಪ್ಪೆ ಎಂಬುದು ಸಾಂಸ್ಕೃತಿಕ ಬದುಕಿನ ಅವಿಭಾಜ್ಯ ಅಂಗ. ಕೃಷಿಯ ಮೂಲ ನೆಲೆ. ಸಸ್ಯ ಸಂಪತ್ತಿನ ಜೀವಬಿಂದು. ವೈಜ್ಞಾನಿಕ ತಳಹದಿಯನ್ನು ಗೊಬ್ಬರದ ಮೂಲಕ ಸಸ್ಯದ ಜೀವ ಸಮೃದ್ಧಿಯಾಗಿ ಮೂಡಿಬಂದಿದೆ. ಪ್ರತಿಯೊಂದು ಜೀವಿಯೂ ಮಲವಿಸರ್ಜನೆ, ಅಥವಾ ಯಾವುದೇ ಸಸ್ಯದ ಸಾವು ಸಮಾಜದಲ್ಲಿ ಸಹಜವಾದ ಕ್ರಿಯೆ. ಆದರೆ ಅದು ಭೂಮಿಯಲ್ಲಿ ರಾಸಾಯನಿಕ ಪ್ರಕ್ರಿಯೆಗೆ ಒಳಗಾಗಿ ಅತ್ಯಂತ ಪೋಷಕಾಂಶವುಳ್ಳ ಗೊಬ್ಬರವಾಗುವ ಕ್ರಿಯೆ ವಿಸ್ಮಯವಾದುದು, ಉಪಯುಕ್ತವಾದುದು.

ಗ್ರಾಮೀಣ ಜಗತ್ತಿನಲ್ಲಿ ನಂಬಿಕೆಗಳು ಅತ್ಯಂತ ಹೇರಳವಾಗಿ ಕಂಡುಬರುತ್ತವೆ. ಈ ನಂಬಿಕೆಗಳ ಹಿಂದೆ ವಿಜ್ಞಾನವೂ, ಮೂಢನಂಬಿಕೆಯೂ ಬಲಿಷ್ಠವಾಗಿ ಕೆಲಸ ಮಾಡುತ್ತದೆ. ಏನೇ ಆಗಲಿ ತಮ್ಮ ಆತ್ಮಬಲಕ್ಕಾಗಿ ಸಿದ್ಧಿಸಿಕೊಂಡ ಜ್ಞಾನ ಚೈತನ್ಯವಿದು. ತಿಪ್ಪೆ ಕುರಿತು ಸಾಕಷ್ಟು ನಂಬಿಕೆಗಳಿದ್ದಾವೆ. ಮಕ್ಕಳಿಗೆ ಹೊಟ್ಟೆನೋವು ಬಂದಾಗ ತಿಪ್ಪೆಯಲ್ಲಿ ಬಿದ್ದಿರುವ ಹಳೆಯ ಬಟ್ಟೆಯನ್ನು ತಂದು ಮಗುವಿಗೂ, ಬಾಣಂತಿಗೂ ಕಟ್ಟುವ ನಂಬಿಕೆ ಇದೆ. ಮೊರದಲ್ಲಿ ಮಕ್ಕಳನ್ನು ಹಾಕಿ ತಿಪ್ಪೆಯ ಮೇಲೆ ಏಳೆಯುವ ನಂಬಿಕೆಯು ಮಕ್ಕಳಿಗೆ ಒಳ್ಳೆಯದಾಗಲಿ ಎಂಬ ಕಲ್ಪನೆಯ ಕಾರ್ಯವಿದು.

'ತಿಪ್ಪೆರುದ್ರ' ಎಂಬ ಸಾಂಸ್ಕೃತಿಕ ನಾಯಕನ ಚರಿತ್ರೆಯೂ ವಿಶಿಷ್ಟವಾದುದು. ರಾಯದುರ್ಗದ ಕೆಂಪಣ್ಣನು ಪೂಜೆ ಮಾಡಿಸಿಕೊಂಡು ಪಲ್ಲಕ್ಕಿಯಲ್ಲಿ ತಿರುಗುವಾಗ, ರುದ್ರನೆಂಬುವನನ್ನು ಮೆರವಣಿಗೆಯ ಬಳಿ ಅಲ್ಲಿಂದ ದೂರ ಕಳಿಸುತ್ತಾರೆ. 'ತಿರುಕ ನಿನ್ಯಾಕೆ ಇಲ್ಲಿ ನಿಂತಿರುವೆ? ಹೋಗೋ ಎಲ್ಲಾದ್ರೂ' ಎಂದು ಬೈದು ಕಳಿಸುತ್ತಾರೆ. ಅಲ್ಲಿಂದ ರುದ್ರನು ತಿಪ್ಪೆಯ ಮೇಲೆ ಹೋಗಿ ನಿಲ್ಲುತ್ತಾನೆ. ಅಲ್ಲಿಯೇ ಅವನ ಪವಾಡ ಪ್ರಾರಂಭವಾಗುತ್ತದೆ. ಈ ಪವಾಡ ಅರಿತ ರಾಯದುರ್ಗದ ಕೆಂಪಣ್ಣ ಈತನಿಗೆ ತಿಪ್ಪೆರುದ್ರನೆಂಬ ಹೆಸರು ನೀಡುತ್ತಾನೆ ಎಂಬ ಕಥೆಯೂ ಇದೆ. ಮಧ್ಯಕರ್ನಾಟಕದ ಬುಡಕಟ್ಟು ಸಮುದಾಯಗಳ ನಾಯಕ. ಶ್ರಮ ಸಂಸ್ಕೃತಿಯ

ವಕ್ತಾರ ಎಂದೆಲ್ಲಾ ಕರೆಯುವ ಜೊತೆಗೆ ಉತ್ಸವಗಳ ರಾಜ ಎಂಬ ಬಿರುದು ಕೂಡ ನಮ್ಮ ಜನಪದರು ತಿಪ್ಪೇಸ್ವಾಮಿಗೆ ನೀಡಿದ್ದಾರೆ. ಇಲ್ಲಿಗೆ ಬರುವ ಜನರು ಹೆರಿಗೆ ಸುಸೂತ್ರವಾಗಿ ಜರುಗಲು, ಚರ್ಮರೋಗ ನಿವಾರಣೆಗೆ ಮೊದಲಾದ ಕಾರಣಗಳಿಂದ ಹರಕೆ ಹೊಂದುತ್ತಾರೆ. ಈ ತಿಪ್ಪೆರುದ್ರನ ಹರಕೆಯ ಹೆಸರೇ ಟಿಪ್ಪುಸುಲ್ತಾನ್ ಎಂಬ ಜನಪದರಿಂದ ಇತಿಹಾಸಕ್ಕೆ ಜಿಗಿಯುವ ಚರಿತ್ರೆಗಳು ಇತಿಹಾಸವಾಗಿಯೂ, ಐತಿಹ್ಯವಾಗಿಯೂ ಮೂಡಿಬಂದಿದೆ. ನಮ್ಮ ಜನಪದರಲ್ಲಿ 'ತಿಪ್ಪೇಸ್ವಾಮಿ' ದೇವರ ಅನುಗ್ರಹದ ಹೆಸರಿಗಿಂತ ಹಿಂದೆ ಈ ಹೆಸರು ಇಡಲು ಕೆಲವು ಕಾರಣಗಳು ಉದಾಹರಣೆಯಾಗಿ ದೊರೆಯುತ್ತವೆ. ತಿಪ್ಪೆಯ ಮೇಲೆ ಸಮೃದ್ಧಿಯಿಂದ ಸಸ್ಯಗಳು ಬೆಳೆಯುವ ಕಾರಣ, ಹಲವು ಮಕ್ಕಳು ಹುಟ್ಟಿ ತೀರಿಕೊಂಡಾಗ, ಉಳಿಯುವ ಮಕ್ಕಳಾದರೂ ಬದುಕಲೆಂದು ತಿಪ್ಪೆ, ತಿಪ್ಪಯ್ಯ ಎಂಬ ಹೆಸರು ಇಡುತ್ತಿದ್ದರು. ಈ ಕಥೆಯೂ ನಮ್ಮ ಜನಪದರು ತಮ್ಮ ಹೆಸರುಗಳೊಂದಿಗೆ ಹೊಂದಿರುವ ನಾಮಚರಿತ್ರೆಯನ್ನು ತಿಳಿಸುತ್ತದೆ. ತಿಪ್ಪೆ ಎಂದರೆ ಬೂದಿಯ ರಾಶಿ ಎಂದು ಅರ್ಥೈಸಿ, ತಿಪ್ಪ ಎಂದರೆ ಅದರ ಮೇಲಿರುವವನು ಅವನೇ ಶಿವ ಎಂಬುದಾಗಿ ಜೊತೆಗೆ ತಿರುಪೆ ಎಂದರೆ ಭಿಕ್ಷೆ ಬೇಡುವುದು. ಈ ತಿರುಪೆಯೇ ತಿಪ್ಪೆಯಾಗಿದೆ ಎಂಬ ರೂಪದಲ್ಲೂ ಬಳಕೆಯಲ್ಲಿದೆ.

ತಿಪ್ಪೆಯನ್ನು ಕುರಿತ ಹಲವು ನುಡಿಗಟ್ಟು, ಗಾದೆಗಳು ಕಂಡು ಬರುತ್ತವೆ. 'ತಿಪ್ಪೆ ಸಾರಿಸು' ಎಂಬ ನುಡಿಗಟ್ಟು ಪದವೂ ಇಂದಿಗೂ ಬಳಕೆಯಲ್ಲಿದೆ. ಇದೊಂದು ಕರ್ಮಣಿ ಪ್ರಯೋಗದ ಪದ. ದೋಷಾರೋಪಣೆ ಮುಚ್ಚಿಡಲು ಪ್ರಯತ್ನಿಸುವುದು ಎಂಬ ಅರ್ಥ ನೀಡುತ್ತದೆ. ಹಲವು ತಪ್ಪುಗಳನ್ನು ಮುಚ್ಚಿಕೊಂಡು ಸರಿಯೆಂಬಂತೆ ನಟಿಸುವಾಗ, ಸರಿಯಾಗಿ ಕೆಲಸ ಮಾಡದೆ, ಅತ್ಯುತ್ತಮವಾಗಿ ಕೆಲಸವಾಗಿದೆ. ಎಂಬಂತೆ ಮೇಲ್ಭಾಗದ ಶೃಂಗಾರ ಮಾಡುವ ವಿಚಾರಗಳಿಗೆ ಈ ಪದದ ಮೂಲಕ ಹೇಳಲಾಗುತ್ತದೆ. 'ತಿಪ್ಪೆ ಕೆದಕು' ಎಂಬ ನುಡಿಗಟ್ಟು ಪದವನ್ನು ಕೆಟ್ಟ ವಿಚಾರವನ್ನು ಬಯಲುಮಾಡು, ತಪ್ಪುಗಳನ್ನು ಹುಡುಕು ಎಂಬ ಅರ್ಥದಲ್ಲಿ ಈ ಪದವು ಬಳಕೆಯಲ್ಲಿದೆ.

ಗಾದೆ ಮಾತುಗಳಲ್ಲಿ 'ಉಪ್ಪರಿಗೆ ಮೇಲಿದ್ದವರು ತಿಪ್ಪೆಗೆ, ತಿಪ್ಪೆ ಮೇಲಿದ್ದವರು ಉಪ್ಪರಿಗೆಗೆ', 'ಅಪ್ಪನ ಸಾಲಕ್ಕೆ ಮಗನನ್ನು ತಿಪ್ಪೆಗೆ ಎಳೆದರು', 'ಗುಣವಿಲ್ಲದವನ

ಐಶ್ವರ್ಯ ತಿಪ್ಪೆ ಮೇಲಿನ ಕುಪ್ಪೆ', 'ಕೋಳಿ ಕಾಲಿಗೆ ಗೆಜ್ಜೆ ಕಟ್ಟಿದರೆ ತಿಪ್ಪೆ ಕೆದಕುವುದು ಬಿಟ್ಟೀತೆ' ಈ ಎಲ್ಲಾ ರೀತಿಯಲ್ಲಿ ಬಳಕೆಯಲ್ಲಿದೆ. ಆಯಾ ಸಮಾಜದ ಭಾಷೆ, ಪರಿಸರ ಹಾಗೂ ಜನಪದ ಬದುಕಿನ ಕ್ರಮಗಳೊಂದಿಗೆ ಇಂತಹ ಹಲವು ಗಾದೆಗಳು ಸೃಷ್ಟಿಯಾಗಿವೆ. ಗಾದೆಗಳು ಮನುಷ್ಯನ ಬದುಕನ್ನು ಮೌಖಿಕವಾಗಿ ವಿಸ್ತರಿಸುವ ಬೌದ್ಧಿಕ ವಿಚಾರಗಳು. ಇಂತಹ ಗಾದೆಗಳಲ್ಲಿ ಶೀಲ, ಅಶ್ಲೀಲ, ಕೀಳು–ಮೇಲು ಮೊದಲಾದಂತೆ ಇರುವುದಿಲ್ಲ. ಬಳಸುವ ಜನಪದರಲ್ಲಿ ಅಂತಹ ಮನೋಭಾವವನ್ನು ಕೆಲವೊಂದು ವರ್ಗಗಳು ರೂಢಿಸಿಕೊಂಡಿವೆ. ಈ ದೃಷ್ಟಿಯಿಂದ ಗಾದೆ ಬಳಕೆಯು ಆಯಾ ಸಂದರ್ಭದ ಬದುಕಿನ ಅರ್ಥವನ್ನು ತಿಳಿಸಲು ರೂಪಿತವಾದ ಜೀವನ ಸಾರಗಳು ಹಾಗೂ ನೈಜ ವಿಚಾರಗಳು.

'ತಿಪ್ಪೆ' ಎಂಬ ಪದವನ್ನು ಸಾಂಸ್ಕೃತಿಕವಾಗಿ ಇದುವರೆಗೂ ಗಮನಿಸಲಾಯಿತು. 'ಊರಿಗೊಂದು ಕಾಡು. ಮನೆಗೊಂದು ತಿಪ್ಪೆ' ಎಂಬ ಗಾದೆ ಮಾತು ನಮ್ಮ ಹಿರಿಯರ ಬದುಕಿನ ಕ್ರಮವನ್ನು ತಿಳಿಸುತ್ತದೆ. ಊರಾಚೆಯಲ್ಲಿ ಊರಿನ ಆಯಾ ಮನೆಯ ಒಂದೊಂದು ತಿಪ್ಪೆಗಳು ಇರುತ್ತಿದ್ದವು. ಪ್ರತಿಯೊಬ್ಬರೂ ಆಯಾ ತಿಪ್ಪೆಗಳಿಗೆ ಮನೆಯ ಕಸ, ಬೂದಿ, ಪ್ರಾಣಿ–ಪಕ್ಷಿಗಳ ಮಲವನ್ನು ಹೊತ್ತು ತಂದು ಹಾಕುವುದು ಪದ್ದತಿ. ಈ ತಿಪ್ಪೆಯು ಇಂದು ಕಾಂಪೋಸ್ಟ್ ಎಂಬುದಾಗಿ ವಿಜ್ಞಾನದಲ್ಲಿ ಒಂದು ಅಧ್ಯಯನ ವಿಧಾನವಾಗಿದೆ. ಕೃಷಿಯಲ್ಲಿರುವ ಎರೆಹುಳ ಸಾಕಾಣಿಕೆಯು ಇದರ ಒಂದು ಭಾಗವೇ ಆಗಿದೆ. ಮೊದಲಿಗೆ ಒಣ ಕಸವನ್ನು ಎಂದರೆ ಎಲೆ, ಸೊಪ್ಪುಗಳನ್ನು ಒಂದು ಗುಂಡಿಗೆ ತುಂಬಿ, ಅದರ ಮೇಲೆ ಒಂದು ಪದರ ಮಣ್ಣು ಹಾಕಿ, ಅದರ ಮೇಲೆ ಸಗಣಿಯಂತಹ ಹಸಿ ತ್ಯಾಜ್ಯಗಳನ್ನು ಹಾಕಿ ನಂತರ ಗಾಳಿ ಸ್ವೀಕರಿಸುವ ಹುಲ್ಲು ಮೊದಲಾದ ವಸ್ತುಗಳನ್ನು ಹಾಕುವುದು. ಮೇಲೊಂದು ಹಂತದಲ್ಲಿ ಮಣ್ಣು ಹಾಕಿ ಸ್ವಲ್ಪ ನೀರುಣಿಸುವುದು. ಈ ಕ್ರಮವು ಇಂದು ವೈಜ್ಞಾನಿಕ ಕ್ರಮವಾಗಿದೆ. ಇದರಲ್ಲಿ ಸೃಷ್ಟಿಗೊಳ್ಳುವ ಎರೆಹುಳಗಳು ಈ ತಿಪ್ಪೆಯನ್ನು ಗೊಬ್ಬರವಾಗಿ ಪರಿವರ್ತಿಸುತ್ತವೆ. ಈ ಗೊಬ್ಬರವು ನೈಸರ್ಗಿಕ ಕೃಷಿಗೆ ಸೂಕ್ತವಾದುದು. ಈ ವಿಧಾನದೊಂದಿಗೆ ಸಾಕಷ್ಟು ರೈತರು ಯಶಸ್ಸು ಕಂಡಿದ್ದಾರೆ.

ಇನ್ನು ಗೊಬ್ಬರದ ವಿಚಾರವನ್ನು ಚರ್ಚಿಸುವುದಾದರೆ, ತಿಪ್ಪೆಯೇ ಗೊಬ್ಬರವಾಗಿರುವುದು ಎಂಬ ಸತ್ಯವನ್ನು ಮೊದಲು ಅರಿಯಬೇಕು. ಕಸವನ್ನು

ಕೈಯಲ್ಲೇ ಮುಟ್ಟದ, ಹತ್ತಿರಕ್ಕೂ ಸುಳಿಯದ ಜನರು ತಿಪ್ಪೆ ರೂಪವೆಲ್ಲಾ ಗೊಬ್ಬರವಾದಾಗ ಅದಕ್ಕೆ ಚಿನ್ನದ ಮೌಲ್ಯ ನೀಡುತ್ತಾರೆ. ಈ ಗೊಬ್ಬರವು ರೈತರಿಗೆ ಸಂಪೂರ್ಣವಾಗಿ ಅಗತ್ಯವಾದುದು. ಎರೆಹುಳವನ್ನು ರೈತರ ಮಿತ್ರ ಎಂದೇ ಕರೆಯುತ್ತಾರೆ. ಈ ದೃಷ್ಟಿಯಲ್ಲಿ ನೋಡುವುದಾದರೆ ರೈತರ ನಿತ್ಯ ಬದುಕಿನ ಸಂಸ್ಕೃತಿಯನ್ನು ಕಟ್ಟುವಲ್ಲಿ ಗೊಬ್ಬರದ ಪಾತ್ರವೂ ತುಂಬಾ ಮುಖ್ಯವಾದುದು. ಕುವೆಂಪು ಮೊದಲ ಬಾರಿಗೆ ಸಾಹಿತ್ಯದಲ್ಲಿ ಯಾವ ವಿಚಾರಗಳು ಕೀಳು ಎಂದು ಭಾವಿಸಿದ್ದರೋ ಅಂತಹ ವಿಚಾರ ಕುರಿತು ಚರ್ಚಿಸಿದ್ದಾರೆ. 'ಗೊಬ್ಬರ'[1] ಎಂಬ ಕವಿತೆ ರಚಿಸಿದ್ದಾರೆ.

> **"ಗೊಬ್ಬರದ ಮೇಲೆ ಬರೆವುದೆ ಕಬ್ಬಮಂ? ಹಾ**
> **ಕಡುಕಷ್ಟ! ಕಲಿಕಾಲಕೇನೇನು ಬಂದಪುದೊ?**
> **ಸಾಲದೇಂ ಪ್ರಲಯಕಿದೆ ಪೀಠಿಕೆ? ಇನ್ನೇನು**
> **ಕಾರಣಂ ಬೇಕಯ್ಯ ನಿನಗೆ, ತಾಂಡವ ಮೂರ್ತಿ,**
> **ಕಲ್ಕ್ಯವತಾರವನ್ನೆತ್ತಿಬರೆ? ಇದಕ್ಕಿಂತ**
> **ಧರ್ಮವಧೆ ಬೇರುಂಟೆ? ನಿರ್ಮಲ ಸರಸ್ವತಿಯ**
> **ವೀಣೆಯಂ ಶೂದ್ರಂ ಕಸಿದುಕೊಂಡು ಗೊಬ್ಬರದ**
> **ಗುಂಡಿಯನ್ನಗೆಯೆ ಗುದ್ದಲಿಯ ಮಾಡಿಹನಲ್ಲ!**
> **ಶಿವನೆ, ಭೈರವನಾಗಿ ಬಂದು ಹಣೆಗಣ್ಣಿನಿಂ**
> **ಕಿಡಿಗೆದರಿ ನೂದಿ ಮಾಡದೆ ಸುಮ್ಮನಿಹೆಯಲ್ಲ!"**

ಕುವೆಂಪು ಸಮಾಜದ ದನಿಗಳನ್ನು ಅತ್ಯಂತ ಸೂಕ್ಷ್ಮವಾಗಿ ಹಾಗೂ ನೇರವಾಗಿ ಕಾವ್ಯದಲ್ಲಿ ತಂದವರು. ಹಲವು ಟೀಕೆಗಳು ಬಂದರೂ, ತನ್ನ ಕಾವ್ಯದ ಕರ್ತವ್ಯವನ್ನು ಸ್ಪಷ್ಟಪಡಿಸಿದವರು. ಗೊಬ್ಬರ ಕವಿತೆಯು ಕಾವ್ಯ ಎಂದರೇನು? ಕಾವ್ಯದ ವಸ್ತುವಿನ ಆಯ್ಕೆಯಲ್ಲಿ ಇರುವ ದೋಷಗಳೇನು? ಕಾವ್ಯ ರಚಿಸುವವರ ರಾಜಕೀಯವೇನು? ಜನಪದ ಸಾಹಿತ್ಯ, ಜನಪದ ವಸ್ತುಗಳನ್ನು ಕಾವ್ಯದಲ್ಲಿ ತರುವಾಗ ತಂದಿರುವ ರಾಜಕೀಯವನ್ನು ಯಾವುದೇ ಮುಲಾಜಿಲ್ಲದೇ ಈ ಕವಿತೆಯಲ್ಲಿ ಅವರವರ ಮನೋಧರ್ಮಗಳನ್ನು ವಿಸ್ತರಿಸಿದ್ದಾರೆ. ಗೊಬ್ಬರವೆಂಬುದು ಎಷ್ಟೆಲ್ಲಾ ಶ್ರೇಷ್ಠ, ಅದರ ಪ್ರಯೋಜನವೇನು? ನಾ ಸುಖಿಸುವ ಸಸ್ಯ ಸಂಪತ್ತು

ಸಮೃದ್ಧಿಯಿಂದ ಬೆಳೆಯಲು ಗೊಬ್ಬರವೇ ಮೂಲಕಾರಣ ಎಂಬ ವಿಚಾರವನ್ನು ಇಲ್ಲಿ ವಿಸ್ತರಿಸಿ ಹೇಳಿದ್ದಾರೆ. ಇದು ಕೇವಲ ಸಸ್ಯ ಸಂಪತ್ತಿನ ಜೀವಸತ್ತ್ವವಾಗಿರದೇ ಈ ಜನಪದ ಸೂಕ್ಷ್ಮತೆಗಳೆಲ್ಲವೂ ಕಾವ್ಯದ ಬೇರಾಗಿವೆ ಎಂಬುದನ್ನು 'ಗೊಬ್ಬರ' ಕವಿತೆಯ ಮೂಲಕ ಸ್ಪಷ್ಟಪಡಿಸಿದ್ದಾರೆ.

ಗೊಬ್ಬರದ ಕಂಪೆಲ್ಲರ್ಗೆ
ಪರಿಮಳದ್ರವ್ಯ ತಾನಾದಪುದು! ಏತಕೆನೆ,
ಸಿರಿವೆರಸು ಶಕ್ತಿಯಿರೆ ಗೊಬ್ಬರವೆ ಪರಿಮಳಂ;
ಇಲ್ಲದಿರೆ ಪುನುಗು ತಾನಾದೊಡಂ ಗೊಬ್ಬರಂ!' ಎಂಬ ತೀರ್ಮಾನವನ್ನು ನೀಡುತ್ತಾರೆ. ಗೊಬ್ಬರವು ಪ್ರಕೃತಿಯ ಜೀವ ಶಕ್ತಿ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ನಗರ ಸಂಸ್ಕೃತಿಯಲ್ಲಿ ಕಸ ಹಾಗೂ ಗೊಬ್ಬರ ವ್ಯಾಖ್ಯಾನವು ಒಂದು ವಿಲೇವಾರಿ ಸಾಮಾಗ್ರಿ ದೃಷ್ಟಿಕೋನವಾಗಿಯೇ ಮೂಡಿಬರುತ್ತಿದೆ. ಊರ ಹೊರಗಿದ್ದ ಈ ಗೊಬ್ಬರದ ಸಂಸ್ಕೃತಿಯು ಈ ಆಧುನಿಕತೆಯ ಪ್ರವೇಶದೊಂದಿಗೆ ಅದೊಂದು ವ್ಯಾಪಾರದ ವಸ್ತುವಾಯಿತು. ಬೆಂಗಳೂರಿನಂತಹ ಮಹಾನಗರಗಳಲ್ಲಿ ಕಸದ ವಿಲೇವಾರಿಯೊಂದು ಬಹುದೊಡ್ಡ ಸಮಸ್ಯೆಯಾಗಿ, ಶ್ರೀಮಂತ ಟೆಂಡರ್ ಆಗಿ, ತಿಳಿದವರ ಅಜ್ಞಾನವೂ ಆಗಿ ಇಂದು ಕಸವನ್ನು ಒಂದು ಸಮಸ್ಯೆಯಾಗಿಸಿಕೊಳ್ಳಲಾಗಿದೆ. ನಗರದಲ್ಲಿ ಈ ಕಸವೆಂಬುದು ಯಾವುದೇ ಸಂಸ್ಕೃತಿಯ ಪ್ರತೀಕವೂ ಆಗದೆ, ಮನೆಯಿಂದ ಆಚೆ ಹೋಗುವ, ಅದರಿಂದಲೇ ಲಾಭಿ ಮಾಡುವ ಈ ಎರಡು ವರ್ಗಗಳ ನಡುವಿನ ವಾಸನೆಯಾಗಿದೆ. ಕಸವು ಕೊಳೆತು ಗೊಬ್ಬರವಾಗಿ ಪರಿಮಳ ಹೊಂದಬೇಕಾದ ಇಂದು ಸಮಸ್ಯೆಯ ವಸ್ತುವಾಗಿದೆ. ಯಂತ್ರಗಳನ್ನು ಬಳಸಿ, ಕಸವನ್ನೆಲ್ಲಾ ಕ್ಷಣಾರ್ಧದಲ್ಲೇ ಪುಡಿಮಾಡಿ, ಗೊಬ್ಬರವಾಗಿ ಹಂಚುವ ಕ್ರಿಯೆಯಲ್ಲಿ ಮನುಷ್ಯ ಸಂಸ್ಕೃತಿಯ ಪೂರಕ ಸಾಮಾಗ್ರಿಯಾಗಿ ಕಂಡು ಬರುತ್ತಿದೆ. ನಗರದಲ್ಲಿ ಕಸ ಹಾಗೂ ಗೊಬ್ಬರದ ನಡುವೆ ಕೆಲಸಗಾರರಿದ್ದಾರೆ. ಆದರೆ ಗ್ರಾಮ ಜಗತ್ತಿನಲ್ಲಿ ಜನಪದರಿರುತ್ತಾರೆ. ಜನಪದರು ತನ್ನ ಬದುಕಿನ ಎಲ್ಲಾ ಕ್ರಿಯೆಗಳನ್ನು ಕಾಯಕವೆಂದು ಭಾವಿಸಿ, ಅದರ ವಿಸರ್ಜನೆಯನ್ನು ಪ್ರಸಾದವೆಂದು ಭಾವಿಸಿ, ತನ್ನ ಫಲಿತವನ್ನು ಗೊಬ್ಬರವಾಗಿಸುತ್ತಾ

ಪ್ರಕೃತಿಯ ಜೀವತಂತುವಾಗಿಸುತ್ತಾರೆ. ಈ ದೃಷ್ಟಿಯಿಂದ ಜನಪದರಿಗೆ ಎಲ್ಲವೂ ಮುಖ್ಯವಾದ ವಸ್ತುಗಳೇ ಆಗಿವೆ. ಅವಗಳ ಜೊತೆಗೆ ನುಡಿಜಾಣ್ಮೆಯನ್ನು ಅನುಸರಿಸುತ್ತಾ ನಿತ್ಯ ಸಾಗುತ್ತಾರೆ. ಜನಪದರ ಬದುಕಿಗೆ ಎಲ್ಲವೂ ಹಿತ ಹಾಗೂ ಬದುಕಿನ ಭಾಗವೆಂದು ಭಾವಿಸಬಹುದು.

ಗ್ರಂಥ ಋಣ

1. ಕುವೆಂಪು., ಕೋಗಿಲೆ ಮತ್ತು ಸೋವಿಯಟ್ ರಷ್ಯಾ., 1944., ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು ಸಿಟಿ.

ಪರಾಮರ್ಶನ ಗ್ರಂಥಗಳು

1. ಬೆಟಗೇರಿ ಕೃಷ್ಣ ಶರ್ಮ., ಜನಪದ ಜೀವನ., 1955., ರವೀಂದ್ರ ಮುದ್ರಣಾಲಯ, ಧಾರವಾಡ.
2. ಜೀ. ಶಂ. ಪರಮಶಿವಯ್ಯ., ಜನಪದ ಸಾಹಿತ್ಯ ಸಮೀಕ್ಷೆ., 1967., ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
3. ಕುವೆಂಪು., ಕೋಗಿಲೆ ಮತ್ತು ಸೋವಿಯಟ್ ರಷ್ಯಾ., 1944., ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು ಸಿಟಿ.

ಲೇಖಕರು : ಡಾ. ರವಿಶಂಕರ್ ಎ.ಕೆ.

ಸಹಾಯಕ ಪ್ರಾಧ್ಯಾಪಕ

ಸಮಾಜ ವಿಜ್ಞಾನಗಳು ಮತ್ತು ಭಾಷಾ ವಿಭಾಗ

ಕ್ರಿಸ್ತು ಜಯಂತಿ (ಡೀಮ್ಡ್ ಟು ಬಿ) ವಿಶ್ವವಿದ್ಯಾಲಯ, ಬೆಂಗಳೂರು.

ravishankar@kristujayanti.com

***

ಪ್ರಕೃತಿ ಮತ್ತು ಸಂಸ್ಕೃತಿ ಮಾನವನ ಅರಿವಿನ ಕಣ್ಣ ದೀಪದಲ್ಲಿ

ಮಾನವನನ್ನು ಅರ್ಥಮಾಡಿಕೊಳ್ಳುವಲ್ಲಿ ಪ್ರಕೃತಿ ಮತ್ತು ಸಂಸ್ಕೃತಿ ನಡುವಿನ ಸಂಬಂಧವು ಯಾವಾಗಲೂ ಕುತೂಹಲಕಾರಿ ವಿಷಯವಾಗಿದೆ. ಹತ್ತೊಂಭತ್ತನೇ ಶತಮಾನದಲ್ಲಿ ಈ ಎರಡನ್ನು ಸಂಪೂರ್ಣ ವಿರೋಧಾಭಾಸಿಗಳೆಂದು ಪರಿಗಣಿಸಲಾಗುತ್ತಿತ್ತು. ಪ್ರಕೃತಿಯು ಜೈವಿಕ, ಆನುವಂಶಿಕ ಮತ್ತು ಪ್ರೇರಣಾತ್ಮಕ ಶಕ್ತಿಗಳ ಸಂಗ್ರಹವಾಗಿದ್ದರೆ, ಸಂಸ್ಕೃತಿಯು ಸಾಮಾಜಿಕವಾಗಿ ಕಲಿತ, ಪರಿಸರದಿಂದ ರೂಪಿತವಾದ ವ್ಯವಸ್ಥೆಯಾಗಿದೆ ಎಂಬುದು ಗಮನಾರ್ಹ. ಆದರೆ ಆಧುನಿಕ ಮಾನವಶಾಸ್ತ್ರ, ವಿಕಾಸಾತ್ಮಕ ಜೀವಶಾಸ್ತ್ರ ಮತ್ತು ತತ್ವಶಾಸ್ತ್ರಗಳು ಈ ದ್ವಿಭಾಗವನ್ನು ತೀವ್ರವಾಗಿ ಪ್ರಶ್ನಿಸುತ್ತವೆ. ಹಾಗಾಗಿ ಈ ಪ್ರಶ್ನೆಗಳ ಹಿನ್ನೆಲೆಯಲ್ಲಿ ಇಂದು ಪ್ರಮುಖ ತೀರ್ಮಾನವೊಂದು ಹೊರಹೊಮ್ಮಿದೆ. ಅದೇನೆಂದರೆ ಪ್ರಕೃತಿ ಮತ್ತು ಸಂಸ್ಕೃತಿ ಪರಸ್ಪರ ಬೆಸೆಯಲಾಗದೆ ಒಂದಾಗಿವೆ. ಇವುಗಳನ್ನು ನಿಜವಾಗಿಯೂ ಬೇರ್ಪಡಿಸಲಾಗದು.

ಹಾಗಾಗಿಯೇ ಪ್ರಕೃತಿ ಮತ್ತು ಸಂಸ್ಕೃತಿ ನಡುವಿನ ದೀರ್ಘಕಾಲೀನ ವಿವಾದವು ಮಾನವಶಾಸ್ತ್ರ, ತತ್ವಶಾಸ್ತ್ರ ಮತ್ತು ವಿಕಾಸಾತ್ಮಕ ಜೀವಶಾಸ್ತ್ರದಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಸಾಂಪ್ರದಾಯಿಕವಾಗಿ ಇವೆರಡನ್ನು ವಿರೋಧಾಭಾಸಿ ಧ್ರುವಗಳೆಂದು ಪರಿಗಣಿಸಲಾಗಿದ್ದರೂ, ಆಧುನಿಕ ದೃಷ್ಟಿಕೋನಗಳು ಇವುಗಳನ್ನು ಪರಸ್ಪರ ಬೆಸೆಯಲಾಗದ ಮತ್ತು ಅವಿಭಾಜ್ಯವೆಂದು ಒತ್ತಿ ಹೇಳುತ್ತವೆ. ಸಂಸ್ಕೃತಿಯು

ಜೈವಿಕ ಆಧಾರದಿಂದ ಅಂದರೆ ಮಾನವನ ಜ್ಞಾನಶಕ್ತಿ, ಸಾಮಾಜಿಕತೆ ಮತ್ತು ಅನುಕೂಲನ ಶೀಲತೆಯಿಂದ ಹೊರಹೊಮ್ಮುತ್ತದೆ. ಆದರೆ ಪ್ರಕೃತಿಯನ್ನು ಸಂಸ್ಕೃಂತಿಯ ದೃಷ್ಟಿಕೋನದಿಂದ ರೂಪಿಸಲಾಗುತ್ತದೆ ಮತ್ತು ವ್ಯಾಖ್ಯಾನಿಸಲಾಗುತ್ತದೆ ಎಂಬುದು ಸಮಂಜಸವೆನಿಸುವುದಿಲ್ಲ ಪ್ರಕೃತಿಯಿಂದ ಸಂಸ್ಕೃತಿಯ ನಿರ್ಮಾಣ ಸಾಧ್ಯ ಎಂಬುದು ಸಾರ್ವಕಾಲಿಕ ಸತ್ಯ.

ಹೀಗೆ ಈ ಪ್ರಕೃತಿ ಸಂಸ್ಕೃತಿಯ ಕುರಿತ ಹಲವು ಚಿಂತನೆಗಳನ್ನು ಅವಲೋಕಿಸಲಾಗಿ ಅವರ ಚಿಂತನೆಗಳಲ್ಲಿ ವಿವಿಧ ಸ್ವರೂಪಗಳು ಕಂಡು ಬರುತ್ತವೆ. ಹಾಗಾಗಿ ಈ ಲೇಖನದಲ್ಲಿ ಸೀಮಾತೀತವಾಗಿ ಮೂಡಿ ಬಂದ ಪ್ರಕೃತಿ ಮತ್ತು ಸಂಸ್ಕೃತಿಯ ಕುರಿತು ಚಿಂತನೆಗಳನ್ನು ನಾನು ವಿಶ್ಲೇಷಿಸಲು ಬಯಸಿದ್ದೇನೆ.

ಸೀಮಾತೀತವಾಗಿ ಮೂಡಿ ಬಂದ ಪ್ರಕೃತಿ ಮತ್ತು ಸಂಸ್ಕೃತಿಯ ಕುರಿತು ಚಿಂತನೆಗಳು:

ಪ್ರಕೃತಿ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ಸೀಮಾತೀತವಾಗಿ ಮೂಡಿಬಂದ ಕೆಲವು ಚಿಂತನೆಗಳು ಇಂದಿನ ಯುವ ಜನಾಂಗಕ್ಕೆ ಮಹತ್ವದ ಪ್ರೇರಣೆಯಾಗಿವೆ ಮತ್ತು ಪ್ರಕೃತಿಯ ರಕ್ಷಣೆಗೆ ಉತ್ತೇಜನ ನೀಡುತ್ತವೆ. ಹಾಗಾಗಿ ಪ್ರಕೃತಿಯ ಪ್ರತಿಫಲವೇ ಸಂಸ್ಕೃತಿ ಎಂಬ ವಾಸ್ತವ ಸತ್ಯವನ್ನು ಇಂದಿನ ಯುವ ಜನಾಂಗದ ನಡುವೆ ಮತ್ತೊಮ್ಮೆ ಚಿಂತಕರ ಚಿಂತನೆಗಳು ಇಂದಿನವರ ಅರಿವಿನ ಕಣ್ಣಿಗೆ ಇನ್ನಷ್ಟು ಬೆಳಕನ್ನು ನೀಡುತ್ತವೆ ಎಂಬ ಮಾತು ಗಮನಾರ್ಹ ವೆನಿಸುತ್ತದೆ.

ಗ್ರೀಕ್‌ರ ಆರಂಭಿಕ ದೃಷ್ಟಿಕೋನಗಳನ್ನು ಪರಿಶೀಲಿಸಿ ನೋಡಲಾಗಿ, ಅಲ್ಲಿನ ತತ್ವಜ್ಞಾನಿಗಳು ಪ್ರಕೃತಿ ಸಂಪತ್ತು ಮತ್ತು ಜೀವನದ ಅವಿಭಾಜ್ಯವೆಂದು ನಂಬಿದ್ದವರು. ಈ ದೃಷ್ಟಿಕೋನವನ್ನು ಹೈಲೋಜೋಯಿಕ್ ದೃಷ್ಟಿಕೋನ ಎಂದು ಕರೆಯಲಾಗುತ್ತದೆ. ಗ್ರೀಕರು ಪ್ರಕೃತಿಯಿಂದಲೇ ಉತ್ಪತ್ತಿಯಾಗುವ ವಸ್ತುಗಳಿವೆ ಎಂದು ನಂಬಿದ್ದವರು. ಕೌಶಲ್ಯದಿಂದ ಉತ್ಪಾದಿತವಾದವುಗಳಿಗೆ ವಿರುದ್ಧವಾಗಿ, ಮತ್ತು ಈ ಎಲ್ಲ ಪ್ರಾಕೃತಿಕ ವಸ್ತುಗಳು ಒಂದು ಏಕೈಕ ಪ್ರಕೃತಿ ಜಗತ್ತನ್ನು ರೂಪಿಸುತ್ತವೆ. ಹಾಗಾಗಿ ಈ ವಸ್ತುಗಳ ಬಗ್ಗೆ ಅವರು ಸಾಮೂಹಿಕವಾಗಿ ಮಾತನಾಡಬಹುದಾಗಿತ್ತು. ಏಕೆಂದರೆ ಅವು ಪ್ರಾಕೃತಿಕತೆಯ ಜೊತೆಗೆ ಇತರ ಗುಣಗಳನ್ನೂ ಹಂಚಿಕೊಂಡಿದ್ದವು. ಈ ಪ್ರಾಕೃತಿಕ ವಸ್ತುಗಳ ಒಂದು ಮುಖ್ಯ ಗುಣವೆಂದರೆ ಅವೆಲ್ಲವೂ ಒಂದೇ ದ್ರವ್ಯ

ಅಥವಾ ವಸ್ತುವಿನಿಂದ ಮಾಡಲ್ಪಟ್ಟಿದ್ದವು. ಕಾಪ್ಲೆಸ್ಟನ್ ಅವರು ಗ್ರೀಕರ ಆರಂಭಿಕ ಚಿಂತನೆಗಳುಳ್ಳ ತತ್ತ್ವಶಾಸ್ತ್ರವನ್ನು ಅಮೂರ್ತ ಭೌತಿಕವಾದದ ಉದಾಹರಣೆಗಳು ಎಂದು ಕರೆಯುತ್ತಾರೆ. ಈ ಚಿಂತಕರ ಪ್ರಕಾರ ಜಗತ್ತು ಅತ್ಯಗತ್ಯ, ಅವಿನಾಶಿ ವಸ್ತುವಿನಿಂದ ಮಾಡಲ್ಪಟ್ಟಿದೆ. ಗ್ರೀಕ್ ಆರಂಭಿಕ ತತ್ತ್ವಜ್ಞಾನಿಗಳು ಪ್ರಕೃತಿಯ ಕುರಿತು ಬ್ರಹ್ಮಾಂಡದ ವಸ್ತುವಾಗಿ ಒಂದು ಆದಿಮ ತತ್ತ್ವವನ್ನು ನಿಯೋಜಿಸಿದ್ದಾರೆ. ಆದರೆ ಅವರು ಭೌತಿಕವಾದಿಗಳಲ್ಲ ಎಂಬುದನ್ನು ಸೂಚಿಸುತ್ತದೆ. ಈ ವಸ್ತುವು ಕೇವಲ ದೈಹಿಕ ದ್ರವ್ಯಕ್ಕೆ ಸೀಮಿತವಾಗಿರಲಿಲ್ಲ, ಬದಲಿಗೆ ಚಿಂತನೆ ಮತ್ತು ಆತ್ಮಗಳ ವಸ್ತುವೂ ಆಗಿತ್ತು. ಅದು ದ್ರವ್ಯ ಮತ್ತು ಶಕ್ತಿಯಾಗಿತ್ತು, ಮತ್ತು ಅದು ದೈವಿಕವೂ ಆಗಿತ್ತು. ಅದಕ್ಕೆ ಘನತೆ, ದ್ರವತೆ ಅಥವಾ ವಾಯುತ್ವದಂತಹ ಯಾವುದೇ ನಿರ್ದಿಷ್ಟ ಗುಣವಿರಲಿಲ್ಲ. ಈ ಒಂದೇ ವಸ್ತುವಿನಿಂದ ಮಾಡಲ್ಪಟ್ಟ ಬ್ರಹ್ಮಾಂಡದಲ್ಲಿ ಮಾನವ ಮತ್ತು ಪ್ರಕೃತಿಯು ನಿರಂತರ ಕ್ರಮಬದ್ಧ ಶ್ರೇಣಿಯಲ್ಲಿವೆ. ಸಸ್ಯಾಹಾರವನ್ನು ಪ್ರತಿಪಾದಿಸುವ ಮೊದಲ ಪ್ರಮುಖ ಪಾಶ್ಚಿಮಾತ್ಯ ಚಿಂತನೆಯ ವ್ಯವಸ್ಥೆ ಎನಿಸಿದ ನಾಲ್ಕನೇ ಶತಮಾನದ ಮಧ್ಯಭಾಗದಲ್ಲಿ ಅಸ್ತಿತ್ವದಲ್ಲಿದ್ದ ಪೈಥಾಗೋರಿಯನ್ ಶಾಲೆಯು ತನ್ನ ಮೂಲ ದೃಷ್ಟಿಕೋನದಲ್ಲಿ ಪ್ರಕೃತಿಯೇ ಸರ್ವದೇವತಾವಾದಿಯಾಗಿತ್ತು. ಅಂದಿನ ಮಾನವರು ಆತ್ಮಗಳ ವಲಸೆಯನ್ನು ಕೇವಲ ಮಾನವ ದೇಹದಾದ್ಯಂತವಲ್ಲದೆ ಪ್ರಾಣಿಗಳಾದ್ಯಂತವೂ ಚಲಿಸುತ್ತದೆ ಎಂದು ನಂಬಿದ್ದರಿಂದ ಮಾಂಸಾಹಾರದಿಂದ ದೂರವಾಗಿದ್ದರು.

ಹಾಗಿದ್ದಲ್ಲಿ, ಎಲ್ಲ ಜೀವನವೂ ಸಂಬಂಧಿತವಾಗಿದೆ ಮತ್ತು ಪ್ರಕೃತಿಯ ಸಂಬಂಧದ ಮತ್ತೊಂದು ಪೈಥಾಗೋರಿಯನ್ ಸಿದ್ಧಾಂತವಾಗಿದೆ ಎಂಬ ಮಾತು ಪ್ರಸ್ತುತದಲ್ಲಿ ನಾವು ಅಂತರವನ್ನು ಭಾವಿಸುವುದಕ್ಕಿಂತ ಅದು ಹೆಚ್ಚು ಎತ್ತರದಲ್ಲಿದೆ ಎನಿಸುತ್ತದೆ. ಏಕೆಂದರೆ ಅವರಿಗೆ ಜೀವಂತ ಜಗತ್ತು ನಮಗಿಂತ ಹೆಚ್ಚು ವಿಸ್ತಾರವಾಗಿತ್ತು. ಅವರು ನಿಜವಾಗಿಯೂ ಬ್ರಹ್ಮಾಂಡವು ಒಟ್ಟಾರೆಯಾಗಿ ಒಂದು ಜೀವಂತ ಪ್ರಾಣಿಯೆಂದು ನಂಬಿದ್ದರು. ಬ್ರಹ್ಮಾಂಡದ ಸಂಪೂರ್ಣ ಮೂಲ ಮತ್ತು ಬೆಳವಣಿಗೆಯ ಕಲ್ಪನೆಯನ್ನು ಪ್ರತಿನಿಧಿಸುತ್ತಿರುವ ಫಿಸಿಸ್. ಈ ಫಿಸಿಸ ಎಂಬುದು ಗ್ರೀಕ್ ಪದವಾಗಿದ್ದು, ಇದರ ಅರ್ಥ ನಿಸರ್ಗ, ಅಥವಾ ವಿಶ್ವದಲ್ಲಿನ

ವಸ್ತುಗಳು, ಪ್ರಾಣಿಗಳು ಮತ್ತು ಅವುಗಳ ಸ್ವಭಾವಿಕ ಗುಣಲಕ್ಷಣಗಳು ಹಾಗೂ ಅವುಗಳ ಅಸ್ತಿತ್ವದ ಮೂಲಭೂತ ನಿಯಮಗಳನ್ನು ಅಧ್ಯಯನ ಮಾಡುವ ವಿಜ್ಞಾನವನ್ನು ಸೂಚಿಸುತ್ತದೆ. ಇದು ಭೌತಶಾಸ್ತ್ರ ಮತ್ತು ನಿಸರ್ಗದ ಬಗ್ಗೆ ತಿಳಿಯುವ ಶಾಸ್ತ್ರ. ಹಾಗಾಗಿ ಆರಂಭದ ಗ್ರೀಕರ್ ಪ್ರಕೃತಿಯ ಕಲ್ಪನೆಯು ಫಿಸಿಸ್ ಆಗಿತ್ತು, ಅದು ಸೈಕಿ ಅಂದರೆ ಆತ್ಮ,ಉಸಿರು, ಮನಸ್ಸು, ಜೀವ ಎಂಬುದಾಗಿತ್ತು. ಆದರೆ ಫಿಸಿಸ್‌ನ ಈ ಸಂಕುಚಿತಗೊಳ್ಳುವಿಕೆಯು ಭೌತಶಾಸ್ತ್ರ ದಿಕ್ಕಿನಲ್ಲಿ ನಾವು ಇಂದು ಭಾವಿಸುವ ರೀತಿಯಲ್ಲಿ ಸಂಭವಿಸಲಿಲ್ಲ. ನಾವು ಸೈಕಿಕ್, ಜೀವಂತ, ಜೀವಂತವಾದುದನ್ನು ಭೌತಿಕಕ್ಕೆ ವಿರೋಧಿಸುವಂತಿದ್ದೆ. ಆದರೆ ಗ್ರೀಕರಿಗೆ ಇದೆಲ್ಲವೂ ಫಿಸಿಸ್‌ಗೆ ಸೇರಿದ್ದು ಮತ್ತು ಅರಿಸ್ಟಾಟಲ್‌ನ ನಂತರವೂ ಹಾಗೆಯೇ ಮುಂದುವರಿದಿತ್ತು. ಅವರು ಅದನ್ನು ಥೀಸಿಸ್, ಆದೇಶ, ಅಥವಾ ನೋಮೋಸ್, ನಿಯಮ, ನೀತಿಯ ಅರ್ಥದಲ್ಲಿ ಆಚಾರ ಎಂದು ಕರೆಯುವುದಕ್ಕೆ ವಿರೋಧಿಸಿದರು ನಂತರ ಅದೇ ತತ್ತ್ವವನ್ನು ಕೃತಕವಾಗಿ ಸೃಷ್ಟಿಸಿದ ಮಾನವ ಉತ್ಪನ್ನಗಳೊಂದಿಗೆ ವಿರೋಧಿಸುವುದು ಕಂಡು ಬಂದಿತು. ಈ ಗ್ರೀಕ್ ಸಂಪ್ರದಾಯವು ತನ್ನ ಕಲ್ಪನೆಗಳನ್ನು ಪಾಶ್ಚಿಮಾತ್ಯ ಚಿಂತನಾ ಸಂಪ್ರದಾಯಗಳಿಗೆ ಬಹಳಷ್ಟು ಪ್ರೇರಣದಾಯಕವಾಯಿತು ಎಂಬುದು ಗಮನಾರ್ಹ ವೆನಿಸುತ್ತದೆ.

ಇನ್ನು ಈ ಪ್ರಕೃತಿ ಮತ್ತು ಸಂಸ್ಕೃತಿ ಕುರಿತು ಪಾಶ್ಚಾತ್ಯ ಚಿಂತಕರ ಸಮಗ್ರ ದೃಷ್ಟಿಕೋನವು ಮಾನವನ ವರ್ತನೆಗಳನ್ನು, ಪರಿಸರವಿಜ್ಞಾನ ಮತ್ತು ಸಮಾಜದ ಬಗ್ಗೆ ಹೆಚ್ಚು ಸಮತೋಲನವಾಗಿ ಅರ್ಥೈಸಿಕೊಳ್ಳಲು ಸಹಾಯ ಮಾಡುತ್ತವೆ. ಈ ವಿಷಯ ಮತ್ತು ವಿಚಾರಗಳು ನಮ್ಮ ಜೀವನದಲ್ಲಿ ಎಷ್ಟು ಆಳವಾಗಿ ಬೇರೂರಿದೆಯೆಂದರೆ ಹೆಚ್ಚಿನ ಬಾರಿ ಅದು ಗಮನಕ್ಕೇ ಬರುವುದೇ ಇಲ್ಲ.ಪ್ರಾಚೀನ ಮೆಡಿಟರೇನಿಯನ್ ತಿಳುವಳಿಕೆಗಳಿಂದ ಎಂದರೆ ಯುರೋಪ್, ಆಫ್ರಿಕ ಮತ್ತು ಏಷ್ಯಾವನ್ನು ಸುತ್ತುವರೆದಿರುವ ಮೆಡಿಟರೇನಿಯನ್ ಸಮುದ್ರದ ಸುತ್ತಲಿನ ಪ್ರಾಚೀನ ನಾಗರಿಕತೆಗಳಾದ ಮೆಸೊಪೊಟ್ಯಾಮಿಯಾ, ಈಜಿಪ್ಟ್, ಗ್ರೀಕ್, ರೋಮನ್, ಫೋನಿಷಿಯನ್‌ಗಳು ಮತ್ತು ಹೀಬ್ರೂಗಳ ಸಂಸ್ಕೃತಿಗಳು, ನಂಬಿಕೆಗಳು, ಕಲೆಗಳು, ತತ್ವಶಾಸ್ತ್ರಗಳು ಮತ್ತು ಜೀವನಶೈಲಿಗಳು ಸಮುದ್ರದ ಮೂಲಕ ವ್ಯಾಪಾರ, ವಲಸೆ

ಮತ್ತು ಸಾಂಸ್ಕೃತಿಕ ವಿನಿಮಯದಿಂದಾಗಿ ವಿಶ್ವದ ನಾಗರಿಕತೆಯ ಮೇಲೆ ಆಳವಾದ ಪ್ರಭಾವ ಬೀರಿದವು. ಹಾಗಾಗಿ ಇದು ಕೇವಲ ಸಮುದ್ರವಾಗಿರದೆ ನಾಗರಿಕತೆಗಳ ತೊಟ್ಟಿಲು ಎನಿಸಿಕೊಂಡ ಮೆಡಿಟರೇನಿಯನ್ ತಿಳುವಳಿಕೆಗಳಿಂದ ಹುಟ್ಟಿದ ಈ ಚಿಂತನೆಯ ಅರಿವು, ಪ್ರಕೃತಿಯನ್ನು ನಿಷ್ಕ್ರಿಯ, ಸ್ವೀಕಾರಶೀಲ, ಅತಾರ್ಕಿಕ, ಇಂದ್ರಿಯಾತ್ಮಕ ಮತ್ತು ಭಾವನಾತ್ಮಕವೆಂದು ಸಂಯೋಜಿಸುತ್ತದೆ. ಸಂಸ್ಕೃತಿ ಸಕ್ರಿಯ ಮತ್ತು ಪ್ರಭುತ್ವಕಾರಿ ಹಾಗೂ ನಾಗರಿಕಗೊಳಿಸುವ ಮತ್ತು ತಾರ್ಕಿಕ ಗುಣಗಳನ್ನು ಪ್ರತಿನಿಧಿಸುವ ಸಂಯೋಜನೆಯು ಶತಮಾನಗಳಿಂದ ಯೂರೋಪಿಯನ್ ತಿಳುವಳಿಕೆಯ ಮೂಲ ಎಂದು ಹಲವು ಚಿಂತಕರ ಚಿಂತನೆಗಳಲ್ಲಿ ಕುಡಿಯೊಡೆದಿದೆ. ಇದೇ ಕಾರಣಕ್ಕೆ ಯೂರೋಪಿಯನ್ನರು ಪ್ರಕೃತಿಯನ್ನು ನಾಗರಿಕಗೊಳಿಸಬೇಕು, ಶುದ್ಧೀಕರಿಸಬೇಕು ಮತ್ತು ನಿಯಂತ್ರಿಸಬೇಕು ಎಂದು ಭಾವಿಸಿದ್ದರು. ಹಾಗಾಗಿ ಪರ್ಯಾಯವಾಗಿ, ಪ್ರಕೃತಿಯನ್ನು ಮಾನವನ ನಾಗರಿಕತೆಯ ಉನ್ನತಿ ಎಂದು ಆದರ್ಶಗೊಳಿಸಿರುವ ಅಂಶ ಇಲ್ಲಿ ಗಮನಾರ್ಹವೆನಿಸುತ್ತದೆ. ಇನ್ನು ಈ ಪ್ರಕೃತಿ ಮತ್ತು ಸಂಸ್ಕೃತಿಯ ಕುರಿತ ಸಂಬಂಧಗಳ ಚಿಂತನೆಯು ಸಾಂಕ್ರಾಮಿಕ ರೋಗದಂತೆ ಜಗತ್ತಿನಾದ್ಯಂತ ಹರಡಿದೆ. ಈ ಹರಡುವಿಕೆ ಕೇವಲ ವ್ಯಾಖ್ಯಾನ ಮತ್ತು ಕ್ರಿಯೆಗೆ ನೀಲನಕ್ಷೆಯನ್ನು ಒದಗಿಸುತ್ತದೆ. ಅದರ ಕಾರ್ಬನ್ ನಕಲುಗಳು ಮಾನವ ಸಂವಾದದ ವಿವಿಧ ಕ್ಷೇತ್ರಗಳಲ್ಲಿ ಕಾಣಸಿಗುತ್ತವೆ. ಇದಕ್ಕೆ ಸಂಬಂಧಿಸಿದ ಅಧ್ಯಯನವನ್ನು ಸಾಂಸ್ಕೃತಿಕ ಅಧ್ಯಯನ ಎನ್ನುತ್ತಾರೆ. ಈ ಅಧ್ಯಯನದ ಶಿಸ್ತಿನ ಹೆಸರೇ ದ್ವಂದ್ವ ನಿರ್ಮಾಣವನ್ನು ಹೊಂದಿದೆ. ಇಲ್ಲಿ ಕೆಲಸ ಮಾಡುವವರು, ಇತರ ಶಿಸ್ತುಗಳ ವಿದ್ವಾಂಸರೊಂದಿಗೆ ಸಹಕರಿಸಿ, ಪ್ರಕೃತಿ – ಸಂಸ್ಕೃತಿ ದ್ವಂದ್ವವನ್ನು ವಿಶ್ಲೇಷಿಸುವಲ್ಲಿ ಮತ್ತು ಟೀಕಿಸುವಲ್ಲಿ ಶ್ರಮಿಸಿದ್ದಾರೆ. ಈ ದ್ವಂದ್ವದ ಪ್ರಕಟಣೆಗಳು ಲಿಂಗ ಮತ್ತು ವಸಾಹತುಶಾಹಿ ಎಂಬ ಪರಸ್ಪರ ಸಂಬಂಧಿತ ಕ್ಷೇತ್ರಗಳಿಂದ ಪ್ರಭಾವಿತವಾದದ್ದು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಸ್ತ್ರೀ ಲಿಂಗವನ್ನು ಪ್ರಕೃತಿಯೊಂದಿಗೆ ಸಾಂಪ್ರದಾಯಿಕವಾಗಿ ಸಂಯೋಜಿಸುವುದು ಈ ದ್ವಿಮುಖೀ ದೃಷ್ಟಿಕೋನದ ಅತ್ಯಂತ ಬಲವಾದ ಲಕ್ಷಣಗಳಲ್ಲಿ ಒಂದು. ಅದು ಸ್ತ್ರೀ ಲಿಂಗವನ್ನು ನಿಷ್ಕ್ರಿಯತೆ, ಅತಾರ್ಕಿಕತೆ, ಇಂದ್ರಿಯಾತ್ಮಕತೆ, ಭಾವನಾತ್ಮಕತೆ,

ಅಗಾಧದೆತೆಗೆ ಸಂಬಂಧಿಸುತ್ತದೆ.ಇದರಿಂದ ಸ್ತ್ರೀಯನ್ನು ಪುರುಷನ ಸಕ್ರಿಯತೆ, ತಾರ್ಕಿಕತೆ, ಟ್ರಾನ್ಸೆಂಡೆನ್ಸ್ ಮತ್ತು ಸ್ವತಂತ್ರ ಕ್ರಿಯೆಯಿಂದ ಪ್ರಭುತ್ವಕ್ಕೊಳಪಡಿಸಿ ನಾಗರಿಕಗೊಳಿಸಬೇಕು ಎಂಬ ಅರ್ಥವೂ ಹೊಯ್ದಾಡುತ್ತದೆ.ಹಾಗಾಗಿ ಅನೇಕ ಚಿಂತಕರು ಈ ದ್ವಂದ್ವದ ಅಪಾಯಕಾರಿ ಪರಿಣಾಮಗಳನ್ನು ಅನ್ವೇಷಿಸಿ ಪರ್ಯಾಯ ವ್ಯಾಖ್ಯಾನದ ಮಾದರಿಗಳನ್ನು ಸೂಚಿಸಿದ್ದಾರೆ. ಆದರೆ ರೈಯಾ ಪ್ರೊಖೊವ್ನಿಕ್ ಮತ್ತು ಇತರರು ಗಮನಿಸಿದಂತೆ, ಇದು ಕಷ್ಟದ ಕಾರ್ಯ ಎನ್ನುತ್ತಾರೆ. ಏಕೆಂದರೆ ಪ್ರಕೃತಿ–ಸಂಸ್ಕೃತಿ ದ್ವಂದ್ವವು ಅದನ್ನು ದಾಟಲು ಪ್ರಯತ್ನಿಸುವ ವಿಧಾನಗಳನ್ನೂ ನಿರ್ದೇಶಿಸುತ್ತದೆ. ಲಿಂಗ ಅಧ್ಯಯನಗಳು ಲಿಂಗವನ್ನು ಜೈವಿಕ ಲಿಂಗಕ್ಕಾಗಿ ಬಳಸಿ, 'ಜೆಂಡರ್' ಅನ್ನು ಸಾಮಾಜಿಕವಾಗಿ ನಿರ್ಮಿತ ಲಿಂಗಕ್ಕಾಗಿ ಬಳಸುವಾಗ ಇದು 'ಪ್ರಕೃತಿ ಮತ್ತು ಸಂಸ್ಕೃತಿ ಎಂಬ ಜನಪ್ರಿಯ ವ್ಯತ್ಯಾಸದಲ್ಲೂ ಪ್ರಕಟವಾಗುತ್ತದೆ ಎಂದು ಬೇರೆ ಹೇಳಬೇಕಿಲ್ಲ. ಅದು ಪ್ರಕೃತಿಯನ್ನು ದೈಹಿಕ, ವಸ್ತುಗತ ಮತ್ತು 'ದತ್ತ'ವೆಂದು, ಸಂಸ್ಕೃತಿಯನ್ನು ತಾರ್ಕಿಕ ಮತ್ತು ಸಕ್ರಿಯ ಸಂವಾದವೆಂಬ ದ್ವಂದ್ವವನ್ನು ಮೌನವಾಗಿ ಮುಂದುವರಿಸುತ್ತದೆ. ಆದ್ದರಿಂದ, ಲಿಂಗ ಅಧ್ಯಯನಗಳ ಇತ್ತೀಚಿನ ಹಂತವು ಈ ವ್ಯತ್ಯಾಸವನ್ನು ತೊಂದರೆಗೊಳಿಸಿ, ಸ್ಪೆಕ್ಟ್ರಲ್ ಅಂದರೆ ಭೌತಿಕ ಪದರದಲ್ಲಿನ ಅಳತೆಗಳು,ನಾನ್–ಬೈನರಿ ಮತ್ತು ನಾನ್–ನಾರ್ಮೇಟಿವ್ ಲಿಂಗ ಗುರುತುಗಳ ಸಂಧಾನಕ್ಕೆ ಆದ್ಯತೆ ನೀಡುತ್ತದೆ. ಕ್ವೀಯರ್ ಸ್ಟಡೀಸ್ ಇದನ್ನು ಆಧಾರವಾಗಿಟ್ಟುಕೊಂಡು ಎಲ್ಲ ಬಗೆಯ ದ್ವಂದ್ವ ನಿರ್ಮಾಣಗಳನ್ನು ಸಮಸ್ಯೆಗೆ ಈಡುಮಾಡುತ್ತದೆ. ವಿಶ್ವ ಪರಂಪರೆ ಸಮಾವೇಶದ ಒಂದು ನಿರ್ದಿಷ್ಟ ಲಕ್ಷಣವೆಂದರೆ ಅತ್ಯುನ್ನತ ಸಾರ್ವತ್ರಿಕ ಮೌಲ್ಯದ ನೈಸರ್ಗಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳ ಆಡಳಿತವು ಒಂದೇ ಅಂತಾರಾಷ್ಟ್ರೀಯ ಸಾಧನದಡಿ ಬರುತ್ತದೆ ಎಂಬುದಾಗಿದೆ. ಆದರೆ ಅವುಗಳ ಸಂಪರ್ಕಗಳನ್ನು ಗುರುತಿಸಿ ಅವುಗಳ ಮೇಲೆ ನಿರ್ಮಿಸುವ ಸಂಪೂರ್ಣ ಸಾಮರ್ಥ್ಯವನ್ನು ನಾವಿನ್ನೂ ಬಳಸಿಕೊಂಡಿಲ್ಲ. ಪ್ರಕೃತಿ ಮತ್ತು ಸಂಸ್ಕೃತಿಯ ನಡುವಿನ ವಿಭಜನೆಗಳು ಮತ್ತು ವ್ಯತ್ಯಾಸಗಳನ್ನು ದಾಟಿ ಸಾಮಾನ್ಯತೆಗಳು ಮತ್ತು ಸಂಭಾವ್ಯ ಹಂಚಿಕೆಯ ಅವಕಾಶಗಳನ್ನು ಪರಂಪರೆ ಸಂರಕ್ಷಣಾ ತಂತ್ರಗಳ ಮೂಲಕ ಪರಿಹರಿಸುವಲ್ಲಿ ಹೆಚ್ಚುತ್ತಿರುವ ಆಸಕ್ತಿಯಿದೆ. ಇತ್ತೀಚಿನ ದಿನಗಳಲ್ಲಿ ಈ

ವಿಷಯಗಳ ಬಗ್ಗೆಯ ಚರ್ಚೆಗಳು ವಿಶ್ವ ಪರಂಪರೆ ಸಮಿತಿಯ ಸಭೆಗಳಲ್ಲಿ ಮರುಕಳಿಸಿವೆ.ವಿಶ್ವ ಪರಂಪರೆ ವ್ಯವಸ್ಥೆಯಲ್ಲಿ ಪ್ರಕೃತಿ–ಸಂಸ್ಕೃತಿ ವಿಭಜನೆಯು ನೀತಿ ಮತ್ತು ಸಾಂಸ್ಥಿಕ ಸವಾಲುಗಳನ್ನು ಒಡ್ಡುತ್ತವೆಯಾದರೂ, ಅದು ರಾಜ್ಯ ಪಕ್ಷಗಳು ಮತ್ತು ಪರಂಪರೆ ಅಭ್ಯಾಸಕರಿಗೆ ದೈನಂದಿನ ಕೆಲಸದಲ್ಲಿ ಅನುಷ್ಠಾನದ ಸಂಕೀರ್ಣತೆಗಳನ್ನು ಒಡ್ಡುತ್ತದೆ. ಪ್ರತಿಕ್ರಿಯೆಯಾಗಿ, ವಿಶ್ವ ಪರಂಪರೆ ಸಮಿತಿ ಮತ್ತು ಅದರ ಸಲಹಾ ಸಂಸ್ಥೆಗಳೆನಿಸಿದ ಖಅಅಖಔಒ, ಖಅಔಒಔಖ ಮತ್ತು ಖಗಅಓ ಸಾಮರ್ಥ್ಯ ನಿರ್ಮಾಣದಿಂದ ಹಿಡಿದು ಸಂಯೋಜಿತ ಸಂಶೋಧನೆ ಮತ್ತು ಅಭ್ಯಾಸದವರೆಗೆ ಹೊಸ ಪ್ರಯತ್ನಗಳನ್ನು ಆರಂಭಿಸಿವೆ. ಧಾರಣಾತ್ಮಕ ಮಟ್ಟದಲ್ಲಿ ಪ್ರಕೃತಿ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಪರಸ್ಪರ ಸಂಬಂಧಿತ ಮತ್ತು ಪರಸ್ಪರ ಅವಲಂಬಿತ ಕಲ್ಪನೆಯಾಗಿ ಮರುಚಿಂತನೆ ಮಾಡುವ ಅಗತ್ಯವಿದೆ ಎನಿಸುತ್ತದೆ.ಅದು ಬೇರೆ ಬೇರೆ ಕ್ಷೇತ್ರಗಳಾಗಿ ಅಲ್ಲ, ನಿರ್ವಹಣಾ ಮಟ್ಟದಲ್ಲಿ, ಪ್ರಕೃತಿ ಮತ್ತು ಸಂಸ್ಕೃತಿ ನಿರ್ವಹಣೆಯು ಇನ್ನೂ ಬೇರೆಯಾಗಿರುವ ಪ್ರಸ್ತುತ ವಿಧಾನಗಳನ್ನು ಮರುಚಿಂತನೆ ಮಾಡಬೇಕಿದೆ. ಬಹಳಷ್ಟು ಬಾರಿ ಪ್ರಕೃತಿ ಸಂರಕ್ಷಣೆಯೊಳಗೆ ಸಾಂಸ್ಕೃತಿಕ ಅಂಶಗಳನ್ನು ಕಡೆಗಣಿಸಲಾಗುತ್ತದೆ.

ಪಾಶ್ಚಾತ್ಯ ಚಿಂತಕ ಗಿಫರ್ಡ್ ಹೇಳುವ ಹಾಗೆ 'ಪ್ರಕೃತಿ ಎಂದು ಕರೆಯಲು ಒಂದು ಪ್ರಕೃತಿ ಇರಲೇಬೇಕು' ಆದ್ದರಿಂದ, ಪ್ರಕೃತಿ ಕೇವಲ ಸಂಕೇತ ವ್ಯವಸ್ಥೆಯೊಳಗಿನ ಒಂದು ಸಂಕೇತ ಮಾತ್ರವಲ್ಲ. ಪ್ರಕೃತಿಯು ಎಲ್ಲ ಸಾಂಸ್ಕೃತಿಕ ನಿರ್ಮಾಣಗಳಿಂದ ಸ್ವತಂತ್ರವಾಗಿ ಅಸ್ತಿತ್ವದಲ್ಲಿದೆ ಎಂದು ಗೀಫರ್ಡ್ ಚಿಂತನೆಗೆ ಪೂರಕವಾಗಿ ಪ್ರೊಫೆಸರ್ ಕೇಟ್ ಸೋಪರ್ ಅವರು ತಮ್ಮ 'ದಿ ಐಡಿಯಾ ಆಫ್ ನೇಚರ್' ಪ್ರಬಂಧದಲ್ಲಿ ಪ್ರತಿಪಾದಿಸುತ್ತಾರೆ.ಪ್ರಕೃತಿಯು ಬಗ್ಗೆಯು ನಿರ್ರಚನೆಯವಾದದ ದೃಷ್ಟಿಕೋನವನ್ನು ಮುಂದಿಟ್ಟುಕೊಂಡು ಅವರು ಹೇಳುವ ಮಾತೇನೆಂದರೆ ಓಝೋನ್ ಪದರದಲ್ಲಿ ರಂಧ್ರವಿರುವುದು ಭಾಷೆಯಲ್ಲ. ನಿಜವಾದ ವಸ್ತುವು ಮಾಲಿನ್ಯಗೊಂಡು ಹಾಳಾಗುತ್ತಲೇ ಇದೆ, ನಾವು ಸಂಕೇತ ಮಟ್ಟದಲ್ಲಿ ನಮ್ಮ ನಿರ್ರಚನೆಯುವಾದದ ದೃಷ್ಟಿಯು ಒಳನೋಟಗಳನ್ನು ಶುದ್ಧೀಕರಿಸುತ್ತಿರುವಾಗಲೂ. ಪ್ರಕೃತಿಯು ತನ್ನ ಅಸ್ತಿತ್ವಕ್ಕೆ ಸಂಸ್ಕೃತಿ ಅಥವಾ ಭಾಷೆಯ

ಮೇಲೆ ಅವಲಂಬಿತವಲ್ಲ ಎನ್ನುತ್ತಾರೆ.ಆದರೆ ಹಾಕ್‌ಮನ್ ಮಾನವ ಇಂದ್ರಿಯಗಳು, ಭಾಷೆ, ಸಂಸ್ಕೃತಿಯ ಮೇಲೆ ಎಲ್ಲ ಅಸ್ತಿತ್ವವನ್ನೂ ಅವಲಂಬಿತಗೊಳಿಸುತ್ತದೆ ಎಂಬುದು ಬಾಲಿಶನಿಂದ ಕೂಡಿದ ನಿಲುವು ಎನಿಸುತ್ತದೆ ಎನ್ನುತ್ತಾರೆ.ಮೇಲಾಗಿ ಅದು ಹಿಂದುಳಿದ ಧಾರ್ಮಿಕತೆ ಅಂದರೆ ನಾವೇ ದೇವರುಗಳು ಎಂಬಂತಾಗುತ್ತದೆ ಎನ್ನುತ್ತಾರೆ. ವಿದ್ವಾಂಸ ಅಲನ್ ಲಿಯೂ ಅವರು ಹೇಳುವಂತೆ ಈಗಿನ ಕಾಲದಲ್ಲಿ ಜಾಗತಿಕ ತಾಪಮಾನ ಹೆಚ್ಚಳ, ಓಝೋನ್ ಪದರದ ಕ್ಷಯ, ಪ್ರವಾಹ, ಮಳೆಯ ಕೊರತೆ, ಹವಾಮಾನದ ತೀವ್ರತೆಗಳು ಮತ್ತಿತರ ಪ್ರಾಕೃತಿಕ ವಿಕೋಪಗಳು ಮಾನವರ ಮತ್ತು ಇತರ ಜೀವಿಗಳ ಮೇಲೆ ತಮ್ಮ ಪ್ರಭಾವ ಬೀರುತ್ತಿರುವಾಗ, ಪ್ರಕೃತಿಯ ಅಸ್ತಿತ್ವವನ್ನೇ ನಿರಾಕರಿಸುವುದು ಮೂರ್ಖತನ ಮತ್ತು ಗಂಭೀರ ತಪ್ಪು ಎನ್ನುತ್ತಾರೆ.

ಪ್ರಕೃತಿಯನ್ನು ಅಧ್ಯಾತ್ಮಕತೆಯಲ್ಲಿ ಇಟ್ಟು ನೋಡುವ ಚಿಂತಕ ಸೋಪರ್ ಹೇಳುವಂತೆ ಪ್ರಕೃತಿ ಎಂದರೆ ಎಲ್ಲ ಭೌತಿಕ ಜೀವನದ ಅಸ್ತಿತ್ವ, ವ್ಯವಸ್ಥೆ, ಶಕ್ತಿಗಳು ಮತ್ತು ಘಟನೆಗಳ ಸಂಪೂರ್ಣ ವ್ಯವಸ್ಥೆಯನ್ನು ಸೂಚಿಸುತ್ತದೆ.ಆದರೆ ಇದು ಮಾನವನ ನಿಯಂತ್ರಣಕ್ಕೆ ಒಳಪಡದು. ಮಾನವನಿಂದ ಮಾಡಲ್ಪಟ್ಟ ಎಲ್ಲವನ್ನೂ ತನ್ನ ವ್ಯಾಪ್ತಿಯಿಂದ ಹೊರಗಿಟ್ಟುಕೊಳ್ಳುತ್ತದೆ. ಅಲ್ಲದೆ ಸಾಮಾನ್ಯವಾಗಿ ಮಾನವನಿಂದ ನಿರ್ಮಿತಗೊಳ್ಳದ ಎಲ್ಲವನ್ನೂ ಸೂಚಿಸುತ್ತದೆ. ಇದು ಮಾನವೇತರದ ಒಂದು ಕಲ್ಪನೆಯಾಗಿದ್ದು, ಇದರ ಮೂಲಕ ಮಾನವತೆ ತನ್ನ ವ್ಯತ್ಯಾಸ ಮತ್ತು ವಿಶಿಷ್ಟತೆಯನ್ನು ಯೋಚಿಸುತ್ತದೆ. ಸೋಪರ್ ಅವರ ಈ ಆಧ್ಯಾತ್ಮಿಕ ಪ್ರಕೃತಿ ಕಲ್ಪನೆಯನ್ನೇ ಜಾನ್ ಹಾಕ್‌ಮನ್ ಅವರು ತಮ್ಮ 'ಗ್ರೀನ್ ಕಲ್ಚರಲ್ ಸ್ಟಡೀಸ್' ನಲ್ಲಿ 'ಪ್ರಕೃತಿ' ಎಂದು ವ್ಯಾಖ್ಯಾನಿಸುತ್ತಾರೆ, ಇದು ಪ್ರಕೃತಿ ಗಿಂತ ಭಿನ್ನವಾಗಿದೆ. ಅವರಿಗೆ ಪ್ರಕೃತಿ ಎಂದರೆ 'ವೈಯಕ್ತಿಕ ಸಸ್ಯಗಳು, ಮಾನವೇತರ ಪ್ರಾಣಿಗಳು ಮತ್ತು ಅಂಶಗಳ ಸಾಮೂಹಿಕ ಹೆಸರು . ಹಾಕ್‌ಮನ್ ಅವರ ಪ್ರಕೃತಿ, ಸೋಪರ್ ಅವರ ಮತದಲ್ಲಿ ವಾಸ್ತವವಾಗಿ ಮೇಲ್ಮೈಕಲ್ಪನೆಯಾಗಿದ್ದು, ಇದರ ಪ್ರಕಾರ ಪ್ರಕೃತಿ ಎಂದರೆ ಭೂದೃಶ್ಯ, ಅರಣ್ಯ, ಗ್ರಾಮಾಂತರ, ಗ್ರಾಮೀಣತೆ, ಪ್ರಾಣಿಗಳು, ದೇಹದ ಭೌತಿಕತೆ ಮತ್ತು ಕಚ್ಚಾವಸ್ತುಗಳು.

ಇವೆಲ್ಲ ದೈನಂದಿನ ಜೀವನದಲ್ಲಿ, ಸಾಹಿತ್ಯ ಮತ್ತು ಸೈದ್ಧಾಂತಿಕ ಚರ್ಚೆಗಳಲ್ಲಿ

ಬಳಕೆಯಾಗುತ್ತವೆ. ಹಾಗಾಗಿ ಪ್ರಕೃತಿಯು ವಿಶಿಷ್ಟ ರಚನೆಗಳು, ಪ್ರಕ್ರಿಯೆಗಳು ಮತ್ತು ನಿಯಮಗಳನ್ನು ಹೊಂದಿದೆ, ಇವುಗಳಿಗೆ ನಾವು ಒಳಪಟ್ಟಿದ್ದೇವೆ ಮತ್ತು ಇವುಗಳಿಂದ ತಪ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಮೇಲಾಗಿ ನಾಶಮಾಡಲೂ ಸಾಧ್ಯವಿಲ್ಲ. ಮಾನವರು ದುರ್ಬಳಕೆ ಮಾಡಿಕೊಂಡಿರುವುದು ಕೇವಲ ಪ್ರಕೃತಿಯ ಭೌತಿಕ ಆಯಾಮಗಳನ್ನು ಮಾತ್ರ.ಭೂದೃಶ್ಯ, ಪರ್ವತಗಳು, ನದಿಗಳು, ಜಾಗದಲ್ಲಿ ಇರುವ ದೈಹಿಕ ದೇಹ, ಕಚ್ಚಾವಸ್ತುಗಳು ಇತ್ಯಾದಿ ಮತ್ತು ಇವುಗಳ ಸಂರಕ್ಷಣೆಗಾಗಿ ಇಂದು ಬಹಳ ಶಕ್ತಿಶಾಲಿ ಧ್ವನಿ ಕೇಳಿಬರುತ್ತಿರುವುದು ಸ್ವಾಗತಾರ್ಹ ಮತ್ತು ಪ್ರೇರಣದಾಯಕವಾಗಿದೆ. ಪ್ರಕೃತಿಯ ಆಂತರಿಕ ನಿಯಮಗಳು ಮತ್ತು ಅದರ ಪ್ರಕ್ರಿಯೆಗಳು ಜೀವನದ ಮೇಲೆ ಬಹಳ ಪ್ರಭಾವಶಾಲಿಯಾಗಿವೆ. ಏಕೆಂದರೆ ಅವು ನಮ್ಮನ್ನು ವಿವಿಧ ರೀತಿಯಲ್ಲಿ ಪ್ರಭಾವಿಸುತ್ತವೆ. ಉದಾಹರಣೆಗೆ, ಸೂರ್ಯನು ಒಂದು ನಿರ್ದಿಷ್ಟ ಪ್ರಾಕೃತಿಕ ನಿಯಮದ ಪ್ರಕಾರ ಉದಯಿಸುತ್ತಾನೆ ಮತ್ತು ಅಸ್ತಮಾನಗೊಳ್ಳುತ್ತಾನೆ. ಈ ಪ್ರಾಕೃತಿಕ ವಿದ್ಯಮಾನಗಳು ವಿಶಿಷ್ಟ ಪ್ರಕ್ರಿಯೆಗಳಿಂದ ನಿಯಂತ್ರಿತವಾಗಿವೆ. ಇವುಗಳನ್ನು ಮಾನವರು ಸಮೀಪಿಸಲೂ ಸಾಧ್ಯವಿಲ್ಲ, ಪ್ರಭಾವಿಸಲೂ ಸಾಧ್ಯವಿಲ್ಲ. ಸೂರ್ಯನಿಗೆ ತನ್ನ ಅಸ್ತಿತ್ವ ಮತ್ತು ಕಾರ್ಯಗಳಿಗೆ ಸಂಸ್ಕೃತಿಯ ಸಹಾಯ ಬೇಕೇ? ಎಂಬ ಪ್ರಶ್ನೆಗೆ ಉತ್ತರವು ಸ್ಪಷ್ಟವಾಗಿ ಇಲ್ಲ ಎನ್ನುವುದಾಗಿದೆ. ಚಾರ್ಲ್ಸ್ ಡಾರ್ವಿನ್ ಅವರ ವಿಕಾಸವಾದಿ ಸಿದ್ಧಾಂತವೂ ಸೂಚಿಸುವಂತೆ, ಸಂಸ್ಕೃತಿಯು ಪ್ರಕೃತಿಕ್ಕಿಂತ ಬಹಳ ಕಾಲದ ನಂತರವೇ ಅಸ್ತಿತ್ವಕ್ಕೆ ಬಂದಿರಬೇಕು. ಸಂಸ್ಕೃತಿಯು ಮಾನವ ನಿರ್ಮಿತವಾದುದು, ಮತ್ತು ಮಾನವರು ತಾವೇ ಪ್ರಕೃತಿಯ ವ್ಯಾಪ್ತಿಗೆ ಬರುವ ಮಂಗನಿಂದ ವಿಕಸನಗೊಂಡವರು. ಹಾಗಾಗಿ, ಅಸ್ತಿತ್ವದ ದೃಷ್ಟಿಯಿಂದ ಸಂಸ್ಕೃತಿಯು ಪ್ರಕೃತಿಗೆ ಅನುರೂಪದಿಂದ ಕೂಡಿದ್ದು. ಆದ್ದರಿಂದ ಲಾರೆನ್ಸ್ ಬ್ಯೂಯೆಲ್ ಅವರು ತಮ್ಮ 'ದಿ ಎನ್ವೈರನ್‌ಮೆಂಟಲ್ ಇಮ್ಯಾಜಿನೇಷನ್'ನಲ್ಲಿ ಹೇಳುವಂತೆ, ಸಂಸ್ಕೃತಿಯ ಹೊರಗೆ ಪ್ರಕೃತಿ ಇದೆ. ನಮಗೆ ಸಂಸ್ಕೃತಿ ಎಂದು ತಿಳಿದಿರುವುದು ಮಹಾನ್ ಮಾನವನ ಚರ್ಚೆಯಾಗಿದ್ದು, ಇದು ಜ್ಞಾನ, ಜಾನಪದ, ಭಾಷೆ, ನಿಯಮಗಳು, ಆಚರಣೆಗಳು, ಅಭ್ಯಾಸಗಳು, ಜೀವನಶೈಲಿಗಳು, ದೃಷ್ಟಿಕೋನಗಳು, ನಂಬಿಕೆಗಳು ಮತ್ತು ರೂಢಿಗಳ ಸಂಕೀರ್ಣ

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025 | VOLUME: 09, ISSUE: 06, DECEMBER 2025

ಸಂಗ್ರಹವನ್ನು ಸೂಚಿಸುತ್ತದೆ ಎಂಬ ಅವರ ಮಾತು ಗಮನಾರ್ಹ ವೆನಿಸುತ್ತದೆ. ಹಾಗಾಗಿ ಇವು ಒಂದು ನಿರ್ದಿಷ್ಟ ಸಮಯದಲ್ಲಿ ಒಂದು ನಿರ್ದಿಷ್ಟ ಜನರ ಗುಂಪಿಗೆ ಸಾಮಾನ್ಯ ಗುರುತನ್ನು ನೀಡಿ ಸಂಧಿಸುತ್ತವೆ. ಮಾನವರು ಮಾಡಿದ ಎಲ್ಲ ವಸ್ತುಗಳು ಸಂಸ್ಕೃತಿಯ ವರ್ಗಕ್ಕೆ ಬರುತ್ತವೆ. ಆದರೆ ಪ್ರಕೃತಿಯು ಮಾನವ ನಿರ್ಮಾಣದ ಹೊರಗಿರುವ ಮರವು ಪ್ರಾಕೃತಿಕ ಜಗತ್ತಿನ ಭಾಗವಾದರೆ, ಆ ಮರದಿಂದ ಮಾಡಿದ ಕುರ್ಚಿಯು ಸಂಸ್ಕೃತಿಯ ಬಹುವಿಧ ಆವಿಷ್ಕಾರ ಮತ್ತು ಪ್ರಕಟಣೆಗಳ ಭಾಗವಾಗಿದೆ. ಸಂಸ್ಕೃತಿಯು ಬದುಕಿಗೆ ಪ್ರಬಲ ಮಾನವ ಸಾಧನವಾದರೂ, ಅದು ದುರ್ಬಲ ವಿದ್ಯಮಾನ. ಅದು ನಿರಂತರವಾಗಿ ಬದಲಾಗುತ್ತಿರುತ್ತದೆ ಮತ್ತು ಸುಲಭವಾಗಿ ಕಳೆದುಹೋಗುತ್ತದೆ. ಏಕೆಂದರೆ ಅದು ನಮ್ಮ ಮನಸ್ಸಿನಲ್ಲಿಯೇ ಅಸ್ತಿತ್ವದಲ್ಲಿದೆ. ನಮ್ಮ ಬರವಣಿಗೆಯ ಭಾಷೆಗಳು, ಸರ್ಕಾರಗಳು, ಕಟ್ಟಡಗಳು ಮತ್ತು ಇತರ ಮಾನವ ನಿರ್ಮಿತ ವಸ್ತುಗಳು ಕೇವಲ ಸಂಸ್ಕೃತಿಯ ಉತ್ಪನ್ನಗಳು ಮಾತ್ರ. ಅವು ತಾವೇ ಸಂಸ್ಕೃತಿಯಲ್ಲ. ಈ ಕಾರಣಕ್ಕಾಗಿ, ಪುರಾತತ್ತ್ವಶಾಸ್ತ್ರಜ್ಞರು ತಮ್ಮ ಉತ್ಖನನಗಳಲ್ಲಿ ಸಂಸ್ಕೃತಿಯನ್ನು ನೇರವಾಗಿ ಅಗೆದು ಹೊರತೆಗೆದವರಲ್ಲ. ಅವರು ಕಂಡುಹಿಡಿಯುವ ಪ್ರಾಚೀನ ಜನರ ಒಡೆದ ಒಡವೆಗಳು ಮತ್ತು ಇತರ ವಸ್ತುಗಳು ಕೇವಲ ಭೌತಿಕ ಶೇಷಗಳು ಮಾತ್ರ. ಅವು ಸಾಂಸ್ಕೃತಿಕ ಮಾದರಿಗಳನ್ನು ಪ್ರತಿಬಿಂಬಿಸುತ್ತವೆ. ಅವು ಸಾಂಸ್ಕೃತಿಕ ಜ್ಞಾನ ಮತ್ತು ಕೌಶಲ್ಯಗಳ ಮೂಲಕ ಮಾಡಲ್ಪಟ್ಟ ಮತ್ತು ಬಳಸಲ್ಪಟ್ಟ ವಸ್ತುಗಳಾಗಿವೆ.

ಸಂಸ್ಕೃತಿಯು ಮಾನವ ಸಂಸ್ಥೆಯಾಗಿದ್ದು, ಅಂತೆಯೇ ಅದು ಇಚ್ಛಾಶಕ್ತಿಯ ಚಲನೆಯನ್ನು ಪ್ರತಿಬಿಂಬಿಸುತ್ತದೆ. ಆದರೆ ಇವು ಮಾನವ ಕ್ರಿಯೆಗೆ ಸಂಬಂಧಿಸಿವೆ ಮತ್ತು ಅದರ ಅಸ್ಥಿರತೆಗೆ ಒಳಪಟ್ಟವುಗಳು ಎಂದು ಹೇಳಬಹುದು.ಸಂಸ್ಕೃತಿಯು ನಂಬಿಕೆಗಳ ವೈವಿಧ್ಯತೆ ಭಾವನೆಗಳ ಅಸ್ಥಿರತೆ, ಮಾನವ ನಿರ್ಧಾರಗಳಲ್ಲಿ ವಿರೋಧಾಭಾಸದ ವ್ಯಾಪ್ತಿಯನ್ನು ಉಂಟು ಮಾಡುತ್ತದೆ. ಮತ್ತೊಂದೆಡೆ, ಪ್ರಕೃತಿಯು ಶಾಶ್ವತತೆ, ಸ್ಥಿರತೆ, ನಿಯಮಿತತೆಯಿಂದ ಕೂಡಿದ ತನ್ನನ್ನು ತೋರಿಸಿಕೊಳ್ಳುತ್ತದೆ. ಋತುಗಳ ಮರುಕಳಿಸುವಿಕೆ ಮತ್ತು ಗಿಡ ಮಾರ ಬಳ್ಳಿಗಳು ಹೂಬಿಡುವಿಕೆ ಜೊತೆಗೆ ಜೀವರೂಪಗಳ ನಿರಂತರತೆ ಹಾಗೂ ಭೌತಿಕ ಜಗತ್ತಿನ ನಿರಂತರತೆಯೂ

ಕೂಡ ಪ್ರಕೃತಿಯನ್ನು ಅಸ್ತಿತ್ವದ ದೃಢತೆಗೆ ಒಂದು ರೀತಿಯ ನಿಖರತೆಯನ್ನು ಒದಗಿಸುತ್ತದೆ. ವಸ್ತುಗಳು ಒಂದು ಪ್ರಕೃತಿಯನ್ನು ಹೊಂದಿರುವ ಸತ್ಯವು ಅವುಗಳಿಗೆ ಒಂದು ರೀತಿಯ ದೃಢತೆಯನ್ನು ನೀಡುತ್ತವೆ. ಮಾನವತೆಯು ತನ್ನ ಕ್ರಿಯೆಗಳು ಮತ್ತು ಉದ್ಯಮಗಳಲ್ಲಿ ಅವಲಂಬಿಸಬಹುದಾದಂಥದ್ದು.

ಭಾಷೆಯು ಬಹುಶಃ ಪ್ರಕೃತಿಯನ್ನು ಅರ್ಥಮಾಡಿಕೊಳ್ಳಲು ಮತ್ತು ಅದನ್ನು ಸಂವಹನ ಮಾಡಲು ಸಹಾಯ ಮಾಡುವ ಅತ್ಯುತ್ತಮ ಮತ್ತು ಅತ್ಯಂತ ಪ್ರಭಾವಿ ಸಾಧನವಾಗಿದೆ. ಪ್ರಕೃತಿಯು ಭಾಷೆಯ ಸೃಜನಶೀಲ ಆಟದ ಮೂಲಕ ಅತ್ಯುತ್ತಮವಾಗಿ ಪ್ರತಿನಿಧಿಸಲ್ಪಡುತ್ತದೆ. ಇದು ಓದುಗನಿಗೆ ಮಾನವೇತರ ಜಗತ್ತು ಮತ್ತು ಮಾನವ ಮನಸ್ಸಿನ ನಡುವಿನ ಸೂಕ್ಷ್ಮ ಸಮತೋಲನವನ್ನು ಎಚ್ಚರಿಕೆಗೊಳಿಸುತ್ತದೆ. ಅದೇ ರೀತಿ, ಸಂಸ್ಕೃತಿಯೂ ನಮ್ಮ ಪ್ರಕೃತಿಯ ಬಗ್ಗೆ ಅರ್ಥಮಾಡಿಕೊಳ್ಳುವಿಕೆಯ ಮೇಲೆ ಪ್ರಭಾವ ಬೀರುತ್ತದೆ. ಏಕೆಂದರೆ ಅದು ಸಾಮಾಜಿಕ ಮತ್ತು ಆಕಾಶಿಕ ಅಂದರೆ ಆಕಾಶದ ಖಾಲಿ ಜಾಗದಲ್ಲೂ ಒಂದು ಬುದ್ಧಿವಂತಿಕೆಯಿದೆ ಎಂಬ ಸಂದರ್ಭದೊಂದಿಗೆ ಪ್ರಕೃತಿಯನ್ನು ನೋಡುವ ನಮ್ಮ ದೃಷ್ಟಿಕೋನಗಳನ್ನು ನಿರ್ಧರಿಸುತ್ತದೆ. ನಂತರ ಅದರ ಬಗ್ಗೆ ಕೆಲವು ದೃಷ್ಟಿಕೋನಗಳನ್ನು ರೂಪಿಸುತ್ತದೆ. ಪ್ರಕೃತಿಯು ಯಾವಾಗಲೂ ಸಾಂಸ್ಕೃತಿಕ ಮಧ್ಯಸ್ಥಿಕೆಯ ರೂಪದಲ್ಲಿ ಅನುಭವಿಸಲ್ಪಡುತ್ತದೆ ಎಂದು ಸೋಪರ್ ಹೇಳುತ್ತಾರೆ. ಉದಾಹರಣೆಗೆ, ಮಳೆಯು ಮೂಲತಃ ಎಲ್ಲೆಡೆಯೂ ಒಂದೇ ಆದರೂ ಜನರ ಅನುಭವಗಳು ಮತ್ತು ಅದರ ಬಗೆಗಿನ ದೃಷ್ಟಿಕೋನಗಳು ಒಂದು ಸ್ಥಳದಿಂದ ಮತ್ತೊಂದಕ್ಕೆ ಭಿನ್ನವಾಗಿರುತ್ತವೆ ಎಂಬುದಕ್ಕೆ ಕನ್ನಡ ಸಾಹಿತ್ಯದಲ್ಲಿ ಹಲವು ಉದಾರಣೆಗಳು ವ್ಯಕ್ತಪಡಿಸಬಹುದು. “ಹುಯ್ಯೊ ಹುಯ್ಯೊ ಮಳೆರಾಯ, ಮಾಯದಂತ ಮಳೆ ಬಂತಣ್ಣ, ಯಾತಕ್ಕೆ ಮಳೆ ಹೋದವೋ ಶಿವ ಶಿವ, ಊರಿಗೆ ಮಳೆ ಹೋಯ್ತು, ನಿಂಬಿಯ ಬನಾದ ಮ್ಯಾಗಳ ಚಂದ್ರಮ, ಮುಗಿಲ ಮಾರಿಗೆ ರಾಗರತಿಯಾ ಹೀಗೆ ಹಲವು ಗಾದೆ ಮತ್ತು ಕಾವ್ಯದ ಸಾಲುಗಳನ್ನು ಕರ್ನಾಟಕದ ಉತ್ತರ ದಕ್ಷಿಣ ಪೂರ್ವ ಪಶ್ಚಿಮದ ಉದ್ದಗಲಕ್ಕೂ ವ್ಯಾಪಿಸಿಕೊಂಡ ಜನಾಂಗದ ಹಿನ್ನೆಲೆಯಲ್ಲಿ ಅವುಗಳ ವ್ಯತ್ಯಾಸವನ್ನು ಗಮನಿಸಬಹುದು. ಏಷ್ಯಾದಲ್ಲಿ

ವಾಸಿಸುವ ವ್ಯಕ್ತಿಯು ಮಳೆಯನ್ನು ಭಿನ್ನ ರೀತಿಯಲ್ಲಿ ಅನುಭವಿಸಬಹುದು ಮತ್ತು ಅದರ ಬಗ್ಗೆ ಯೂರೋಪಿನಲ್ಲಿ ವಾಸಿಸುವವನಿಗಿಂತ ಭಿನ್ನ ದೃಷ್ಟಿಕೋನವನ್ನು ಹೊಂದಿರಬಹುದು, ಏಕೆಂದರೆ ಅವರ ಪ್ರಚಲಿತ ಸಾಂಸ್ಕೃತಿಕ ದೃಷ್ಟಿಕೋನಗಳು ಮತ್ತು ಸಂದರ್ಭಗಳು.ಭಾಷೆಯ ವ್ಯಾಕರಣ ಮಾತ್ರವಲ್ಲ, ಸಂಸ್ಕೃತಿ ಮತ್ತು ನಾಗರಿಕತೆಯ ವ್ಯಾಕರಣವೂ ಕೂಡ ನಮ್ಮ ಈ ವಿಶಾಲ ತಾಯಿ ಎನಿಸಿದ ಪ್ರಕೃತಿಯಿಂದ ಬರುತ್ತದೆ. ಬೇರೆ ಶಬ್ದಗಳಲ್ಲಿ, ಸಂಸ್ಕೃತಿ ಮತ್ತು ಭಾಷೆಯೇ ಪ್ರಕೃತಿಗೆ ಗುರುತು ಮತ್ತು ಅಸ್ತಿತ್ವವನ್ನು ನೀಡುವುದಿಲ್ಲ. ಅವು ಪ್ರಕೃತಿಯಿಂದ ಬರುತ್ತವೆ . ಉದಾಹರಣೆಗೆ, ವಾಸ್ತುಶಿಲ್ಪ, ಜೀವನಶೈಲಿಗಳು, ಆಹಾರಗಳು, ಉಡುಪುಗಳು, ಹಬ್ಬಗಳು ಇತ್ಯಾದಿಗಳು ಸಂಸ್ಕೃತಿಯ ಭಾಗವಾಗಿರುವುದು ಪ್ರಕೃತಿಯಿಂದ ನಿರ್ಧರಿತವಾಗಿರುತ್ತದೆ. ನೇಪಾಳದಲ್ಲಿ ವಾಸಿಸುವ ಜನರು ಭಿನ್ನ ರೀತಿಯ ಉಡುಪುಗಳನ್ನು ಧರಿಸುತ್ತಾರೆ ಮತ್ತು ಭಿನ್ನ ಜೀವನಶೈಲಿಗಳನ್ನು ಹೊಂದಿರುತ್ತಾರೆ ಏಕೆಂದರೆ ಅವರ ಭಿನ್ನ ಭೂದೃಶ್ಯ, ಹವಾಮಾನ ಸ್ಥಿತಿ ಮತ್ತು ಇತರ ಪ್ರಾಕೃತಿಕ ಲಕ್ಷಣಗಳು, ಬೆಟ್ಟಗುಡ್ಡ ಪ್ರದೇಶಗಳಲ್ಲಿ ವಾಸಿಸುವವರು ಬಿಗಿಯಾದ ಉಡುಪುಗಳಾದ ದೌರಾ, ಸುರುವಾಲ್ ಮತ್ತು ಬೆಚ್ಚಗಿನ ಬಟ್ಟೆಗಳನ್ನು ಧರಿಸುತ್ತಾರೆ. ಏಕೆಂದರೆ ಅವು ಶೀತ ಹವಾಮಾನದಿಂದ ರಕ್ಷಣೆ ನೀಡುತ್ತವೆ ಮತ್ತು ಪರ್ವತ ಭೂಪ್ರದೇಶದ ಏರಿಳಿತಗಳಲ್ಲಿ ಸುಖವಾಗಿ ನಡೆಯಲು ಸಹಾಯ ಮಾಡುತ್ತವೆ. ಮತ್ತೊಂದೆಡೆ ನೇಪಾಳದ ದಕ್ಷಿಣ ಸಮತಟ್ಟಾದ ಭಾಗದಲ್ಲಿ ವಾಸಿಸುವ ಜನರು ಸಡಿಲವಾದ ತೆಳುವಾದ ಉಡುಪುಗಳಾದ ಧೋತಿ ಮತ್ತು ಕುರ್ತಾವನ್ನು ಧರಿಸುತ್ತಾರೆ. ಏಕೆಂದರೆ ಅಲ್ಲಿ ಬಹಳ ಬಿಸಿ ಇರುತ್ತದೆ. ಅದೇ ರೀತಿ, ಆಷಾಢದ ಹದಿನೈದನೇ ತಾರೀಖಿನಂದು ನೆಲದಲ್ಲಿ ದಹಿ ಮತ್ತು ಚಿವಡಾವನ್ನು ತಿನ್ನುವ ಒಂದು ವಿಶಿಷ್ಟ ನೇಪಾಳಿ ಸಂಸ್ಕೃತಿಯಿದೆ. ಹೆಚ್ಚಾಗಿ ರೈತರು ಆ ಮಳೆಗಾಲದಲ್ಲಿ ನೆಲದ ರೋಪಣದ ಆರಂಭವನ್ನು ಗುರುತಿಸಲು ಇದನ್ನು ಆಚರಿಸುತ್ತಾರೆ. ಆ ಸಮಯದಲ್ಲಿ ಮಳೆ ಬೀಳದೇ ಇದ್ದಿದ್ದರೆ ಆ ಸಂಸ್ಕೃತಿಯೂ ಇರುತ್ತಿರಲಿಲ್ಲ. ಇಂದು ನೇಪಾಳದಲ್ಲಿ ಹವಾಮಾನದ ತೀವ್ರತೆಗಳು ಮತ್ತು ವ್ಯಾಪಕ ಅರಣ್ಯ ನಾಶದಿಂದ ಮಳೆ ಕಡಿಮೆಯಾಗುತ್ತಿರುವುದರಿಂದ ಆ ತಿಂಗಳಲ್ಲಿ ನೆಲ ರೋಪಣಕ್ಕೆ

ಸಾಕಷ್ಟು ಮಳೆ ಸುರಿಯುತ್ತಿಲ್ಲ. ಆದ್ದರಿಂದ ಆಷಾಢ ಹದಿನೈದು ಅಂದರೆ ಇದು ಮಳೆಗಾಲದ ಆರಂಭವನ್ನು ಸೂಚಿಸುತ್ತದೆ. ಈ ದಿನದಂದು ಗುರು ಪೂರ್ಣಿಮೆ ಆಚರಿಸುವುದಲ್ಲದೆ, ದೇವತೆಗಳ ನಿದ್ರೆಗಾಗಿ ಚಾತುರ್ಮಾಸ ಆರಂಭವಾಗುತ್ತದೆ, ಹಾಗೂ ಈ ತಿಂಗಳಲ್ಲಿ ದಾನ–ಧರ್ಮ ಮತ್ತು ಆಧ್ಯಾತ್ಮಿಕ ಆಚರಣೆಗಳಿಗೆ ಮಹತ್ವವಿದೆ ಎಂದು ತಿಳಿದ ಈ ಜನರ ಸಂಸ್ಕೃತಿಯು ಅಳಿವಿನತ್ತ ಸಾಗುತ್ತಿದೆ.ಸಾಂಸ್ಕೃತಿಕ ಬದಲಾವಣೆಯು ಒಂದು ಸಮಾಜವು ಅಸ್ತಿತ್ವದಲ್ಲಿರುವ ಪರಿಸರದಲ್ಲಿನ ಬದಲಾವಣೆಗಳ ಪರಿಗಣನೆಯನ್ನು ಒಳಗೊಂಡಿರಬೇಕು.ಕೊನೆಯ ಹಿಮ ಯುಗದ ಅಂತ್ಯವು ಕೃಷಿಯ ಆವಿಷ್ಕಾರಕ್ಕೆ ಸಹಾಯ ಮಾಡಿತು. ಉಷ್ಣವಲಯದ ಅರಣ್ಯಗಳ ನಂತರ, ಕೊನೆಯ ಹಿಮ ಯುಗದ ಅಂದರೆ ಭೂಮಿಯ ಹವಾಮಾನವು ದೀರ್ಘಕಾಲದವರೆಗೆ ತೀವ್ರವಾಗಿ ತಂಪಾಗಿದ್ದು, ವಿಶಾಲ ಪ್ರದೇಶಗಳನ್ನು ಹಿಮಗಾಳಿಗಳು ಆವರಿಸುವ ಒಂದು ಭೂವೈಜ್ಞಾನಿಕ ಅವಧಿ. ಇದರ ಅಂತ್ಯದ ನಂತರ ಉಷ್ಣವಲಯದ ಅರಣ್ಯಗಳು ಹಿಂದಿರುಗಿದಾಗ, ಸಾಕಾಣಿಕೆಗೆ ಯೋಗ್ಯವಾದ ಸಸ್ಯಗಳು ಲಭ್ಯವಾದವು. ಇದು ಕೃಷಿಯ ಆವಿಷ್ಕಾರಕ್ಕೆ ಕಾರಣವಾಯಿತು. ಇದು ತನ್ನದೇ ಆದ ಅನೇಕ ಸಾಂಸ್ಕೃತಿಕ ನಾವೀನ್ಯತೆಗಳನ್ನು ಮತ್ತು ಸಾಮಾಜಿಕ ಚಲನಶಾಸ್ತ್ರದಲ್ಲಿ ಬದಲಾವಣೆಗಳನ್ನು ತಂದೊಡ್ಡಿತು. ಸಿಹಿನೀರಿನ ಸರಬರಾಜುಗಳು, ಕೃಷಿಯೋಗ್ಯ ಭೂಮಿ ಮತ್ತು ಶಕ್ತಿಯ ಮೂಲಗಳ ಪರಿಸರ ಹಾಳಾದಂತೆ ಐತಿಹಾಸಿಕವಾಗಿ ಹೊಸ ಆವಿಷ್ಕಾರಗಳ ಸೃಷ್ಟಿ, ವಲಸೆಗಳು ಮತ್ತು ಅಗತ್ಯ ಸಂಪನ್ಮೂಲಗಳನ್ನು ಪಡೆಯಲು ಯುದ್ಧಗಳಿಗೂ ಕಾರಣವಾಯಿತು. ಆದ್ದರಿಂದಲೇ ಪ್ರಕೃತಿಯ ಇತಿಹಾಸವು ಸಂಸ್ಕೃತಿಯ ಇತಿಹಾಸವನ್ನು ರೂಪಿಸುತ್ತದೆ.

ಫೋಲ್ಕೆ ಗುಂಥರ್ ಹೇಳುವಂತೆ ನಾವು ಪ್ರಕೃತಿಯ ಹೊರಗಿದ್ದೇವೆ ಎಂದು ಕಲ್ಪಿಸಿಕೊಳ್ಳುವುದು ಕಷ್ಟವಾಗುತ್ತದೆ. ನಾವು ನಿಜವಾಗಿಯೂ ವೈಜ್ಞಾನಿಕರಾಗಬೇಕೆಂದಿದ್ದರೆ, ಪ್ರಕೃತಿಯು ಸಂಸ್ಕೃತಿಯ ಹೊರಗೆ ಅಸ್ತಿತ್ವದಲ್ಲಿದೆ ಎಂಬ ದ್ವಂದ್ವ ದೃಷ್ಟಿಕೋನವನ್ನು ತ್ಯಜಿಸಬೇಕು ಮತ್ತು ಸಂಸ್ಕೃತಿಯು ಪ್ರಕೃತಿಯೊಳಗೆ ಇದೆ ಎಂಬ ದೃಷ್ಟಿಕೋನವನ್ನು ಅಳವಡಿಸಿಕೊಳ್ಳಬೇಕು.ಇದು ಸ್ಥಳೀಯ ಆದಿವಾಸಿ ಬುಡಕಟ್ಟು ಜನರಲ್ಲಿ ಸಾರ್ವತ್ರಿಕವಾಗಿ ಸ್ವೀಕೃತವಾಗಿರುವ ದೃಷ್ಟಿಕೋನ. ಹಾಗಾಗಿ

ಸಂಸ್ಕೃತಿಯು ಪ್ರಕೃತಿಯ ಮೇಲೆ ಅವಲಂಬಿತವಾಗಿದೆ ಮತ್ತು ಸಂಸ್ಕೃತಿಯೊಳಗೆ ಪ್ರಕೃತಿಯ ಅಳಿಸಲಾಗದ ಅಸ್ತಿತ್ವ ಹುದುಗಿದೆ. ಸಾಂಸ್ಕೃತಿಕ ಪರಿಸರಶಾಸ್ತ್ರವು ಪ್ರದೇಶದ ಸಂಸ್ಕೃತಿಗಳನ್ನು ರೂಪಿಸುವಲ್ಲಿ ಪರಿಸರೀಯ ಸ್ಥಳವು ಮಹತ್ವದ ಪಾತ್ರ ವಹಿಸುತ್ತದೆ. ಇಂದಿನ ವೇಗವಾಗಿ ಬೆಳೆಯುತ್ತಿರುವ ಸಾಂಸ್ಕೃತಿಕ ಅಧ್ಯಯನ ಶಿಸ್ತುಗಳು ತನ್ನ ಆತ್ಮ ಸಂದರ್ಭಿತ ಬೌದ್ಧಿಕರಣದೊಂದಿಗೆ, ಪ್ರಕೃತಿಯನ್ನು ಭಾಷಾಶಾಸ್ತ್ರೀಯ ನಿರ್ಮಿತಿಯ ಸ್ಥಾನಕ್ಕೆ ಸೀಮಿತಗೊಳಿಸಿದೆ. ಆದರೆ, ತತ್ವಜ್ಞಾನಿ ಕೇಟ್ ಸೋಪರ್ ಅವರು ಎಚ್ಚರಿಕೆ ನೀಡುವಂತೆ, "ಓಝೋನ್ ಪದರದಲ್ಲಿ ರಂಧ್ರವಿರುವುದು ಭಾಷೆಯಲ್ಲ ಮತ್ತು ಕಳೆದ ಹತ್ತುವರ್ಷಗಳಲ್ಲಿ ಆಧುನಿಕೋತ್ತರಕಾಲದ ಆತ್ಮ–ಪ್ರತಿಫಲನಾತ್ಮಕ ಭಂಗಿಯನ್ನು ಮತ್ತು ಪ್ರಾಕೃತಿಕ ಜಗತ್ತಿಗೆ ಅದರೊಂದಿಗೆ ಬರುವ ಅಪಾಯಗಳನ್ನು ಸವಾಲು ಮಾಡುವ ಒಂದು ವಿಮರ್ಶಾತ್ಮಕ ಚಿಂತನೆಯ ಮರು ಉದಯ ಕಂಡಿದೆ ಎನ್ನುತ್ತಾರೆ. ಇಲ್ಲಿನ ಅತ್ಯಂತ ಆರಂಭಿಕ ಪ್ರತಿಪಾದಕರಲ್ಲಿ ಒಬ್ಬರಾದ ಲಿವರ್‌ಪೂಲ್ ವಿಶ್ವವಿದ್ಯಾಲಯದ ಇಂಗ್ಲಿಷ್ ಸಾಹಿತ್ಯದ ಪ್ರೊಫೆಸರ್ ಜೊನಾಥನ್ ಬೇಟ್ ಅವರು ತಮ್ಮ 'ರೊಮ್ಯಾಂಟಿಕ್ ಎಕಾಲಜಿ' ರೂಟ್‌ಲೆಡ್ಜ್, ಕೃತಿಯಲ್ಲಿ ರೊಮ್ಯಾಂಟಿಕ್ ಕವಿಗಳು ಮತ್ತು ಪ್ರಕೃತಿಯ ಬಗ್ಗೆಯ ಅವರ ಬರಹಗಳ ಕಡೆಗೆ ತಿರುಗಿ ಸಂಸ್ಕೃತಿ–ಪ್ರಕೃತಿ ಚರ್ಚೆಯ ಸಮತೋಲನವನ್ನು ಮರುಸ್ಥಾಪಿಸಲು ಹಂಬಲಿಸಿದ ಒಲವು ಕಂಡು ಬರುತ್ತದೆ. ಬೇಟ್ ಅವರು ವರ್ಡ್ಸ್‌ವರ್ತ್ ಅವರನ್ನು ಪರಿಸರ ವಿಮರ್ಶಾತ್ಮಕ ಚಿಂತನೆಯ ಮಾದರಿಯಾಗಿ ಬಳಸಿಕೊಳ್ಳುತ್ತಾರೆ, ಏಕೆಂದರೆ ವರ್ಡ್ಸ್‌ವರ್ತ್ ಅವರು ಪ್ರಕೃತಿಯನ್ನು ಜ್ಞಾನೋದಯದ ದೃಷ್ಟಿಯಲ್ಲಿ ನೋಡಲಿಲ್ಲ ಅದನ್ನು ಸಾಧಿಸಬೇಕಾದ, ಕ್ರಮಬದ್ಧಗೊಳಿಸಬೇಕಾದ ಮತ್ತು ಬಳಸಿಕೊಳ್ಳಬೇಕಾದಂಥದ್ದು ಎಂದು,ಬದಲಾಗಿ ಅದನ್ನು ಬದುಕಬೇಕಾದ ಅಲ್ಲದೆ ಚಿಂತನೆ ಮಾಡಬೇಕಾದ ಪ್ರದೇಶವೆಂದು ನೋಡಿರುವುದು ಗಮನಾರ್ಹ ಸಂಗತಿ.ಹೀಗೆಮಾಡುವುದರ ಮೂಲಕ ಮಾನವ ವಸ್ತುಗಳನ್ನು ಜೀವನದೊಳಗೆ ನೋಡಬಹುದು ಎಂದು ಆಶಿಸಿದ್ದು ಸಿಮಾತೀತವಾಗಿ ಪ್ರಕೃತಿಯ ಕುರಿತು ವಾತ್ಸಲ್ಯ ಮೂಡಿಸುತ್ತದೆ. ಮತ್ತು ಮಾನವ ಮತ್ತು ಮಾನವೇತರ ಜಗತ್ತುಗಳ ನಡುವಿನ ಸೂಕ್ಷ್ಮ ಸಂಬಂಧಗಳ ವ್ಯವಸ್ಥೆಯಲ್ಲಿ ತಮ್ಮ ಸ್ಥಾನವನ್ನು

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025 | VOLUME: 09, ISSUE: 06, DECEMBER 2025

ಬಯಲುಮಾಡಬಹುದು ಎಂಬ ನಿಲುವು ಕಾದಂಬರಿಕಾರ ಕ್ಲಾರ್ಕ್ ಮತ್ತು ಬರಹಗಾರ ಬೇಟ್ ಅವರ ಇತ್ತೀಚಿನ ರಚನೆ 'ದಿ ಸಾಂಗ್ ಆಫ್ ದಿ ಅರ್ಥ್' ನಲ್ಲಿ ಅಭಿವ್ಯಕ್ತಿ ಪಡಿಸಿದ ಮನವಿಯನ್ನು ಅರಿವಿಗೆ ತರುವ ಮಹತ್ವದ್ದು ನಡೆಯನಿಸುತ್ತದೆ.

ಪ್ರಕೃತಿ ಮತ್ತು ಸಂಸ್ಕೃತಿಯ ಕುರಿತ ಆರಂಭಿಕ ಭಾರತೀಯ ದೃಷ್ಟಿಕೋನಗಳು ಕೂಡ ಮಹತ್ವದ ಸಾಲುಗಳಿಗೆ ಸೇರುತ್ತವೆ .ಸಿಂಧೂ ಕೊಳ್ಳದ ನಾಗರೀಕತೆಯ ಉತ್ಖನನಗಳಲ್ಲಿ ಕಂಡುಬಂದ ಪುರಾತತ್ವ ಶಾಸ್ತ್ರೀಯ ಸಾಕ್ಷ್ಯಗಳಲ್ಲಿ ಅನೇಕ ಪ್ರಾಣಿಗಳಿಂದ ಆವೃತವಾದ ಕುಳಿತಿರುವ ವ್ಯಕ್ತಿಚಿತ್ರವನ್ನು ಪ್ರತಿಬಿಂಬಿಸುವ ಒಂದು ಮುದ್ರೆಯಿದೆ. ಈ ಮುದ್ರೆಗಳಲ್ಲಿ ಕೇವಲ ಪ್ರಾಣಿಗಳಾದ ಎತ್ತು ಅಥವಾ ಆನೆ,ಮತ್ತು ವೃಕ್ಷಗಳು ಮತ್ತು ಎಲೆ ಮೋಟಿಫ್‌ಗಳನ್ನು ಮಾತ್ರ ಚಿತ್ರಿಸುತ್ತವೆ. ಅವರು ಈ ಮುದ್ರೆಗಳನ್ನು ಸೇವೆಗಾಗಿ ಅಥವಾ ಆರ್ಥಿಕ ನೆರವಿಗಾಗಿ ಮುದ್ರೆ ಹಾಕಲು ಅಥವಾ ವ್ಯಾಪಾರಿಗಳು ಅಥವಾ ಮೇಲ್ವಿಚಾರಕ ವ್ಯವಸ್ಥಾಪಕರ ಗುರುತಿನ ರೂಪದಲ್ಲಿ ಬಳಸಲಾಗಿರಬಹುದು ಎಂದು ಸೂಚಿಸುತ್ತದೆ ಎಂಬದು ನೈಜವೆನಿಸುವುದಿಲ್ಲ. ಆದರೆ, ಅತ್ಯಂತ ಪ್ರಾಚೀನ ನಾಗರಿಕತೆಗಳಲ್ಲಿ ಒಂದಾದ ಸಿಂದು ಕೊಳ್ಳದ ನಾಗರಿಕತೆಗಳಲ್ಲಿ ಒಂದಾದ ಇದರ ಮುದ್ರೆಗಳಲ್ಲಿ ಮಾನವೇತರ ಅಂಶಗಳ ಚಿತ್ರಣವು ಮಾನವನಿಗೆ ಮಾತ್ರ ಸೀಮಿತವಲ್ಲದ ಜಗತ್ತಿನ ತಿಳುವಳಿಕೆಯ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ.ಭಾರತೀಯ ಚಿಂತನೆಯಲ್ಲಿ ಪ್ರಕೃತಿಯ ಬಗೆಗಿನ ಕೆಲವು ಆರಂಭಿಕ ದೃಷ್ಟಿಕೋನಗಳು ವೇದಗಳೆಂಬ ಗ್ರಂಥ ಸಂಪ್ರದಾಯಗಳಲ್ಲಿ ದಾಖಲಾಗಿವೆ. ಪ್ರಕೃತಿ ದೇವತೆಗಳ ಆರಾಧನೆ ಮತ್ತು ಭೂಮಿಗೆ ಗೌರವ ಸೂಚಕ ಸ್ತೋತ್ರಗಳಿಂದ ಪ್ರಾರಂಭವಾಗಿ, ಈ ಆರಂಭಿಕ ಚಿಂತಕರ ನಂಬಿಕೆ ವ್ಯವಸ್ಥೆಯ ದೊಡ್ಡ ಭಾಗವು ಪ್ರಕೃತಿಯೊಂದಿಗಿನ ನಿಕಟ ಅವಲೋಕನ ಮತ್ತು ಸಂಪರ್ಕದಿಂದ ಆಳವಾಗಿ ಪ್ರಭಾವಿತವಾಗಿತ್ತು.ಎಂಬುದನ್ನು ಪ್ರತಿನಿಧಿಸುತ್ತವೆ ಎಂಬುದರ ಹಿನ್ನೆಲೆಯಲ್ಲಿ ಚಿಂತಕ ಮಾರ್ಷಲ್ ವೇದಗಳನ್ನು "ಜೀವನವನ್ನು ದೃಢೀಕರಿಸುವ ಮತ್ತು ಭೌತಿಕ ಪ್ರಕೃತಿವಾದ ಹೊಂದಿರುವುದೆಂದು ಉಲ್ಲೇಖಿಸುತ್ತಾರೆ. ಅದು ಅವುಗಳ ಆಳವಾದ ಆಧ್ಯಾತ್ಮಿಕ ಸಂದೇಶಗಳಿಗೆ ಸಮಾನಾಂತರವಾಗಿದೆ.

ಅವರು ಹೇಳುವಂತೆ ಋಗ್ವೇದದ ಜ್ಞಾನದ ಹಾಡುಗಳು, ನಂಬಿಕೆಯುಳ್ಳವನು ಮತ್ತು ಅವನ ಅಥವಾ ಅವಳ ಪರಿಸರದ ನಡುವಿನ ನಿಕಟ ಬಂಧವನ್ನು ಬಯಲುಮಾಡುತ್ತದೆ. ಎಲ್ಲ ವಸ್ತುಗಳಲ್ಲಿ ವಾಸಿಸುವ ಆತ್ಮದೊಂದಿಗಿನ ಸಂಬಂಧಿತ್ವದ ಭಾವನೆಯನ್ನು ಜೊತೆಗೆ ವೈದಿಕ ಪುರಾಣದಲ್ಲಿನ ಪ್ರಕೃತಿ ದೇವತೆಗಳ ವಿದ್ಯಮಾನವನ್ನು ವಿವರಿಸುತ್ತಾರೆ. "ವೈದಿಕ ಪುರಾಣದ ಆಧಾರವು ಇನ್ನೂ ದೂರದ ಪ್ರಾಚೀನತೆಯಿಂದ ಉಳಿದುಬಂದ ನಂಬಿಕೆಯೇ ಆಗಿದೆ. ಅದು ಮಾನವನನ್ನು ಆವೃತಗೊಳಿಸಿರುವ ಪ್ರಕೃತಿಯ ಎಲ್ಲ ವಸ್ತುಗಳು ಮತ್ತು ವಿದ್ಯಮಾನಗಳು ಜೀವಂತ ಮತ್ತು ದೈವಿಕವೆಂದು,ವೈದಿಕ ಸ್ತೋತ್ರಗಳು ನಿಸ್ಸಂದೇಹವಾಗಿ ಪರಿಸರದ ಸೌಂದರ್ಯದ ಮೇಲಿನ ಪ್ರೀತಿಯನ್ನು ತೋರಿಸುತ್ತವೆ. ಪ್ರಕೃತಿ ಜಗತ್ತಿನ ಅನೇಕ ರೂಪಕಗಳು ಮತ್ತು ವರ್ಣನೆಗಳು ಸ್ತುತಿಗಳೊಂದಿಗೆ ಸಂಬಂಧಿಸಿವೆ. ವೇದಗಳಲ್ಲಿ ವಿವರಿಸಲಾದ ಕೆಲವು ಆಚರಣೆಗಳು ಅನೇಕ ಚಿಂತನಾ ಸಂಪ್ರದಾಯಗಳಲ್ಲಿ ಆಹ್ವಾನಿಸಲ್ಪಡುತ್ತವೆ ಮತ್ತು ಆಚರಣೆಗಳು ಮತ್ತು ಅಭ್ಯಾಸಗಳಲ್ಲಿ ಮುಂದುವರಿಯುತ್ತವೆ ಎಂಬುದು ಗಮನಾರ್ಹ ಸಂಗತಿ. ವೈದಿಕ ಕಾಲದ ಜಗದ ದೃಷ್ಟಿ ಕೋನಗಳಲ್ಲಿ ಪ್ರಕೃತಿಯ ಕಲ್ಪನೆಯ ಸುತ್ತಲಿನ ಅತ್ಯಂತ ಗಮನಾರ್ಹ ತಿಳುವಳಿಕೆಗಳಲ್ಲಿ ಒಂದು. ಎಲ್ಲ ಸೃಷ್ಟಿಯ ವಸ್ತುಗತ ಏಕತೆ ಎಂಬುದು ಕಂಡುಬರುತ್ತದೆ. ಇದನ್ನು ಮೊದಲು ವೇದಗಳ ಆಧ್ಯಾತ್ಮಿಕ ಭಾಗಗಳಾದ ಉಪನಿಷತ್ತುಗಳಲ್ಲಿ ವಿವರಿಸಲಾಗಿದೆ. ಹಿಂದೂ ಧರ್ಮದ ಅಭಿವೃದ್ಧಿಯೊಂದಿಗೆ, ಪ್ರಕೃತಿಯೊಂದಿಗೆ ಆಧ್ಯಾತ್ಮಿಕ ಮತ್ತು ನೈತಿಕವಾಗಿ ತೊಡಗಿಸಿಕೊಳ್ಳುವ ವಿವಿಧ ಚಿಂತನಾ ಸಂಪ್ರದಾಯಗಳನ್ನು ನಾವು ಇಲ್ಲಿ ಕಾಣುತ್ತೇವೆ. ನಂತರದ ಕಾಲದಲ್ಲಿ ಪ್ರಕೃತಿಯ ಕಲ್ಪನೆಯೊಂದಿಗೆ ತೊಡಗಿಸಿಕೊಂಡ ಅನೇಕ ಭಾರತೀಯ ತಾತ್ವಿಕ ಶಿಸ್ತುಗಳ ವೈದಿಕ ಕಾಲದ ತಿಳುವಳಿಕೆಗಳಿಂದ ಪ್ರಭಾವಿತವಾಗಿದ್ದವು. ಇನ್ನು ಇದೇ ವೇದಗಳಲ್ಲಿ ಉಲ್ಲೇಖಗೊಂಡಂತೆ ಪಂಚಮಹಾಭೂತಗಳೆಂಬ ಐದು ತತ್ತ್ವಗಳಿಂದ ಕೂಡಿದ ಪ್ರಕೃತಿಯ ಕಲ್ಪನೆಯು ಅನೇಕ ಪ್ರಕೃತಿವಾದಿ ತತ್ತ್ವಶಾಸ್ತ್ರಗಳಲ್ಲಿ ಬಹಳ ಜನಪ್ರಿಯವಾಗಿದೆ. ಇಂತಹ ಬ್ರಹ್ಮಾಂಡವು ಜೀವಂತ ಮತ್ತು ನಿರ್ಜೀವ ಭಾಗಗಳೆರಡನ್ನೂ ಒಳಗೊಂಡಿರುತ್ತದೆ. ಈ ತತ್ವಗಳನ್ನು ಮೊದಲು ಅಮೂರ್ತವಾಗಿ

ಕಲ್ಪಿಸಲಾಗಿತ್ತು. ನಂತರ ಅವುಗಳು ಕೂಡಿಕೊಂಡು ಬ್ರಹ್ಮಾಂಡವನ್ನು ರೂಪಿಸುವ ಸ್ಥೂಲ ತತ್ವಗಳಾಗಿ ತಿಳಿಯಲಾಯಿತು. ವೈಶೇಷಿಕ ಮತ್ತು ಸಾಂಖ್ಯದಂತಹ ಸಂಪ್ರದಾಯಗಳು ಈ ಐದು ಮೂಲಭೂತ ತತ್ವಗಳ ಸ್ವರೂಪ ಮತ್ತು ಅವುಗಳೊಳಗೆ ಬಹುವಿಧ ವೈವಿಧ್ಯಗಳ ಸೃಷ್ಟಿ ಪ್ರಕ್ರಿಯೆಯನ್ನು ವಿವರಿಸುತ್ತವೆ.

ಈ ವೈಶೇಷಿಕದ ಪರಮಾಣುವಾದ ಹಾಗೂ ಸಾಂಖ್ಯ ಸಂಪ್ರದಾಯದ ವಿಕಾಸಾತ್ಮಕ ಸ್ವರೂಪದ ಬಗ್ಗೆ ಕುತೂಹಲ ಹುಟ್ಟಿಸುವ ದಾಖಲೆಗಳಿವೆ. ಚಿಂತಕ ಹಾಲ್ಬ್‌ಫಾಸ್ ಅವರ ಪ್ರಕಾರ ಹೇಳುವುದಾದರೆ ಭೂತ ಮಹಾಭೂತ ಎಂಬ ಪದಗಳು ಏನೋ 'ಆಗಿಹೋಗಿದೆ' ಎಂದು ಸೂಚಿಸುವಷ್ಟು ದೂರದಲ್ಲಿನ ವಿಕಾಸಾತ್ಮಕ ಅರ್ಥವನ್ನು ಹೊಂದಿವೆ. ಭೂತದ ಮತ್ತೊಂದು ಮುಖ್ಯ ಅರ್ಥ, ಭೌತಿಕ ತತ್ವಗಳು ಎಂಬುದಾಗಿದೆ. ಈ ಪಂಚಭೂತಗಳಲ್ಲಿ ಭಾರತೀಯರು ಪ್ರಕೃತಿಯನ್ನು ಕಂಡವರು. ಈ ಪಂಚ ಮಹಾಭೂತಗಳೆಂದರೆ ಅಗ್ನಿ, ವಾಯು ಭೂಮಿ ಜಲ ಮತ್ತು ಆಕಾಶ. ಅಗ್ನಿಯ ಕುರಿತು ವೇದಗಳಲ್ಲಿ ಅಗ್ನಿಯು ತತ್ತ್ವವಾಗಿ ಬಹಳ ಜನಪ್ರಿಯ ದೇವತೆಯಾಗಿದ್ದು, ಅವನನ್ನು ಕೊಂಡಾಡುವ ಅನೇಕ ಸ್ತೋತ್ರಗಳಿವೆ. ಅವನು ಇಂದ್ರನೊಂದಿಗೆ ಸಾಮಾನ್ಯ ಮೂಲವನ್ನು ಹೊಂದಿದ್ದು, ಬ್ರಹ್ಮಾಂಡ ಪುರುಷನ ಬಾಯಿಯಿಂದ ಹುಟ್ಟಿದನು. ಅಗ್ನಿ ಮತ್ತು ಜಲದ ನಡುವಿನ ಸಂಬಂಧವನ್ನು ಕೆಲವು ಸ್ತೋತ್ರಗಳಲ್ಲಿ ಆಗಾಗ್ಗೆ ಸೂಚಿಸಲಾಗಿದೆ. ತಾರ್ಕಿಕವಾಗಿ ಇದು ಅಸಾಧ್ಯವೆನಿಸಿದರೂ, ಅವರು ಇದು ಕಾರಣೀಯ ಸಂಪರ್ಕ ಎಂದು ಸೂಚಿಸುತ್ತಾರೆ. ಅಗ್ನಿಯು ಮರದಿಂದ ಉತ್ಪತ್ತಿಯಾಗುವುದರಿಂದ ಅಗ್ನಿಯು ಸಸ್ಯಗಳಲ್ಲಿ ವಾಸಿಸುತ್ತದೆ. ಮತ್ತು ಸಸ್ಯಗಳ ಸಾರವು ಜಲವಾಗಿರುವುದರಿಂದ, ವೈದಿಕ ರಚನೆಕಾರರು ಜಲ ಮತ್ತು ಅಗ್ನಿಯ ನಡುವೆಯೂ ಸಂಪರ್ಕವನ್ನು ಕಲ್ಪಿಸಿದ್ದಾರೆ. ಮೋಡಗಳು, ಮಿಂಚು ಮತ್ತು ಅಗ್ನಿಯ ಸಂದರ್ಭದಲ್ಲೂ ಇದೇ ನಿಜವೆನಿಸುತ್ತದೆ. ಮಿಂಚಿನ ದೇವತೆ ವಾಯುವ ದೇವರು.ಆಕಾಶದ ಅಗ್ನಿಯನ್ನು ಭೂಮಿಗೆ ತಂದು ಕೊಡುತ್ತಾನೆ.ವಾಯುದೇವರ ಕುರಿತು ವಿಶೇಷವಾಗಿ ವೇದಗಳಲ್ಲಿ ಮತ್ತು ಹಿಂದೂ ಪುರಾಣಗಳಲ್ಲಿ ಉಲ್ಲೇಖಿತವಾಗಿರುವಂತೆ, ಅಗ್ನಿಯ ರಥವನ್ನು ಸ್ವರ್ಗಕ್ಕೆ ಕೊಂಡೊಯ್ಯುವ ಅಥವಾ ಅಗ್ನಿಯ ಶಕ್ತಿಯನ್ನು ಹೊತ್ತುಕೊಂಡು

ಬರುವ ದೈವಿಕ ಶಕ್ತಿಯನ್ನು ಸೂಚಿಸುವ ದೇವರೆಂದು ಸೂಚಿತಗೊಂಡಿದೆ.ಈ ಅಗ್ನಿ ಮತ್ತು ವಾಯುವಿನ ಸಂಯೋಜನೆ.ಬಹಳ ಮಹತ್ವತೆಯನ್ನು ಹಿಂದಿದೆ. ಈ ಎಲ್ಲ ಮೂಲಗಳು ಅನುಭವಾತ್ಮಕ ಅಂಶವನ್ನು ಹೊಂದಿವೆ. ಇದು ಮೂಲದ ಸ್ಥಳದ ಆಧಾರದ ಮೇಲೆ ತತ್ವಗಳನ್ನು ಸಂಧಾನ ಮಾಡುವ ಪ್ರಯತ್ನವನ್ನು ತೋರಿಸುತ್ತದೆ. ಕೇವಲ ಪ್ರಕಟಿತ ಗುಣದ ಕಲ್ಪನೆಯ ಮೇಲೆ ಅಲ್ಲ. ಇದು ಸಾಂಖ್ಯ ತತ್ತ್ವಶಾಸ್ತ್ರ ತನ್ನ ಮಾತ್ರ ಕಲ್ಪನೆಗೆ ಮೂಲವಾಗಿರಲೂಬಹುದು.ಅಗ್ನಿ ದೇವತೆಯ ರೂಪವು ಇಂದ್ರನಂತಹ ದೇವತೆಗಳಷ್ಟು ಮಾನವಾಕಾರದಲ್ಲಿಲ್ಲ. ಅವನನ್ನು ಆಗಾಗ್ಗೆ ತಲೆಯಿಲ್ಲದ ಮತ್ತು ಪಾದಗಳಿಲ್ಲದವನೆಂದು ಕರೆಯಲಾಗುತ್ತದೆ ಮತ್ತು ಅವನನ್ನು ಜ್ವಾಲೆಗಳ ರೂಪದಲ್ಲಿ ಪರಿಗಣಿಸಲಾಗುತ್ತದೆ.ಅವನನ್ನು ತುಪ್ಪದ ಮುಖ, ತುಪ್ಪದ ಬೆನ್ನು, ತುಪ್ಪದ ಕೂದಲು, ಜ್ವಾಲೆಯ ಕೂದಲು ಎಂದು ಕರೆಯಲಾಗುತ್ತದೆ. ಅವನ ಆಹಾರ ತುಪ್ಪ, ಆದರೆ ಅವನು ಮರಗಳನ್ನು ತಿನ್ನುತ್ತಾನೆ ಮತ್ತು ದಿನಕ್ಕೆ ಮೂರು ಬಾರಿ ತಿನ್ನುತ್ತಾನೆ.ಅಗ್ನಿಯ ಪ್ರಕಾಶವನ್ನು ಉಲ್ಲೇಖಿಸಲಾಗಿದೆ; ಅವನು ಸೂರ್ಯನಂತೆ, ಕತ್ತಲನ್ನು ದೂರ ಮಾಡುತ್ತಾನೆ.ಆದರೆ ಅವನು ಅರಣ್ಯದ ಮೂಲಕ ಸಾಗುತ್ತಿದ್ದಾಗ ಅವನ ಹಾದಿ ಕಪ್ಪಾಗಿರುತ್ತದೆ. ಅವನ ಜ್ವಾಲೆಗಳು ಭಯಂಕರವಾಗಿ ಏರುತ್ತವೆ. ಅವನ ಜೀವನ ಆಕಾಶವನ್ನು ಮುಟ್ಟುವಾದಾಗಿದೆ ಎಂಬುದು ಚಿಂತಕ ಕೀತ್ ನ್ ಅಭಿಪ್ರಾಯ. ಅಗ್ನಿಯು ಏಳು ಜ್ವಾಲೆಗಳು ಅಥವಾ ಮೂರು ಜ್ವಾಲೆಗಳನ್ನು ಹೊಂದಿರುವುದಾಗಿ ಭಾವಿಸಲಾಗಿದೆ ಮತ್ತು ಎಲ್ಲಿ ಶಾಖವಿರುತ್ತದೆಯೋ ಅಲ್ಲಿ ಅಗ್ನಿ ತತ್ವವು ಇರುತ್ತದೆ. ಕಾರ್ಯಾತ್ಮಕವಾಗಿ ವರ್ಗೀ ಕರಿಸಲ್ಪಟ್ಟಂತೆ ಮೂರು ಬಗೆಯ ಅಗ್ನಿಗಳಿವೆ.ಯಜ್ಞದ ಆಚರಣಾ ಅಗ್ನಿ, ಮನೆಯ ಅಗ್ನಿ ಮತ್ತು ಅಂತ್ಯೇಷ್ಟಿಯ ಚಿತಾಗ್ನಿ. ಆಕಾಶ ಲೋಕಗಳಲ್ಲಿ ಶುಚಿ, ಭೂಲೋಕದಲ್ಲಿ ಪವಮಾನ ಮತ್ತು ಪಾತಾಳ ಲೋಕಗಳಲ್ಲಿ ಪಾವಕ ಎಂದು ಅಗ್ನಿಯ ವಿಭಿನ್ನ ರೂಪಗಳೂ ಇವೆ. ಅಗ್ನಿ ದೇವತೆಯು ವೈದಿಕ ಜಗದ್ದೃಷ್ಟಿಕೋನದಲ್ಲಿ ಎಲ್ಲ ಆಚರಣೆಗಳಿಗೂ ಮುಖ್ಯವಾಗಿದ್ದಾನೆ. ಏಕೆಂದರೆ ಅವನು ಭೂಲೋಕ ಮತ್ತು ಸ್ವರ್ಗಲೋಕದ ನಡುವಿನ ದೂತನಾಗಿದ್ದು, ದೇವತೆಗಳಿಗೆ ಒಪ್ಪಿಗೆಗಳನ್ನು ಒಯ್ಯುತ್ತಾನೆ ಅಥವಾ ತಲುಪಿಸುತ್ತಾನೆ ಎಂಬ ಪ್ರತೀತಿ ಭಾರತೀಯರಾದ ನಮ್ಮಲ್ಲಿ

ಕಾಲಾಯಿತವಾಗಿ ವ್ಯಾಪಿಸಿ ಕೊಂಡಿದೆ..

ವಾಯು ಕುರಿತು ಹೇಳುವದಾದರೆ ವಾಯು ತತ್ವವು ವೇದಗಳಲ್ಲಿ ಒಂದು ದೈವತ್ವವಾಗಿದೆ. ಗಾಳಿಯ ತತ್ವವನ್ನು ವಾಯು ಮತ್ತು ವಾತ ಎಂದು ಉಲ್ಲೇಖಿಸಲಾಗುತ್ತದೆ. ವಾಯು ಹೆಚ್ಚು ಮಾನವಾಕಾರದ ದೇವತೆಯಾಗಿದ್ದರೆ, ವಾತ ಹೆಚ್ಚು ಮೂಲಭೂತ ಅಥವಾ ಪ್ರಾಕೃತಿಕವಾಗಿದೆ. ವಾಯುವನ್ನು ಪ್ರದರ್ಶನಾತ್ಮಕವಾದ ಪರಬ್ರಹ್ಮನ ಒಂದು ರೂಪವೆಂದು ಉಲ್ಲೇಖಿಸಲಾಗುತ್ತದೆ. ಅವರು ವಾತವೆಂಬ ಗಾಳಿಯ ರೂಪವನ್ನು ಪಾಶ್ಚಾತ್ಯ ಚಿಂತಕರು ವಿವರಿಸಿದಂತೆ "ವಾತ ಕೇವಲ ತನ್ನ ಶಕ್ತಿಯಲ್ಲಿ ಗಾಳಿಯೇ ಆಗಿದೆ, ದೊಡ್ಡ ಧೂಳಿನ ಮೋಡಗಳನ್ನು ಒಯ್ಯುತ್ತಾ, ಒಡೆದು ಗುಡುಗುತ್ತಾ, ಸಾಗುವ ಅವನ ರೂಪವನ್ನು ಮಾನವ ಕಣ್ಣುಗಳು ನೋಡಲಾರವು.ಆದರೂ ಅವನ ಗರ್ಜನೆ ಕೇಳಿಸುತ್ತದೆ. ಅವನ ಹುಟ್ಟಿದ ಸ್ಥಳವೂ ತಿಳಿದಿಲ್ಲ.

ಗಾಳಿಯನ್ನು ಮಳೆ ದೇವತೆ ಪರ್ಜನ್ಯನೊಂದಿಗೂ ಸಂಬಂಧಿಸಲಾಗಿದೆ. ಇದು ಬಹಳ ಪ್ರಾಕೃತಿಕ ಸಂಪರ್ಕವಾಗಿದೆ. ಏಕೆಂದರೆ ಮೋಡಗಳು ಗಾಳಿಯಿಂದ ಒಯ್ಯಲ್ಪಡುತ್ತವೆ. ಅನೇಕ ವೈದಿಕ ಸ್ತೋತ್ರಗಳಲ್ಲಿ ಗಾಳಿಯನ್ನು ದೇವತೆಗಳ ದೂತನೆಂದೂ ಕರೆಯಲಾಗುತ್ತದೆ ಮತ್ತು ಔಷಧೀಯ ಚಿಕಿತ್ಸಕನಾಗಿ ಆಹ್ವಾನಿಸಲಾಗುತ್ತದೆ. 'ಋಗ್ವೇದದ ಹನ್ನೊಂದನೆಯ ಅಧ್ಯಾಯದಲ್ಲಿ ತ್ವಂ ಹಿ ವಿಶ್ವಾ ಭೇಷಜೋ ದೇವಾನಾಂ ತು ದೂತಾಸಿ' ಎಂಬಲ್ಲಿ 'ದೇವತೆಗಳ ದೂತನಾಗಿದ್ದಿಯಾ ನೀನು ಚಿಕಿತ್ಸಕ' ಎಂಬುದಾಗಿದೆ.

ಆಯುರ್ವೇದದಲ್ಲಿ, ವಾತವು ಮೂರು ದೈಹಿಕ ದೋಷಗಳಲ್ಲಿ ಒಂದಾಗಿ ಮಾರ್ಪಡುತ್ತದೆ. ಅನೇಕ ಚಲನೆಗಳಿಗೆ ಜವಾಬ್ದಾರಿಯಾಗಿರುತ್ತದೆ. ವಿಶೇಷವಾಗಿ, ವಾತವು ಗರ್ಭಕೋಶದೊಳಗೆ ಭ್ರೂಣವನ್ನು ಭಾಗಗಳಾಗಿ ವಿಭಜಿಸುವುದಕ್ಕೆ ಜವಾಬ್ದಾರಿಯಾಗಿರುತ್ತದೆ. ಋಗ್ವೇದ ಐದನೇ ಅಧ್ಯಾಯದಲ್ಲಿ ವಾಯು ಎಚ್ಚರಗೊಳ್ಳ ಶಿಶುವೇ ಅಜಾತನೇ ಎಂದಾಗಿ ವಿವರಣೆ ಇರುವುದನ್ನು ನಾವು ನೋಡಬಹುದು. ಹೀಗೆ ಈ ಪಂಚಭೂತಗಳ ಕುರಿತು ರಚನೆಗಳನ್ನು ರಚಿಸುವ ಅಥವಾ ಉಲ್ಲೇಖಿಸುವ

ಕ್ರಿಯೆ ಸಂಸ್ಕೃತಿ ಎನಿಸುತ್ತದೆ. ಭೂಮಿಯು ವೇದಗಳಲ್ಲಿ ಮಾನವಾಕಾರದ ರೂಪವನ್ನು ಹೊಂದಿರುವಂತೆ ಕಾಣುವುದಿಲ್ಲ. ಶತಪಥಬ್ರಾಹ್ಮಣವು ಭೂಮಿಯನ್ನು ಮಂಡಲ ಅಥವಾ ವೃತ್ತಾಕಾರದ ಎಂದು ಉಲ್ಲೇಖಿಸುತ್ತದೆ. ಆರಂಭಿಕ ವೈದಿಕ ವಿವರಣೆಗಳು ಭೂಮಿಯನ್ನು ಪ್ರಾಕೃತಿಕವಾಗಿ ವರ್ಣಿಸುತ್ತವೆ ಮತ್ತು ಅದು ಬೆಟ್ಟಗಳು ಮತ್ತು ಪರ್ವತಗಳನ್ನು ಹೊತ್ತೊಯ್ಯುತ್ತದೆ ಎಂದು ಉಲ್ಲೇಖಿಸುತ್ತವೆ. ಅಥರ್ವವೇದ ಹನ್ನೆರಡನೇ ಅಧ್ಯಾಯದಲ್ಲಿ ಮತ್ತು ಯಜುರ್ವೇದದ ಹನ್ನೆರಡನೇ ಅಧ್ಯಾಯದಲ್ಲಿ ಇದು ನಮ್ಮ ಪಾದಗಳ ಕೆಳಗಿನ ಭೂಮಿಯನ್ನು ಆಧಾರವಾಗಿ ಹೊಂದಿರುವ ಭೂಮಿಯ ಕಲ್ಪನೆಯಾಗಿದೆ. ಮೇಲಿನ ಆಕಾಶಕ್ಕೆ ವಿರುದ್ಧವಾಗಿ ನಾವು ಮಧ್ಯಂತರ ಆಕಾಶವನ್ನು ಆಕ್ರಮಿಸುತ್ತೇವೆ. ಭೂಮಿಯು ಭೂಮಿ ಎಂಬ ರೂಪದಲ್ಲಿ ಬಂಡೆಗಳು, ಕಲ್ಲುಗಳು, ಧೂಳು ಮತ್ತು ಭೂಮಿಯನ್ನು ಒಳಗೊಂಡಿರುತ್ತದೆ. ಮೇಲಾಗಿ ಭೂಮಿಗೆ ಹಿಂಸೆ ಮಾಡಬೇಡ ಎಂಬ ನೇರ ಆದೇಶವನ್ನು ಕಾಣುತ್ತೇವೆ: "ಪೃಥ್ವೀಂ ಮಾ ಹಿಂಸೀಃ" ಅಂದರೆ ಭೂಮಿಗೆ ಹಿಂಸೆ ಮಾಡಬೇಡ. ಪುರಾಣಗಳಲ್ಲಿ ಭೂಮಿಯನ್ನು ದೇವತೆಯೆಂದು ಉಲ್ಲೇಖಿಸಲಾಗಿದೆ.

ಜಲ ತತ್ತ್ವವನ್ನು ಆಗಾಗ್ಗೆ ಬಹುವಚನ ಸ್ತ್ರೀಲಿಂಗ ರೂಪದಲ್ಲಿ "ಜಲಗಳು" ಎಂದು ಉಲ್ಲೇಖಿಸಲಾಗುತ್ತದೆ. ಅವು ದೇವತೆಗಳಾಗಿವೆ ಮತ್ತು ಸಮುದ್ರಕ್ಕೆ ಹರಿಯುತ್ತವೆ. ಜಲಗಳು ಸಾಗರ ಮತ್ತು ಇತರ ಭೂರೂಪಗಳೊಂದಿಗೆ ತಾಯಿಯರು ಅಥವಾ ಪತ್ನಿಯರಾಗಿ ಸಂಬಂಧಿಸಿವೆ.ಜಲದ ಪೋಷಣಾ ಸಮೃದ್ಧಿಯು ಜಲಗಳನ್ನು ಹೀಗೆ ಕಲ್ಪಿಸುವುದನ್ನು ಸುಲಭಗೊಳಿಸುತ್ತದೆ ಎಂಬುದು ಬಹಳ ಸ್ಪಷ್ಟ. ಎಲ್ಲ ಜಲಗಳು ಕಾರ್ಯಾತ್ಮಕವಾಗಿ ಶುದ್ಧೀಕರಣ ಮತ್ತು ಶುಚಿಗೊಳಿಸುವುದಕ್ಕೆ ಉದ್ದೇಶಿತವಾಗಿವೆ. ಈ ಶುದ್ಧಿಕರಣ ಪ್ರಕ್ರಿಯೆ ಮಾನವ ಮೂಲಕ ನಡೆಸಿದ್ದಾದರೆ ಅದು ಸಂಸ್ಕೃತಿ. ಆಚರಣೆಗಳಲ್ಲಿ ಜಲದ ಬಳಕೆಯು ಪ್ರಚಲಿತವಾಗಿತ್ತು ಎಂಬುದು ಸಂಸ್ಕೃತಿ ಮತ್ತು ಆಧ್ಯಾತ್ಮಿಕ ಶುದ್ಧೀಕರಣ, ಅಭಿಷೇಕಗಳು ಮತ್ತು ದೈನಂದಿನ ಆಚರಣೆಗಳು ಜಲವನ್ನು ಅರ್ಪಿಸುವ ಮೂಲಕ ನಡೆಯುತ್ತಿದ್ದವು ಎಂಬ ಅಂಶಗಳೆಲ್ಲ ಸಂಸ್ಕೃತಿಯ ಭಾಗಗಳೇನುಸುತ್ತವೆ. ಜಲಗಳು ದೈಹಿಕ ದೇಹವನ್ನು

ಮಾತ್ರವಲ್ಲದೆ ದೋಷಗಳನ್ನು ಶುದ್ಧೀಕರಿಸುತ್ತವೆ, ವಿಶೇಷವಾಗಿ ಪವಿತ್ರ ಮೂಲದೊಂದಿಗೆ ಸಂಬಂಧಿಸಿದ್ದರೆ ಸ್ತೋತ್ರಗಳಿಂದ ಶುದ್ಧೀಕೃತವಾಗುತ್ತವೆ. ಜಲಗಳ ಮಾನವಾಕಾರದ ರೂಪಗಳು ಚಿಂತಕರಾದ ಕೀತ್ ಮತ್ತು ಓಲ್ಡೆನ್‌ಬರ್ಗ್ ಹೇಳುವಂತೆ ಅಪ್ಸರೆಯರು ಅವು ಜಲಗಳೊಂದಿಗೆ ಚಲಿಸುವ ಜಲ ಕನ್ಯೆಯರು. ಗ್ರಾಮ್ಯದಲ್ಲಿ ಇವರನ್ನು ಜಕಣೇರು ಎನ್ನುತ್ತಾರೆ. ಈ ವ್ಯಾಖ್ಯಾನಗಳು ಜಲಗಳ ಮೂಲಗಳಿಗೆ ವಿಶೇಷವಾಗಿ ನದಿಗಳಿಗೆ ವೈಯಕ್ತಿಕತೆಯಲ್ಲಿ ಅನನ್ಯ ಹೆಸರುಗಳನ್ನು ನೀಡುತ್ತವೆ. ವೇದಗಳಲ್ಲಿ ವರುಣ ದೇವತೆಯನ್ನು ಜಲಗಳ ನಿಯಂತ್ರಕನೆಂದು ಪರಿಗಣಿಸಲಾಗಿದೆ. ಛಾಂದೋಗ್ಯ ಉಪನಿಷತ್ತಿನ ಐದನೇ ಅಧ್ಯಾಯದಲ್ಲಿ ಆಹಾರದ ಅತ್ಯಂತ ಸೂಕ್ಷ್ಮ ಭಾಗವನ್ನು ಮನಸ್ಸು ಗ್ರಹಿಸುತ್ತದೆ. ಆದರೆ ಜಲದ ಅತ್ಯಂತ ಸೂಕ್ಷ್ಮ ಭಾಗವನ್ನು ಪ್ರಾಣಶಕ್ತಿ ಗ್ರಹಿಸುತ್ತದೆ ಎಂದು ಹೇಳಲಾಗಿದೆ.ಮನುಷ್ಯನಿಗೆ ಬಾಯಾರಿಕೆ ಆಗಿರುವುದು ಅವನ ಆಂತರ್ಯದಲ್ಲಿ ಕಂಡು ಬಂದ ಒಂದು ಕ್ರಿಯೆ ಇದು ಪ್ರಾಣ ಶಕ್ತಿಯ ಕ್ರಿಯೆ.ಜಲ ಮತ್ತು ಜೀವನದ ನಡುವಿನ ಸಂಪರ್ಕವು ಜಲವನ್ನು ಭೂಮಿಯ ಸಾರವೆಂದು ಕರೆಯುವ ವಿವರಣೆಗಳಲ್ಲಿಯೂ ಕಂಡುಬರುತ್ತದೆ, ಅದು ಪ್ರಾಣಿಗಳನ್ನು ರೂಪಿಸುತ್ತದೆ.

ಋಗ್ವೇದದ ಅತಿ ಹಳೆಯ ದೇವತೆಗಳಲ್ಲಿ ಒಬ್ಬನಾದ ವರುಣನನ್ನು ಹಲವಾರು ವಿಶೇಷಣಗಳಿಂದ ಕರೆಯಲಾಗುತ್ತದೆ.ವರುಣನು ದೇವತೆಗಳ ರಾಜ, ಪ್ರಪಂಚದ ಎಲ್ಲೆಡೆ ವ್ಯಾಪಿಸಿರುವ ಸಾರ್ವಭೌಮ ಆದಿತ್ಯರಲ್ಲಿ ಉತ್ತಮೋತ್ತಮ. ಆಕಾಶದ ಒಡೆಯ. ಬೆಳಕಿನ ದೇವತೆ. ಋತು ನಿಯಮಗಳ ಅಧಿಪತಿ. ಧರ್ಮವನ್ನು ಎತ್ತಿಹಿಡಿಯುವವನು. ಜೀವಿಗಳ ತಪ್ಪೊಪ್ಪುಗಳನ್ನು ನಿರ್ಣಯಿಸುವ, ತಪ್ಪಿತಸ್ಥರನ್ನು ಕಠಿಣವಾಗಿ ಶಿಕ್ಷಿಸುವ ಮತ್ತು ಕ್ಷಮಿಸುವ ಕರುಣಾಮಯಿ. ಸಾವಿರ ಔಷಧಿಗಳ ವೈದ್ಯ. ಸರ್ವವ್ಯಾಪಿ ಮತ್ತು ಸರ್ವಜ್ಞ, ಅಪಾರ ಜ್ಞಾನದ ಗಣಿ, ಕವಿ, ಋಷಿ, ಅನುಪಮ ಬುದ್ಧಿವಂತ. ದೈವಿಕ ಹಾಗು ನಿಗೂಢ ಮಾಯಾ ಶಕ್ತಿ ಇರುವವನು, ನಿಯಮ–ವಿಧಿಗಳ ನಿಯಂತ್ರಕ, ಉದಕಗಳ ರಾಜ ಮೋಡ, ಸಮುದ್ರ, ನದಿ, ಮತ್ತು ನೀರಿನ ರಾಜ ಎಂದು ಮುಂತಾಗಿ ವರ್ಣಿಸಲಾಗಿದೆ. ಭಾರತೀಯರ ಜೀವನದಲ್ಲಿ ಪ್ರಾಚೀನ ಕಾಲದಿಂದಲೂ ಮಳೆಯೆಂದರೆ ಅವರ ಪಾಲಿಗೆ ದೇವರು.

ಸಾಕ್ಷಾತ್ ಶಿವನ ಜಡೆಯಲ್ಲಿ ಕುಳಿತ ಗಂಗೆ, ಮಳೆರಾಯನೂ ಹೌದು. ಇಲ್ಲಿ ಮಳೆಯನ್ನು ಪುರುಷಭಾವದಿಂದಲೂ ಸ್ತ್ರೀ ಭಾವದಿಂದಲೂ ಕಾಣುವುದನ್ನು ನೋಡಬಹುದು. ಅದೇ ಭಾಗೀರಥಿ ಧರೆಗಿಳಿಯದೇ ಹೋದಾಗ ಶಿವನಲ್ಲಿ ಮೊರೆಯಿಡುತ್ತಾರೆ. ಕಾಲ ಬದಲಾದಂತೆ ನಾನಾ ಕಾರಣಗಳಿಂದಾಗಿ ಮಳೆಯೇ ಬರದಂತಾಗಿದೆ. ಬಾರದ ಮಳೆಗೆ ನಾವೇ ಕಾರಣವಾಗಿದ್ದು ಮಳೆಯನ್ನೆ? ದೂರುತ್ತಾ 'ಹುಯ್ಯೊ? ಹುಯ್ಯೊ? ಮಳೆರಾಯ ಎಂದು ಗೋಗರೆಯುತ್ತೇವೆ. ಇನ್ನೊಂದೆಡೆ ಹಳ್ಳಿಯ ಬಾಲಕರು ಮಳೆ ಬಾರದೆ ಇರುವ ದಿನಗಳಲ್ಲಿ ಗುರ್ಜಿ ಎನ್ನುವ ಮಣ್ಣಿನ ಸಗಣೆಯ ಗುಪ್ಪೆಯನ್ನು ಕಟ್ಟಿಗೆ ಮಣೆ ಮೇಲೆ ಇಟ್ಟು ಅದನ್ನ ತಲೆಯ ಮೇಲೆ ಹೊತ್ತುಕೊಂಡು ಮನೆ ಮನೆಗೆ ತೆರಳುತ್ತಾರೆ. ಮಣೆ ಹೊತ್ತ ಬಾಲಕ ಅಂಗಿ ಹಾಕಿರುವುದಿಲ್ಲ, ಅವನ ಹಿಂದೊಂದಿಷ್ಟು ಹುಡುಗರ ತಂಡ.ಅವರು ಹಾಡುವ ಹಾಡೂ ವಿಶಿಷ್ಟವೇ.ಬಗೆಬಗೆಯಲ್ಲಿ ಹಾಡುತ್ತಾ ತಮ್ಮ ಮನೆಯ ಮುಂದೆ ಬಂದು ನಿಂತ ಬಾಲಕನ ತಲೆಯ ಮೇಲೆ ನೀರು ಹಾಕಿ ಧಾನ್ಯ ನೀಡುತ್ತಾರೆ. ಹೀಗೆ ಮಾಡಿದರೆ ಮಳೆ ಬರುತ್ತದೆ ಎಂಬ ನಂಬಿಕೆ.ಇದು ರೂಪಿಸಿಕೊಂಡ ಸಂಸ್ಕೃತಿ. ಇಷ್ಟೆಲ್ಲಾ ಆಗಿ ಮಳೆ ಬಂದ ಮೇಲಿನ ಸಂಭ್ರಮವೂ ಒಂದಿದೆ. ಮಳೆ ಆದ ನಂತರ ನಾಗರಪಂಚಮಿಯ ದಿನ ಮಣ್ಣಿನ ಮೂರ್ತಿ ಮಾಡಿ ಕೆರೆ ಅಥವಾ ಹೊಳೆಗೆ ಊಟ ಕಟ್ಟಿಕೊಂಡು ಹೋಗಿ ಉಂಡು ಗುಳಕಿ ಹಾಡು ಹಾಡಿ ಬರುವ ಸೊಗಸು ಜನಪದರ ಭಾವ ಸೌಂದರ್ಯದ ಸಿರಿತನವನ್ನು ಸೂಚಿಸುತ್ತದೆ. ಇದು ಕಟ್ಟಿಕೊಂಡ ಸಂಸ್ಕೃತಿ ಹೀಗೆ ಭೂಮಿ ಆಗಸದ ಮಿಲನದ ಸಂಕೇತ ಮಳೆ. ಅವು ಒಬ್ಬರನ್ನೊಬ್ಬರು ಸ್ಪರ್ಶಿಸುವ ರೀತಿಯದು. ಭೂಮಿ ಆಗಸ ಪರಸ್ಪರ ಎದುರೆದುರೇ ಅನವರತ ಕುಳಿತಿದ್ದರೂ ಒಬ್ಬರನ್ನೊಬ್ಬರು ನೋಡುತ್ತಲೇ ಇದ್ದರೂ ಎಂದಿಗೂ ಮಿಲನವಾಗದ ಸಂಕಟಕ್ಕೆ ಸುರಿಸುವ ಕಣ್ಣೀರೆಂದರೆ ಅದು ಮಳೆ. ಹೀಗೆ ನಮ್ಮ ರಮ್ಯ ಕಲ್ಪನೆಗಳೇನೇ ಇರಲಿ ಜನಪದರ ಪಾಲಿಗೆ ಮಳೆ ಎಂಬುದು ತಾಯಿ. ದೇವತೆಯಂತಹಾ ಅಮ್ಮ ಅವಳು. ಅದನ್ನೇ ಜನಪದರ ಭಾವದ ಲಯಬದ್ಧ ಜೋಡಣೆಯಲ್ಲಿ ಮೂಡಿ ಬಂದಾಗ "ಮಾಯದಂತ ಮಳೆ ಬಂತಣ್ಣ ಮದಗಾದ ಕೆರೆಗೆ ಮಾಯದಂತ ಮಳೆ ಬಂತಣ್ಣ ಮದಗಾದ

ಕೆರೆಗೆ ಅಂಗ್ಯೆಯಗಳ ಮೋಡನಾಡಿ ಭೂಮಿತೂಖದ ಗಾಳಿ ಭೀಸಿ ಗುಡುಗಿ ಗೂಡಾಗಿ ಚೆಲ್ಲಿದಳೋ ಗಂಗಮ್ಮ ತಾಯಿ, ಮಾಯದಂತ ಮಳೆ ಬಂತಣ್ಣ ಮದಗಾದ ಕೆರೆಗೆ,ಮಾಯದಂತ ಮಳೆ ಬಂತಣ್ಣ ಮದಗಾದ ಕೆರೆಗೆ ಎರೀ ಮ್ಯಾಗಳ ಬಲ್ಲಾಳ ರಾಯ ಕೆರೆಯ ಒಲಗಡೆ ಬೆಸ್ತರ ಹುಡುಗ ಓಡಿ ಓಡಿ ಸುದ್ದಿಯ ಕೊಡಿರಯ್ಯೊ ನಾ ನಿಲ್ಲುವವಳಲ್ಲ ಮಾಯದಂತ ಮಳೆ ಬಂತಣ್ಣ ಮದಗಾದ ಕೆರೆಗೆ, ಮಾಯದಂತ ಮಳೆ ಬಂತಣ್ಣ ಮದಗಾದ ಕೆರೆಗೆ" ಹೀಗೆ ಹಾಡಿನಲ್ಲಿ ಒಂದು ರೂಪಕವನ್ನು ಕಟ್ಟಿಕೊಡುವುದು ಸಂಸ್ಕೃತಿ. ಇಲ್ಲಿ ಎಷ್ಟೊಂದು ವಿವರಣೆ ವಿಶ್ಲೇಷಣೆ ಇದೆಲ್ಲ ಪ್ರಕೃತಿ ಯೊಂದಿಗಿನ ಮಾನವನ ಬದುಕು ಎಂಬುದಕ್ಕೆ ಸಾಕ್ಷಿಯಾಗುತ್ತದೆ.

ಆಕಾಶವನ್ನು ವೇದಗಳಲ್ಲಿ ಅನೇಕ ಪದಗಳಿಂದ ಉಲ್ಲೇಖಿಸಿದ್ದಾರೆ, ವಿವರಿಸಿದ್ದಾರೆ. ಈ ತತ್ವದ ವಿವಿಧ ಅರ್ಥಗಳು ಮತ್ತು ಅದನ್ನು ಪ್ರತಿನಿಧಿಸುವ ಇತರ ಪದಗಳನ್ನು ಆಕಾಶ ತತ್ವದ ಸಾಮಾನ್ಯ ವರ್ಗದಡಿ ಸೇರಿಸಬಹುದೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಏಕೆಂದರೆ ಆಕಾಶದ ಕಲ್ಪನೆಯನ್ನು ಸೂಚಿಸುವ ಪದಗಳಿಗೆ ಬಹಳಷ್ಟು ಅರ್ಥಗಳು ಮತ್ತು ಸಂದರ್ಭಗಳಿವೆ. ಕೆಲವು ಚಿಂತಕರು ಆಕಾಶಕ್ಕೆ ಸಂಬಂಧಿಸಿದ ಪದಗಳನ್ನು ಮೂರು ಪದರಗಳ ಅರ್ಥದಲ್ಲಿ ಬಳಸಲಾಗುತ್ತದೆ ಎಂದು ಸೂಚಿಸುತ್ತಾರೆ. ಅದು ವ್ಯಾಖ್ಯಾನಗಳ ವ್ಯಾಪ್ತಿಯನ್ನು ಒಳಗೊಂಡಿರುತ್ತದೆ. ಪ್ರಾಥಮಿಕ, ಪ್ರತೀಕಾತ್ಮಕ ಮತ್ತು ರೂಪಕಾತ್ಮಕ. ವೇದಗಳಲ್ಲಿ ಆಕಾಶಕ್ಕೆ ಸಂಬಂಧಿಸಿದ ಅತ್ಯಂತ ಆರಂಭಿಕ ಉಲ್ಲೇಖಗಳು ಆಕಾಶಕ್ಕಿಂತ ಹೆಚ್ಚಾಗಿ 'ಆಕಾಶ' ಎಂಬ ಅರ್ಥಕ್ಕೆ ಹತ್ತಿರವಾಗಿವೆ. ಸಾಧ್ಯವಾದ ಅತ್ಯಂತ ಆರಂಭಿಕ ಉಲ್ಲೇಖವು ಜಗತ್ತಿನ ಆಕಾಶ–ಭೂಮಿ ತಂದೆ–ತಾಯಿಯರಾದ ದಿವ್ಯ ಜೋಡಿ ದ್ಯಾವಾಪೃಥಿವಿಗೆ ಸಂಬಂಧಿಸಿದೆ. ಅವರ ನಡುವಿನ ಮಧ್ಯಂತರ ಆಕಾಶವೇ ಆಕಾಶದ ಚಾಂದಗೋಪನಶತ್ತಿನಲ್ಲಿ ಆಕಾಶವನ್ನು ಚಲನೆಗೆ ಸ್ವಾತಂತ್ರ್ಯವನ್ನು ಅನುಮತಿಸುವ ಶಕ್ತಿ ಎಂದು ಕಲ್ಪಿಸಲಾಗಿದೆ. ಪ್ರಶ್ನೋಪನಿಷತ್ತಿನ ಗ್ರಂಥದಲ್ಲಿ ಇದರ ಕುರಿತು ಹಲವು ಉಲ್ಲೇಖವನ್ನು ಕಾಣುತ್ತೇವೆ, ಅದು ಸ್ಥೂಲ ಆಕಾಶಕ್ಕೆ ವಿರುದ್ಧವಾಗಿ ತತ್ತ್ವವಾಗಿ ಆಕಾಶದ ಸೂಕ್ಷ್ಮ ರೂಪವನ್ನು ಸೂಚಿಸುತ್ತದೆ. ಈ

ಆಕಾಶಕ್ಕೆ ಅಂತರಿಕ್ಷ, ಅಂಬರ, ಆಗಸ, ಆಶರೀರ, ಕ್ಷಿತಿಜ, ಗಗನ, ತಾರಾಪಥ, ದಿಗಂತ, ನೀಲಾಂಗಣ, ನೀಲಾಗರ, ಬಹ್ಯಾಕಾಶ, ಬಾನು, ಮುಗಿಲು, ಯೋಮ, ವ್ಯೋಮ ಮಂಡಲ ಅಂದರೆ ಗ್ರಹ ನಕ್ಷತ್ರಗಳನ್ನೊಳಗೊಂಡ ಒಂದು ನೈಸರ್ಗಿಕವಾದ ವ್ಯವಸ್ಥೆ ಎಂಬು ಅಂಶ ಗಮನಾರ್ಹವೆನಿಸುತ್ತದೆ ಇದರ ಸ್ವರೂಪವನ್ನು ಮುಂದಿಟ್ಟು ಕೊಂಡು ಮಾನವ ಕಟ್ಟಿಕೊಳ್ಳುವುದೆಲ್ಲ ಸಂಸ್ಕೃತಿ.

ಕೊನೆಯ ಮಾತು :

ಮಾನವನನ್ನು ಅರ್ಥಮಾಡಿಕೊಳ್ಳುವಲ್ಲಿ ಪ್ರಕೃತಿ ಮತ್ತು ಸಂಸ್ಕೃತಿ ನಡುವಿನ ಸಂಬಂಧವು ಯಾವಾಗಲೂ ಕುತೂಹಲಕಾರಿ ವಿಷಯವಾಗಿದೆ. ಹತ್ತೊಂಭತ್ತನೇ ಶತಮಾನದಲ್ಲಿ ಈ ಎರಡನ್ನು ಸಂಪೂರ್ಣ ವಿರೋಧಾಭಾಸಿಗಳೆಂದು ಪರಿಗಣಿಸಲಾಗುತ್ತಿತ್ತು ಪ್ರಕೃತಿಯು ಜೈವಿಕ, ಆನುವಂಶಿಕ ಮತ್ತು ಪ್ರೇರಣಾತ್ಮಕ ಶಕ್ತಿಗಳ ಸಂಗ್ರಹವಾಗಿದ್ದರೆ, ಸಂಸ್ಕೃತಿಯು ಸಾಮಾಜಿಕವಾಗಿ ಕಲಿತ, ಪರಿಸರದಿಂದ ರೂಪಿತವಾದ ವ್ಯವಸ್ಥೆಯಾಗಿತ್ತು. ಆದರೆ ಆಧುನಿಕ ಮಾನವಶಾಸ್ತ್ರ, ವಿಕಾಸಾತ್ಮಕ ಜೀವಶಾಸ್ತ್ರ ಮತ್ತು ತತ್ವಶಾಸ್ತ್ರಗಳು ಈ ದ್ವಿಭಾಗವನ್ನು ತೀವ್ರವಾಗಿ ಪ್ರಶ್ನಿಸಿವೆ. ಹಾಗಾಗಿ ಇಂದು ಇದರ ಕುರಿತು ಪ್ರಮುಖ ತೀರ್ಮಾನವೊಂದು ಹೊರಹೊಮ್ಮಿದೆ.ಪ್ರಕೃತಿ ಮತ್ತು ಸಂಸ್ಕೃತಿ ಪರಸ್ಪರ ಬೆಸೆಯಲಾಗದೆ ಒಂದಾಗಿವೆ. ಇವುಗಳನ್ನು ನಿಜವಾಗಿಯೂ ಬೇರ್ಪಡಿಸಲಾಗುವುದಿಲ್ಲ. ಸಂಸ್ಕೃತಿಯು ಪ್ರಕೃತಿಯಿಂದ ಹುಟ್ಟುತ್ತದೆ.

ಮಾನವನ ಸಂಸ್ಕೃತಿಯು ಯಾವುದೇ ಜೈವಿಕ ಆಧಾರವಿಲ್ಲದೆ ಹೊರಹೊಮ್ಮಲಾರದು. ನಮ್ಮ ದೊಡ್ಡ ಮೆದುಳು, ಸಂಕೀರ್ಣ ಭಾಷಾ ಸಾಮರ್ಥ್ಯ, ಸಾಮಾಜಿಕ ಬುದ್ಧಿಮತ್ತೆ ಮತ್ತು ಸಾಂಕೇತಿಕ ಚಿಂತನೆ ಇವೆಲ್ಲವೂ ಲಕ್ಷಾಂತರ ವರ್ಷಗಳ ವಿಕಾಸಾತ್ಮಕ ಪ್ರಕ್ರಿಯೆಯ ಫಲಿತಾಂಶಗಳಾಗಿವೆ. ಮಕ್ಕಳು ಭಾಷೆಯನ್ನು ಸ್ವಾಭಾವಿಕವಾಗಿ ಕಲಿಯುವ ಸಾಮರ್ಥ್ಯವು ಜನ್ಮಜಾತವಾದ ಜೈವಿಕ ರಚನೆಯಿಂದಲೇ ಬರುತ್ತದೆ ಈ ಜೈವಿಕ ಆಧಾರವಿಲ್ಲದಿದ್ದರೆ ಸಂಸ್ಕೃತಿಯು ಎಂದಿಗೂ ರೂಪುಗೊಳ್ಳುತ್ತಿರಲಿಲ್ಲ.

ಇದಲ್ಲದೆ, ಇತರ ಪ್ರಾಣಿಗಳಲ್ಲಿಯೂ ಸಂಸ್ಕೃತಿಯಂತಹ ವರ್ತನೆಗಳು

ಕಂಡುಬರುತ್ತವೆ. ಚಿಂಪಾಂಜಿಗಳು ಉಪಕರಣಗಳ ಬಳಕೆಯನ್ನು ಒಂದು ಗುಂಪಿನಿಂದ ಮತ್ತೊಂದಕ್ಕೆ ಹರಡುತ್ತವೆ, ಆದರೆ ಅದು ಆನುವಂಶಿಕವಲ್ಲ, ಬದಲಾಗಿ ಸಾಮಾಜಿಕ ಕಲಿಕೆಯ ಮೂಲಕ ಮೂಡಿ ಬಂದ ಕಲಿಕೆ. ಈ ಸಂಸ್ಕೃತಿ ಮಾನವನಿಗೆ ಮಾತ್ರ ಸೀಮಿತವಲ್ಲ, ಬದಲಿಗೆ ಅದು ಪ್ರಕೃತಿಯ ನಿರಂತರತೆಯ ಭಾಗವೆಂದು ತೋರಿಸುತ್ತದೆ. ಪ್ರಕೃತಿಯು ಸಂಸ್ಕೃತಿಯಿಂದ ರೂಪಿತವಾಗುತ್ತದೆ.

ಅದೇ ಸಮಯದಲ್ಲಿ, ನಾವು ಪ್ರಕೃತಿ ಎಂದು ಕರೆಯುವುದು ಸಂಪೂರ್ಣವಾಗಿ ಸಂಸ್ಕೃತಿಯಿಂದ ಮುಕ್ತವಲ್ಲ. ಮಾನವರು ಪರಿಸರವನ್ನು ತಮ್ಮ ಅಗತ್ಯಗಳಿಗೆ ತಕ್ಕಂತೆ ಬದಲಾಯಿಸುತ್ತಾರೆ. ಕೃಷಿ, ನಗರ ನಿರ್ಮಾಣ, ಕೋಟೆಗಳು ಇವೆಲ್ಲ ಕಟ್ಟುವ ಪ್ರಕ್ರಿಯೆಯ ಒಂದು ಭಾಗ. ಈ ಪ್ರಕ್ರಿಯೆಯು ಪರಿಸರವನ್ನು ಬದಲಾಯಿಸುವುದಷ್ಟೇ ಅಲ್ಲ, ಮುಂದಿನ ಪೀಳಿಗೆಯ ಆನುವಂಶಿಕ ಆಯ್ಕೆಯ ಮೇಲೂ ಪ್ರಭಾವ ಬೀರುತ್ತದೆ ಇನ್ನೊಂದು ಮುಖ್ಯ ಅಂಶವೆಂದರೆ, ಪ್ರಕೃತಿಯನ್ನು ನಾವು ಅರ್ಥೈಸಿಕೊಳ್ಳುವ ಮತ್ತು ವ್ಯಾಖ್ಯಾನಿಸುವ ರೀತಿಯೇ ಸಂಸ್ಕೃತಿಯಿಂದ ನಿರ್ಧರಿತವಾಗಿರುತ್ತದೆ. ಪಶ್ಚಿಮ ಸಂಸ್ಕೃತಿಯಲ್ಲಿ ಪ್ರಕೃತಿಯನ್ನು ಮಾನವನಿಂದ ಪ್ರತ್ಯೇಕ ಎಂದು ಭಾವಿಸಲಾಗುತ್ತದೆ, ಆದರೆ ಅನೇಕ ಸ್ಥಳೀಯ ಸಂಸ್ಕೃತಿಗಳಲ್ಲಿ ಉದಾಹರಣೆಗೆ ಹೇಳುವುದಾದರೆ ಆದಿವಾಸಿ ಸಮುದಾಯಗಳು.ಇಲ್ಲಿ ಮಾನವನು ಪ್ರಕೃತಿಯ ಹೊರಗಿನವನಲ್ಲ ಅದರ ಭಾಗವೇ ಆಗಿರುತ್ತಾನೆ. ಇಂದು ಮೂಡುತ್ತಿರುವ ಈ ಪ್ರಕೃತಿ ಮತ್ತು ಸಂಸ್ಕೃತಿಯ ನಡುವಿನ ಗೆರೆಯನ್ನು ಅಳಿಸಿಹಾಕುವುದು ಇಂದಿನ ಅಗತ್ಯ.ಇದನ್ನು ಒಪ್ಪಿಕೊಂಡಾಗ ಮಾತ್ರ ಮಾನವನ ಸ್ವರೂಪ, ಸಮಾಜ ಮತ್ತು ಪರಿಸರದ ಕುರಿತು ಆಳವಾದ, ಸಮತೋಲಿತ ಜ್ಞಾನ ಸಾಧ್ಯ. ಈ ದೃಷ್ಟಿಕೋನವು ಕೇವಲ ಶೈಕ್ಷಣಿಕ ಚರ್ಚೆಯಲ್ಲ. ಬದಲಿಗೆ ನಮ್ಮ ದೈನಂದಿನ ನೀತಿ, ಶಿಕ್ಷಣ ಮತ್ತು ಸಹಬಾಳ್ವೆಯ ಮೇಲೂ ಪ್ರಭಾವ ಬೀರುತ್ತದೆ ಎಂಬುದು ಗಮನಾರ್ಹ.

ಪರಾಮರ್ಶನ ಗ್ರಂಥಗಳು :

1.Alan H. Goodman, Deborah Heath ಮತ್ತು M. Susan Lindee (ಸಂಪಾದಕರು) – Genetic Nature/Culture: Anthropology and Science beyond the Two-Culture Divide (2003)

2.F. John Odling-Smee, Kevin N. Laland ಮತ್ತು Marcus W. Feldman – Niche Construction: The Neglected Process in Evolution (2003)

3.Peter J. Richerson ಮತ್ತು Robert Boyd – Not by Genes Alone: How Culture Transformed Human Evolution (2005)

4.Philippe Descola – Beyond Nature and Culture (2013)

5. ಶೇಷ ನವರತ್ನ .ನಾಲ್ಕು ವೇದಗಳು ಸಮಾಜ ಪುಸ್ತಕಾಲಯ ,ಸುಭಾಷ್ ರಸ್ತೆ, ಧಾರವಾಡ 2015

ಲೇಖಕರು : ಡಾ. ರಾಜಕುಮಾರ ಬಡಿಗೇರ್
ಸಹಾಯಕ ಪ್ರಾಧ್ಯಾಪಕರು
ಜೈನ್ (ಡೀಮ್ಡ್ –ಟು –ಬಿಯೂನಿವರ್ಸಿಟಿ)
ಬೆಂಗಳೂರು

***

ಕನ್ನಡಿಗರು ಯಶಸ್ವಿ ಉದ್ಯಮಿಗಳಾಗುವಲ್ಲಿ ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳು

ಆದಿ ಮಾನವನಿಂದ ಅರಣ್ಯವಾಸಿ ಆದಿವಾಸಿಗಳು ಬೆಂಕಿಯ ಬಳಕೆಯಿಂದ ಬೇಟೆ ಮತ್ತು ಆಹಾರ ಸಂಗ್ರಹಣೆಯ ಕಚ್ಚಾ ಆಹಾರವನ್ನು ಸುಟ್ಟು–ಬೇಯಿಸಿ ತಿನ್ನುವುದರ ಮೂಲಕ ಚಳಿಯಿಂದ ಬೆಚ್ಚನೆಯ ನೆಮ್ಮದಿಯ ಬದುಕನ್ನು ಕಂಡುಕೊಂಡರು. ಬೆಂಕಿಯ ಬಳಕೆಯು ಆದಿವಾಸಿಗಳಲ್ಲಿಯ ಸಂಸ್ಕೃತಿಯ ಚಲನೆಯನ್ನು ಇಮ್ಮಡಿಗೊಳಿಸಿತು. ಬೆಂಕಿಯ ಬಳಕೆಯೊಂದಿಗೆ ಕುರಿ–ಆಡು, ಎಮ್ಮೆ–ದನದ ಅಲೆಮಾರಿ ಪಶುಪಾಲನೆಯು ಆದಿವಾಸಿಗಳಿಗೆ ಆಹಾರದ ಭದ್ರತೆಯನ್ನು ಒದಗಿಸಿತು. ಬೆಂಕಿಯ ಸಹಾಯದಿಂದ ಪಶುವಿನ ಹಾಲಿನಿಂದ ಆದಿಮಾನವ ಬೆಣ್ಣೆ–ತುಪ್ಪ ಮಾಡುವುದರ ಮೂಲಕ ಪಕ್ಕಾ ಆಹಾರವನ್ನು ತಯಾರಿಸುವುದು ಮತ್ತು ಬಳಸುವುದನ್ನು ಕಲಿತ. ರಾತ್ರಿಯ ಬೆಳಕಿಗಾಗಿ ತಾತ್ಕಾಲಿಕ ಹಟ್ಟಿ/ರೊಪ್ಪ/ ಕೊಪ್ಪಗಳಲ್ಲಿ ತಮ್ಮ ದೈವಗಳ ಹೆಸರಿನಲ್ಲಿ ತುಪ್ಪದ ದೀಪ ಹಚ್ಚುವುದನ್ನು ಮುಂದುವರಿಸಿದ. ಪಶುಪಾಲನೆಯ ಹಂತವು ಆದಿ ಮಾನವನಿಗೆ ಹೆಚ್ಚಿನ ಭದ್ರತೆಯನ್ನು ನೀಡಿತು. ಕುಂಬ್ರಿ/ಪೋಡು ಬೇಸಾಯವು ಕಾಲಾಂತರದಲ್ಲಿ ಸ್ಥಾಯಿ ಬೇಸಾಯಕ್ಕೆ ವಾಲಿ ಅಲೆಮಾರಿ ಆದಿವಾಸಿಗಳು ಪೋಡು ನಿವಾಸಿಗಳಾದರು. ಕುಂಬ್ರಿ/ಪೋಡು ಬೇಸಾಯವು ಅಗತ್ಯ ಆಹಾರ ಧಾನ್ಯಗಳನ್ನು ಬೆಳೆಯುತ್ತ ಅಭಿವೃದ್ಧಿ ಸಾಧಿಸಿದ ಪರಿಣಾಮ ಹತ್ತಾರು ವೃತ್ತಿಗಳು ಉಪವೃತ್ತಿಗಳಾಗಿ ಉದಯಗೊಂಡವು.

ವೃತ್ತಿ ಕೌಶಲ್ಯಗಳ ಆಧಾರದ ಮೇಲೆ ಆದಿವಾಸಿಗಳು ವಿಭಿನ್ನ ಹೆಸರುಗಳಿಂದ ಗುರುತಿಸಲ್ಪಟ್ಟರು. ಸರ್ವಚೇತನವಾದಿಗಳು ಆದಿವಾಸಿಗಳಾಗಿ ಮುಂದುವರಿದರು.

ಸಮಾಜಮುಖಿಯಾದ ಜನರು ತಮ್ಮ ದೈನೇಸಿ ಬದುಕಿಗೆ ಬೇಕಾದ ಎಲ್ಲ ಅನುಕೂಲಗಳನ್ನು ತಾವೇ ಕಂಡುಕೊಂಡರು. ಮುಂದುವರೆದು ಅವುಗಳು ಕುಲವೃತ್ತಿಗಳಾಗಿ ಗುರುತಿಸಿಕೊಂಡವು. ದಿನಕಳೆದಂತೆ ಕುಂಬಾರಿಕೆ, ಚಮ್ಮಾರಿಕೆ, ಕಸೂತಿ ಕರಕುಶಲ ವಸ್ತುಗಳ ತಯಾರಿಕೆ, ನೇಕಾರಿಕೆ, ಗಾಣಗಾರಿಕೆ, ಬಡಗಿತನ ಹೀಗೆ ಅದೆಷ್ಟೋ ಪಾರಂಪರಿಕ ವೃತ್ತಿ, ಕಾಯಗಳು ಒಂದು ಕಾಲಕ್ಕೆ ವೈಭವಯುತವಾಗಿ ತನ್ನ ಸುವರ್ಣಕಾಲ ಮೆರೆದಿದ್ದವು. ಆದರೆ ಯಾವಾಗ ಆಧುನಿಕತೆಯ ಗಾಳಿ ಬೀಸಿತೋ ನಿಧಾನವಾಗಿ ಅವೆಲ್ಲವುಗಳು ಮೂಲೆಗುಂಪಾದವು ಇನ್ನು ಮುಂದೆ ಆದದ್ದೆಲ್ಲಾ ಭಾರಿ ಆಧುನಿಕತೆಯ ಬದಲಾವಣೆ. ಹಾಗಾದರೆ ಮುಂದೇನಾಯ್ತು? ಕನ್ನಡಿಗರು ಉದ್ಯಮಶೀಲತೆಯಲ್ಲಿ ಯಾಕೆ ಹಿಂದೆ ಬಿದ್ದರು, ಹಾಗಾದರೆ ಮುಂದಿನ ದಿನಗಳಲ್ಲಿ ಕನ್ನಡಿಗರನ್ನು ಯಶಸ್ವಿ ಉದ್ಯಮಿಗಳನ್ನಾಗಿ ಮಾಡಲು ಭವಿಷ್ಯದ ಚಿಂತನೆ ಮಾಡುವ ಜರೂರು ನಮ್ಮ ಮೇಲಿದೆ.

ಹೌದು ಒಂದು ಕಾಲಕ್ಕೆ ಕೊಡು–ಕೊಳ್ಳುವಿಕೆಯಲ್ಲಿ ನಮ್ಮ ದೈನೇಸಿ ಬದುಕು ಸಾಗುತ್ತಿತ್ತು ಯಾವುದೇ ಒಂದು ವಸ್ತುವಿನ ಉತ್ಪಾದನೆಯು ಅದಕ್ಕೆ ಎದುರಾಗಿ ತಮಗೆ ಬೇಕಾದ ವಸ್ತು ಪಡೆಯುವುದು, ಅಗತ್ಯಕ್ಕೆ ತಕ್ಕನಾದ ವಸ್ತುಗಳು ಮಾರಾಟವಾಗುತ್ತಿದ್ದವು ನಿತ್ಯದ ಬದುಕಿಗೆ ಯಾವ ಕೊರತೆಯೂ ಆಗಿರಲಿಲ್ಲ. ಆದರೆ ಇಂತಹ ವೃತ್ತಿಗಳ ಮೇಲೆ ಯಾವಾಗ ಜಾಗತೀರಣದ ಪ್ರಭಾವ ಹೆಚ್ಚಾಗಿ, ಆಧುನಿಕತೆಯೆಂಬ ಬಣ್ಣದ ಬೀಸಣಿಕೆ ಬೀಸಿತೋ ಆಗಲೇ ಆ ವೃತ್ತಿಗಳೆಲ್ಲವೂ ವಾಣಿಜ್ಯಮಯವಾದವು. ಉದಾ: ಪಾದರಕ್ಷೆಗಳನ್ನು ಹೊಲಿಯುವ ಒಂದು ಸಮುದಾಯವೇ ಇತ್ತು ಆದರೆ ಅದನ್ನು ಇಂದು ಬೃಹತ್ ಕಂಪನಿಗಳು ಬ್ರ್ಯಾಂಡ್ ಹೆಸರನ್ನಿಟ್ಟುಕೊಂಡು, ಕಲಾವಿದರಿಂದ ಜಾಹೀರಾತು ಪ್ರದರ್ಶಿಸಿ ಬಿಸಿನೆಸ್(ವ್ಯಾಪಾರ)ಮಾಡಿಕೊಂಡರೋ ಆಗಲೇ ತಮ್ಮ ವೃತ್ತಿಯಿಂದ ಆ ಸಮುದಾಯಗಳು ಹೊರಬಿದ್ದವು. ಇದು ಕೇವಲ ಒಂದು ಉದ್ಯಮದ ಕಥೆಯಲ್ಲ ಇಂತಹ ಅನೇಕ ಉದ್ಯಮಗಳಿವೆ ಆದರೆ ಇಲ್ಲಿ ಅದನ್ನು ಉದಾಹರಣೆಗಾಗಿ ಹೇಳಬೇಕಾಯಿತು.

ಕನ್ನಡಿಗರು ನಾವು ವಿಶಾಲ ಹೃದಯವಂತರು. ಸಹಿಷ್ಣುತವಾದಿಗಳು ಎಲ್ಲವನ್ನು ಒಪ್ಪಿಕೊಂಡು ಸಾಗುತ್ತೇವೆ. ಹಾಗಾದರೆ ಮುಂದೇನು? ನಾವು ಎಲ್ಲಿದ್ದೇವೆ, ಏನು ಮಾಡುತ್ತಿದ್ದೇವೆ ನಮ್ಮ ಮೂಲ ಯಾವುದು ಇದನ್ನು ಮೊದಲು ಅರಿಯಬೇಕಿದೆ. ಈ ಹಿಂದೆ ಹಳ್ಳಿಗಳಲ್ಲಿ ಉತ್ಪಾದನೆಯಾಗುತ್ತಿದ್ದ ಯಾವುದೇ ವಸ್ತುವಾಗಲಿ ಅದು ಹಳ್ಳಿಗಳಿಂದ ನಗರಗಳಿಗೆ ಹೋಗುತ್ತಿತ್ತು. ಆದರೆ ಇಂದು ನಮಗೆ ಅಲ್ಲಿಂದಲೇ ಇಲ್ಲಿ ಉತ್ಪಾದನೆಯಾಗುವ ವಸ್ತುಗಳನ್ನು ಕೊಂಡು ತರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಅದಕ್ಕಾಗಿಯೇ ನಾವು ಇನ್ನೂ ಹಿಂದೆ ಉಳಿಯಲು ಕಾರಣವೆಂಬುದನ್ನು ಮೊದಲು ಮನಗಾಣಬೇಕಾಗಿದೆ. ಅವಕಾಶಗಳ ಅರಿವಿನ ಕೊರತೆ ಹೆಚ್ಚಾಗುತ್ತಿದೆ. ಮೊದಲೆಲ್ಲಾ ಒಂದು ಜಮೀನಿನಲ್ಲಿ ಕಾಯಕ ಮಾಡುವಾಗ ಕಳೆ ತೆಗೆಯಲು, ಬೆಳೆ ತೆಗೆಯಲು ಏಳರಿಂದ ಎಂಟು ಜನ ಅದಕ್ಕಿಂತ ಹೆಚ್ಚು ಜನರು ಕಾಯಕ ನಿರ್ವಹಿಸುತ್ತಿದ್ದರು ಆದರೆ ಈಗ ಒಂದೇ ಒಂದು ಯಂತ್ರ ಆ ಏಳೆಂಟು ಜನರ ಕಾಯಕವನ್ನು ನಿರ್ವಹಿಸುತ್ತಿದೆ. ಉದಾ: ಟ್ರ್ಯಾಕ್ಟರ್ ಬಿತ್ತನೆ ಇತ್ಯಾದಿ. ಹಾಗಾದರೆ ನಾವು ಏನು ಮಾಡಬೇಕು? ಚನ್ನಾಗಿ ಓದಿ ಪದವಿ ಪಡೆದರೆ ಉದ್ಯಮ ದೊರಕೀತೇ? ಅಥವಾ ಪದವಿ ಪಡೆದವರೆಲ್ಲರಿಗೂ ಉದ್ಯಮ ಸಿಕ್ಕೇ ಸಿಗುತ್ತದೆಂಬ ಭರವಸೆ, ಕಾನೂನುಗಳಿವೆಯೇ, ಇಲ್ಲ ಇಲ್ಲವೇ ಇಲ್ಲ. ಯಾಕೆಂದರೆ ವಿದ್ಯಾವಂತರ ನಿರುದ್ಯೋಗವೂ ಹೆಚ್ಚಿ ಇಂದು ತುಂಬಿ ತುಳುಕಾಡುತ್ತಿದೆ. ಇಂತಹ ಹೊಸ್ತಿಲಿನಲ್ಲಿ ನಾವು ನಮ್ಮ ಮೂಲ ಮತ್ತು ನಮ್ಮ ಪರಂಪರೆ ಕಾಯಕಗಳ ಕುರಿತಾಗಿ ಹುಡುಕಬೇಕು. ಕನ್ನಡಿಗರು ಹಾಗಾದರೆ ಉದ್ಯಮಶೀಲತೆಯಲ್ಲಿ ಎಲ್ಲಿ ಎಡವುತ್ತಿದ್ದಾರೆ ಎಂದರೆ ಆರ್ಥಿಕ ನೆರವಿನ ಕೊರತೆ ಮತ್ತು ಬೆಂಬಲ ವ್ಯವಸ್ಥೆ ಇರದ ಕಾರಣಕ್ಕಾಗಿ ಹಿಂದೆ ಬೀಳುತ್ತಿದ್ದಾರೆ. ಅದರಲ್ಲೂ ಶಾಲಾ ಮತ್ತು ಕಾಲೇಜು ಶಿಕ್ಷಣದಲ್ಲಿ ಉದ್ಯಮಶೀಲತೆ ಕುರಿತ ಕಲಿಕೆ ಇಲ್ಲದಾಗಿದೆ.

ಕನ್ನಡಿಗರೆಂದು ಬಂದಾಗ ಕನ್ನಡ ಮಾಧ್ಯಮದಲ್ಲಿ ಕಲಿತು ದೊಡ್ಡ ಉದ್ಯಮ ಸ್ಥಾಪಿಸಲು ಮಾರ್ಗದರ್ಶನ ಸಿಗದೆ ಹೋದಾಗಲೂ ಇಂತಹ ಸಮಸ್ಯೆಯನ್ನು ಎದುರಿಸಬೇಕಾಗಿ ಬರಬಹುದು. ಹೊರ ರಾಜ್ಯ, ದೇಶದವರು ಬಂದು ದೊಡ್ಡ ದೊಡ್ಡ ಉದ್ಯಮ ಸ್ಥಾಪಿಸುತ್ತಿರುವುದು ಕನ್ನಡಿಗರು ಹಿಂದೆ ಬೀಳಲು

ಕಾರಣವಾಗಬಹುದು. ಆದರೆ ನಮ್ಮ ಪೂರ್ವಜರು ಹೇಗೆ ಬದುಕನ್ನು ಕಟ್ಟಿಕೊಂಡಿದ್ದರೆಂಬುದನ್ನು ನಾವು ಮೆಲುಕು ಹಾಕಬೇಕಾಗುತ್ತದೆ. ಆದರೆ ಇದು ಶಾಶ್ವತವಾದಂತಹ ಸಮಸ್ಯೆ ಏನು ಅಲ್ಲ. ಇದರಿಂದ ಹೊರಬಂದು ಕನ್ನಡಿಗರನ್ನು ಯಶಸ್ವಿ ಉದ್ಯಮಿಗಳನ್ನಾಗಿ ಮಾಡಲು ಅನೇಕ ದಾರಿಗಳಿವೆ ಆದರೆ ಅವುಗಳನ್ನು ಕಂಡುಕೊಳ್ಳುವಲ್ಲಿ ನಾವು ಎಡವುತ್ತಿದ್ದೇವೆ, ಮೊದಲಿಗೆ ಅದನ್ನು ಕಂಡುಕೊಳ್ಳಬೇಕು. ಈಗಾಗಲೇ ಸಣ್ಣದಾಗಿ ಉದ್ಯಮಗಳನ್ನು ಸ್ಥಾಪಿಸಿ ದೊಡ್ಡಮಟ್ಟಕ್ಕೆ ಹೆಸರು ಮಾಡುತ್ತಿರುವ ಕನ್ನಡಿಗರ ಪ್ರಕರಣಗಳನ್ನು ನಾವು ಪತ್ತೆ ಹಚ್ಚಿ ಸಮಾಜಮುಖಿಯಾಗಿಸಬೇಕು. ಇಂತಹದೇ ಒಂದಷ್ಟು ಪ್ರಕರಣಗಳಿವೆ ಅದರಲ್ಲಿ ಕೆಲವುಗಳನ್ನು ಇಲ್ಲಿ ಹಂಚಿಕೊಳ್ಳಬಯಸುತ್ತೇನೆ.

ಗಾಣದ ಉದ್ಯಮ ಒಂದು ಕಾಲಕ್ಕೆ ಗಾಣದಿಂದ ಎಣ್ಣೆ ತೆಗೆದು ಊರೂರಿಗೂ ಹೋಗಿ ಅಗತ್ಯ ಅಡುಗೆ ಎಣ್ಣೆ ಮಾರಾಟ ಮಾಡಿ ಬಂದು ಜೀವನ ಸಾಗಿಸುತ್ತಿದ್ದರು. ಕೇವಲ ಆ ಸಮುದಾಯ ಬದುಕಿದ್ದು ಮಾತ್ರವಲ್ಲ ಗಾಣಕ್ಕೆ ಹಾಕುವ ಕಾಳು ಹಸನ ಮಾಡಲು ನೆರೆಹೊರೆಯ ಹೆಣ್ಣುಮಕ್ಕಳ ಸಹಾಯ ಅಂದರೆ ಅವರಿಗೂ ಅಲ್ಲಿ ಉದ್ಯೋಗ ದೊರಕುತ್ತಿತ್ತು, ಗಾಣಕ್ಕೆ ಎತ್ತು ಊಡಿ ಆಡಿಸಲು ಪುರುಷರಿಗೆ ಕೆಲಸ ಒದಗುತ್ತಿತ್ತು, ಸ್ಥಳೀಯವಾಗಿ ರೈತರು ಬೆಳೆದ ಎಣ್ಣೆ ಕಾಳುಗಳನ್ನು ಇವರೇ ಕೊಂಡುಕೊಳ್ಳುತ್ತಿದ್ದರು, ಅದರಿಂದ ಬರುವ ಹಿಂಡಿಯನ್ನು ಹಸುವಿಗೆ ಇಡುತ್ತಿದ್ದರಿಂದ ಶುದ್ಧ ಹಾಲು ದೊರಕುತ್ತಿತ್ತು. ಎತ್ತುಗಳ ಸಂತತಿ ಉಳಿಯುವುದರಿಂದ ಅವುಗಳಿಂದ ಸಂಗ್ರಹಿತವಾದ ಗೊಬ್ಬರ ಹೊಲಕ್ಕೆ ಚೆಲ್ಲುವುದರಿಂದ ನೈಸರ್ಗಿಕ ಬೆಳೆ ಸಿಗುತ್ತಿತ್ತು ಹೀಗೆ ಒಂದು ವೃತ್ತಿ ಸಮಾಜದ ಸಂಪರ್ಕಕೊಂಡಿಯಾಗಿತ್ತು. ಆದರೆ ಆಧುನಿಕತೆಯಲ್ಲಿ ಆದ ಬದಲಾವಣೆ, ಯಾಂತ್ರಿಕೃತ ಜಗತ್ತು ಕನ್ನಡಿಗರ ಕಾಯಕ ಮತ್ತು ಬದುಕು ಎರಡನ್ನೂ ಕಸಿಯಿತು. ಇನ್ನೇನು ಇಲ್ಲಿ ಉತ್ಪಾದನೆಯಾಗುವ ವಸ್ತುಗಳು ನಗರಗಳಲ್ಲಿನ ಜರಿಗೆ ಸೇರಬೇಕಾದ ವಸ್ತುಗಳನ್ನು ದೊಡ್ಡ ದೊಡ್ಡ ಉದ್ಯಮಿಗಳು ಕಡಿಮೆ ಬೆಲೆಗೆ ಕೊಂಡುಕೊಂಡು ದುಬಾರಿ ಬೆಲೆಗೆ ಮಾರಾಟ ಮಾಡಿ ಅವರು ಮಾಲೀಕರಾದರು. ನಿಜವಾಗಿ ಮಾಲೀಕರ ಹಕ್ಕು ಯಾರದ್ದಾಗಿರಬೇಕಾಗಿತ್ತು ಎಂದರೆ ಅದು ವಸ್ತು

ಉತ್ಪಾದಕರದ್ದಾಗಿರಬೇಕಾಗಿತ್ತು. ಆದರೆ ನಾವಿಂದು ಎತ್ತ ಸಾಗುತ್ತಿದ್ದೇವೆ? ನೇಕಾರಿಕೆ ಅಂದರೆ ಬಟ್ಟೆ ನೇಯುವ ಮಗ್ಗಗಳ ಜಾಗಕ್ಕೆ ಯಂತ್ರ ಬಂದಾಗ ಅವರೂ ತಮ್ಮ ವೃತ್ತಿಯಿಂದ ಹೊರ ನಡೆದರು. ಕಮರ್ಷಿಯಲ್ ಉದ್ಯೋಗಗಳಾಗಿ ಅವುಗಳು ಇಂದು ತಲೆ ಎತ್ತಿವೆ ಹಾಗಾದರೆ ಇದಕ್ಕೆ ಪರಿಹಾರವೇ ಇಲ್ಲವಾ, ಖಂಡಿತ ಇದೆ. ಈಗಾಗಲೇ ಕನ್ನಡಿಗರು ಎಚ್ಚೆತ್ತುಕೊಳ್ಳುತ್ತಿದ್ದಾರೆ. ನನ್ನ ಅಧ್ಯಯನದ ಸಂಶೋಧನೆ ಪ್ರಕಾರ ಮೂಲ ಗುಡಿ ಕೈಗಾರಿಕಾ ವೃತ್ತಿಗಳೆಲ್ಲವೂ ನಾಶವಾಗಿವೆ, ಮೂಲ ವೃತ್ತಿಗೈಯ್ಯುವ ಪರಿಕರಗಳೆಲ್ಲವೂ ಪೂಜೆಗೆ ಸೀಮಿತವಾಗಿವೆ ಎಂಬ ಮಾತುಗಳು ಕೇಳಿರುತ್ತಿದ್ದವು. ಇನ್ನೇನು ಇತ್ತೀಚಿನ ಸಂಶೋಧನೆಗಳ ಪ್ರಕಾರ ಈಗ ಇರುವ ಎಲ್ಲ ಸಂಪನ್ಮೂಲಗಳು ಅಂದರೆ ಪೆಟ್ರೋಲಿಯಂ, ವಿದ್ಯುತ್ ಇತ್ಯಾದಿ ಇವೆಲ್ಲವುಗಳೂ ಕಳೆದುಹೋಗುವ ಸಂಪನ್ಮೂಲಗಳು ಇವೆಲ್ಲ ನಾಶವಾದರೆ ನಾಳೆ ಹೇಗೇ ಬದುಕುವುದು, ಆಧುನಿಕತೆಗೆ ಒಗ್ಗಿಕೊಂಡವರ ಪಾಡು ಏನು ಎಂಬುದನ್ನು ಮನಗಂಡು ವೃತ್ತಿ ಅವುಗಳ ಕುರಿತು ಮಾಹಿತಿ ಕಲೆಹಾಕಲು ಸಂಶೋಧನೆ ಕೈಗೊಂಡಾಗ ನನ್ನ ಕಣ್ಣಿಗೆ ಕಂಡದ್ದು ಮೂಲ ಎತ್ತಿನ ಗಾಣ ಆಡಿಸುವವರು. ಇಂತವರೇ ಇಂತಹ ವೃತ್ತಿ ಮಾಡಬೇಕೆಂಬ ಯಾವ ಕಟ್ಟುಪಾಡುಗಳು, ಕಾನೂನುಗಳಿಲ್ಲ, ಯಾರು ಯಾವ ಕಾಯಕವನ್ನಾಗಲೀ ಮಾಡಬಹುದು. ಹೀಗಿರುವಾಗ ಸುಮಾರು ಕರ್ನಾಟಕದಾದ್ಯಂತ 80ರಷ್ಟು ಗಾಣಗಳು ಮತ್ತೆ ಉಸಿರಾಡುತ್ತಿವೆ ಅದು ಪಾರಂಪರಿಕ ಶೈಲಿಯಲ್ಲಿ ಎಂಬುದು ಕುತೂಹಲಕಾರಿ ವಿಷಯ.

ಗಾಣದ ವೃತ್ತಿ ಪ್ರಾರಂಭ ಮಾಡಿರುವವರಿದ್ದಾರೆ ಹಾಗಾದರೆ ಯಾವುದೇ ಉದ್ಯೋಗ ಸಿಗದೆ ಈ ವೃತ್ತಿಯಲ್ಲಿ ಅವರು ತೊಡಗಿಕೊಂಡಿರಬಹುದಾ? ಇದರಿಂದ ತಮ್ಮ ಕುಟುಂಬವನ್ನಾದರೂ ಸಲಹಲು ಸಾಧ್ಯವೇ? ಏಕೆಂದರೆ ಒಂದು ಸ್ವಿಚ್ ಹಾಕಿದರೆ ಎಣ್ಣೆ ಬರುವ ಮಷೀನ್‌ಗಳ ಮುಂದೆ ಇದೆಲ್ಲ ಹೇಗೆ ಸಾಧ್ಯ ಎಂಬ ಪ್ರಶ್ನೆಗಳನ್ನಿಟ್ಟುಕೊಂಡು ಅವರನ್ನು ಸಂದರ್ಶಿಸಿದಾಗ ಸಿಕ್ಕ ಮಾಹಿತಿ ಏನೆಂದರೆ ಈ ವೃತ್ತಿಯಲ್ಲಿ ತೊಡಗಿರುವವರು ಯಾರೂ ಸಾಕ್ಷರರ್ಹರಲ್ಲದವರೇನೂ ಅಲ್ಲ ಅವರೆಲ್ಲ ಎಂಬಿಎ, ಬಿಬಿಎಂ, ಇಂಜಿನಿಯರಿಂಗ್ ನಂತಹ ಪದವೀಧರರು.

ಯಾಕೆ ನೀವು ಮನಸು ಮಾಡಿದರೆ ಒಳ್ಳೆ ಕಂಪನಿಯಲ್ಲಿ ದುಡಿಯಬಹುದಿತ್ತು ಎಂದಾಗ ಹೌದು ನಾವು ದುಡಿದೆವು. ನೆಮ್ಮದಿಯಿಲ್ಲದ ಬದುಕನ್ನು ಜೀವಿಸಿದೆವು, ಮನೆಯಿಂದ ದೂರವಿದ್ದು ಇನ್ಯಾರದೋ ಕೈಕೆಳಗೆ ಆಳುಗಳಾಗಿ ಆದರೆ ನಮಗೆ ಕೋವಿಡ್ ಸಂಧರ್ಭದಲ್ಲಿ ಲಾಕ್‌ಡೌನ್ ಒಂದೊಳ್ಳೆ ಪಾಠ ಕಲಿಸಿತು. ನಮ್ಮದೇ ಸ್ವತಃ ಜಮೀನು ಇದ್ದು ನಾನ್ಯಾಕೆ ಇನ್ನೊಂದು ಕಡೆ ಹೋಗಬೇಕೆಂದು ಇದ್ದಲ್ಲಿಯೇ ಕಡಿಮೆ ಬಂಡವಾಳ ಹಾಕು ಒಂದು ಗಾಣ ಹಾಕಿದವರು ಇಂದು ಒಬ್ಬೊಬ್ಬರು 6 ಗಾಣಗಳು ಮಾಡಿಕೊಂಡು ಸ್ಥಳೀಯರಿಗೆ 5–6 ಜನರಿಗೆ ಉದ್ಯೋಗ ಕಲ್ಪಿಸಿಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಸ್ವದೇಶಿ ಉತ್ಪನ್ನಗಳ ಬಳಕೆ ಮತ್ತು ಉಳಿಕೆಗಾಗಿ ಪಣ ತೊಟ್ಟು ದೊಡ್ಡ ಇಂಡಸ್ಟ್ರಿಯಲ್ ಉದ್ಯಮಿಗಳಿಗೆ ಸೆಡ್ಡು ಹೊಡೆಯುವಂತೆ ಸ್ಥಳೀಯ ವೃತ್ತಿಗಳಿಗೆ ಜೀವ ನೀಡಿ ಮತ್ತೆ ಉದ್ಯಮದಲ್ಲಿ ತೊಡಗಿಕೊಂಡಿರುವ ಇಂದಿನ ಯುವಕರನ್ನು ಕಾಣಬಹುದು. ಅಷ್ಟಲ್ಲದೆ ಈ ಉದ್ಯಮ ಅಥವಾ ಸ್ಥಳೀಯ ಯಾವುದೇ ಉದ್ಯಮ ಕೈಗೊಳ್ಳುವವರಿಗೆ ನಮ್ಮ ಪ್ರೋತ್ಸಾಹವಿದೆ ಎಂಬುದಾಗಿಯೂ ಅವರು ಹೇಳಿದ್ದು ಕನ್ನಡಿಗರು ಬದುಕು ಕಟ್ಟಿಕೊಳ್ಳುವ ಭರವಸೆಯಲ್ಲಿದ್ದಾರೆ ಆದರೆ ಅವರಿಗೆ ಸರಕಾರವು ಪ್ರೋತ್ಸಾಹಿಸಿ ಬೆಂಬಲಿಸಬೇಕಿದೆ. ನಂತರ ಇನ್ನೊಂದು ಕಂಬಳಿ ನೇಕಾರ ಉದ್ಯಮವು ಮತ್ತೆ ತಲೆ ಎತ್ತುತ್ತಿದೆ, ಕಂಬಳಿ ನೇಯುವಿಕೆಗೂ ನಿಯಮಗಳಿವೆ. ಸಾಂಸ್ಕೃತಿಕತೆಗೆ ಹೆಚ್ಚಿನ ಆಧ್ಯತೆ ನೀಡುವ ಕನ್ನಡಿಗರಿಗೆ ಕಂಬಳಿಯ ಆಚರಣೆಯ ಹಿಂದೆಯೂ ಒಂದು ನಂಬಿಕೆಯಿದ್ದು ಅಂಗಡಿಗಳಲ್ಲಿ ಸಿಗುವ ಕಂಬಳಿ ಹೇಗೆ ಮಾಡಿರುತ್ತಾರೋ ಏನೋ ಎಂಬುದಾಗಿ ಮೂಲ ಕಂಬಳಿ ನೇಕಾರರ ಮನೆಗಳಿಗೆ ಭೇಟಿ ನೀಡಿ ಕಂಬಳಿ ನೇಯ್ದುಕೊಡುವಂತೆ ಕೇಳುತ್ತಿದ್ದು ಇಂದು ಅವರು ಮೂಲ ವೃತ್ತಿಯತ್ತ ಮುಖ ಮಾಡುತ್ತಿದ್ದಾರೆ ಇಂತಹ ಅದೆಷ್ಟೋ ಉದ್ಯಮಗಳನ್ನು ಮರುಸ್ಥಾಪಿಸುವ ಆಶಯ ಹೊತ್ತವರಿಗೆ ಸರಕಾರ ಪ್ರೋತ್ಸಾಹಿಸಿ ಅವರಿಗೆ ಅನುಕೂಲಗಳನ್ನು ಮಾಡಿಕೊಡಬೇಕಿದೆ ಹಾಗಾದಾಗ ಮಾತ್ರ ಕನ್ನಡಿಗರು ಮುಂದಿನ ದಿನಗಳಲ್ಲಿ ಯಶಸ್ವಿ ಉದ್ಯಮಿಗಳಾಗಿ ಗುರುತಿಸಿಕೊಳ್ಳಲು, ಬೆಳೆಯಲು ಸಹಕಾರಿಯಾಗುತ್ತದೆ.

ಉಪಸಂಹಾರ

ಜ್ಞಾನಾಧಾರಿತ ವಲಯಗಳಲ್ಲಿ ಕನ್ನಡಿಗ ಉದ್ಯಮಿ ಎಂಬ ಗುರುತೊಂದನ್ನು ಗಟ್ಟಿಯಾಗಿ ರೂಪಿಸುವ ಅವಕಾಶ ಖಂಡಿತ ನಮ್ಮ ಮುಂದೆ ಇದೆ. ಇನ್ನು ಶುರುವಾಗಲಿರುವ ಉದ್ಯೋಗಪರ್ವವು ಮುಂದೆ ಜಾಗತೀಕರಣದ ಸ್ವರೂಪವನ್ನು ಬದಲಿಸಲು ಇಡುವ ಹೊಸ ಹೆಜ್ಜೆ ಮತ್ತು ಇಟ್ಟಿಗೆ ಎಂದೇ ಹೇಳಬಹುದು. ಕನ್ನಡಿಗರು ಇತಿಹಾಸದುದ್ದಕ್ಕೂ ಭಾರತವಷ್ಟೇ ಅಲ್ಲದೆ ದೂರದ ಹೊರದೇಶಗಳವರೆಗೂ ತಮ್ಮ ಯಶಸ್ವೀ ಕೀರ್ತಿಪತಾಕೆ ಹಾರಿಸಿದ ನಿದರ್ಶನಗಳಿವೆ ಹೀಗಿದ್ದೂ ಸ್ವಾತಂತ್ರ್ಯ ಭಾರತದ ಉದ್ಯಮಿಗಳ ಪಟ್ಟಿಯಲ್ಲಿ ಯಾಕೆ ಭಾರತೀಯರ ಹೆಸರು ಅಷ್ಟಾಗಿ ಕೇಳಿಬರುವುದಿಲ್ಲ ಎಂಬ ಪ್ರಶ್ನೆ ಹಲವು ಬಾರಿ ನಮ್ಮನ್ನು ಕಾಡಲೂಬಹುದು. ಯಾಕೆಂದರೆ ಒಂದು ಉದ್ಯೋಗ ಸಿಕ್ಕಿ ತಿಂಗಳ ಸಂಬಳ ಕಂಡು ಅದರಲ್ಲೇ ಜೀವಿಸುತ್ತೇನೆಂಬ ನಮ್ಮ ಕನ್ನಡಿಗರ ಗೌರವಾನ್ವಿತ ಬದುಕು ನಮ್ಮದಿಷ್ಟೇ ಎಂಬ ಮಾನಸಿಕತೆಯು ನಮ್ಮನ್ನು ಇಲ್ಲಿವರೆಗೂ ತಂದು ನಿಲ್ಲಿಸಿದೆ ಎನಿಸುತ್ತದೆ. ಬದಲಾವಣೆಯು ಹಾದಿಗೆ ಹೊಸ ಹೆಜ್ಜೆ ಇರಿಸಲು ಸಣ್ಣದಾಗಿಯಾದರೂ ಉದ್ಯಮ ಸ್ಥಾಪಿಸುವ ದಾಪುಗಾಲು ಇಡಬೇಕಿದೆ. ಅದಕ್ಕಾಗಿ ಸರಕಾರ, ಎನ್‌ಜಿಓ ನಂತಹ ನಂತಹ ಸಂಸ್ಥೆಗಳು, ಸ್ಥಳೀಯ ಆಡಳಿತಾಂಗಗಳು ಇವೆಲ್ಲವುಗಳೂ ಉದ್ಯಮ ಸ್ಥಾಪಿಸುವ ಆಲೋಚನೆಯಿರುವವರಿಗೆ ಸಹಾಯ ಹಸ್ತ ನೀಡಬೇಕಿದೆ. ಸಣ್ಣ ಉದ್ಯಮದಾರರಿಗೆ ಪ್ರೋತ್ಸಾಹ ನೀಡಬೇಕಾಗಿದೆ. ಯಶಸ್ವೀ ಉದ್ಯಮಿಗಳಾಗಲು ನಾವುಗಳು ಗಾವುದ ಗಾವುದ ಸಾಗಬೇಕಿದೆ ಆದರೆ ಆ ಕಾಲವೂ ದೂರ ಸರಿಯದಂತೆ ಹೊಸ ಉದ್ಯೋಗಕ್ರಾಂತಿಯನ್ನು ನಾವುಗಳು ಸೃಷ್ಟಿಸಿಕೊಳ್ಳಬೇಕಿದೆ. ನಾಲ್ಕು ಹಸುಗಳನ್ನು ಮಾಡಿದರೆ ಅದರಿಂದ ತೆಗೆದ ಹಾಲನ್ನು ಸ್ಥಳೀಯವಾಗಿ ಮಾರಾಟ ಮಾಡಿದರೂ ನಮ್ಮ ಬದುಕು ಸಾಗುತ್ತದೆ ಅವುಗಳ ಸಂತತಿಯೂ ಉಳಿಯುತ್ತದೆ. ಹೀಗಿರುವಾಗ ನಾನು ಎಷ್ಟೊಂದು ಓದಿಕೊಂಡಿದ್ದೀನಿ ದನ ಕಾಯೋ ಕೆಲಸ ಮಾಡ್ಬೇಕಾ? ಅನ್ನೋ ಯೋಚನೆ ನಮ್ಮ ತಲೆಯಲ್ಲಿ ತಂದುಕೊಂಡಿದ್ದಾದರೆ ಖಂಡಿತ ನಮ್ಮಂತಹ ಮೂರ್ಖರು ಇನ್ನೆಲ್ಲೂ ಸಿಗರು. ಏಕೆಂದರೆ ನಾವು ಹಸುಗಳ ಸಾಕಾಣಿಕೆಯಿಂದ ಇರುವ ಲಾಭ ಅರಿಯದೆ

ಹೋದರೆ ಹೇಗೆ? ಕೇವಲ ಹಸುಗಳು ಸಾಕುವುದು ಉದ್ಯಮ ಎಂಬುದಲ್ಲ, ಅದರಿಂದಾಚೆಗೆ ಸಾಕಷ್ಟು ಉದ್ಯೋಗ ಸೃಷ್ಟಿಸಿಕೊಳ್ಳುವ ಅವಕಾಶವಿದೆ ಎಂದು ಸರಳೀಕರಿಸಲು ನೀಡಿದ ಒಂದು ಉದಾಹರಣೆಯಿದು ಅಷ್ಟೇ. ಹಾಗಾಗಿ ಈಗಿನ ಯುವಕರು ಕೈಕಟ್ಟಿ ಕುಳಿತುಕೊಳ್ಳದೆ ಉದ್ಯೋಗ ಕ್ರಾಂತಿ ಮಾಡಲು ಮುಂದಾಗಬೇಕು, ಯಾರದೋ ಕೈಕೆಳಗೆ ದುಡಿಯುವ ಬದಲಾಗಿ ನಾವೇ ಉದ್ಯೋಗ ಕೊಡುವ ಮಾಲೀಕರಾಗುವತ್ತ ನಮ್ಮ ಚಿಂತನೆಯಿರಬೇಕೆಂಬುದು ಮತ್ತು ಇಂತಹ ಯಶಸ್ವಿ ಉದ್ಯಮಿಗಳಾಗ ಬಯಸುವ ಮಹತ್ವಾಕಾಂಕ್ಷಿಗಳಿಗೆ ಸರಕಾರ ಸೌಲಭ್ಯಗಳನ್ನು ಒದಗಿಸಿ ಪ್ರೋತ್ಸಾಹಿಸಬೇಕೆಂಬುದು ಲೇಖನದ ಆಶಯ.

ಕನ್ನಡಿಗರು ಯಶಸ್ವಿ ಉದ್ಯಮಿಗಳಾಗಲು ಇರುವ ತೊಡಕುಗಳು

- ಅಗಾಧ ಬಂಡವಾಳದ ಕೊರತೆ.
- ತಂತ್ರಜ್ಞಾನದ ಬೆಳವಣಿಗೆಯು ಮನುಕುಲದ ಇತಿಹಾಸದಲ್ಲೇ ದೊಡ್ಡ ಬದಲಾವಣೆ ತಂದಿದ್ದು ಉದ್ಯೋಗದ ಮೇಲೆ ಪೆಟ್ಟು ನೀಡುತ್ತಿದೆ.
- ಇಂದಿನ ಮಕ್ಕಳಿಗೆ ಪಠ್ಯಾಧಾರಿತ ಬೋಧನೆ ಹೆಚ್ಚು ಇದ್ದು ಬದುಕು ಕಟ್ಟಿಕೊಳ್ಳುವ ಯಾವ ಪಾಠಗಳೂ ಅವರ ಪಠ್ಯಪುಸ್ತಕಗಳಲ್ಲಿಲ್ಲ.
- ಪದವೀಧರರಾಗಿದ್ದರೂ ಉದ್ಯೋಗ ಸಮಸ್ಯೆ ಎದುರಿಸುತ್ತಿದ್ದು, ಬೃಹತ್ ಕಂಪನಿಗಳಿಗೆ ಹಳ್ಳಿಗಳಿಂದ ಹೋಗಿ ಕಡಿಮೆ ಸಂಬಳಕ್ಕೆ ದುಡಿಯುತ್ತಿರುವುದು.
- ಆರ್ಥಿಕವಾಗಿ ನೆರವು ಇಲ್ಲದಿರುವುದು.
- ತಂತ್ರಜ್ಞಾನ ಬಳಕೆಯ ಕೊರತೆ ಹಾಗೂ ಪ್ರೋತ್ಸಾಹಿಸುವವರು ಇಲ್ಲದಿರುವುದು.
- ಕೆಲವು ಸಣ್ಣಪುಟ್ಟ ಸೌಲಭ್ಯಗಳಿದ್ದರೂ ಸಹ ಅವುಗಳು ಸಣ್ಣ ಉದ್ಯಮದಾರರ ಕೈಗೆಟುಕುವಲ್ಲಿ ವಿಳಂಬ ಅಲ್ಲದೇ ಪೂರ್ಣ ಪ್ರಮಾಣದಲ್ಲಿ ಸೌಲಭ್ಯಗಳು ದೊರಕದೇ ಇರುವುದು.
- ಕ್ರಮವಾದ ಮಾರ್ಗದರ್ಶನದ ಕೊರತೆಯೂ ಎದ್ದು ಕಾಣುವುದು ಮತ್ತು ಮಧ್ಯಮ ವರ್ಗದ ಕುಟುಂಬಗಳಿಗೆ ಬಂಡವಾಳ ತೆರುವಷ್ಟು ಶಕ್ತಿ ಇಲ್ಲದಿರುವುದು.
- ಹಳ್ಳಿಗಳಲ್ಲಿ ಸಂಪನ್ಮೂಲಗಳಿದ್ದರೂ ಸಹ ಸರಿಯಾದ ಪ್ರೋತ್ಸಾಹ ಸಿಗದೆ

ಉದ್ಯೋಗ ಹರಸಿ ನಗರಗಳತ್ತ ಮುಖಮಾಡಿ ಯಾವುದೋ ಕಂಪನಿಗಳಲ್ಲಿ ಕಡಿಮೆ ಸಂಬಳಕ್ಕೆ ಹೆಚ್ಚು ದುಡಿಯುವುದು.

ಕನ್ನಡಿಗರು ಯಶಸ್ವಿ ಉದ್ಯಮಿಗಳಾಗಲು ಸಲಹೆಗಳು

- ♦ ಸಮೂಹಮಟ್ಟದಲ್ಲಿ ಸರಕಾರ, ಶಿಕ್ಷಣ ಸಂಸ್ಥೆಗಳು, ಎನ್‌ಜಿಓ ನಂತಹ ಸಂಸ್ಥೆಗಳು ಸಮೂಹಮಟ್ಟದಲ್ಲಿ ಕ್ರಮವಹಿಸಬೇಕು.
- ♦ ಸ್ಥಳೀಯ ಭಾಷೆಯಲ್ಲಿ ಉದ್ಯಮ ಆರಂಭಿಸಲು ಬೇಕಾದಂತಹ ಸಹಾಯ ಕೇಂದ್ರಗಳನ್ನು ಸ್ಥಾಪಿಸುವುದು.
- ♦ ಈಗಾಗಲೇ ಸಣ್ಣಪುಟ್ಟ ಉದ್ಯಮ ಸ್ಥಾಪಿಸಿ ಯಶಸ್ಸು ಕಾಣುತ್ತಿರುವ ವ್ಯಕ್ತಿಗಳಿಂದ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿ ಸ್ವ/ಉದ್ಯೋಗ ಕಂಡುಕೊಳ್ಳಲು ಸರಕಾರದ ಮಟ್ಟದಲ್ಲಿ ಚಿಂತನೆ ನಡೆಸಿ ಗ್ರಾಮ, ತಾಲೂಕ, ಜಿಲ್ಲಾ ಮಟ್ಟದಲ್ಲಿ ಪ್ರೋತ್ಸಾಹಿಸಬೇಕು.
- ♦ ಕಡಿಮೆ ಬಡ್ಡಿದರ ಸಾಲ, ಸೌಲಭ್ಯಗಳನ್ನು ನೀಡುವುದರ ಜೊತೆಗೆ ಮಧ್ಯವರ್ತಿಗಳ ಪಾಲಾಗದಂತೆ ಎಚ್ಚರವಹಿಸಿ ಆಗಾಗ ಅಲ್ಲಿನ ಸಮಗ್ರ ಬೆಳವಣಿಗೆಯ ಮಾಹಿತಿ ಪಡೆದು ಬೇಕಾದ ಸೌಲಭ್ಯಗಳನ್ನು ಕಾಲಕಾಲಕ್ಕೆ ಒದಗಿಸುವುದು.
- ♦ ಸರಕಾರವು ಸ್ನಾತಕೋತ್ತರ ಮಟ್ಟದಲ್ಲಿ ಅಂದರೆ ವಿಜ್ಞಾನ, ವಾಣಿಜ್ಯ, ಕಲಾ, ಇಂಜನಿಯರಿಂಗ್ ಎಲ್ಲ ವಿಭಾಗಗಳಲ್ಲೂ ಉದ್ಯೋಗ ಸೃಷ್ಟಿಸಿಕೊಳ್ಳುವ ಪಠ್ಯ ಬೋಧನೆಯನ್ನು ಅಳವಡಿಸುವುದು.
- ♦ ಗ್ರಾಮೀಣ/ಆದಿವಾಸಿಗಳ ಪ್ರದೇಶದಲ್ಲಿ ಸ್ಥಳೀಯ ಭಾಷೆಯ ಶಿಬಿರಗಳು ಮತ್ತು ಉದ್ಯೋಗ ಮಾಹಿತಿಯನ್ನು ಮೂರು ತಿಂಗಳಿಗೊಮ್ಮೆ ಏರ್ಪಡಿಸುವುದು ಮತ್ತು ಉದ್ಯೋಗಾಕಾಂಕ್ಷಿಗಳಿಗೆ ಪ್ರೋತ್ಸಾಹಿಸುವುದು.
- ♦ ಇಂದಿನ ಯುವಕರಲ್ಲಿ ಉದ್ಯೋಗ ಹುಡುಕುವವರಲ್ಲ, ಉದ್ಯೋಗ ನೀಡುವವರಾಗೋಣ ಎಂಬ ಭರವಸೆ ನೀಡಬೇಕು.
- ♦ ಸ್ಥಳೀಯ ಕನ್ನಡಿಗರು ಯಶಸ್ವಿಯಾಗಿ ಉದ್ಯಮದಲ್ಲಿ ಸಾಗುತ್ತಿರುವ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಮಾಹಿತಿ ಹಂಚಿಕೊಳ್ಳುವುದರಿಂದ ಉದ್ಯೋಗ ಪ್ರಾರಂಭಿಸುವವರಿಗೆ ಸ್ಫೂರ್ತಿಯಾಗಬಲ್ಲ ಯಶೋಗಾಥೆಗಳನ್ನು ತೆರೆದಿಡುವುದು.

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025 | VOLUME: 09, ISSUE: 06, DECEMBER 2025

ಸಂಶೋಧನೆಗೈದ ಕೆಲವು ಮಾದರಿ ಆಯ್ದ ಉದ್ಯಮ ಪ್ರಾರಂಭಿಸಿದವರ ಯಶೋಗಾಥೆಯ ಛಾಯಾಚಿತ್ರಗಳು

ಮಗ್ಗದಿಂದ ಕಂಬಳಿ ನೇಯುತ್ತಿರುವವರು

ಮಗ್ಗದಿಂದ ನೇಯ್ದ ಕಂಬಳಿಗಳು

ಗಾಣದ ಉದ್ಯಮ ಸ್ಥಾಪಿಸಿರುವ ಮಾದರಿ ಛಾಯಾಚಿತ್ರ

ಮೂಲ ಕುಂಬಾರಿಕೆ ವೃತ್ತಿ ಇಂದಿಗೂ ಜೀವಂತ ಇರುವುದಕ್ಕೆ ಸಾಕಿ ಇಂದಿಗೂ ಸೋರೆ,ಮಡಿಕೆ ಕುಡಿಕೆ, ಕುಂಭ ಇವುಗಳನ್ನು ಇಂದಿಗೂ ಮಾಡುತ್ತಿರುವವರು.

ಲೇಖಕರು : ಡಾ. ಡಿ. ವೀರೇಶ
ಅಧ್ಯಾಪಕರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
veeresh1674@gmai.com

***

ಕನ್ನಡದ ಕೃಷಿಸಾಹಿತ್ಯದಲ್ಲಿ ತಂತ್ರಜ್ಞಾನ ಮತ್ತು ಸಂಸ್ಕೃತಿಯ ನೆಲೆಗಳು

ಆಧುನಿಕ ಕೃಷಿ ವಿಜ್ಞಾನ ಸಾಹಿತ್ಯ ರಚನೆಯು 19ನೇ ಶತಮಾನ ಆದಿಯಿಂದ ಆರಂಭವಾಯಿತೆಂಬುದನ್ನು ಗುರುತಿಸಬಹುದಾಗಿದೆ. ಕೃಷಿ ಹುಟ್ಟು ಬೆಳವಣಿಗೆಗೆ ಬಹಳ ಹಿಂದಿನ ಚರಿತ್ರೆ ಇದ್ದರೂ, ಕೃಷಿ ಸಾಹಿತ್ಯ ಚರಿತ್ರೆ ಸುದೀರ್ಘವಾದ ಚರಿತ್ರೆ ಇಲ್ಲ. 1915ರಲ್ಲಿ ಮೈಸೂರು ವ್ಯವಸಾಯ ಇಲಾಖೆಯು ಕೃಷಿಕರಿಗಾಗಿ ಮೈಸೂರು ವ್ಯವಸಾಯದ ಕ್ಯಾಲೆಂಡರ್/ಪಂಚಾಂಗವೆಂಬ ವಾರ್ಷಿಕ ಪತ್ರಿಕೆಯನ್ನು ಪ್ರಕಟಿಸಿದೆ. ಇಲ್ಲಿಂದ ಕನ್ನಡದಲ್ಲಿ ಕೃಷಿ ವಿಜ್ಞಾನ ಸಾಹಿತ್ಯಕ್ಕೆ ಇಂಬು ದೊರೆಯಿತು. ಈ ಹಿನ್ನೆಲೆಯಲ್ಲಿ ಸ್ಥೂಲವಾಗಿ ಕೃಷಿ ಸಾಹಿತ್ಯದ ಕಾಲಘಟ್ಟವನ್ನು ಅಧ್ಯಯನದ ದೃಷ್ಟಿಯಿಂದ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಎಂದು ಎರಡು ಭಾಗಗಳಾಗಿ ವಿಭಜಿಸಲಾಗಿದೆ. ಇವುಗಳಲ್ಲಿ ಭಾವಾನಾತ್ಮಕ/ಅನುಭವದ ನೆಲೆ ಮತ್ತು ವೈಜ್ಞಾನಿಕ ದೃಷ್ಟಿಕೋನದ/ ಸಂಸ್ಕೃತಿ ನೆಲೆಗಳನ್ನು ಗುರುತಿಸಲಾಗಿದೆ.

ಕೃಷಿ ಅನುಭಾವಿ ಹಾಗೂ ಭಾವಾನಾತ್ಮಕ ಸಂಸ್ಕೃತಿ ನೆಲೆಯ ಬರವಣಿಗೆಗಳು ಅನುಭಾವಾತ್ಮಕ ಬರವಣಿಗೆಗಳಲ್ಲಿ ಸ್ವತಃ ಕೃಷಿಕರು ಹಾಗೂ ಜಾನಪದರು ಕಟ್ಟಿ ಹಾಡಿದ ಹಾಡುಗಳು ಇಂದಿಗೂ ಕೃಷಿ ಸಾಹಿತ್ಯದ ಮೂಲ ದ್ರವ್ಯಗಳಾಗಿವೆ. ಜಾನಪದರು ತಮ್ಮ ಕೃಷಿ ಬದುಕನ್ನು ಕ್ರಿಯಾಶೀಲವಾಗಿಸಿ ಅದರಿಂದ ದೊರೆತ ಅನುಭವಗಳನ್ನು ನಾಣ್ಣುಡಿಗಳು, ಗಾದೆಗಳು, ಒಗಟುಗಳು, ಜನಪದ ಗೀತೆಗಳು

ಹಾಗೂ ಇತರ ರೂಪಗಳಲ್ಲಿ ಅಭಿವ್ಯಕ್ತಿಗೊಳಿಸಿರುವ ಪ್ರಕಟಣೆಗಳು ನಮಗೆ ಲಭ್ಯ. ಅಂತೆಯೇ ಕನ್ನಡದ ಶಾಸನಗಳಲ್ಲಿ, ಕಾವ್ಯಗಳಲ್ಲಿ, ಕಥನಗಳಲ್ಲಿ ಕೃಷಿಸಂಸ್ಕೃತಿಯ ಬಗ್ಗೆ ಉಲ್ಲೇಖಗಳಿವೆ.

"ಬೆಳಗಾಗಿ ನಾನೆದ್ದು ಯಾರ್‍ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆವಂಥ!
ಎಳ್ಳು ಜೀರಿಗೆ ಬೆಳೆವಂಥ ಭೂಮ್ತಾಯ್ನ
ಎದ್ದೊಂದು ಗಳಿಗೆ ನೆನೆದೇನೋ!!

ಈ ಜನಪದರ ಮುಖ್ಯ ಕಸುಬು ಬೇಸಾಯ. ಈ ಜನಪದರ ಬೇಸಾಯದ ತಂತ್ರಜ್ಞಾನ, ನೀರಾವರಿ ತಂತ್ರಜ್ಞಾನ, ಪರಿಸರ ಜ್ಞಾನ, ಮಣ್ಣು ವಿಜ್ಞಾನ, ಸಸ್ಯ ವಿಜ್ಞಾನ ಇನ್ನೂ ಹಲ ಬಗೆಯ ಜ್ಞಾನ ಅವನೊಳಗೆ ಅಂತರ್ಗತವಾಗಿದ್ದು, ಅಭಿವ್ಯಕ್ತಿಗೊಂಡಿವೆ. ಇಂತಹ ಜ್ಞಾನದ ಭಾಗವಾಗಿ ಜಾನಪದ ನುಡಿಗಳಲ್ಲಿ ಕಂಡಿದ್ದೇವೆ.

ಕರ್ನಾಟಕದ ಶಾಸನಗಳಲ್ಲಿ ಕೃಷಿ ವಿಚಾರಗಳನ್ನು ಕುರಿತಂತೆ ಸಾಕಷ್ಟು ಉಲ್ಲೇಖಗಳು ದೊರೆಯುತ್ತವೆ. ವ್ಯವಸಾಯ ಪದ್ಧತಿ ಕುರಿತಂತೆ ಶಾಸನಗಳನ್ನು (ಕ್ರಿ.ಶ. 450ರಿಂದ 1150ವರೆಗೆ) ಅಧ್ಯಯನ ಮಾಡಿರುವ ಡಾ.ಎಂ.ಚಿದಾನಂದಮೂರ್ತಿಯವರು ಉಲ್ಲೇಖಿಸಿರುವಂತೆ "ಇಂದಿನಂತೆಯೇ ಪ್ರಾಚೀನ ಕರ್ನಾಟಕದಲ್ಲಿಯೂ ವ್ಯವಸಾಯವೇ ಅತಿ ಪ್ರಮುಖ ಜೀವನೋಪಾಯವಾಗಿತ್ತು. ವ್ಯವಸಾಯದ ಜೊತೆಗೆ ಇನ್ನೆರಡು ಉದ್ಯಮಗಳನ್ನು ಹೆಸರಿಸಬಹುದು. ಒಂದು ಕುರಿಸಾಕಣೆ ಮತ್ತೊಂದು ಪಶುಪಾಲನೆ. ರೈತರನ್ನು ಒಂದು ಭೂದೇವಿಯ ಮಕ್ಕಳು, ಭೂಮಿ ಪುತ್ರರು, ಒಕ್ಕಲು ಮಕ್ಕಳೆಂದು ಶಾನಗಳು ಕರೆದಿವೆ."(ಪುಟ–362). ಕವಿರಾಜಮಾರ್ಗದ (ಕ್ರಿ.ಶ. 850) ಕರ್ತೃವಾದ ಶ್ರೀವಿಜಯನು ಕನ್ನಡ ನಾಡಿನ ಭೌಗೋಳಿಕ ವಿಸ್ತಾರದ ಜೊತೆಗೆ "ಪರದರ್ಗಾ ಪಾರ್ವರ್ಗಾಯ್ತರಸರ್ಗಾ ಕುಡಿಯರಪ್ಪ ನಾಲ್ವರ್ಗಾಗಳ್ ಸ್ಥಿರ ಗೋಪಾಧ್ಯಾಯ ಕ್ಷ್ಮಾಪರಿಪಾಲ್ಯ ಕ್ಷೇತ್ರ ಕರ್ಷಣಂಗಳ್ ಕ್ರಿಯೆಗಳ್(1–ಪದ್ಯ65)" ಈ ಉಲ್ಲೇಖವು

ಸಹ ಯಾರ ಯಾರ ಕೆಲಸ ಏನು ಎಂಬುದನ್ನು ಉಲ್ಲೇಖಿಸುತ್ತದೆ. ಹರದರ (ವರ್ತಕರ) ಕೆಲಸ ಗೋಪಾಲನೆ, ಪಾರ್ವರ(ಬ್ರಾಹ್ಮಣರ)ಕೆಲಸ ಅಧ್ಯಯನ, ಅರಸರ ಕೆಲಸ ಭೂಮಿ ಪರಿಪಾಲನೆ ಮತ್ತು ಕುಡಿಯರ(ಒಕ್ಕಲಿಗರ) ಕೆಲಸ ನೆಲವನ್ನು ಉಳುವಿಕೆ ಎನ್ನುವುದು ಇದರ ಸಾರಾಂಶ. ಶಿವಕೋಟ್ಯಾಚಾರ್ಯರು ತಮ್ಮ ವಡ್ಡಾರಾಧನೆ ಕೃತಿಯಲ್ಲಿ ಒಕ್ಕಲಿಗರು,"ಒರ್ವನೊಕ್ಕಲಿಗನೊಂದು ಪೇರುಮಣ್ಣು ತಂದು ಶ್ರೀ ಪರ್ವತದ ಮೇಗೊಟ್ಟಿದೊಡೆ" ಎಂಬಲ್ಲಿ ಆರಂಭ ಮುಂತಾದ ಉಲ್ಲೇಖಗಳು ವ್ಯಕ್ತವಾಗಿದೆ. ಅಂತೆಯೇ ಕನ್ನಡ ಸಾಹಿತ್ಯದ ಆದಿ ಕವಿ ಪಂಪ (ಕ್ರಿ.ಶ. 950) ಮಹಾಭಾರತದ ಕಥೆಯ ಹಂದರದೊಳಗೆ ಉಚಿತ ಎನ್ನುವಷ್ಟರ ಮಟ್ಟಿ ಬನವಾಸಿ ದೇಶವನ್ನು ಮೈದುಂಬಿ ವರ್ಣಿಸಿದ್ದಾನೆ. ನಾಗಚಂದ್ರನ ಪಂಪ ರಾಮಾಯಣದಲ್ಲಿ(ಕ್ರಿ.ಶ.1100) ದಶರಥ ಮಹಾರಾಜನ ವರ್ಣಿಸುವಾಗ ತನ್ನ ಕಾಲದ ಬನವನ್ನು, ಕೆಯ್ವೊಲಗಳ ಧಾನ್ಯಕ್ಕೆ ಎರಗಿರುವ ಗಿಳಿಗಳ ಹಿಂಡನ್ನೂ, ಹಿಂಡನ್ನು ಓಡಿಸಲು ಅಬಲೆಯರನ್ನು ಕುರಿತ ವರ್ಣನೆ ಬರುತ್ತದೆ. ನಯಸೇನ ಧರ್ಮಾಮೃತ(ಕ್ರಿ.ಶ. 1112)ದಲ್ಲಿ ಹಲವು ವ್ಯವಸಾಯ ವಿಷಯವನ್ನು ಉಲ್ಲೇಖಿಸುತ್ತಾನೆ.

12ನೇ ಶತಮಾನದಲ್ಲಿ ವೃತ್ತಿಗೌರವಕ್ಕೆ ಹೆಚ್ಚಿನ ಮಹತ್ವವಿತ್ತು. ಅಂತೆಯೇ ಬಸವಣ್ಣನವರ ಕಾಯಕವೇ ಕೈಲಾಸ ಎಂಬ ಕಾಯಕ ತತ್ವ ಇಂದಿಗೂ ಅನ್ವಯಿಸುತ್ತದೆ. ವಚನಗಳಲ್ಲಿನ ಅನುಭಾವದ ನುಡಿಗಳು ಕೃಷಿ ಮೂಲದಿಂದಲೇ ಹುಟ್ಟಿ ಬಂದಿವೆ.

"ಎನ್ನ ಗುಣವೆಂಬ ಕಸವ ಕಿತ್ತು ಸಲಹಯ್ಯಾ ಲಿಂಗ ತಂದೆ, ಸುಳಿದೆಗೆದು ಬೆಳೆವೆನು ಕೂಡಲ ಸಂಗಮದೇವ" ಕಸ ತೆಗೆದರೆ ಬೆಳೆಯು ಸುಳಿದೆಗೆದು ಬೆಳೆವುದನ್ನು ತಿಳಿಸಿದ್ದಾರೆ.

ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾತ್ತೆನ್ನ ಭಕ್ತಿ(ವ.664)

ಸಕ್ಕರೆಯ ಕೊಡನ ತುಂಬಿ ಹೊರಗೆ ಸವಿದೊಡೆ ರುಚಿಯುಂಟೆ(ವ.516)

ಜೋಳವಾಳಿಯಾನಲ್ಲ ವೇಳೆವಾಳಿಯವ ನಾನಯ್ಯ(ವ.698)

ಸಂಪುಟ: 09, ಸಂಚಿಕೆ 06, ಡಿಸೆಂಬರ್ 2025 | VOLUME: 09, ISSUE: 06, DECEMBER 2025

ಬಿತ್ತಿತ್ತು ಬೆಳೆಯಿತ್ತು ಕೆಯ್ಯ ಕೊಯ್ಯಿತ್ತು ಗೂಡು ಮುರಿಯಿತ್ತು ಕುತ್ತರಿಯೊಟ್ಟಿತ್ತು ಒಕ್ಕಿತ್ತು ತೂರಿತ್ತು ಅಳೆಯಿತ್ತು ಸಲಗೆ ತುಂಬಿತ್ತು ಕೂಡಲ ಸಂಗಮದೇವಯ್ಯ(ವ.1392)

ಹರಿಹರ ತನ್ನ ಕಾವ್ಯಗಳಾದ ಗಿರಿಜಾಕಲ್ಯಾಣ, ಇಳೆಯಾಂಡ ಗುಡಿಮಾರರ ರಗಳೆ ಕೃಷಿ ಮತ್ತು ಕೃಷಿಕನ ಬಗ್ಗೆ ಉಲ್ಲೇಖಗಳು ಸಾಕಷ್ಟು ಬರುತ್ತದೆ. ಸಮಚಿತ್ತವೆಂಬ ಭೂಮಿಯನೆ ಹಸನಾಗಿರಿಸಿ ಅಮರ್ದ ಶಂಕರನ ನೆನಹೆಂಬ ನೇಗಿಲನಿರಿಸಿ…" ಕವಿ ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ಹೊಲಗದ್ದೆ, ತೆಂಗು ಕೌಂಗು, ಬಾಳೆ, ಮಾವು, ಬೇವು ಹುಣಿಸೆ ಮುಂತಾದ ಗಿಡಮರಗಳ ಉಲ್ಲೇಖವಿದೆ. ನಯಸೇನ ಜೀವ ಸಂಭೋಧನಂ ಕೃತಿಯಲ್ಲಿ, ಜನ್ನ ಯಶೋಧರ ಚರಿತೆಯಲ್ಲಿ, ಆಂಡಯ್ಯ ಕಬ್ಬಿಗರ ಕಾವಂ ಕೃತಿಯಲ್ಲಿ, ಮಲ್ಲಿಕಾರ್ಜುನನ ಸೂಕ್ತಿ ಸುಧಾರ್ಣವದಲ್ಲಿ, ಕುಮಾರವ್ಯಾಸನ ಮಹಾಭಾರತದ ಕಥೆಯಲ್ಲಿ ಹಾಗೂ ಇನ್ನೂ ಮೊದಲಾದವರ ಕಾವ್ಯ ಕಥನಗಳಲ್ಲಿ ಕೃಷಿ ಮತ್ತು ಕೃಷಿಕರ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ. ಸಂಚಿಹೊನ್ನಮ್ಮಳ ಹದಿಬದಿಯ ಧರ್ಮ ಕಾವ್ಯದಲ್ಲಿ, ಅದರಂತೆ ಕವಿ ಸರ್ವಜ್ಞನ ತ್ರಿಪದಿಗಳಲ್ಲಿ ಕಾಣುತ್ತೇವೆ. "ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು! ಮೇಟಿಯಿಂ ರಾಟೆ ನಡೆದುದಲ್ಲದೆ! ದೇಶ! ದಾಂಟದೇ ಕೆಡಗು ಸರ್ವಜ್ಞ."ಎಂಬ ರಚನೆ ಇಲ್ಲಿ ಉಲ್ಲೇಖಾರ್ಹ.

ತಮಿಳಿನ ಪ್ರಾಚೀನ ಕವಿ ತಿರುವಳ್ಳುವರ್ 'ಕೃಷಿ' ಕುರಿತು "ಕೃಷಿ ಅತ್ಯಂತ ಯೋಗ್ಯವಾದ ಕರಕುಶಲ ಕಲೆ. ಪ್ರಯಾಸಕರವಾದರೂ ಭೂಮಿಯ ಮೇಲಣ ಸಮಸ್ತ ಜೀವಿಗಳಿಗೆ ಆಧಾರ. ರೈತರು ವಿಶ್ವದ ಜೀವಾಳ. ಅವರು ಮಾತ್ರ ಸ್ವತಂತ್ರ ನಾಗರಿಕರು. ಇತರರೆಲ್ಲರೂ ಅವರ ಮೇಲೆ ಅವಲಂಬಿಗಳು. ರೈತರ ಕೈಗಳ ಬಲ ಕುಂದಿದರೆ ತಪಸ್ವಿಗಳೂ ತಮ್ಮ ಧ್ಯಾನದಲ್ಲಿ ವಿಫಲಗೊಳ್ಳುತ್ತಾರೆ. ಮನುಷ್ಯ ಸ್ವತಃ ತನ್ನ ಭೂಮಿಯೆಡೆಗೆ ಗಮನ ಕೊಡದಿದ್ದರೆ, ಅದು ಕುಪಿತ ಪತ್ನಿಯಂತೆ ವರ್ತಿಸುತ್ತದೆ ಮತ್ತು ಆತನಿಗೆ ಖುಷಿ ನೀಡುವುದಿಲ್ಲ. ಉಳುಮೆಗಿಂತ ಗೊಬ್ಬರ ನೀಡುವುದು ಮುಖ್ಯ. ನಂತರ ಕಳೆ ಕೀಳುವುದು. ನೀರಿನ ನಿರ್ವಹಣೆಗಿಂತ ಅಧಿಕ ಮಹತ್ವ ಸಸ್ಯ ಸಂರಕ್ಷಣೆಯದು" ಎಂದಿದ್ದಾರೆ.

ದಾಸರ ಕೀರ್ತನೆಗಳಲ್ಲಿ ಕೃಷಿ ಕುರಿತಾದ ಚಿಂತನೆಗಳು ಅಭಿವ್ಯಕ್ತಗೊಂಡಿವೆ. ಪುರಂದರ ದಾಸರ ಕೀರ್ತನೆಯಲ್ಲಿ “ಅನ್ನ ಉದಕ ಊಟವೀಯೋದು ಮಣ್ಣು! ಬಣ್ಣ ಬಂಗಾರ ಬೊಕ್ಕಸವೆಲ್ಲ ಮಣ್ಣು!”.. ಹೀಗೆ ಕೃಷಿ ಕುರಿತಾದ ವಿವರ ದೊರಯುತ್ತದೆ. ಕನಕದಾಸರ ರಾಮಧಾನ್ಯ ಚರಿತ್ರೆಯ ನವಧಾನ್ಯಗಳಲ್ಲಿ ರಾಗಿ ನಾಯಕನಾದರೆ ಅಕ್ಕಿ ಖಳನಾಯಕನಾಗಿದೆ, ಇಲ್ಲಿ ಕಥನದ ಮೂಲಕ ಕೃಷಿಯ ಪ್ರಸ್ತಾಪ ವ್ಯಕ್ತವಾಗುತ್ತದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕುವೆಂಪು, ಶಿವರಾಮಕಾರಂತ, ಮಾಸ್ತಿ, ಬೇಂದ್ರೆ, ಕೊರಡ್ಕಲ್ ಶ್ರೀನಿವಾಸರಾಯರು, ರಾವ್ ಬಹಾದ್ದೂರ್, ನಿರಂಜನ, ಅ.ನ.ಕೃ, ಚದುರಂಗ, ನಾ.ಡಿಸೋಜ, ಅನಂತಮೂರ್ತಿ, ಪಿ.ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ಬರಗೂರು ರಾಮಚಂದ್ರಪ್ಪ, ದೇವನೂರು ಮಹಾದೇವ, ಶಾಂತರಸ, ಬೆಸಗರಹಳ್ಳಿ ರಾಮಣ್ಣ, ಕುಂ.ವೀರಭದ್ರಪ್ಪ, ಅರವಿಂದಮಾಲಗತ್ತಿ, ಮ.ನ.ಜವರಯ್ಯ, ಎಂ.ಎಸ್.ವೇದಾ, ಮೊಗಳ್ಳಿಗಣೇಶ್, ಅಮರೇಶನುಗಡೋಣಿ ಇನ್ನೂ ಹಲವು ಸಾಹಿತಿಗಳ ಚಿಂತನೆ ಮೂಸೆಯಲ್ಲಿ ಕೃಷಿ ಮತ್ತು ಕೃಷಿಕನ ಕುರಿತಂತೆ ಸೃಜನಶೀಲ ಪ್ರಕಾರಗಳಾದ ಕಾವ್ಯ, ಕತೆ, ಕಾದಂಬರಿಗಳ ರೂಪದಲ್ಲಿ ಅಭಿವ್ಯಕ್ತಗೊಂಡಿವೆ.

ಸ್ವಾತಂತ್ರ್ಯಪೂರ್ವ ಕಾಲಘಟ್ಟದ ಬರವಣಿಗೆಗಳು

ಈ ಕಾಲಘಟ್ಟದಲ್ಲಿ ಬಹುತೇಕ ಸಾಹಿತ್ಯ ಸೃಷ್ಟಿ ಆದ್ಯಾತ್ಮಿಕ ನೆಲೆ, ಅನುಭಾವಿಕ ನೆಲೆ ಹಾಗೂ ಸ್ವಾನುಭವದ ನೆಲೆಯಲ್ಲಿ ರಚನೆಯಾದವು. ಇಲ್ಲಿ ಉಪದೇಶ, ಬೋಧಪ್ರದವಾದ ವ್ಯವಸಾಯ ಕ್ರಮಗಳನ್ನು ಅನುಸರಿಸುವ ವಿಧಾನಗಳ ಕುರಿತು ರಚನೆಗೊಂಡಿವೆ. ಉಪದೇಶ, ಬೋಧಪ್ರದವಾದ ವ್ಯವಸಾಯ ಕ್ರಮಗಳನ್ನು ಅನುಸರಿಸುವ ವಿಧಾನಗಳ ಕುರಿತು ರಚನೆಗೊಂಡು ಪಾಶ್ಚಿಮಾತ್ಯ ವಿಜ್ಞಾನ ಸಂಶೋಧನೆ, ರಾಸಾಯನ ಶಾಸ್ತ್ರದ ಸಂಶೋಧನೆಗಳು ಕೃಷಿ ವಿಧಾನಗಳ ಮೇಲೆ ಹೆಚ್ಚಿನ ಪರಿಣಾಮ ಬೀರಿ, ಕೃಷಿ ವಿಜ್ಞಾನ ಸಾಹಿತ್ಯ ರಚನೆಗೆ ಪ್ರೇರಕವಾಗಿರುವುದನ್ನು ಈ ಕಾಲಘಟ್ಟದಲ್ಲಿ ಗುರುತಿಸಬಹುದು. ಇನ್ನೂ ಕೆಲವು ಸಂಶೋಧನಾ ನೆಲೆಯಲ್ಲಿ ಕೃಷಿ ವಿಜ್ಞಾನಿಗಳು ರಚಿಸಿದಂತಹ ಸಾಹಿತ್ಯದ ಸೃಷ್ಟಿಯಾಗಿದೆ. ಇಲ್ಲಿನ ಲೇಖಕರು

ಧರ್ಮಗುರುಗಳು, ಶಾಲಾ ಮಾಸ್ತರರು, ನಾಟಿ ವೈದ್ಯರು, ಶಾಸ್ತ್ರ ಗ್ರಂಥಗಳನ್ನು ಓದಿಕೊಂಡ ಪಂಡಿತರು ಹಾಗೂ ಕೆಲವರು ಕೃಷಿ ಬಗೆಗಿನ ಆಸಕ್ತಿಯುಳ್ಳವರು ಕೃಷಿ ವಿಜ್ಞಾನ ಸಾಹಿತ್ಯ ರಚನೆಗೆ ತೊಡಗಿಸಿಕೊಂಡರು. ಆರಂಭದ ದಿನಗಳಲ್ಲಿ ಖಾಸಗಿ ಪ್ರಕಾಶನ ಸಂಸ್ಥೆಗಳು ಪ್ರಕಟಿಸಿದ ಗ್ರಂಥಗಳು ಹಾಗೂ ಸರ್ಕಾರ ಕೃಷಿ ಪ್ರಸಾರ ಮಾಡುವ ನಿಟ್ಟಿನಲ್ಲಿ ಮಾಡಿದ ಪ್ರಕಟಣೆಗಳು ಗಮನಾರ್ಹ. ಅಂತಹ ಪ್ರಾತಿನಿಧಿಕ ಕೃತಿಗಳ ಅವಲೋಕನ ಇಲ್ಲಿದೆ.

1879ರಲ್ಲಿ ಶ್ರೀ ನಾಗಭೂಷಣ ಘನಮಠ ಶಿವಯೋಗಿಗಳು ರಚಿಸಿದ 'ಕೃಷಿ ವಿಜ್ಞಾನ ಪ್ರದೀಪಿಕೆ' ಕೃಷಿವಿಜ್ಞಾನ ಸಾಹಿತ್ಯದ ಮೊಟ್ಟಮೊದಲ ಗ್ರಂಥ ಇದು ಅನುಭಾವ ಆಧಾರಿತ ಗ್ರಂಥವಾಗಿದ್ದು, ಅನುಸರಿಸಬೇಕಾದ ಕೃಷಿ ಪದ್ಧತಿ ಹಾಗೂ ವಿಧಾನಗಳನ್ನು ವಿವರಿಸುತ್ತದೆ.

ಮೈಸೂರು ಸರ್ಕಾರ 1879ರಲ್ಲಿ ಪ್ರಕಟಿಸಿದ ಎಫ್.ಇ. ಹರ್ಮನ್ ಮತ್ತು ರಾಮಸ್ವಾಮಿ ಶಾಸ್ತ್ರಿ ವಿರಚಿತ 'ವ್ಯವಸಾಯ ಕ್ರಮ ಬೋಧಿನಿ' ಕೃಷಿ ವಿಜ್ಞಾನ ಬೋಧನಾ ಕ್ರಮವನ್ನು ಸಾಮಾನ್ಯ ರೈತರಿಗೆ ತಿಳಿಸಿಕೊಡುವ ಪ್ರಾಯೋಗಿಕ ಕೃತಿ. ಮೈಸೂರಿನ ಜಿ.ಟಿ.ಎ. ಮುದ್ರಣ 1895ರಲ್ಲಿ ಪ್ರಕಟಿಸಿದ ನರಸಿಂಹ ಅವರ ಸಂಗ್ರಹ 'ಪಶುವೈದ್ಯ', ಬೆಂಗಳೂರಿನ ಮೈಸೂರು ಬುಕ್ ಡಿಪೋ 1898ರಲ್ಲಿ ಪ್ರಕಟಿಸಿದ ಅಯ್ಯಂಗಾರ್ ಕೊರವಂಡರ 'ಜಲರತ್ನಾಕರ' ಮತ್ತು ರಾಮಸ್ವಾಮಿ ಅಯ್ಯಂಗಾರ್‌ರವರು 'ವ್ಯವಸಾಯ ಚಂದ್ರಿಕೆ' ಕೃತಿ ಹಾಗೂ ಮೈಸೂರು ಶಿಕ್ಷಣ ಇಲಾಖೆಯವರು ಪ್ರಕಟಿಸಿರುವ 1900ರಲ್ಲಿ ಕೆ. ಶೇಷಾದ್ರಿ ಅಯ್ಯಂಗಾರ್‌ರ 'ವ್ಯವಸಾಯ ಬೋಧಿನಿ' ಬೋಧ ಪ್ರದ ಹಾಗೂ ಮಾರ್ಗದರ್ಶಕ ಕೃತಿಗಳಾಗಿವೆ.

ಸ್ವಾತಂತ್ರ್ಯೋತ್ತರ ಕಾಲಘಟ್ಟದ ಕೃಷಿ ಸಾಹಿತ್ಯ

ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿನ ಕೃಷಿ ವಿಜ್ಞಾನ ಸಾಹಿತ್ಯದಲ್ಲಾದ ರಚನಾ ಸ್ವರೂಪವು ವಿಭಿನ್ನತೆಯತ್ತ ಹೊರಳಿತು. ಹಸಿರು ಕ್ರಾಂತಿಯ ಪರಿಣಾಮದಿಂದಾಗಿ ಕೃಷಿಯಲ್ಲಿನ ನೂತನ ತಂತ್ರಜ್ಞಾನಗಳು, ವಿಸ್ತರಣಾ ಪದ್ಧತಿಗಳು, ಪಠ್ಯವಿಷಯಗಳು, ಸಂಶೋಧನೆಗಳು ಮುಂತಾದವುಗಳ ಬೆಳವಣಿಗೆಯಿಂದ ಹೊಸ ಬಗೆಯ ಸಾಹಿತ್ಯ ನಿರ್ಮಾಣಕ್ಕೆ ನಾಂದಿಯಾಯಿತು. ಶುದ್ಧ ವೈಜ್ಞಾನಿಕ ಕೃಷಿ ಸಾಹಿತ್ಯದತ್ತ ಹೊರಳಿತು.

ಇಲ್ಲಿ ಸ್ವತಃ ಕೃಷಿ ವಿಜ್ಞಾನದ ಅಧ್ಯಯನ ಕೈಗೊಂಡ ವಿಜ್ಞಾನಿಗಳು, ಲೇಖಕರು, ಹವ್ಯಾಸಿ ಬರಹಗಾರರು, ಪತ್ರಕರ್ತರು, ಆಸಕ್ತರ ಕೊಡುಗೆ ಕಂಡುಬರುತ್ತದೆ. ಮಣ್ಣು, ನೀರು, ಸಸ್ಯರೋಗ, ಜಲಾನಯನ ಅಭಿವೃದ್ಧಿ, ಜೈವಿಕ ತಂತ್ರಜ್ಞಾನ, ವಿಸ್ತರಣೆ, ಅಂಗಾಂಶ ಕೃಷಿ, ಬೌದ್ಧಿಕ ಆಸ್ತಿಹಕ್ಕು, ಸಂಶೋಧನೆ, ಬೋಧನೆ ಕೃಷಿ ಜಾಗತೀಕರಣ ಹಾಗೂ ಉದಾರೀಕರಣಕ್ಕೆ ಒಳಗೊಂಡ ಕುರಿತಾದ ಚಿಂತನೆ ಮುಂತಾದ ವಿಷಯಗಳ ಕೃತಿಗಳು ಹೆಚ್ಚಾಗಿ ಪ್ರಕಟಗೊಳ್ಳತೊಡಗಿದವು.

ಪಾಶ್ಚಿಮಾತ್ಯ ದೇಶಗಳ ಹೊಸ ತಂತ್ರಜ್ಞಾನಗಳ ಪರಿಚಯ, ಅದಕ್ಕೆ ತೆರೆದುಕೊಂಡ ಭಾರತದ ಜನತೆ, ಅದುವರೆಗಿದ್ದ ಸಾಂಪ್ರಾದಾಯಕ ಕೃಷಿ ಪದ್ಧತಿಯಿಂದ ಆಧುನಿಕ ಕೃಷಿಪದ್ಧತಿಯತ್ತ ಕೃಷಿಕ ಹೊರಳಿದ ಬಗೆ, ಆಧುನಿಕ ಕೃಷಿ ವಿಜ್ಞಾನದ ಅವಿಚ್ಛಿನ್ನ ಬೆಳವಣಿಗೆಗೆ ಪೂರಕವಾಯಿತು. ಹಸಿರು ಕ್ರಾಂತಿಯ ನಂತರ ಆಧುನಿಕ ಕೃಷಿ ಪದ್ಧತಿಯ ಪರಿಚಯ, ಕೃಷಿಯಲ್ಲಿನ ನೂತನ ಆವಿಷ್ಕಾರಗಳನ್ನು ಪರಿಚಯಿಸುವಂತಹ ಗ್ರಂಥಗಳು ಹೆಚ್ಚಾಗಿ ಪ್ರಕಟಗೊಂಡಿವೆ.

ಇದೇ ಕಾಲಕ್ಕೆ ಎರಡನೇ ಮಹಾಯುದ್ಧದ ಬಳಿಕ ಭಾರತ ತೀವ್ರವಾದ ಆಹಾರ ಕೊರತೆಯನ್ನು ಎದುರಿಸಬೇಕಾಯಿತು. ಆಹಾರ ಪೂರೈಕೆಗಾಗಿ ಅಮೇರಿಕಕ್ಕೆ ಕೈಚಾಚಬೇಕಾಯಿತು. ಆವರೆಗೆ ಆಹಾರದಲ್ಲಿ ಸ್ವಾವಲಂಬಿಯಾಗಿದ್ದ ದೇಶ ಬೇರೆ ದೇಶದತ್ತ ಕೈಯೊಡ್ಡುವ ಪರಿಸ್ಥಿತಿಯನ್ನು ತಪ್ಪಿಸಲು ನಮ್ಮ ದೇಶದಲ್ಲಿ ಕೃಷಿಯ ಆಧುನಿಕ ಪ್ರಯೋಗಗಳು ಶುರುವಾದವು. ಫಲಿತವಾಗಿ ಭಾರತದಲ್ಲಿ 'ಹಸಿರು ಕ್ರಾಂತಿ' ಹೆಸರಿನಲ್ಲಿ ಆಧುನಿಕ ಕೃಷಿ ವಿಜ್ಞಾನ ಪ್ರಾಮುಖ್ಯತೆ ಪಡೆಯಿತು. ಅಧಿಕ ಆಹಾರ ಉತ್ಪಾದನೆ ಕೃಷಿ ಯಂತ್ರೋಪಕರಣಗಳ ಬಳಕೆ, ನೀರಾವರಿಗಾಗಿ ಅಣೆಕಟ್ಟು ನಿರ್ಮಾಣ, ರಸಗೊಬ್ಬರ ಬಳಕೆ ಮುಂತಾದ ಅಮೂಲಾಗ್ರ ಬೆಳವಣಿಗೆಗಳಾದವು. ದೇಶದ ಹಲವು ಭಾಗಗಳಲ್ಲಿ ಕೃಷಿ ವಿಷಯದ ಅಧ್ಯಯನಕ್ಕಾಗಿ ಕೃಷಿ ವಿಶ್ವವಿದ್ಯಾನಿಲಯುಗಳು ಸ್ಥಾಪನೆಗೊಂಡವು. ಕರ್ನಾಟಕದಲ್ಲಿ ಕೃಷಿ ವಿಶ್ವವಿದ್ಯಾನಿಲಯುಗಳ ಸ್ಥಾಪನೆಯಾಗಿ ಕೃಷಿ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗಳಾದವು.

60ರ ದಶಕದ ನಂತರದ ಕೃಷಿ ಸಾಹಿತ್ಯ

ಜನಪ್ರಿಯ ವಿಜ್ಞಾನ ಸಾಹಿತ್ಯ ನಿರ್ಮಾಣದಲ್ಲಿ ಮೈಸೂರು ವಿಶ್ವವಿದ್ಯಾಲಯ ಮತ್ತು ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಕೊಡುಗೆ ಅಪಾರವಾದುದು. ಈ ಸಂಘದ ಮೂಲಕ 1916ರಲ್ಲಿ ಪ್ರಬುದ್ಧಕರ್ನಾಟಕ ಪತ್ರಿಕೆ ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ರಚನೆಗಾಗಿ ಆರಂಭಿಸಿದುದು ವಿಜ್ಞಾನ ಸಾಹಿತ್ಯದ ಮಹತ್ವದ ಮೈಲಿಗಲ್ಲಾಯಿತು. ಮಾಸಪತ್ರಿಕೆಯಾಗಿದ್ದ ಪ್ರಬುದ್ಧಕರ್ನಾಟಕವು ತನ್ನ ಚಿನ್ನದ ಹಬ್ಬವನ್ನಾಚರಿಸಿಕೊಳ್ಳುವ ಸಂದರ್ಭದಲ್ಲಿ ಚಿನ್ನದ ಸಂಚಿಕೆಯನ್ನು ಪ್ರಕಟಿಸಿತು.

ಇದೇ ಕಾಲಕ್ಕೆ ದೇಶದಲ್ಲಿ ಹಸಿರು ಕ್ರಾಂತಿಯ ಮೂಲಕ ಅಧಿಕ ಆಹಾರ ಉತ್ಪಾದನೆ, ಹೈಬ್ರಿಡ್ ತಳಿಗಳು, ಸಸ್ಯ ಸಂರಕ್ಷಣೆ, ಕೃಷಿ ತಂತ್ರಜ್ಞಾನಗಳ ಪರಿಚಯ, ಮಿಶ್ರತಳಿಗಳು, ತಳಿ ಸಂಕರಣ ಹಾಗೂ ಗೋಧಿ, ಬತ್ತ, ರಾಗಿ ಕೃಷಿಯ ಪ್ರಧಾನ ಬೆಳೆಗಳಲ್ಲಿ ಆದ ಬದಲಾವಣೆಗಳ ಕುರಿತ ಕೃತಿಗಳು ಹೆಚ್ಚು ಪ್ರಕಟಗೊಂಡಿರುವುದನ್ನು ಗುರುತಿಸಬಹುದು.

ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಮಹತ್ತರ ಬದಲಾವಣೆಗೆ ಕಾರಣವಾಯಿತು. ಇದೇ ಹೊತ್ತಿನಲ್ಲಿ ಕನ್ನಡದಲ್ಲಿ ಕೃಷಿ ವಿಜ್ಞಾನ ಸಾಹಿತ್ಯ ರಚನೆಯು ಸಹ ಅಧ್ಯಯನ ಶಿಸ್ತಿಗೆ ಒಳಪಟ್ಟಿತು. ವಯಸ್ಕರ ಶಿಕ್ಷಣ ಸಮಿತಿ, ಸಾಂಪ್ರಾದಾಯಿಕ ವಿಶ್ವವಿದ್ಯಾಲಯಗಳಾದ ಮೈಸೂರು ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸ ಮಾಲಿಕೆ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸ ಗ್ರಂಥ ಮಾಲೆ, ಕೃಷಿ ಮತ್ತು ತೋಟಗಾರಿಕಾ ಇಲಾಖೆಗಳು ಹಾಗೂ ಕೃಷಿ ವಿಶ್ವವಿದ್ಯಾನಿಲಯಗಳು ಕನ್ನಡದಲ್ಲಿ ಕೃಷಿ ಸಾಹಿತ್ಯ ರಚನೆಯಲ್ಲಿ ತೊಡಗಿದವು.

70ರ ದಶಕದ ನಂತರ ಕೃಷಿ ಸಾಹಿತ್ಯ

ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು ಗೊದ್ದು ವೀರೇಶ್ ಅವರ 'ಆಧುನಿಕ ವ್ಯವಸಾಯ' ಪುಸ್ತಕವನ್ನು 1971ರಲ್ಲಿ ಪ್ರಕಟಿಸಿದೆ. ಇದೇ ಪರಿಷತ್ತಿನ ಸುವರ್ಣಮಹೋತ್ಸವದ ಸವಿನೆನಪಿನ ಚಿನ್ನದ ಬೆಳಸು ಸಂಪುಟದಲ್ಲಿ ಜೆ.ಆರ್. ಲಕ್ಷ್ಮಣರಾವ್ ಅವರ 'ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ' ಪ್ರಕಟವಾಗಿದೆ.

ಶಾ.ಬಾಲುರಾವ್ ಅವರ ಜೇನವ್ವನ ಸಂಸಾರ ಕೃತಿಯನ್ನು 1973ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದೆ.

ಕನ್ನಡ ಸಾಹಿತ್ಯದಲ್ಲಿ ಅದ್ವೀತಿಯ ಹೆಸರಾಗಿದ್ದ ಬಿ.ಜಿ.ಎಲ್ ಸ್ವಾಮಿಯವರು ಹಸುರು ಹೊನ್ನು, ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕದಂತಹ ಮಹತ್ವದ ಕೃತಿಗಳನ್ನು ನೀಡಿದರು. ವೈಜ್ಞಾನಿಕ ಸಸ್ಯಗಳ ಪರಿಚಯ, ಹುಟ್ಟಿನ ಮೂಲ ಮುಂತಾದ ವಿವರಗಳನ್ನು ಕನ್ನಡಿಗರ ಮನಮುಟ್ಟುವಂತೆ ರಚಿಸಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ರೈತರಿಗಾಗಿಯೇ ಕುವೆಂಪು ಅವರು ಪ್ರಧಾನ ಸಂಪಾದಕತ್ವದಲ್ಲಿ ವ್ಯವಸಾಯ ಕೈಪಿಡಿ ಎಂಬ ಬೃಹತ್ತಾದ ಗ್ರಂಥ 1972ರಲ್ಲಿ ಪ್ರಕಟವಾಗಿದೆ. ಅಂತೆಯೇ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸ ಗ್ರಂಥಮಾಲೆಯಲ್ಲಿ ಬಿ.ಆರ್. ಪಾಟೀಲರ ಹಳ್ಳಿಗರೇಳ್ಗೆ ಸಾಧಿಸುವ ಬಗೆ, ಎಸ್.ಎಸ್. ಕಟಗಿಹಳ್ಳಿ ಮಠ ಅವರು ಕೀಟಕ ಪಿಡುಗುಗಳ ಸಮೀಕ್ಷಣೆ, ಎ.ಸಿ. ಕಲ್ಯಾಣಿಮಠರ ಅಧಿಕ ಉತ್ಪಾದನೆಗಾಗಿ ಮಿಶ್ರತಳಿ ಬೆಳೆಗಳು, ಎಸ್.ಕೆ. ಕಲ್ಲಾಪುರಅವರ ಕಸದಿಂದ ರಸೋತ್ಪತ್ತಿ, ಟಿ.ಎಂ. ಪಂಡಿತರ ಭಾರತದಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳು, ಎಂ.ಎಂ.ಹೊಸಮನಿಯವರ ಭೂ ಸಂರಕ್ಷಣೆ ಮತ್ತು ಒಣಬೇಸಾಯ ಇನ್ನೂ ಹಲವಾರು ಕೃತಿಗಳು ಪ್ರಕಟಗೊಂಡಿವೆ. 70ರ ದಶಕದಿಂದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಯನ ವಿಭಾಗ ಆರಂಭವಾಗಿ ಇಲ್ಲಿಯವರೆಗೂ, ಕನ್ನಡದಲ್ಲಿ ಕೃಷಿ ವಿಜ್ಞಾನ ಸಾಹಿತ್ಯ ರಚನೆಯಲ್ಲಿ ಮಹತ್ತರ ಪಾತ್ರ ವಹಿಸುತ್ತಾ ಬಂದಿದೆ. ಇದುವರೆಗೆ ಪಠ್ಯಪುಸ್ತಕ, ಪಠ್ಯ ಪೂರಕ ಕೃತಿ ಮತ್ತು ಕೃಷಿ ಜ್ಞಾನ ಭಂಡಾರ ಮಾಲಿಕೆ ಹಾಗೂ ಕನ್ನಡ ಭಾಷಾ ಯೋಜನೆ ಮಾಲಿಕೆಯಲ್ಲಿ 300ಕ್ಕೂ ಹೆಚ್ಚು ಕೃತಿಗಳು ಪ್ರಕಟವಾಗಿರುವುದು ಒಂದು ದಾಖಲೆ.

90ರ ದಶಕದ ನಂತರದ ಕೃಷಿ ಸಾಹಿತ್ಯ

ಕೃಷಿಕ ಪರಿಸರ ಮಾಲಿನ್ಯ, ಬಹುರಾಷ್ಟ್ರೀಯ ಸಂಸ್ಥೆಗಳ ಮೇಲಿನ ಅವಲಂಬನೆ, ಪೇಟೆಂಟ್ ಮತ್ತು ಬೌದ್ಧಿಕ ಆಸ್ತಿಹಕ್ಕು, ರೈತ ವಿರೋಧಿನೀತಿ ಮುಂತಾದ ಸಮಸ್ಯೆಗಳಿಗೆ ತೆರೆದುಕೊಂಡ ಕಾಲವಾಗಿದೆ. ಕೃಷಿ ಮಾರುಕಟ್ಟೆಯ

ಕುಸಿತ, ಕೃಷಿ ವಾಣಿಜ್ಯೀಕರಣದಿಂದ ಏಕ ಬೆಳೆ ಪದ್ಧತಿ ಅನುಸರಣೆ, ಸಣ್ಣ ಸಣ್ಣ ಭೂಹಿಡುವಳಿಗಳಿಂದ ಉತ್ಪಾದನೆಯಲ್ಲಿ ಇಳಿಕೆ ಮುಂತಾದ ಪರಿಣಾಮಗಳನ್ನು ಕೃಷಿಕ ಎದುರಿಸುವಂತಾಗಿದೆ. ಕೃಷಿಯನ್ನು ಒಂದು ಲಾಭದಾಯಕ ವೃತ್ತಿಯೆಂಬ ಭಾವನೆ ಎಲ್ಲೆಡೆ ಮೂಡಿ, ಆ ನಿಟ್ಟಿನಲ್ಲಿ ಉತ್ಪಾದನೆಯಲ್ಲಿ ತೊಡಗಿರುವುದು. ಕುಲಾಂತರಿ ತಳಿ, ರೋಗ ನಿರೋಧ ತಳಿಗಳ ಬಳಕೆ, ಅಂಗಾಂಶ ಕೃಷಿ, ಕೃಷಿ ರಾಸಾಯನಿಕ ಪರಿಕರಗಳ ಬೆಲೆ ಹೆಚ್ಚಳ, ಕೃಷಿಯಲ್ಲಿ ನ್ಯಾನೋ ತಂತ್ರಜ್ಞಾನದ ಅಳವಡಿಕೆ ಮುಂತಾದ ಆಧುನಿಕ ವಿಧಾನಗಳು ಬಹುಸಂಖ್ಯಾತ ಸಣ್ಣ ಮತ್ತು ಮಧ್ಯಮ ಕೃಷಿಕರಿಗೆ ತಲುಪದಿರುವುದು.

ಈ ಹಿನ್ನೆಲೆಯಲ್ಲಿ ಜಾಗತೀಕರಣದತ್ತ ವಾಲಿದ ಕೃಷಿ ಮತ್ತು ಕೃಷಿಕನ ಕುರಿತಾಗಿ ಹಲವು ಬಗೆಯ ಹೊಸ ಚಿಂತನೆಗಳು ಹುಟ್ಟಿಕೊಂಡವು. ವಾಣಿಜ್ಯ ಬೆಳೆ, ಏಕ ಬೆಳೆ ಉತ್ಪಾದನೆಗೆ, ಅತ್ಯಧಿಕ ರಾಸಾಯನಿಕ ಬಳಕೆಯ ಪರಿಣಾಮ, ಕೃಷಿಯನ್ನು ಲಾಭದಾಯಕ ಉದ್ಯಮವಾಗಿ ಪರಿಗಣಿಸಿದ ಪರಿಣಾಮವಾಗಿ ಸಂಕ್ರಮಣಾವಸ್ಥೆಯಲ್ಲಿ ತೊಳಲಾಡುತ್ತಿರುವ ಕೃಷಿಕರನ್ನು ಇಂದು ಕಾಣಬಹುದು. ರೈತರ ಆತ್ಮಹತ್ಯೆ, ಕುಲಾಂತರಿ ತಳಿಗಳು, ವಿದೇಶಿ ಕಂಪನಿಗಳ ಪ್ರಭಾವ, ಬಿ.ಟಿ.ಹತ್ತಿ, ಬಿ.ಟಿ. ಬದನೆ, ಮಾನ್ಸಾಂಟೊ, ಸಿಬಾ, ಕಾರ್ಗಿಲ್ ಮುಂತಾದ ವಿಷಯಗಳ ಕುರಿತು ಕೃಷಿಕರಿಗೆ ಹೊಸಬಗೆಯ ಆಲೋಚನೆಗಳನ್ನು ನೀಡಲು ಚಿಂತಕರು ಕೃತಿಗಳನ್ನು ರಚಿಸತೊಡಗಿದರು.

ಸರ್ಕಾರದ ಅಂಗ ಸಂಸ್ಥೆಯಾದ ಕನ್ನಡ ಪುಸ್ತಕ ಪ್ರಾಧಿಕಾರವು 2006ರಲ್ಲಿ ದೇಸಿ ಕೃಷಿ ಕಮ್ಮಟ ನಡೆಸಿ ದೇಸಿ ಕೃಷಿ ಜ್ಞಾನವನ್ನು ದಾಖಲಿಸುವ ಕಾರ್ಯಕ್ಕೆ ಯತ್ನಿಸಿತು. ಇದೀಗ ದೇಸಿ ಕೃಷಿ ಜ್ಞಾನ ಮಾಲಿಕೆಯಲ್ಲಿ 11 ಪುಸ್ತಕಗಳನ್ನು ಪ್ರಕಟಿಸಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಕೃಷಿ ಸಂಬಂಧಿತ ಹಲವು ಸಂಶೋಧನೆಗಳನ್ನು ನಡೆಸಿದೆ. ಇಲ್ಲಿ ಕೃಷಿ ಪದಕೋಶ, ಉರಿದಾವೋ ನೇಗಿಲು, ಅಭಿವೃದ್ಧಿಪಥ ಇತ್ಯಾದಿ ಕೃತಿಗಳನ್ನು ಕಾಣಬಹುದು. ಬೆಂಗಳೂರಿನ ಕೃಷಿ ವಿಕಾಸ ಪಬ್ಲಿಕೇಷನ್ 100ಕ್ಕೂ ಹೆಚ್ಚು ಕೃಷಿ ಪುಸ್ತಕಗಳನ್ನು ಪ್ರಕಟಿಸಿದೆ. ನವಕರ್ನಾಟಕ ಪ್ರಕಾಶನ, ಸ್ವಪ್ನ ಬುಕ್ ಹೌಸ್‌ನಂತಹ ಖಾಸಗಿ ಸಂಸ್ಥೆಗಳು, ಸರ್ಕಾರೇತರ

ಸಂಸ್ಥೆಗಳು ಕೃಷಿ ವಿಜ್ಞಾನ ಸಾಹಿತ್ಯದ ಪ್ರಕಟಣೆಯಲ್ಲಿ ತೊಡಗಿವೆ.

ಪರಿಸರ ಸ್ನೇಹಿ ಮತ್ತು ಸುಸ್ಥಿರ ಕೃಷಿ ವಿಧಾನಗಳ ಕುರಿತ ಬರವಣಿಗೆ, ರೈತರ ಅನುಭವಕ್ಕೆ ಆದ್ಯತೆ, ಸಾವಯವ ಕೃಷಿ ಕುರಿತ ಬರವಣಿಗೆಗಳು ಮತ್ತು ಸಾಹಿತ್ಯ ಪ್ರಕಟಣೆಗಳು ಹೆಚ್ಚು ಪ್ರಕಟಗೊಂಡಿವೆ. ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಉಪಸಮಿತಿಯು ಪ್ರಕಟಿಸಿರುವ ಡಾ.ಎಂ.ಜಿ.ನಾಗರಾಜ್ ಅವರ ರೈತ ಸತ್ಯಾಗ್ರಹಗಳು ಸಹಸ್ರಮಾನ 6–ಸಂಪುಟಗಳು ಸಂಶೋಧಕರಿಗೆ ಆಕರ ಗ್ರಂಥಗಳಾಗಿವೆ. ವೀರಭದ್ರಪ್ಪ ಬಿಸ್ಲಳ್ಳಿ ಅವರ ಕೃಷಿ ಕ್ಷೇತ್ರದ ಹೊಸ ಸಂಕಟಗಳು, ಡಾ.ಎನ್. ಜಗದೀಶ್ ಕೊಪ್ಪ ಅವರ ಜಾಗತೀಕರಣ ಮತ್ತು ಗ್ರಾಮ ಭಾರತ ಇನ್ನೂ ಮುಂತಾದ ಕೃತಿಗಳು ಕೃಷಿ ಕ್ಷೇತ್ರದ ಮೇಲೆ ಜಾಗತೀಕರಣದ ಕರಿನೆರಳಿನ ವಿವರವಾದ ಚಿತ್ರಣಗಳನ್ನು ನೀಡುತ್ತವೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗದಿಂದ ಡಾ.ಬಿ.ಶಿವರಾಮಶೆಟ್ಟಿಯವರ ಸಸ್ಯಜಾನಪದ ಕೃತಿಯನ್ನು ಪ್ರಕಟಿಸಿದೆ. ಇಲ್ಲಿ ಕೃಷಿ ಮತ್ತು ರೈತರ ಬಗೆಗಿನ ಹಲವಾರು ಅಧ್ಯಯನ ಮತ್ತು ಸಂಶೋಧನೆಗಳನ್ನು ಕೈಗೊಳ್ಳಲಾಗಿದೆ. ಬೆಂಗಳೂರಿನ ಕೃಷಿ ವಿಕಾಸ ಪಬ್ಲಿಕೇಷನ್‌ನವರು “ಪುಷ್ಪಕೃಷಿ, ಕಬ್ಬು ಬೇಸಾಯ, ತರಕಾರಿ ಬೆಳೆಗಳು, ಬಾಳೆ ಬೇಸಾಯ, ಭತ್ತದ ಬೇಸಾಯ, ಟೊಮಾಟೊ ಬೇಸಾಯ, ಬೇಬಿಕಾರ್ನ್, ಅಣಬೇಸಾಯ, ಹಲಸು, ತೊಗರಿ ಬೇಸಾಯ, ಪಪಾಯ ಬೇಸಾಯ, ಸಂಬಾರ ಬೆಳೆಗಳು ಹಾಗೂ ವಿವಿಧ ಬೆಳೆಗಳ” ಕುರಿತಂತೆ ಸುಮಾರು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಬೆಂಗಳೂರಿನ ಕರ್ನಾಟಕ ವಿಜ್ಞಾನ ಪರಿಷತ್ 2005ರಲ್ಲಿ ಕನ್ನಡ ಜನಪ್ರಿಯ ವಿಜ್ಞಾನ ಗ್ರಂಥಗಳ (1888ರಿಂದ 1996ರವರೆಗೆ ಪ್ರಕಟವಾಗಿರುವ) ಸೂಚಿಯಲ್ಲಿ ಕೃಷಿ ಮತ್ತು ಪಶುವೈದ್ಯ ಮತ್ತು ಪಶುಸಂಗೋಪನೆಗೆ ಸಂಬಂಧಿಸಿದಂತೆ 509 ಗ್ರಂಥಗಳನ್ನು ಪಟ್ಟಿ ಮಾಡಿದೆ. ಜೈವಿಕ ವಿಜ್ಞಾನ ಕುರಿತಂತೆ, ಕನ್ನಡ ವಿಜ್ಞಾನ ಸಾಹಿತ್ಯ ಪರಿಷತ್ತು ಪ್ರಕಟಿಸುವ ಬಾಲ ವಿಜ್ಞಾನ, ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ ವಿಜ್ಞಾನ ಸಂಗಾತಿ, ಕರ್ನಾಟಕ ವಿಜ್ಞಾನ ತಂತ್ರಜ್ಞಾನ ಆಕಾಡೆಮಿ ಪ್ರಕಟಿಸುತ್ತಿರುವ ವಿಜ್ಞಾನ ಲೋಕ ವಿಶೇಷವಾಗಿ ಉಲ್ಲೇಖಿಸಬಹುದಾಗಿದೆ.

ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳಾದ ಬೆಂಗಳೂರು, ಧಾರವಾಡ, ರಾಯಚೂರು, ಬೀದರ್‌ನ ಪಶು ವೈದ್ಯಕೀಯ ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬಾಗಲಕೋಟೆಯ ತೋಟಗಾರಿಕಾ ವಿಶ್ವವಿದ್ಯಾನಿಲಯ, ಶಿವಮೊಗ್ಗೆಯ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯಗಳಲ್ಲಿ ಸುಧಾರಿತ ಬೇಸಾಯಪದ್ಧತಿಗಳು, ಕೃಷಿ ವಿಜ್ಞಾನ ಮಾಸಪತ್ರಿಕೆಗಳು, ಕಿರುಹೊತ್ತಿಗೆಗಳು, ಕೃಷಿಮೇಳ, ಕ್ಷೇತ್ರೋತ್ಸವ ಮತ್ತು ಪ್ರಾತ್ಯಕ್ಷಿಕೆಗಳ ಕಿರುಹೊತ್ತಿಗೆಗಳು ಪ್ರಕಟಿಸುವ ಮೂಲಕ ಕೃಷಿ ವಿಜ್ಞಾನ ಸಾಹಿತ್ಯ ಬೆಳವಣಿಗೆಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ.

ಬದಲಾದ ಕೃಷಿ ವಿಧಾನಗಳನ್ನು ಕುರಿತ ಬರವಣಿಗೆಗಳು

ಕೃಷಿ ವಿಧಾನಗಳನ್ನು ಕುರಿತಂತೆ ಕನ್ನಡದಲ್ಲಿ ಪ್ರಕಟಗೊಂಡಿರುವ ಕೃತಿಗಳು ಬೆರಳೆಣಿಕೆಯಷ್ಟಿವೆ. ಪ್ರಥಮವಾಗಿ ಫುಕುವೋಕಾ ಅವರ ನೈಸರ್ಗಿಕ ಕೃಷಿ ವಿಧಾನ ಕುರಿತು ಕನ್ನಡದಲ್ಲಿ ಹತ್ತಕ್ಕೂ ಹೆಚ್ಚು ಪುಸ್ತಕಗಳು ಅನುವಾದಗೊಂಡು ಪ್ರಕಟವಾಗಿವೆ. ಕನ್ನಡ ಪುಸ್ತಕ ಪ್ರಾಧಿಕಾರವು ಸುಸ್ಥಿರ ಕೃಷಿ ಹಾಗೂ 'ದೇಸಿ ಕೃಷಿ ಜ್ಞಾನ' ಮಾಲೆಯಲ್ಲಿ 11ಕೃತಿಗಳನ್ನು ಪ್ರಕಟಿಸಿದೆ. ಸುಭಾಷ್ ಪಾಳೇಕಾರ್ ಅವರ ಶೂನ್ಯ ಬಂಡವಾಳ ಕೃಷಿ ವಿಧಾನ ಕುರಿತು ಕನ್ನಡದಲ್ಲಿ 10 ಪುಸ್ತಕಗಳು ಪ್ರಕಟಗೊಂಡಿವೆ. ಇತ್ತೀಚಿಗೆ ಆಧುನಿಕ ಕೃಷಿ ವಿಜ್ಞಾನ ವಿಧಾನಗಳ ಬಗ್ಗೆ ನೂರಾರು ಪುಸ್ತಕಗಳು ಪ್ರಕಟಗೊಂಡಿವೆ.

ಪರಾಮರ್ಶನ ಗ್ರಂಥಗಳು

1. Randhawa M.S.- A History of Agriculture in India. ICAR, New Delhi,4 Volumes. 1980-84.
2. ವೀ.ಸಿ. ಹಿತ್ತಲಮನಿ, ಕೃಷಿ ವಿಜ್ಞಾನ ಕನ್ನಡ ಪುಸ್ತಕಗಳ ಸಮೀಕ್ಷೆ, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.
3. ಸಿ.ಕೆ. ಕುಮುದಿನಿ(ಅನು)–ಪ್ರಾಚೀನ ಭಾರತದಲ್ಲಿ ಬೇಸಾಯ, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. 1987

4. ಆರ್. ದ್ವಾರಕೀನಾಥ್, ಶ್ರೀ ಡಿ.ಎಸ್.ಮುರಿಗಪ್ಪ ಶ್ರೇಷ್ಠಿ, ಕೃಷಿ ಕರ್ನಾಟಕ– ಕೃಷಿ, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. 1980
5. ವೀ.ಸಿ. ಹಿತ್ತಲಮನಿ ಸಂಪಾದನೆ: ಮೈಸೂರು ರಾಜ್ಯದಲ್ಲಿ ಕೃಷಿ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. 1973
6. ಕುವೆಂಪು(ಸಂ) ವ್ಯವಸಾಯ ಕೈಪಿಡಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು–1972
7. ಹಾ.ಮಾ.ನಾಯಕ(ಸಂ), ವಿಜ್ಞಾನ ಸಾಹಿತ್ಯ ನಿರ್ಮಾಣ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು–1971
8. ಹಾ.ಮಾ.ನಾಯಕ(ಸಂ), ಶಾಸ್ತ್ರಸಾಹಿತ್ಯ ನಿರ್ಮಾಣ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು. 1975
9. ಪ್ರೊ. ಡಿ.ಆರ್. ಬಳೂರಗಿ(ಸಂ), ಶತಮಾನದ ವಿಜ್ಞಾನ ಸಾಧನೆ(1900–2000), ಮೂಲಭೂತ ಶೈಕ್ಷಣಿಕ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು–2002
10. ಜೆ.ಬಾಲಕೃಷ್ಣ, ಕೃಷಿ ವಿಜ್ಞಾನ ಸಾಹಿತ್ಯ ನಡೆದು ಬಂದ ಹಾದಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 2010
11. ಜಿ.ಕೆ. ವಿರೇಶ್, ಕೃಷಿ ವಿಜ್ಞಾನದ ಉಗಮ ಮತ್ತು ವಿಕಾಸ, ಸಾವಯವ ಉತ್ತೇಜನ ಸಂಘ, ಬೆಂಗಳೂರು. 2009

ಲೇಖಕರು : ಡಾ. ಮಲ್ಲಿಕಾರ್ಜುನ ಎಂ.ಸಿ.
ಸಹಾಯಕ ಪ್ರಾಧ್ಯಾಪಕರು(ಕನ್ನಡ),
ವಿಶ್ವವಿದ್ಯಾಲಯ ಸಂವಹನ ಕೇಂದ್ರ,
ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ
ವಿಶ್ವವಿದ್ಯಾಲಯ, ಇರುವಕ್ಕಿ, ಶಿವಮೊಗ್ಗ

***

ಸಂಪುಟ : 9, ಸಂಚಿಕೆ : 6

PEER - REVIEWED JOURNAL
ISSN: 2320-9941

VOLUME: 09, ISSUE: 06

ಸಂಸ್ಕೃತಿಯು ನಮ್ಮ ಬದುಕಿನ ಭಾಗವಾಗಿದೆ. ನಮ್ಮ ಪ್ರತಿ ಲಕ್ಷಣಗಳೆಲ್ಲವೂ ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ. ಸಂಸ್ಕೃತಿಯು ಎಂದಿಗು ಬದಲಾಗುವುದಿಲ್ಲ, ವಿಭಿನ್ನ ಲಕ್ಷಣಗಳ ಮೂಲಕ ಆಯಾ ಪರಿಸರ, ಪ್ರದೇಶ ಮೊದಲಾದಂತೆ ಗೋಚರಿಸುತ್ತದೆ. ಅಲ್ಲಿನ ಸ್ಥಳೀಯ ಪ್ರಜ್ಞೆಗಳು ರಾಯಭಾರಿಗಳಂತೆ ಸಂಸ್ಕೃತಿಯನ್ನು ದರ್ಶನಮಾಡುತ್ತಾರೆ. ಸಂಸ್ಕೃತಿಯನ್ನು ಆಚರಣೆ, ಸಂಪ್ರದಾಯ, ಲಕ್ಷಣ, ಸೌಂದರ್ಯ, ಇತಿಹಾಸ, ಐತಿಹ್ಯಗಳ ಮೂಲಕ ಉಳಿಸಿಕೊಂಡು ಬಂದಿದ್ದಾರೆ. ನೋಡಿ ಕಲಿಯುವ, ಉದ್ದೇಶಿತವಾಗಿ ಕಲಿಸುವ ಈ ಸ್ವರೂಪಗಳು ಸಂಸ್ಕೃತಿಗಳ ಬೆಳವಣಿಗೆಯ ಪೂರ್ವಪೀಠಿಕೆಗಳಾಗಿವೆ. ಇಲ್ಲಿಂದ ಹೆಜ್ಜೆ ಹೆಜ್ಜೆಯಂತೆ ಬೆಳೆಯುವ ಯಾವುದೇ ಸಂಸ್ಕೃತಿಯು ಅಂದಂದಿನ ಪ್ರಭಾವ, ಪ್ರೇರಣೆಗಳ ಅನುಸಾರವಾಗಿ ಬದಲಾವಣೆಗಳನ್ನು ಪಡೆಯುತ್ತವೆ. ಆಧುನಿಕ ಎಂಬುದೇ ಎಲ್ಲಾ ಸಂಸ್ಕೃತಿಗಳ ಮೇಲೆ ಪ್ರಭಾವಿಸಿ 'ಶುದ್ಧ ಸಂಸ್ಕೃತಿ'ಯೆಂಬುದಿಲ್ಲ ಎಂಬಂತಾಗಿದೆ. ಈ ಹಿನ್ನಲೆಯಲ್ಲಿ ವರ್ತಮಾನದ ಸಂಸ್ಕೃತಿಯನ್ನು ಇಂದಿನ ತಲೆಮಾರು ಹೇಗೆ ನೋಡುತ್ತಿದೆ. ಸಂಸ್ಕೃತಿಗಳ ಅಧ್ಯಯನದಿಂದ ಭವಿಷ್ಯದ ದಾಖಲೀಕರಣವನ್ನು ಗಮನಿಸುವ ಬಗೆಗಳನ್ನು ಈ ಜೀವನ ಪ್ರೀತಿ ಮಾಲಿಕೆಯು ನಿರ್ವಹಿಸಿದೆ ಎಂದು ಭಾವಿಸಿದ್ದೇವೆ.

ಜೀವನ ಪ್ರೀತಿ

ಅಧ್ಯಾಯ ಪತ್ರ

BOOK CHAPTER

ಪ್ರತಿಸ್ಪಂದ
ಕೊಡು-ಕೊಳ್ಳುವಿಕೆಗಳ ಸಂಕರ..

ಸಾಹಿತ್ಯ, ಸಂಸ್ಕೃತಿ - ಸಂಶೋಧನ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
LITERATURE, CULTURE - RESEARCH QUARTERLY
PEER - REVIEWED JOURNAL
ISSN: 2320-9941